ಸಂವಾದ

ಅಕ್ಟೋಬರ್ ೨೦೧೧ ರೂ. ೨೦



ಅಸಮಾನತೆ ಕಳಚಿ ಬೀಳುತ್ತಿದೆ!





ಲೋಹಿಯಾ – ಜೆಪಿ

ಹೋರಾಟದ ಹೆಜ್ಜೆಗಳು

ಸಂವಾದ

ಮಾಸ ಪತ್ರಿಕೆ

ಸಂಪುಟ ೯ ಸಂಚಿಕೆ ೧೨

ಅಕ್ಟೋಬರ್ ೨೦೧೧

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ **Editorial: 9448048306**
✆ **Circulation: 9945264687**
080-23480278,
e-mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೦೩
- ❑ ಸಂಪಾದಕರೊಂದಿಗೆ ಸಂವಾದ:
  - ○ ಡಾ. ಕೃಷ್ಣಮೂರ್ತಿ ಚಮರಂ ೦೪
  - ○ ಮಲ್ಲಿಕಾರ್ಜುನ ಗುಮ್ಮಗೋಳ ೦೫
  - ○ ಡಾ. ಎನ್. ಜಗದೀಶ್ ಕೊಪ್ಪ ೦೬
  - ○ ಸಂಡೂರು ಕುಮಾರಸ್ವಾಮಿ ೦೭
  - ○ ಡಾ. ಎಸ್. ಬಿ ಜೋಗುರ ೦೮
  - ○ ಬಿ. ಶ್ರೀಪಾದ್ ಭಟ್ ೦೯
  - ○ ಮಾರುತಿ ಹೆಚ್. ೧೦
  - ○ ವಿ. ಆರ್ ಮೌರ್ಯ ೧೧
- ❑ ಹೊಸ ಪುಸ್ತಕ ೧೩
- ❑ ಅಣ್ಣಾ ಹಜಾರೆ ಚಳಚಳಿ: ದಲಿತರು ಮತ್ತು ಕಮ್ಯುನಿಸ್ಟರು ಕಲಿಯದ ಪಾಠ
  - ○ ಎಸ್. ಕೆ ಮೋಹನ್‌ರಾಂ ೧೪
- ❑ ಆದದ್ದೆಲ್ಲಾ ಒಳಿತೇ ಆಯಿತು
  - ○ ಡಾ. ತುಮಕೂರು ಚಂದ್ರಕಾಂತ ೧೬







- ❑ ಲೋಹಿಯಾ-ಜೆಪಿ ಹೋರಾಟದ ಹೆಜ್ಜೆಗಳು...
  - ○ ಯು.ಎನ್ ಸಂಗನಾಳಮಠ ೧೮
- ❑ ನಳಚರಿತೆಯೊಳಗಣ ಬಹುಚರಿತೆಯ ಎಳೆಗಳು
  - ○ ಜಯಪ್ರಕಾಶ ಶೆಟ್ಟಿ .ಎಚ್ ೨೧
- ❑ ಸ್ನೇಹಮಯಿ ಫ್ಯಾಸಿಸಂ....
  - ○ ಡಾ. ಸಿ. ಜಿ ಲಕ್ಷ್ಮೀಪತಿ ೨೬
- ❑ ಅಣ್ಣಾ ಹೋರಾಟ-ವಿಭಿನ್ನ ಆಯಾಮ ಅಗತ್ಯ
  - ○ ನಾ ದಿವಾಕರ ೨೮
- ❑ ಪದವಿ ತರಗತಿಗಳಲ್ಲಿ ಕನ್ನಡ ಪಠ್ಯ: ಏನಾಗಿದೆ, ಏನಾಗಬೇಕು?
  - ○ ಡಾ. ಎನ್. ಸುರೇಶ್ ನಾಗಲಮಡಿಕೆ ೩೦
- ❑ ಜಾಗತೀಕರಣ ಮತ್ತು ಮಹಿಳಾ ಶೋಷಣೆ
  - ○ ಡಾ. ವಿಠೋಬ-ಡಾ. ಶ್ರೀಕಾಂತ ೩೪

- ❑ ಹಾಗೆ ನೋಡಿದರೆ -೧೧
  - ○ ಡಾ. ಬಂಜಗೆರೆ ಜಯಪ್ರಕಾಶ ೪೨
- ❑ ದಲಿತ್ ಡೈರಿ
  - ○ ಚಂದ್ರಭಾನ್ ಪ್ರಸಾದ್/ ಎಸ್. ಮರಿಸ್ವಾಮಿ ೪೬

ಕವನಗಳು : ಉರಿಲಿಂಗದ ಪಾದಾರವಿಂದಗಳಲ್ಲಿ ೪೦

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಹಜಾರೆಗಿರಿಯ ಬಿರುಗಾಳಿ ಸಾಧಿಸಿದ್ದಾದರೂ ಏನು?

ಪ್ರಿಯ ಸಂಪಾದಕರೇ,

ಅಣ್ಣಾ ಹಜಾರೆ ಜನಲೋಕಪಾಲ ಮಸೂದೆ ಜಾರಿಗಾಗಿ ಹೋರಾಟ ನಡೆಸುವ ಮೊದಮೊದಲು ಯಾರ್‍ಯಾರು ಆ ಮಸೂದೆಯನ್ನು ಬೆಂಬಲಿಸಿದ್ದರೋ ಅವರೆಲ್ಲರೂ ಈಗ ತಣ್ಣಗೆ ಕುಳಿತಿದ್ದಾರೆ.

'ಹೋರಾಟ' ಚಿಗುತುಕೊಳ್ಳುತ್ತಿದ್ದಂತೆ ಈ ಹಜಾರೆ ಏನು ಮಹಾ ಎಂಬಂತೆ ಇದ್ದಕ್ಕಿದ್ದಂತೆ ಹಜಾರೆಗಿಂತಲೂ ದೈತ್ಯಾಕಾರವಾಗಿ ಎದ್ದುನಿಂತು; ದೇಶದ ಕಪ್ಪುಹಣ ವಾಪಾಸು ತರಬೇಕೆಂದು ರಾಮಲೀಲಾ ಮೈದಾನದಲ್ಲಿ ಆರ್ಭಟಿಸಿ; ಕಡೆಯಲ್ಲಿ ಕೈಲಾಗದವರಂತೆ ವರ್ತಿಸುತ್ತಾ ತಾನು ದೇಶದೆಲ್ಲೆಡೆ ಶಸಸ್ತ್ರ ಪಡೆಯ ಯುವಕರ ಗುಂಪನ್ನು ತಯಾರು ಮಾಡುತ್ತೇನೆಂದು ಹೇಳಿದ್ದರು. ಅಂತಹ ಬಾಬಾ ರಾಮದೇವ್ ಎಂಬ ಯೋಗ ಗುರು ಈ ಹೊತ್ತಿನಲ್ಲಿ ಯಾವ ಸ್ಥಳದಲ್ಲಿ ಯುವಕರಿಗೆ ತರಬೇತಿ ನೀಡುತ್ತಿದ್ದಾರೋ ತಿಳಿಯುತ್ತಿಲ್ಲ!

ಶಸ್ತ್ರಾಸ್ತ್ರ ತರಬೇತಿ ನೀಡುತ್ತೇನೆಂದು ಬಹಿರಂಗವಾಗಿ ಹೇಳಿಕೆ ನೀಡಿದ ಬಾಬಾ ರಾಮ್‌ದೇವ್‌ರನ್ನು ಶಸಸ್ತ್ರ ನಿಷೇಧ ಕಾಯ್ದೆಯಡಿಯಲ್ಲಿ ಇನ್ನೂ ಬಂಧಿಸಲು ಸಾಧ್ಯವಾಗಿಲ್ಲವೇಕೆ? ರಾಮ್‌ದೇವರ ಶಸಸ್ತ್ರ ಪಡೆ ತಮ್ಮ ಮೇಲೆ ದಾಳಿ ಮಾಡಬಹುದೆಂಬ ಆತಂಕದಿಂದ ಸರ್ಕಾರ ಸುಮ್ಮನಿದ್ದಿರಬಹುದೇ? ಇದೇ ಹೇಳಿಕೆಯನ್ನು ಯಾರೋ ಒಬ್ಬ ಜನಪರ ಹೋರಾಟಗಾರ ಈ ವ್ಯವಸ್ಥೆಯ ವಿರುದ್ಧವಾಗಿ ಇಂಥದ್ದೊಂದು ಹೇಳಿಕೆ ನೀಡಿದ್ದರೆ ಸರ್ಕಾರ ಸುಮ್ಮನಿರುತ್ತಿತ್ತೇ?

'ಚಳವಳಿ'ಗಾರರ ಮೇಲೆ ಪೋಲೀಸರ ದಾಳಿಯಾಗುವಾಗ ಚಳವಳಿಗಾರರನ್ನು ಕೈಬಿಟ್ಟು ಪಲಾಯನಗೈದ ಯೋಗ ಗುರುವಿನ ಹೋ(ಹಾ)ರಾಟ ಅಂತಿಮವಾಗುತ್ತಿದ್ದಂತೆ ಮತ್ತೆ ಜಿಗಿದೆದ್ದಂತೆ ಶುರುವಾಯಿತು ಅಣ್ಣಾ ಹಜಾರೆಯ ಹೋರಾಟ!

ಈ ಹೋರಾಟದ ಕಾವು ಕಂಡ ಕೆಲವರಂತೂ ತಮ್ಮ ತಮ್ಮ ಪಕ್ಷಗಳ, ಸಂಘಟನೆಗಳ ಬಾವುಟಗಳನ್ನು ಹಿಡಿದು ಭಾರೀ ಹೋರಾಟವೆಂಬಂತೆ ಜನತೆಯ ನಿದ್ದೆಗೆಡಿಸಿ, ಇನ್ನು ಭ್ರಷ್ಟಾಚಾರಿಗಳಿಗೆ ಉಳಿಗಾಲವೇ ಇಲ್ಲವೇನೋ.., ದೇಶದಲ್ಲಿ ಮಹಾನ್ ಕ್ರಾಂತಿಯೇ ಆಗಿಹೋಗಲಿದೆಯೇನೋ ಎಂಬ ಭಾರೀ ಭ್ರಮೆ ಸೃಷ್ಟಿ ಮಾಡಿದ್ದರು. ಹೀಗೆ ಭ್ರಮೆ ಸೃಷ್ಟಿಯಾಗಲು ಮಾಧ್ಯಮಗಳ ಪಾತ್ರವೂ ಹೆಚ್ಚಾಗಿತ್ತು.

ಆಳದಲ್ಲಿ ಹಜಾರೆಯ ಹೋರಾಟವನ್ನು ಬೆಂಬಲಿಸಿದವರಲ್ಲಿ ಮುಂಚೂಣಿಯಲ್ಲಿದ್ದವರು ಐಟಿ-ಬಿಟಿ ಕಂಪನಿಗಳ ಮಂದಿ. ನಿಜಕ್ಕೂ ಇವರಿಗೆ ಈ ದೇಶದಲ್ಲಿ ಅದೆಷ್ಟು ಕೋಟಿ ಜನ ನಿರುದ್ಯೋಗಿಗಳಿದ್ದಾರೆ ಎಂಬುದಾಗಲೀ, ಬಡತನ-ಶೋಷಣೆ-ಅಸಮಾನತೆಗೆ ಸಿಲುಕಿದವರ ಸಂಖ್ಯೆ ಎಷ್ಟಿದೆ ಎಂಬ ಅರಿವಿದೆಯೇ?

ದೇಶದ ಖನಿಜ ಸಂಪತ್ತನ್ನು ಲೂಟಿ ಮಾಡುತ್ತಲೇ ದೊಡ್ಡ-ದೊಡ್ಡ ಕಂಪನಿಗಳನ್ನಿಟ್ಟ ಮಂದಿಗಳು ಒಂದೆಡೆಯಾದರೆ, ಇನ್ನೊಂದಡೆ ಸ್ವಾಮೀಜಿಗಳ ವೇಷದಲ್ಲಿದ್ದುಕೊಂಡು ದೇಶದೊಳಗೂ-ಹೊರಗೂ ಭಾರೀ ಆಸ್ತಿ-ಪಾಸ್ತಿ ಹೊಂದಿ ಸ್ವತಃ ತಾವೇ ಭ್ರಷ್ಟರಾಗಿದ್ದುಕೊಂಡೇ ಈ ಹೊತ್ತಿನಲ್ಲಿ ದೇಶೋದ್ಧಾರದ ಮಾತಾಡುತ್ತಿರುವುದು ನಿಜಕ್ಕೂ ಸೋಜಿಗ.

ದೇಶ ಉದ್ಧಾರ ಮಾಡುವ ಮಾತನ್ನಾಡುವ ಇಂಥವರು ಈ ದೇಶದಲ್ಲಿ ಸ್ವದೇಶಿ ವಸ್ತುಗಳ ಬಗ್ಗೆ ಸದಾ ಜಾಗೃತಿ ಮೂಡಿಸುತ್ತಿದ್ದ ಆಜಾದಿ ಬಚಾವೋ ಆಂದೋಲನದ ನಾಯಕ ರಾಜೀವ್ ದೀಕ್ಷಿತ್ ಬೆಂಬಲಕ್ಕೆ ಮುಂದಾಗಲಿಲ್ಲವೇಕೆ? ನರ್ಮದಾ ಬಚಾವೋ ಹೋರಾಟವನ್ನು ಕೈಗೆತ್ತಿಕೊಂಡ ಮೇಧಾ ಪಾಟ್ಕರ್‌ರನ್ನು ಬೆಂಬಲಿಸಲಿಲ್ಲವೇಕೆ? ಇತ್ತೀಚೆಗೆ ಉತ್ತರಾಖಂಡದಲ್ಲಿ ಗಂಗಾನದಿಯ ಉಳಿವಿಗಾಗಿ ನಿರಂತರ ಉಪವಾಸ ಮಾಡಿ ಸಾವನ್ನಪ್ಪಿದ ನಿಗಮಾನಂದ ಸ್ವಾಮೀಜಿಯನ್ನು ಬೆಂಬಲಿಸಲಿಲ್ಲವೇಕೆ?

ಹೀಗೆ ಹಜಾರೆಗಿರಿಯ ಹೋರಾಟ ನೊಂದವರಲ್ಲದ, ಶೋಷಣೆಯ ವಿರುದ್ಧದ ಆಕ್ರಂದನವಿಲ್ಲದ, ಬಡತನವೆಂದರೇನೆಂದು ತಿಳಿಯದ, ಕೇವಲ ಶ್ರೀಮಂತ ವರ್ಗ ಮತ್ತು ಮಧ್ಯಮ ವರ್ಗದ ಜನರ ಹೋರಾಟವಾಗಿ ದೇಶದೆಲ್ಲೆಡೆ ಬಿರುಗಾಳಿಯಂತೆ ಅಪ್ಪಳಿಸಿತು. ಆದರೆ ಸಾಧಿಸಿದ್ದಾದರೂ ಏನು ಎಂಬ ಪ್ರಶ್ನೆ ಉಳಿದಿದೆ.

ಭ್ರಷ್ಟಾಚಾರದ ಮುಕ್ತಿಗಾಗಲೀ, ದೇಶದ ಪ್ರಗತಿಗಾಗಲೀ, ಜನಹಿತದ ಯಾವ ಪ್ರಯೋಜನಕ್ಕೂ ಬಾರದ ಅಣ್ಣಾ ಹಜಾರೆಯ ಕೆಲವೇ ಕೆಲವು ದಿನಗಳ ಹೋರಾಟವನ್ನು ಭಾರೀ ಹೋರಾಟವಾಗಿ ಕೈಗೆತ್ತಿಕೊಂಡವರು ಮಣಿಪುರದಲ್ಲಿ 10 ವರ್ಷಗಳಿಂದಲೂ ಉಪವಾಸ ಮಾಡಿ ಪ್ರತಿಭಟನೆ ಮಾಡುತ್ತಲೇ ಬಿಎಸ್‌ಎಫ್ ಶಸಸ್ತ್ರ ಪಡೆಯನ್ನು ರದ್ದುಮಾಡಬೇಕೆಂದು ಒತ್ತಾಯಿಸಿ ಇರೋಮ್ ಶರ್ಮಿಳಾ ಎಂಬ ಹೆಣ್ಣುಮಗಳ ಹೋರಾಟಕ್ಕೆ ಹಜಾರೆಗಿರಿಯ ಜನ ಬೆಂಬಲಿಸಲು ಮುಂದಾಗಲಿಲ್ಲವೇಕೆ?

ಕಿರುಗುಂದ ರಫೀಕ್
ಮೂಡಿಗೆರೆ

ಪತ್ರಾಗಾರ



ಅಸಹನೆ ಹಿಂದಿನ ಮರ್ಮ ಏನು?

ಪ್ರಿಯ ಸಂಪಾದಕರೇ,

ಕನ್ನಡಕ್ಕೆ ಎಂಟನೆಯ ಜ್ಞಾನಪೀಠ ಪುರಸ್ಕಾರವನ್ನು ತಂದಿತ್ತ ಚಂದ್ರಶೇಖರ ಕಂಬಾರ ಅವರನ್ನು ನಾಡು ಒಕ್ಕೊರಲಿನಿಂದ ಕೊಂಡಾಡುತ್ತಿರುವಾಗ ಹುಬ್ಬಳ್ಳಿಯಿಂದ ಅಪಸ್ವರವೊಂದು ಕೇಳಿಬಂದಿದೆ. 'ಯೋಗ್ಯತೆ ಇಲ್ಲದವರಿಗೆ ಜ್ಞಾನಪೀಠ ಬಂದಿದೆ. ಯೋಗ್ಯರು ಬಹಳ ಮಂದಿ ಇದ್ದಾರೆ' ಎಂಬ ಬೀಸು ಹೇಳಿಕೆ ನೀಡುವ ಮೂಲಕ ಅರ್ಹತೆಯ ಪ್ರಶ್ನೆಯನ್ನೆತ್ತಿ ಎಸ್.ಎಲ್. ಬೈರಪ್ಪ ಅವರಿಗೆ ಜ್ಞಾನಪೀಠ ಸಿಗಲಿಲ್ಲ ಎಂಬ ಕೊರಗಿನ ನೆರಳಲ್ಲಿ ಕಂಬಾರರಿಗೆ ಸಿಕ್ಕ ಮನ್ನಣೆಯನ್ನು ಪಾಟೀಲ ಪುಟ್ಟಪ್ಪನವರು ಅಲ್ಲಗಳೆದಿರುವುದು ದುರಾದೃಷ್ಟಕರ.

ಕವಿಯಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ ಕಳೆದ ಐದು ದಶಕಗಳಿಂದಲೂ ನಿರಂತರವಾಗಿ ನಾಡಿನ ಅಲಕ್ಷಿತ ಸಮುದಾಯಗಳ ಹಾಗೂ ದೇಶಿ ಪರಂಪರೆಗಳ ವಕ್ತಾರನಂತಿರುವ ಕಂಬಾರರು ತಳ ಸಮುದಾಯಗಳ ಪುರಾಣ, ಚರಿತ್ರೆ, ಜಾನಪದ, ರಾಜಕಾರಣಗಳ ಸತ್ವಗಳನ್ನು ತಮ್ಮ ಬರಹಗಳಲ್ಲಿ ಅತ್ಯಂತ ಸೃಜನಶೀಲವಾಗಿ ಕಟ್ಟಿಕೊಟ್ಟಿದ್ದಾರೆ. ಹಾಗೂ ಅವರ ಸಾಂಸ್ಕೃತಿಕ ಮೌಲ್ಯಗಳನ್ನು ಜತ್ಯಾತೀತವಾಗಿ ಮತ್ತು ಪ್ರಜಾಸತ್ತಾತ್ಮಕವಾಗಿ ವಿಸ್ತರಿಸುವ ಮೂಲಕ ದಲಿತ, ಹಿಂದುಳಿದ ನಿರ್ಲಕ್ಷಿತರ ದನಿಯಾಗಿದ್ದಾರೆ. ಸಮಕಾಲೀನ ಸಂವೇದನೆಯ ಪ್ರಸ್ತುತತೆಯನ್ನು ಅರಿತು ದೇಶಿ ನುಡಿಗಟ್ಟಿನ ಅಭಿವ್ಯಕ್ತಿಯನ್ನು ಸದಾಕಾಲಕ್ಕೂ ಸಲ್ಲುವಂತೆ ನಿರೂಪಿಸುವಲ್ಲಿ ಇವರ ತಾಜಾ ಪ್ರತಿಭೆ ಎದ್ದು ಕಾಣುತ್ತದೆ. ಇದನ್ನು ಪಾಪು ಅರಿಯದವರೇನಲ್ಲ.

ಹಿಂದೂತ್ವದ ಬಗ್ಗೆಯೇ ಯಾವಾಗಲೂ ಶಂಖ ಊದುವ, ಮಹಿಳೆಯರ ಬಗ್ಗೆ ಕಿಂಚಿತ್ತೂ ಗೌರವ ಹೊಂದಿಲ್ಲದ, ಆದರೂ ಸಾಹಿತಿಯಾಗಿ (ಸೇಲೆಬಲ್ ದೃಷ್ಟಿಯಿಂದ) ಪ್ರಸಿದ್ಧಿ ಪಡೆದಿರುವ ಬೈರಪ್ಪನವರೊಂದಿಗೆ ಕಂಬಾರರನ್ನು ಹೋಲಿಸಿ ದುಃಖಿಸಿದ್ದು ಕಂಡು ಪಾಪು ಬಗ್ಗೆ ಮರುಕ ಉಂಟಾಗುತ್ತಿದೆ. ಹಾಗೆಯೇ ಹಿಂದುಳಿದ ಸಮುದಾಯದವರೊಬ್ಬರು ಇಂತಹ ಉನ್ನತ ಪುರಸ್ಕಾರಕ್ಕೆ ಭಾಜನರಾದದ್ದನ್ನು ಕಂಡು ಸಹಿಸಲಾಗಲಿಲ್ಲವೋ ಎಂಬ ಗುಮಾನಿಯೂ ಕಾಡುತ್ತಿದೆ.

ಏನೇ ಇರಲಿ, ತಮ್ಮ ನಾಡಪರ ಕಾಳಜಿಯಿಂದ, ಹೋರಾಟದ ಮನೋಭಾವದಿಂದ, ಸಾಮಾಜಿಕ ಬದ್ಧತೆಯಿಂದ ಜನಮಾನಸದಲ್ಲಿ ಒಂದು ಗೌರವದ ಸ್ಥಾನ ಗಳಿಸಿಕೊಂಡಿದ್ದ 'ನಾಡೋಜ' (ಇದು ಕನ್ನಡ ವಿವಿ ಕುಲಪತಿಗಳಾಗಿದಾಗ ಕಂಬಾರರೇ ಪುರಸ್ಕರಿಸಿದ್ದ ಪ್ರಶಸ್ತಿ)ರಿಂದ ಇಂತಹ ಬಾಲಿಶತನವನ್ನು ನಾವು ನಿರೀಕ್ಷಿರಲಿಲ್ಲ.

ಗುಂಡು ಸುರೇಶ್‌ಕುಮಾರ್, ಬೆಂ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಭ್ರಷ್ಟಾಚಾರವೊಂದೇ ದೇಶದ ಶತ್ರುವೇ?

ಸಂಪಾದಕರೊಡನೆ ಸಂವಾದ

ಡಾ. ಕೃಷ್ಣಮೂರ್ತಿ ಚಮರಂ

ಪ್ರಿಯ ಸಂಪಾದಕರೇ,

ಇಡೀ ದೇಶ ಇದೀಗ ತಾನೆ ಎಚ್ಚೆತ್ತಂತೆ 'ಭ್ರಷ್ಟಾಚಾರ'ದ ವಿರುದ್ಧ ಸೆಟೆದು ನಿಂತಿದೆ. ಭ್ರಷ್ಟಾಚಾರ ಎಂಬುದೇ ದೇಶದ ಪ್ರಗತಿಗೆ ಮೊದಲ ಶತ್ರು ಎಂಬ ಮೋಹಕ ಮಾತುಗಳಿಂದ ಯುವಜನರು ಸಮ್ಮೋಹನಗೊಂಡಿದ್ದಾರೆ. ಅಣ್ಣಾ ಹಜಾರೆ ಈಗ ಗಾಂಧಿಯವರ ಅಪರಾವತಾರವಾಗಿ ಬೀಗುತ್ತಿದ್ದಾರೆ. ದೇಶದ ಬಹುತೇಕ ಜನರು ಅಣ್ಣಾ ಹಜಾರೆಯವರ ಭ್ರಷ್ಟಾಚಾರ ನಿರ್ಮೂಲನಾ ಆಂದೋಲನಕ್ಕೆ ಒಕ್ಕೊರಲಿನಿಂದ ಬೆಂಬಲ ಸೂಚಿಸಿದ್ದಾರೆ. ಸಂಘ ಸಂಸ್ಥೆಗಳು ಎಡಪಂಥೀಯರು, ಬಲಪಂಥಿಯರು, ರಾಜಕಾರಣಿಗಳು, ನಟ-ನಟಿಯರು, ಸಾಧುಗಳು, ಸನ್ಯಾಸಿಗಳು, ಸಂಪ್ರದಾಯವಾದಿಗಳು ಎಂಬ ಬೇಧ ಭಾವವಿಲ್ಲದೆ ಹಜಾರೆ ಹೋರಾಟಕ್ಕೆ ಜೈಕಾರ ಹಾಕುತ್ತಿದ್ದಾರೆ.

ಇಷ್ಟೆಲ್ಲಾ ಜನ ಹಜಾರೆ ಹೋರಾಟಕ್ಕೆ ಬೆಂಬಲವಾಗಿರುವಾಗ ಇನ್ನು ಭ್ರಷ್ಟಾಚಾರವನ್ನು ಮಾಡುತ್ತಿರುವವರು ಯಾರು ಹಾಗಿದ್ದರೆ? ಇನ್ನುಳಿದಿರುವ ಬಡ ರೈತರು, ಕೂಲಿ ಕಾರ್ಮಿಕರು ಮತ್ತು ದೀನ ದಲಿತರೇ ಭ್ರಷ್ಟಾಚಾರ ಮಾಡುತ್ತಿರುವವರು? ಗೇಯ್ಮೆ ಮಾಡಿದರೆ ಒಂದೊತ್ತಿನ ಊಟ ಉಂಟು ಇಲ್ಲದಿದ್ದರೆ ಇಲ್ಲ ಎಂದು ತುತ್ತು ಅನ್ನಕ್ಕಾಗಿಯೇ ಜೀವನವಿಡೀ ಬಡಿದಾಡುವ ಶೇ. 52 ರಷ್ಟು ಜನರಿಗೆ ಭ್ರಷ್ಟಾಚಾರವೆಂದರೇನು ಎಂಬುದೇ ಅರಿವಿಲ್ಲ.

ಭ್ರಷ್ಟಾಚಾರದ ರೂವಾರಿಗಳೇ ಅಪ್ಪಟ ಅಕ್ಷರವಂತರು, ಬಂಡವಾಳಿಗಳು, ರಾಜಕಾರಣಿಗಳು ಮತ್ತು ಅಧಿಕಾರಿ ವರ್ಗದವರು. ಖಾಸಗಿ ಶಿಕ್ಷಣ ಸಂಸ್ಥೆಗಳು ಆಸ್ಪತ್ರೆಗಳು, ಕೈಗಾರಿಕೆಗಳು, ಸರ್ಕಾರಿ ಕಛೇರಿಗಳು ದುಡ್ಡು ಮಾಡುವ ದಂಧೆಗಳಾಗಿ ಮಾರ್ಪಟ್ಟಿವೆ. ಧಾರ್ಮಿಕ ಸಂಸ್ಥೆಗಳೂ ಹಣಕ್ಕಾಗಿ ಹಾತೊರೆಯುತ್ತಿವೆ. ರಾಜಕಾರಣಿಗಳಂತೂ ದೇಶವನ್ನೇ ಲೂಟಿ ಹೊಡೆಯುತ್ತಿದ್ದಾರೆ. ಇಂದಿನ ಯಾವ ವಿದ್ಯಾವಂತರಿಗೆ ಸರತಿಯಲ್ಲಿ ನಿಂತು ಕಾದು ತನ್ನ ಕೆಲಸಗಳನ್ನು ನ್ಯಾಯಯುತವಾಗಿ ಬಗೆಹರಿಸಿಕೊಳ್ಳುವ ತಾಳ್ಮೆಯಿದೆ ಹೇಳಿ? ಎಲ್ಲಾ ವಿದ್ಯಾವಂತರೆನಿಸಿಕೊಂಡವರೂ ಕಾಸು ನೀಡಿ ಕೆಲಸ ಸಾಧಿಸಿಕೊಳ್ಳುವ ಭ್ರಷ್ಟ ಮಾರ್ಗವನ್ನೇ ಅನುಸರಿಸುತ್ತಾರೆ. ಇಂಥವರೆಲ್ಲರೂ ನಾಚಿಕೆಯಿಲ್ಲದೆ ಭ್ರಷ್ಟಾಚಾರದ ವಿರುದ್ಧ ಮಾತಾಡುತ್ತಾರೆ. ಇಂಥವರೇ ಹಜಾರೆಯವರ ಆಂದೋಲನಕ್ಕೆ ಬೆಂಬಲವಾಗಿ ನಿಂತಿದ್ದಾರೆ! ಹೇಗಿದೆ ಭ್ರಷ್ಟಾಚಾರ ವಿರೋಧಿ ಆಂದೋಲನದ ಕಥೆ.

ಆತ್ಮಸಾಕ್ಷಿ ಇರುವವರಿಗೆ ಒಂದು ಆಂದೋಲನದ ಅಗತ್ಯವೇ ಬರುವುದಿಲ್ಲ. ತಮ್ಮನ್ನು ತಾವೇ ಪರಿವರ್ತಿಸಿಕೊಂಡು ಮಾದರಿಯಾಗಬಹುದು. ದೇಶದಲ್ಲಿ ಬಡವರು ಮತ್ತು ಮಧ್ಯಮ ವರ್ಗದವರಿಗೆ ಬೇಕಾದ ಅಗತ್ಯ ವಸ್ತುಗಳ ಬೆಲೆ ದಿನೇ ದಿನೇ ಗಗನಕ್ಕೇರುತ್ತಿದೆ. ಆದರೆ ದೇಶ ಆಳುವ ಪಾರ್ಲಿಮೆಂಟ್ ಭವನದ ಕ್ಯಾಂಟಿನ್‌ನಲ್ಲಿ ದೊರೆಯುವ ಹೈಜಿನ್ ಆಗಿರುವ ಊಟದ ಮೆನು ನೋಡಿ; ಟೀ-ರೂ.1, ಸೂಪ್-5.50, ದಾಲ್-1.50, ಊಟ-2.00, ಚಪಾತಿ-1.00, ಚಿಕನ್-24.50, ದೋಸೆ-4.00, ಬಿರ್ಯಾನಿ-8.00, ಮೀನು-13.00. ಇದು ತಿಂಗಳಿಗೆ ರೂ.80.000 ಸಂಬಳ ಹಾಗೂ ಇನ್ನಿತರೆಲ್ಲಾ ಸಕಲೆಂಟು ಐಷಾರಾಮಿ ಸೌಲಭ್ಯಗಳನ್ನು ಪಡೆವ ಸಂಸದರಿಗೆ ದೊರೆವ ಸವಲತ್ತುಗಳು! ಅದೇ ಪಾರ್ಲಿಮೆಂಟ್ ಭವನದ ಮುಂದೆ ಹಜಾರೆ ಸಾಹೇಬರು ಭ್ರಷ್ಟಾಚಾರ ವಿರೋಧಿ ಆಂದೋಲನ ನಡೆಸುತ್ತಾರೆ. ಅದೇ ಸಂಸದರು ಬಂದು ಸಾಥ್ ನೀಡುತ್ತಾರೆ. ಎಂಥಾ ವಿಚಿತ್ರ !

ಭ್ರಷ್ಟಾಚಾರವೆಂಬುದೊಂದು ಪ್ರಗತಿಗೆ ಮಾರಕವಾದ ಸಮಾಜ ಘಾತುಕ, ದೇಶದ್ರೋಹಿ ಕೃತ್ಯ ಎಂಬುದನ್ನು ಒಪ್ಪಬೇಕಾದ್ದೆ. ಅದರಿಂದ ಜನಸಾಮಾನ್ಯರಿಗೆ ವಿಪರೀತ ಅನಾನುಕೂಲವಾಗುತ್ತದೆ. ಅದು ತೊಲಗಬೇಕು ಎಂಬುದನ್ನು ಒಪ್ಪಬೇಕಾದ್ದೆ. ಆದರೆ, ಭ್ರಷ್ಟಾಚಾರ ಒಂದೇ ಈ ದೇಶದ ಪರಮ ಶತ್ರು ಮತ್ತದು ತೊಲಗಿದರೆ ದೇಶದ್ದೋರವಾಗಿಬಿಡುತ್ತದೆ ಎಂಬುದು ಮಾತ್ರ ಅಪ್ಪಟ ಮೋಸದ ಮಾತು. ಭ್ರಷ್ಟಾಚಾರ ಎಂಬುದು ಪ್ರಪಂಚದಲ್ಲೇ ಸರ್ವವ್ಯಾಪಿ. ಯಾಕೆಂದರೆ, ಅದೊಂದು ಮನುಷ್ಯನ ಅಭ್ಯಾಸದಿಂದ ಸೃಷ್ಟಿಯಾಗುವ ಅವನಿಂದಲೇ ನಾಶವಾಗಬಲ್ಲ ತಾತ್ಕಾಲಿಕ ಸ್ವಾಭಾವ. ಅದು ಜಾತ್ಯಾತೀತ, ಧರ್ಮಾತೀತ ಮತ್ತು ಲಿಂಗಾತೀತ ಸ್ವಾಭಾವ. ವೈಯಕ್ತಿಕ ವ್ಯಾಮೋಹದಿಂದ ಉಂಟಾಗುವ ಕ್ಷಣಿಕ ಕೃತ್ಯ. ಅದು ತೀರ ವ್ಯಕ್ತಿಗತ ಸಮಸ್ಯೆ ಅಷ್ಟೆ. ಆದರೆ ಅದನ್ನೇ ದೇಶದ ಮಹಾ ಸಮಸ್ಯೆ ಎಂದು ಬಿಂಬಿಸುವುದು ಮಾತ್ರ ಮಹಾ ವಂಚನೆ. ದೇಶದ ಅಭಿವೃದ್ಧಿಗೆ, ಅಖಂಡತೆಗೆ, ಸಾರ್ವಭೌಮತ್ವಕ್ಕೆ ಸಮಗ್ರತೆಗೆ ಮತ್ತು ಸುಭದ್ರತೆಗೆ ಮಾರಕವಾದ ಏಕೈಕ ಶತ್ರು ಎಂದರೆ ನಮ್ಮಲ್ಲಿರುವ "ಜಾತಿಯತೆ" ಮಾತ್ರ ಎಂಬುದನ್ನು ಪ್ರಜ್ಞಾವಂತರಾದ ಯಾರಾದರೂ ನಿರಾಕರಿಸಲು ಸಾಧ್ಯವೆ? 'ಜಾತಿಯತೆ' ಎಂಬ ರೋಗವೇ, ಭಯೋತ್ಪಾದನೆ, ಭ್ರಷ್ಟಾಚಾರ, ನಕ್ಸಲಿಸಂ, ಕೋಮುವಾದ, ಬಡತನ, ನಿರುದ್ಯೋಗ ಮುಂತಾದ ಎಲ್ಲಾ ರೋಗಗಳ 'ತಾಯಿ'.

ಈ ಸತ್ಯವನ್ನು ಮುಗುಮ್ಮಾಗಿ ಮರೆಮಾಚುವ ನಾಜೂಕುತನವನ್ನು ಎಂದಿಗೆ ಭಾರತದ ಜಾತಿವಾದಿ ಮನಸುಗಳು ಬಿಡುವವೋ ಅಂದು ದೇಶದ ನಿಜವಾದ ಶತ್ರುವಿನ ದರ್ಶನವಾಗುತ್ತದೆ. ಈ ಜಾತಿಯತೆಯಿಂದಾಗಿ ಸೇ. 85 ರಷ್ಟು ಇದೇ ದೇಶದ ಜನ, ಇದೇ ದೇಶದ ಜನರಿಗಾಗಿ ದುಡಿದೂ ಇದೇ ದೇಶದ ಜನರಿಂದ ಶತಮಾನಗಳಿಂದಲೂ ನೋವು, ಅವಮಾನ, ದೌರ್ಜನ್ಯ, ದಬ್ಬಾಳಿಕೆ, ಅತ್ಯಾಚಾರ, ಅನಾಚಾರಗಳಿಗೆ ಗುರಿಯಾಗಿ ನರಳುತ್ತಿದ್ದಾರೆ. 'ಜಾತಿಯತೆ' ಧರ್ಮಸಮ್ಮತ, ಸಂಪ್ರದಾಯ ಸಮ್ಮತ ಎಂಬ ಮೂಢ ಮನಸ್ಸುಗಳ ಕ್ರೌರ್ಯದಿಂದಾಗಿ ಇಂದಿಗೂ ಕನಿಷ್ಟ ಮಾನವ ಹಕ್ಕುಗಳಿಲ್ಲದೆ ದೇಶದ ಬಹುಸಂಖ್ಯಾತರು ಪರಿತಪಿಸುತ್ತಿದ್ದಾರೆ. ಅವರ ಪಾಲಿಗೆ ಇನ್ನೂ ಅಭಿವೃದ್ಧಿ, ಅಕ್ಷರ, ಅನ್ನ, ಅಧಿಕಾರ ಎಲ್ಲವೂ ಮರಿಚಿಕೆಯಾಗಿವೆ. ಪ್ರೀತಿ, ವಿಶ್ವಾಸ, ನಂಬುಗೆ, ಮಮಕಾರ, ಸ್ನೇಹ, ಬಾಂಧವ್ಯಗಳಂತು ಅಪರಿಚಿತವಾಗಿವೆ. ಇಂಥಾ ವಿಕೃತ ವ್ಯವಸ್ಥೆಯಿಂದಾಗಿ ಸಾವಿರಾರು ವರ್ಷಗಳ ಕಾಲ ಇಡೀ ದೇಶವೇ ಪರಕೀಯರ ದಾಳಿಗೆ ತುತ್ತಾಗಿ ಸ್ವಾತಂತ್ರ್ಯ ಕಳೆದುಕೊಂಡು ಗುಲಾಮಗಿರಿಯಲ್ಲಿ ನಲುಗಿದೆ. ಇಂದಿಗೂ ಅಭದ್ರತೆ, ಆತಂಕದಲ್ಲಿ ನರಳುತ್ತಿದೆ.

ಸಾವಿರಾರು ವರ್ಷಗಳ ಕಾಲ ಈ ದೇಶದ ಮೂಲ ನಿವಾಸಿಗಳನ್ನು ಅಕ್ಷರ, ಅಧಿಕಾರ, ಸಂಪತ್ತು ಗಳಿಕೆಯಿಂದ ದೂರವಿಟ್ಟು ಧರ್ಮ ಶಾಸನಗಳ ಮೂಲಕ ನಿಷೇಧ ಏರಲಾಗಿದೆ. ನಾಗರೀಕ ಪ್ರಪಂಚವೇ ತಲೆತಗ್ಗಿಸುವಂತಹ ಹೀನ ಸ್ಥಿತಿಯಲ್ಲಿ ಭಾರತದ ಜಾತಿವಾದಿಗಳು ನಡೆದುಕೊಳ್ಳುತ್ತಿದ್ದಾರೆ. ಈ ಸ್ಥಿತಿ ಬೇರೆಲ್ಲಾದರೂ ಇದೆಯೇ? ಇಂಥಾ ಸ್ಥಿತಿಯಿಂದ ದೇಶವನ್ನು ಮುಕ್ತಗೊಳಿಸಬೇಕೆಂದು ಬುದ್ಧನಿಂದ ಮೊದಲ್ಗೊಂಡು ಶರಣರು, ಸಂತರು, ಮಹಾಸುಧಾರಕರು ಹೋರಾಡಿದರು. ಅಂಥಾ ಹೋರಾಟವನ್ನು ಮುಂಚೂಣಿಗೆ ತಂದು ಮುಂದುವರೆಸಲು ಯಾಕೆ ಯಾವ ಪ್ರಗತಿಪರ ವ್ಯಕ್ತಿಯೂ ರಾಷ್ಟ್ರ ಮಟ್ಟದಲ್ಲಿ ಮುಂದೆ ಬರುತ್ತಿಲ್ಲ? 'ಜಾತಿಯತೆ' ತೊಲಗಿಸಿ ಎಂಬ ರಾಷ್ಟ್ರವ್ಯಾಪಿ ಆಂದೋಲನವನ್ನೇಕೆ ಯಾವ ಸುಪ್ರಸಿದ್ಧ ವ್ಯಕ್ತಿಯೂ ಸಂಘಟಿಸುತ್ತಿಲ್ಲ?

ಯೋಗಕ್ಕಾಗಿ ಲಕ್ಷಾಂತರ ಜನರನ್ನು ಸಮಾವೇಶಗೊಳಿಸುವ ಗುರು ರಾಮ್‌ದೇವ್, ಭ್ರಷ್ಟಾಚಾರಕ್ಕಾಗಿ ತಲೆ ಕೆಡಿಸಿಕೊಂಡಿದ್ದಾರೆ. ಅಣ್ಣಾ ಹಜಾರೆ ಲೋಕಪಾಲ್ ಎನ್ನುವ ಹಲ್ಲಿಲ್ಲದ ಹಾವಿನಂಥಾ ಕಾಯ್ದೆಗೆ ಪರಿತಪಿಸುತ್ತಿದ್ದಾರೆ. ಯಾಕೆ ಇವರ್‍ಯಾರಿಗೂ 'ಜಾತಿಯತೆ' ಒಂದು ಸಮಸ್ಯೆಯಾಗಿ ಕಾಣುವುದಿಲ್ಲ? ಅದರ ವಿರುದ್ಧ ಯಾಕೆ ಇಂಥವರೆಲ್ಲಾ ದೊಡ್ಡ ಮಟ್ಟದ ಧ್ವನಿ ಎತ್ತುವುದಿಲ್ಲ?

ಕಾರಣ ಸ್ಪಷ್ಟ. 'ಜಾತಿಯತೆ'ಯಿಂದಾಗಿ ಅವರ್‍ಯಾರಿಗೂ ಅಪಾಯವಿಲ್ಲ, ನಷ್ಟವೂ ಇಲ್ಲ. ಅದರ ನೋವು ಕೇವಲ ಶೋಷಿತರಿಗೆ ಮಾತ್ರ ಆದರೆ ಭ್ರಷ್ಟಾಚಾರದ ನೋವು ಎಲ್ಲರನ್ನೂ ಕಾಡುತ್ತದೆ ಅದಕ್ಕೆ. ಆದರೆ ಎಲ್ಲರಿಗೂ ತಿಳಿದಿರಲಿ 'ಜಾತಿಯತೆ' ರೋಗ ದೇಶವನ್ನೇ ಸುಟ್ಟು ಸರ್ವನಾಶ ಮಾಡುತ್ತದೆ.

ಆದ್ದರಿಂದ ಆದಷ್ಟು ಬೇಗ 'ಜಾತಿಯತೆ' ಎಂಬುದನ್ನು ತೊಲಗಿಸಿ 'ಭಾರತೀಯತೆ' ಮಂತ್ರ ಪಠಿಸುವ ಪರಿಪಾಠವನ್ನು ಬೆಳೆಸಲು ಆಂದೋಲನಗಳನ್ನು ರೂಪಿಸಿದರೆ ದೇಶದ ಸಮಗ್ರತೆಯ ದೃಷ್ಟಿಯಿಂದ ಒಳ್ಳೆಯದು ಎಂಬುದನ್ನು ಎಲ್ಲಾ ಹೋರಾಟಗಾರರು, ಪ್ರಗತಿಪರರು ಮನಗಾಣಬೇಕು. ಅದುವೇ ನಿಜವಾದ ರಾಷ್ಟ್ರೀಯ ಚಳವಳಿ. ಅಂತಹ ಚಳವಳಿಯ ಅಗತ್ಯ ಯಾರಿಗಿದೆಯೋ ಇಲ್ಲವೋ ಆದರೆ ಶತಮಾನಗಳಿಂದ ಶೋಷಣೆಗೊಳಗಾಗಿರುವವರಿಗೆ ಅದು ಜರೂರಾಗಿ ಬೇಕಾಗಿದೆ. □

ಸಂಪಾದಕರೊಡನೆ ಸಂವಾದ

ಹಜಾರೆ ಹುಟ್ಟಿಸಿರುವ ಹಜಾರು ಭರವಸೆಗಳು

ಮಲ್ಲಿಕಾರ್ಜುನ ಗುಮ್ಮಗೋಳ

ಪ್ರಿಯ ಸಂಪಾದಕರೇ,

'ಎರಡನೆಯ ಸಂಗ್ರಾಮಕ್ಕೆ ಜನ ಸಿದ್ಧರಾಗಬೇಕಾಗಿದೆ' ಎಂದು ಹಜಾರೆ ಕರೆ ನೀಡಿದ್ದಾರೆ. ಆದರೆ ಕ್ರಮಿಸಬೇಕಾದ ಹಾದಿ ತುಂಬ ಕಠಿಣವಾಗಿದೆ ಎಂಬುದು ಈಗ ಅವರಿಗೆ ವೇದ್ಯವಾಗುತ್ತಿದೆ. ಕಾಂಗ್ರೆಸ್ ಸರಕಾರ ಅವರನ್ನು ಹೆಡಮುರಿಗೆ ಕಟ್ಟುವ ಎಲ್ಲ ತಂತ್ರಗಳನ್ನು ಹೆಣೆಯುತ್ತಿದೆ. 'ಹಿಂದ್ ಸ್ವರಾಜ್ ಟ್ರಸ್ಟ್'ನ 2 ಲಕ್ಷ ಹಣವನ್ನು ತಮ್ಮ ಹುಟ್ಟು ಹಬ್ಬಕ್ಕಾಗಿ ದುರುಪಯೋಗ ಪಡಿಸಿಕೊಂಡಿದ್ದಾರೆ. ಅಲ್ಲದೆ ತಮ್ಮ ಹೋರಾಟಕ್ಕೆ ಪ್ರಚಾರದ ಗಿಮಿಕ್ ನೀಡುತ್ತಿದ್ದಾರೆ. ಅದಕ್ಕೆ ಹಣ ಎಲ್ಲಿಂದ ಹರಿದು ಬರುತ್ತಿದೆ' ಎಂದು ಆರೋಪ ಮಾಡಲಾಗುತ್ತಿದೆ. ಅಣ್ಣಾ ಹಜಾರೆ ಅವರ ಕಚೇರಿಗಳ ಮೇಲೆ ಐಟಿ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಆದರೆ ತನ್ನ ಆದಾಯದ ಮೂಲದ ಬಗ್ಗೆ ಮಾಹಿತಿ ನೀಡದ ಹಾಗೂ ಆದಾಯಕರ ಇಲಾಖೆಗೆ ಐಟಿ ರಿಟರ್ನ್ ಸಲ್ಲಿಸದ ಕಾಂಗ್ರೆಸ್ ಮೊದಲು ತನ್ನ ನೈತಿಕತೆಯ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಸರಕಾರದ ವಿರುದ್ಧ ಸಮರ ಸಾರಿದ್ದ ಬಾಬಾ ರಾಮದೇವರನ್ನು ದಮನ ಮಾಡಿದ ಹಾಗೆ ಅಣ್ಣನನ್ನು ಹಣಿಯುವ ಎಲ್ಲ ಅಸ್ತ್ರಗಳನ್ನು ಸರಕಾರ ಬಳಸುತ್ತಿದೆ. ಅವರಿಗೆ ಆಂದೋಲನ ಮಾಡಲು ಪರವಾನಗಿಯನ್ನು ನಿರಾಕರಿಸಲಾಗುತ್ತಿದೆ. ಬೆಂಬಲಿಗರ ಜಮಾವಣೆಯನ್ನು ತಡೆಯಲು ತನ್ನ ಬಲವನ್ನು ಬಳಸುತ್ತಿದೆ. ಸಂವಿಧಾನಾತ್ಮಕ ಆಡಳಿತ ನೀಡಬೇಕಾದ ಒಂದು ಸರಕಾರ ಸಂವಿಧಾನ ಕಲಂ 19(2)ರ ಪ್ರಕಾರ ಇರುವ ಸ್ವಾತಂತ್ರ್ಯದ ಹಕ್ಕನ್ನು ಮೊಟಕುಗೊಳಿಸುತ್ತಿದೆ! ಲೋಕಪಾಲ ಕರಡು ಮಸೂದೆ ರಚನೆಯಲ್ಲಿ ಹಜಾರೆಯವರನ್ನು ನಂಬಿಸಿ ದಾರಿತಪ್ಪಿಸುವ ಕೆಲಸವನ್ನು ಮಾಡಲಾಯಿತು.

ಈ ದೇಶ ಇದುವರೆಗೂ ಎರಡು ಮಹತ್ತರವಾದ ಹೋರಾಟಗಳನ್ನು ಕಂಡಿದೆ. ಒಂದು ನಲವತ್ತೇಳರ ಸ್ವಾತಂತ್ರ್ಯ ಸಂಗ್ರಾಮ ಮತ್ತೊಂದು ಸರ್ವಾಧಿಕಾರ ಮತ್ತು ದುರಾಡಳಿತದ ವಿರುದ್ಧ ನಡೆದ ಎಪ್ಪತ್ತೈದರ ಜನಾಂದೋಲನ. ಈ ಎರಡು ಚಳವಳಿಗಳ ಹೊರತಾಗಿ ಹಲವಾರು ಹೋರಾಟಗಳನ್ನು ನಾವು ಕಂಡಿದ್ದೇವೆ. ಆದರೆ ಅವು ಈಗಿನಷ್ಟು ಭರವಸೆಗಳನ್ನಾಗಲಿ ಬೆಂಬಲವನ್ನಾಗಲಿ ಪಡೆಯಲಿಲ್ಲ. ನಲವತ್ತೇಳರ ಮುಂಚೆ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆದರೆ, ನಲವತ್ತೇಳರ ನಂತರ ಸಂಪತ್ತಿಗಾಗಿ ಹೋರಾಟ ನಡೆದಿದೆ. ಬಂಡವಾಳಶಾಹಿ ಪ್ರಜಾಪ್ರಭುತ್ವವು ಸಂಪತ್ತಿನ ಅಸಮಾನ ಹಂಚಿಕೆಗೆ ದಾರಿ ಮಾಡಿಕೊಟ್ಟಿದೆ. ಅದು ಬಡವ ಮತ್ತು ಶ್ರೀಮಂತರ ನಡುವೆ ದೊಡ್ಡ ಅಂತರವನ್ನು ಉಂಟುಮಾಡಿದೆ. ಇದರಿಂದ ಬಡತನ, ನಿರುದ್ಯೋಗ, ಅನಕ್ಷರತೆ ಹಾಗೂ ಭ್ರಷ್ಟಾಚಾರದಂಥ ಸಾಮಾಜಿಕ ಪಿಡುಗುಗಳು ಸೃಷ್ಟಿಯಾಗಿವೆ. ಈಗ ಅಣ್ಣಾ ಹಜಾರೆ ಆರಂಭಿಸಿರುವ ಭ್ರಷ್ಟಾಚರ ವಿರೋಧಿ ಆಂದೋಲನ ಈ ಎಲ್ಲ ಸಾಮಾಜಿಕ ಪಿಡುಗುಗಳನ್ನು ತೊಲಗಿಸುವಲ್ಲಿ ಹೊಸ ಭರವಸೆಗಳನ್ನು ಮೂಡಿಸಿದೆ.

ಭ್ರಷ್ಟಾಚಾರ ಕೇವಲ ಸರಕಾರಿ ರಂಗದಲ್ಲಿ ಮಾತ್ರ ಇದೆಯೇ? ಖಾಸಗಿ ಮತ್ತು ಉದ್ಯಮ ವಲಯದಲ್ಲಿ ಅದು ಇಲ್ಲವೇ? ಇಂಥ ಭ್ರಷ್ಟಾಚಾರಕ್ಕೆ ಕಾರಣವಾಗುವ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಸನ್ನಿವೇಶಗಳು ಯಾವವು? ಎಂಬೆಲ್ಲ ಪ್ರಶ್ನೆಗಳು ಈ ಹೊತ್ತಿನಲ್ಲಿ ಉತ್ತರವನ್ನು ಬಯಸುತ್ತಿವೆ. ಅಣ್ಣಾ ಹಜಾರೆ ಆರಂಭಿಸಿರುವ ಹೋರಾಟ ಭ್ರಷ್ಟಾಚಾರ ಪ್ರತಿಭಂದನೆಗಿಂತ ಭ್ರಷ್ಟಾಚಾರೋತ್ತರ ಚಿಕಿತ್ಸೆಗೆ ಹೆಚ್ಚು ಗಮನ ಕೊಟ್ಟಂತೆ ಕಾಣಿಸುತ್ತದೆ. ಭ್ರಷ್ಟಾಚಾರ ಉಂಟಾಗಲು ಇರುವ ಕಾರಣಗಳು ಮತ್ತು ಸನ್ನಿವೇಶಗಳನ್ನು ಮೊದಲು ಅರ್ಥಮಾಡಿಕೊಳ್ಳಬೇಕಾಗಿದೆ ಹಾಗೂ ಅವುಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕಾಗಿದೆ.

ಜಟಿಲವಾದ ನಿಯಮಗಳು, ಕುಸಿಯುತ್ತಿರುವ ನೈತಿಕ ಮೌಲ್ಯಗಳು, ಸಂಪತ್ತಿನ ಲೋಲುಪತೆ, ಬೆಲೆ ಏರಿಕೆ, ವರದಕ್ಷಿಣೆ, ಪಾಶ್ಚಾತ್ಯ ಸಂಸ್ಕೃತಿಯ ಮೋಹ ಹಾಗೂ ಕೊಳ್ಳುಬಾಕ ಪ್ರವೃತ್ತಿಗಳಿಂದಾಗಿ ಇಡಿ ಸಾಮಾಜಿಕ ವ್ಯವಸ್ಥೆಯೇ ಈ ಪಿಡುಗಿನಲ್ಲಿ ಸಿಕ್ಕಿಹಾಕಿಕೊಂಡಿದೆ. ಸಾರ್ವಜನಿಕ ಕ್ಷೇತ್ರವನ್ನು ಎರಡು ವರ್ಗವಾಗಿ ವಿಂಗಡಿಸಬಹುದು: ಒಂದು ಭ್ರಷ್ಟಾರಕ್ಕೆ ವಿಪುಲವಾದ ಅವಕಾಶ ಇರುವ ಕ್ಷೇತ್ರ, ಇನ್ನೊಂದು ಭ್ರಷ್ಟಾಚಾರ ಮಾಡಲು ಅವಕಾಶವಿಲ್ಲದ ಕ್ಷೇತ್ರ. ಇಲ್ಲಿ ಭ್ರಷ್ಟಾಚಾರ ಮಾಡಬೇಕೆಂಬ ಮನಸಿರುತ್ತದೆ ಆದರೆ ಅವಕಾಶವಿರುವದಿಲ್ಲ. ಮೊದಲನೆಯ ಕ್ಷೇತ್ರದಲ್ಲಿ ಅವಕಾಶವಿದ್ದರೂ ಮಾಡದೇ ಇರುವವರೂ ಇದ್ದಾರೆ. ಭ್ರಷ್ಟಾಚಾರ ಮಾಡಲು ಅವಕಾಶವಿಲ್ಲದವರು ಮಾತನಾಡುವದಕ್ಕಿಂತ, ಅವಕಾಶವಿದ್ದರೂ ಮಾಡದೇ ಇರುವವರು ಮಾತನಾಡುವ ಜರೂರತ್ತು ಬಹಳವಿದೆ.

ಒಬ್ಬ ವ್ಯಕ್ತಿ ಗಳಿಸಿದ ಸಂಪತ್ತಿನ ಮೇಲೆ ಆತನ ಅಂತಸ್ತನ್ನು ಅಳೆಯಲಾಗುತ್ತಿದೆ. ಆದರೆ, ಆತ ಆ ಸಂಪತ್ತನ್ನು ಯಾವ ಮಾರ್ಗದಿಂದ ಗಳಿಸಿದ ಎಂಬುದರ ಬಗ್ಗೆ ಯೋಚಿಸುವದಿಲ್ಲ. ಚುನಾಯಿತನಾದ ಒಬ್ಬ ವ್ಯಕ್ತಿ ಒಂದೇ ಅವಧಿಯಲ್ಲಿ ನೂರು ಪಟ್ಟು ಸಂಪತ್ತನ್ನು ಗಳಿಸಲು ಸಾಧ್ಯವಾಗುವ ಅವಕಾಶಗಳನ್ನು ತಪ್ಪಿಸಬೇಕಾಗಿದೆ. ಕಂದಾಯ, ಪೋಲಿಸ, ಅಬಕಾರಿ, ನೋಂದಣಿ ಹಾಗೂ ಸಾರಿಗೆ ಇಲಾಖೆಗಳಲ್ಲಿ ಕೆಲಸ ಮಾಡುವವರಿಗೆ ಸಿಗುವ ಮರ್ಯಾದೆಯೇ ಬೇರೆ. ಸಮಾಜ ಭ್ರಷ್ಟಾಚಾರವನ್ನು ಒಂದು ವ್ಯವಸ್ಥೆಯೆಂದು ಒಪ್ಪಿಕೊಂಡುಬಿಟ್ಟಿದೆ.

ಎಂಬತ್ತು ಪೈಸೆಯ ಉತ್ಪಾದನಾ ವೆಚ್ಚದಿಂದ ತಯಾರಾಗುವ ಒಂದು ತಂಪು ಪಾನಿಯ ಬಾಟಲಿಗೆ ಹದಿನೈದು ರೂಪಾಯಿ ಬೆಲೆಯನ್ನು ನಿಗದಿಪಡಿಸುವ ಉದ್ಯಮಿಗಳು, ನಾಲ್ಕು ಜನರು ಇರುವ ಕುಟಂಬಕ್ಕೆ ಅರವತ್ತು ಕೊಠಡಿಗಳಿರುವ ಮನೆಯನ್ನು ಕಟ್ಟಿಸಿಕೊಳ್ಳುವ ಬಂಡವಾಳಶಾಹಿಗಳು, ತಮ್ಮದೆ ಕುಟುಂಬದ ಸದಸ್ಯರ ಹೆಸರಿನಲ್ಲಿ ಟ್ರಸ್ಟ್‌ಗಳನ್ನು ಸ್ಥಾಪಿಸುಕೊಂಡು ಅದಕ್ಕೆ ದೇಣಿಗೆ ನೀಡಿ ಸರಕಾರಕ್ಕೆ ಕಟ್ಟಬೇಕಾದ ಕರದಿಂದ ವಿನಾಯ್ತಿ ಪಡೆಯುವ ಕುಬೇರರು ವಾಣಿಜ್ಯ ವ್ಯಾಪಾರದ ಹೆಸರಿನಲ್ಲಿ ಸಂಪತ್ತಿನ ಕಳ್ಳ ಸಂಗ್ರಹದಲ್ಲಿ ತೊಡಗಿದ್ದಾರೆ. ಇದು ಸಹ ಭ್ರಷ್ಟಾಚಾರದ ಇನ್ನೊಂದು ಮುಖವೆ ಆಗಿದೆ. ಇಂಥವರ ವಿರುದ್ಧ ಹೋರಾಟ ಆರಂಭಿಸಬೇಕಾಗಿದೆ.

ಈಗ ಆರಂಭವಾಗಿರುವ ಹೋರಾಟಕ್ಕೆ ತಳಮಟ್ಟದ ವ್ಯಾಪ್ತಿಯನ್ನು ತಂದುಕೊಡಬೇಕಾಗಿದೆ. ರಾಳೆಗಾಂವ ಸಿದ್ಧಿಯಲ್ಲಿ ಆರಂಭವಾದ ಸಾಮಾಜಿಕ ಪರಿವರ್ತನೆ ಚಳವಳಿ ಈ ದೇಶದ 600 ಜಿಲ್ಲೆಗಳಲ್ಲೂ ಆರಂಭವಾಗಬೇಕಾಗಿದೆ. ಉಪವಾಸ ಸತ್ಯಾಗ್ರಹಕ್ಕೆ ಅತ್ಯುತ್ಸಾಹದಿಂದ ಬೆಂಬಲ ನೀಡಿ ದೇಶಾದ್ಯಂತ ರಸ್ತೆಗಿಳಿದು ಹೋರಾಟ ಮಾಡಿದ ಅಸಂಘಟಿತ ಸಾಮಾಜಿಕ ಕಾರ್ಯಕರ್ತರು, ಗಾಂಧಿವಾದಿಗಳು, ಎನ್.ಜಿ.ಓಗಳು, ಯುವಕ ಸಂಘ ಸಂಸ್ಥೆಗಳು-ಮಾಧ್ಯಮಗಳನ್ನು ಒಳಗೊಂಡ 'ಆಶ್ರಮ-ಟ್ರಸ್ಟ್' ರೂಪದ ಸಂಸ್ಥೆಗಳನ್ನು ಸ್ಥಾಪಿಸಬೇಕಾಗಿದೆ.

ಚುನಾವಣಾ ಸುಧಾರಣೆಗೆ ಹಾಗೂ ಅಕ್ರಮಗಳನ್ನು ತಡೆಯುವದಕ್ಕಾಗಿ ಈ ಸಂಸ್ಥೆಗಳ ಮೂಲಕ ಸ್ವಾಭಿಮಾನಿ ಜಾಗೃತಿ ಆಂದೋಲನವನ್ನು ನಡೆಸಬೇಕಾಗಿದೆ. ಉದ್ಯಮಿಗಳು, ಭೂಗತ ಲೋಕದ ದೊರೆಗಳು ಹಾಗೂ ರಾಜಕಾರಣಿಗಳ ಅಪವಿತ್ರ ಮೈತ್ರಿಯನ್ನು ತಡೆಯಲು ಯುವಕರ ಪಡೆಯನ್ನು ಒಳಗೊಂಡ 'ಸ್ವಾಭಿಮಾನಿ ಸೈನ್ಯ'ವನ್ನು ಕಟ್ಟಬೇಕಾಗಿದೆ. ಚುನಾವಣಾ ವೆಚ್ಚವನ್ನು ಸರಕಾರವೇ ಬರಿಸುವ ವ್ಯವಸ್ಥೆಗೆ ಒತ್ತಾಯಿಸಬೇಕು. ಅಂದಾಗ ಮಾತ್ರ ಸಜ್ಜನರು ಗೆದ್ದು ಬರಲು ಸಾಧ್ಯ. ಅಲ್ಲದೇ ಉದ್ಯಮಿಗಳಿಂದ ರಾಜಕಾರಣಿಗಳು ದೇಣಿಗೆಯನ್ನು ಪಡೆಯುವದು, ಚುನಾಯಿತರಾದ ಮೇಲೆ ಉದ್ಯಮಿಗಳಿಗೆ ಅನುಕೂಲ ಮಾಡಿಕೊಡುವದು ಇದರಿಂದ ತಪ್ಪುತ್ತದೆ. ಇದಕ್ಕಾಗಿ ಒಂದು ಖಾಸಗಿ ಮಸೂದೆಯನ್ನು ಸರಕಾರದ ಮುಂದೆ ಮಾಡಿಸಿ ಅದನ್ನು ಜಾರಿಗೆ ತರಲು ಈಗಿನಂತೆ ಮತ್ತೆ ಹೋರಾಟಕ್ಕೆ ಇಳಿಯಬೇಕು.

ವಿನೋಭಾ ಬಾವೆ ಅವರ ಭೂದಾನ ರೀತಿಯಲ್ಲಿ 'ಸಂಪತ್ತಿನ ದಾನ' ಚಳವಳಿ ಹಾಗೂ ಅಕ್ರಮವಾಗಿ ಸಂಪತ್ತು ಗಳಿಸಿದವರ ಮನೆಯ ಮುಂದೆ ಪಿಕೇಟಿಂಗ್‌ಗಳು ನಡೆಯಬೇಕಾಗಿದೆ. ದುಬಾರಿ ವೆಚ್ಚ ಹಾಗೂ ಸಂಪತ್ತಿನ ಪಲಾಯನವನ್ನು ತಡೆಯಲು ಕೃಷಿ, ಗೃಹ ಮತ್ತು ಗುಡಿಕೈಗಾರಿಕೆಗಳ ಪುನಶ್ಚೇತನಕ್ಕೆ ಜನರನ್ನು ಸಜ್ಜುಗೊಳಿಸಬೇಕಾಗಿದೆ. ಕೃಷಿಗೆ ನೀಡುವ ಸಬ್ಸಿಡಿಯ ಕುರಿತು ದೊಡ್ಡದಾಗಿ ಮಾತನಾಡುವ ಸರಕಾರಗಳು ಕೈಗಾರಿಕೆಗಳಿಗೆ ನೀಡುವ ಸಬ್ಸಿಡಿ ಹಾಗೂ ಪ್ರೋತ್ಸಾಹ ದನದ ಬಗ್ಗೆ ಮಾತನಾಡುವದಿಲ್ಲ. ಕಿಕ್‌ಬ್ಯಾಕ್ ವ್ಯವಹಾರ ಈ ಎಲ್ಲ ಸತ್ಯಗಳನ್ನು ಮುಚ್ಚಿಹಾಕುತ್ತಿದೆ.

ಗಾಂಧೀ-ಅಂಬೇಡ್ಕರ್, ಜೈಪ್ರಕಾಶ ನಾರಾಯಣ್-ಲೋಹಿಯಾ ಮಾದರಿಯ ಹೋರಾಟಕ್ಕೆ ಈ ದೇಶದ ಜನ ಸಿದ್ದಗೊಳ್ಳುತ್ತಿದ್ದಾರೆ. ಇಂಥ ಸುಸಂದರ್ಭದಲ್ಲಿ ಅಣ್ಣಾ ಹಜಾರೆ ವಹಿಸಿರುವ ನೇತೃತ್ವ ಹೊಸ ದೆಸೆಯನ್ನು ತೋರಿಸಿದೆ. □

ಸಂಪಾದಕರೊಡನೆ ಸಂವಾದ

ಡಾ. ಎನ್. ಜಗದೀಶ್ ಕೊಪ್ಪ

ಪ್ರಿಯ ಸಂಪಾದಕರೇ,

ಜಾಗತೀಕರಣ ಕುರಿತಂತೆ ಬರಗೂರು ರಾಮಚಂದ್ರಪ್ಪ ಹೇಳಿರುವ ಜಾಗತೀಕರಣವೆಂಬುದು ಶಬ್ದವಿಲ್ಲದ ನಿಶ್ಯಬ್ದ ಯುದ್ದ ಎಂಬ ಮಾತು ನನಗೆ ಪದೇ, ಪದೇ ನೆನಪಿಗೆ ಬರುತ್ತದೆ. ಮುಕ್ತ ಮಾರುಕಟ್ಟೆಯ ನೆಪದಲ್ಲಿ ನಮ್ಮ ದೇಶದೊಳಕ್ಕೆ ನುಸುಳಿರುವ ಬಹುರಾಷ್ಟ್ರೀಯ ಕಂಪನಿಗಳು ಔಷಧ ರಂಗದಲ್ಲಿ ಸೃಷ್ಟಿಸಿರುವ ಅಲ್ಲೋಲ ಕಲ್ಲೋಲ ಜನಸಾಮನ್ಯರಿಗೆ ಇಂದಿಗೂ ಅರ್ಥವಾಗದ ಸಂಗತಿ.

ಭಾರತದ ಬಗ್ಗೆ, ಇಲ್ಲಿನ ಬಡತನ, ಅಜ್ಞಾನದ ಬಗ್ಗೆ, ರಾಜಕಾರಣಿಗಳ ಭ್ರಷ್ಟಾಚಾರದ ಬಗ್ಗೆ ನಮ್ಮ ತಕರಾರುಗಳು ಏನೇ ಇರಲಿ, ಇಲ್ಲಿನ ಬಡವರಿಗೆ ಕೈಗೆಟುಕುವ ಅಗ್ಗದ ದರದಲ್ಲಿ ಜೀವರಕ್ಷಕ ಔಷಧಗಳನ್ನು ತಯಾರು ಮಾಡುತ್ತಿರುವುದು ಭಾರತದಲ್ಲಿ ಮಾತ್ರ, ಇದು ಈ ದೇಶದ ಹೆಗ್ಗಳಿಕೆ. ಇಲ್ಲಿ 15 ರೂಪಾಯಿಗೆ ಸಿಗುವ ಮಾತ್ರೆ ನೆರೆಯ ಪಾಕಿಸ್ತಾನದಲ್ಲಿ 45 ರೂಪಾಯಿ. ಅಂದರೆ, ಶೇ.45 ಪಟ್ಟು ಅಧಿಕ ಇನ್ನೂ ಯುರೋಪಿನಲ್ಲಿ ಸಾವಿರ ಪಟ್ಟು ಅಧಿಕ.

ಹಾಗಾಗಿ ನೆರೆಯ ಅರಬ್ ರಾಷ್ಟ್ರಗಳಿಂದ, ಪಾಕಿಸ್ತಾನದಿಂದ, ಇರಾಕ್, ಇರಾನ್‌ನಿಂದ ರೋಗಿಗಳು ಚಿಕಿತ್ಸೆಗಾಗಿ ಕೇರಳಕ್ಕೆ, ಯುರೋಪ್ ರಾಷ್ಟ್ರಗಳಿಂದ ಮುಂಬೈ, ದೆಹಲಿಗೆ ರೋಗಿಗಳು ಬರುತ್ತಿದ್ದಾರೆ. ನಮ್ಮ ನೆರೆಯ ಚಿಕ್ಕ ರಾಜ್ಯವಾದ ಕೇರಳದಲ್ಲಿ 500 ಕ್ಕೂ ಹೆಚ್ಚು ಸುಸಜ್ಜಿತ ಆಸ್ಪತ್ರೆಗಳಿವೆ. ಈ ಕಾರಣಕ್ಕಾಗಿ ಹೆಲ್ತ್ ಟೂರಿಸಂ ಹೆಸರಿನಲ್ಲಿ ಅಂತರಾಷ್ಟ್ರೀಯ ಮಟ್ಟದ ಏಜೆಂಟರು ಹುಟ್ಟಿಕೊಂಡು ಭಾರತಕ್ಕೆ ರೋಗಿಗಳನ್ನು ಕರೆತರುತ್ತಿದ್ದಾರೆ.

ಭಾರತದ ವೈದ್ಯಲೋಕದ ಹಾಗೂ ಔಷಧ ವಲಯದ ಇಂತಹ ಅವಕಾಶಗಳಿಗೆ ಬಹುರಾಷ್ಟ್ರೀಯ ಕಂಪನಿಗಳು ಕಲ್ಲು ಹಾಕಿದ್ದು ಔಷಧ ರಂಗದಲ್ಲಿ ಏಕಸ್ವಾಮ್ಯತೆ ಸಾಧಿಸಲು ಹೆಜ್ಜೆ ಇಟ್ಟಿವೆ. ಇದಕ್ಕೆ ಕಾರಣವಾದದ್ದು 2004ರಲ್ಲಿ ನಡೆದ ಒಂದು ಘಟನೆ.

ದುಬಾರಿ ವೆಚ್ಚದ ಚಿಕಿತ್ಸೆಯ ಕಾರಣ ಏಡ್ಸ್ ರೋಗಿಗಳು ತೃತೀಯ ಜಗತ್ತಿನ ರಾಷ್ಟ್ರಗಳೂ ಸೇರಿದಂತೆ, ಆಫ್ರಿಕಾದ ಬಡ ರಾಷ್ಟ್ರಗಳಲ್ಲಿ ಸಾಯುತ್ತಿರುವುದನ್ನು ಮನಗಂಡ

2006 ರಿಂದ 2010ರವರೆಗೆ ದೇಶದ ಬಹುತೇಕ ಕಂಪನಿಗಳು ವಿದೇಶಿ ಕಂಪನಿಗಳ ಪಾಲಾಗಿವೆ. ದೇಶದ ಪ್ರಸಿದ್ಧ ಕಂಪನಿಗಳಾದ ಮ್ಯಾಟ್ರಿಕ್ ಲ್ಯಾಬ್ ಮೈಲಾನ್ ಕಂಪನಿಗೆ, ಡಾಬರ್ ಫಾರ್ಮ ಪ್ರೆಸ್ನಿಯಸ್ ಕಬಿ ಕಂಪನಿಗೆ, ರ‍್ಯಾನ್‌ಬಾಕ್ಸಿ ಲ್ಯಾಬ್ ಡೈಚಿ ಸ್ಯಾಂಕಿಯೊ ಕಂಪನಿಗೆ, ಶಾಂತಾ ಬಯೋಟೆಕ್ ಸ್ಯಾನೊಫಿ ಅವಂತಿಸ್ ಕಂಪನಿಗೆ, ಆರ್ಚಿಡ್ ಕೆಮಿಕಲ್ಸ್ ಹಾರ್ಸ್‌ಸಿರ ಕಂಪನಿಗೆ, ಪಿರಮಾಲ್ ಹೆಲ್ತ್‌ಕೇರ್ ಸಂಸ್ಥೆ ಅಬೋಟ್ ಕಂಪನಿಗೆ ಮಾರಾಟವಾಗಿವೆ. ಇದರ ಪರಿಣಾಮ ಭಾರತದಲ್ಲಿ ಕಳೆದ ಒಂದು ವರ್ಷದಲ್ಲಿ ಔಷಧಿಗಳ ದರ ಶೇ.25ರಿಂದ ಶೆ.40 ರವರೆಗೆ ದುಬಾರಿಯಾಗಿದೆ. ದಿನ ಬಳಕೆಯ ವಸ್ತುಗಳ ಬೆಲೆ ಏರಿಕೆಯಂತೆ ಜನಸಾಮಾನ್ಯರಿಗೆ ಔಷಧಗಳ ಬೆಲೆ ಏರಿಕೆ ತಕ್ಷಣ ಗೋಚರಿಸುವುದಿಲ್ಲ.

ವಿಶ್ವ ವ್ಯಾಪಾರ ಸಂಘಟನೆ(W.T.O.) 2004ರಲ್ಲಿ ತುರ್ತು ಸಭೆ ನಡೆಸಿ ಪೇಟೆಂಟ್ ಸ್ವಾಮ್ಯ ಕುರಿತಂತೆ ಇರುವ ಹಕ್ಕು ಮತ್ತು ಮಾನದಂಡಗಳನ್ನು ಸಡಿಲಿಸಿ, ತುರ್ತು ಸಂದರ್ಭದಲ್ಲಿ ಯಾವುದೇ ರಾಷ್ಟ್ರ ಪೇಟೆಂಟ್ ಹಂಗಿಲ್ಲದೆ ಔಷಧಗಳನ್ನು ತಯಾರಿಸಬಹುದು, ಜೊತೆಗೆ ಔಷಧ ತಯಾರಿಕೆಗೆ ಸೌಕರ್ಯಗಳಿಲ್ಲದ ರಾಷ್ಟ್ರಗಳಿಗೆ ಸರಬರಾಜು ಮಾಡಬಹುದು ಎಂದು ಆದೇಶ ಹೊರಡಿಸಿತು.

ಅಲ್ಲಿಯವರೆಗೆ ಒಂದು ತಿಂಗಳಿಗಾಗುವ ಏಡ್ಸ್ ಔಷಧಿಯ ಕಿಟ್ ಒಂದನ್ನು 1 ಲಕ್ಷದ 20 ಸಾವಿರ ರೂಪಾಯಿಗೆ ಮಾರಾಟ ಮಾಡುತ್ತಿದ್ದ ಕಂಪನಿಗಳಿಗೆ ಪೆಟ್ಟು ನೀಡಿದ ಭಾರತ ಕೇವಲ 8 ಸಾವಿರ ರೂಪಾಯಿಗೆ ಔಷಧ ಕಿಟ್ ಒದಗಿಸಲು ಪ್ರಾರಂಭಿಸಿತು. ವಿಶ್ವ ಸಂಸ್ಥೆಯ ಸಹಾಯ ನಿಧಿ, ಬಿಲ್ ಗೇಟ್ಸ್‌ನ ಫೌಂಡೇಷನ್ ಮುಂತಾದ ಸಂಸ್ಥೆಗಳು ಸಬ್ಸಿಡಿ ರೂಪದಲ್ಲಿ ಈ ಕಿಟ್‌ಗಳನ್ನು ಹಂಚಿದ್ದರಿಂದ ಬಡ ಏಡ್ಸ್ ರೋಗಿಗಳು ಚೇತರಿಸಿಕೊಳ್ಳಲು ಸಾಧ್ಯವಾಯಿತು.

ಇದರಿಂದ ವಿಚಲಿತಗೊಂಡ ಬಹುರಾಷ್ಟ್ರೀಯ ಕಂಪನಿಗಳು ಈಗ ಅಗ್ಗದ ಔಷಧ ತಯಾರು ಮಾಡುವ ಭಾರತಕ್ಕೆ ಲಗ್ಗೆ ಇಟ್ಟಿವೆ. ಮುಕ್ತ ಮಾರುಕಟ್ಟೆಯ ಈ ದಿನಗಳಲ್ಲಿ ನಮ್ಮ ಕೇಂದ್ರ ಸರಕಾರ ತೆಗೆದುಕೊಂಡ ಮೂರ್ಖತನದ ನಿರ್ಧಾರದಿಂದಾಗಿ ಬಡವರು ಅಗ್ಗದ ಜೀವ ರಕ್ಷಕ ಔಷಧಗಳಿಂದ ವಂಚಿತರಾಗಬೇಕಾಗಿದೆ.

ದೇಶದ ಹಲವು ಉದ್ಯಮ ವಲಯಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆ ಪ್ರಮಾಣದ ಬಗ್ಗೆ ಮಿತಿ ಹೇರಿರುವ ಕೇಂದ್ರ ಸರಕಾರ ಔಷಧ ರಂಗದಲ್ಲಿ ಶೇ.100ರಷ್ಟು ಹೂಡಿಕೆಗೆ ಅವಕಾಶ ಕಲ್ಪಿಸಿದೆ. ಇದನ್ನು ಸಮರ್ಥವಾಗಿ ಬಳಸಿಕೊಂಡ ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಅಗ್ಗದ ದರದಲ್ಲಿ ಔಷಧ ತಯಾರು ಮಾಡುವ ಎಲ್ಲ ಕಂಪನಿಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿವೆ. 2006 ರಿಂದ 2010ರವರೆಗೆ ದೇಶದ ಬಹುತೇಕ ಕಂಪನಿಗಳು ವಿದೇಶಿ ಕಂಪನಿಗಳ ಪಾಲಾಗಿವೆ.

ದೇಶದ ಪ್ರಸಿದ್ಧ ಕಂಪನಿಗಳಾದ ಮ್ಯಾಟ್ರಿಕ್ ಲ್ಯಾಬ್ ಮೈಲಾನ್ ಕಂಪನಿಗೆ, ಡಾಬರ್ ಫಾರ್ಮ ಪ್ರೆಸ್ನಿಯಸ್ ಕಬಿ ಕಂಪನಿಗೆ, ರ‍್ಯಾನ್‌ಬಾಕ್ಸಿ ಲ್ಯಾಬ್ ಡೈಚಿ ಸ್ಯಾಂಕಿಯೊ ಕಂಪನಿಗೆ, ಶಾಂತಾ ಬಯೋಟೆಕ್ ಸ್ಯಾನೊಫಿ ಅವಂತಿಸ್ ಕಂಪನಿಗೆ, ಆರ್ಚಿಡ್ ಕೆಮಿಕಲ್ಸ್ ಹಾರ್ಸ್‌ಸಿರ ಕಂಪನಿಗೆ, ಪಿರಮಾಲ್ ಹೆಲ್ತ್‌ಕೇರ್ ಸಂಸ್ಥೆ ಅಬೋಟ್ ಕಂಪನಿಗೆ ಮಾರಾಟವಾಗಿವೆ. ಇದರ ಪರಿಣಾಮ ಭಾರತದಲ್ಲಿ ಕಳೆದ ಒಂದು ವರ್ಷದಲ್ಲಿ ಔಷಧಿಗಳ ದರ ಶೇ.25ರಿಂದ ಶೆ.40 ರವರೆಗೆ ದುಬಾರಿಯಾಗಿದೆ. ದಿನ ಬಳಕೆಯ ವಸ್ತುಗಳ ಬೆಲೆ ಏರಿಕೆಯಂತೆ ಜನಸಾಮಾನ್ಯರಿಗೆ ಔಷಧಗಳ ಬೆಲೆ ಏರಿಕೆ ತಕ್ಷಣ ಗೋಚರಿಸುವುದಿಲ್ಲ. ಹೀಗಾಗಿ ಬಹುರಾಷ್ಟ್ರೀಯ ಕಂಪನಿಗಳು ಬಡವರ ಸುಲಿಗೆಗೆ ಸದ್ದಾಗದಂತೆ ಮುಂದಾಗಿವೆ.

ಜಾಗತೀಕರಣದ ಮುದ್ದಿನ ಕೂಸುಗಳಾದ ಈ ಕಂಪನಿಗಳಿಗೆ ಯಾವಾಗಲೂ ಲಾಭವೇ ಮುಖ್ಯ ಗುರಿ. ಜಾಗತೀಕರಣದ ಮೂಲ ಮಂತ್ರವೇ ಲಾಭಕೋರತನವಾಗಿದೆ. ಬಡವರು ನಿರ್ನಾಮವಾದರೆ ಬಡತನ ನಿವಾರಣೆಯಾಗುತ್ತದೆ ಎಂಬುದು ಇದರ ನಂಬಿಕೆ. ಒಂದರ್ಥದಲ್ಲಿ ಇದು ನಿಜವೂ ಹೌದು. ಬಡವರೇ ಇಲ್ಲವಾದ ಮೇಲೆ ಬಡತನದ ಪ್ರಶ್ನೆ ಎಲ್ಲಿಯದು?

ಇನ್ನೊಂದು ಆಘಾತಕಾರಿ ಸಂಗತಿಯೆಂದರೆ ಬಡ ರಾಷ್ಟ್ರಗಳ ಏಡ್ಸ್ ರೋಗಿಗಳಿಗೆ ಅಗ್ಗದ ಔಷಧ ತಯಾರು ಮಾಡುತ್ತಿರುವ ಭಾರತ ಸರಕಾರದ ವಿರುದ್ಧ ಏಡ್ಸ್ ಔಷಧಿಗೆ ಪೇಟೆಂಟ್ ಹೊಂದಿರುವ ಸ್ವಿಟ್ಜರ್‌ಲೆಂಡ್ ಮೂಲದ ನೋವರ್ಟಿಸ್ ಎಂಬ ಸಂಸ್ಥೆ ಮೊಕದ್ದಮೆ ದಾಖಲಿಸಿದೆ. 2006ರಲ್ಲಿ ಮದ್ರಾಸ್ ಹೈ ಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಾದಾಗ ನ್ಯಾಯಾಲಯ ಈ ಕಂಪನಿಯ ಅರ್ಜಿಯನ್ನು ವಜಾ ಮಾಡಿತ್ತು. ನಂತರ ಈ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು ಇದೇ 6-9-2011ರ ಮಂಗಳವಾರದಿಂದ ವಿಚಾರಣೆ ಪ್ರಾರಂಭವಾಗಿದೆ.

ಒಂದು ವೇಳೆ ಸುಪ್ರೀಂ ಕೋರ್ಟ್ ಕಂಪನಿಯ ಪೇಟೆಂಟ್ ಹಕ್ಕನ್ನು ಎತ್ತಿ ಹಿಡಿದರೆ ಜಗತ್ತಿನಾದ್ಯಂತ ಶೇ.80ರಷ್ಟು ಏಡ್ಸ್ ರೋಗಿಗಳು, ಶೆ.92ರಷ್ಟು ಹೆಚ್.ಐ.ವಿ. ಪೀಡಿತ ಮಕ್ಕಳ ಬದುಕು ಅಂಧಕಾರದಲ್ಲಿ ಮುಳುಗಿಹೋಗುತ್ತದೆ. ಇಂತಹ ಅಮಾಯಕರ, ಅಸಹಾಯಕರ ಸಾವಿಗೆ ನಾವೆಲ್ಲಾ ಮೂಕ ಸಾಕ್ಷಿಯಾಗಬೇಕಾಗುತ್ತದೆ. ಏಕೆಂದರೆ ಈ ನತದೃಷ್ಟರ ಪಾಲಿಗೆ ದುಬಾರಿ ಔಷಧಕ್ಕಿಂತ ಸಾವೇ ಲೇಸು. □

ನಿಜ ಭಾರತದ ನೋವುಗಳು

ಸಂಪಾದಕರೊಡನೆ ಸಂವಾದ

ಸಂಡೂರು ಕುಮಾರಸ್ವಾಮಿ

ಸರ್ಕಾರದ ಈ ಎಡಬಿಡಂಗಿತನದ ಪ್ರಯೋಜನ ಪಡೆದ ಅಣ್ಣಾಪಡೆ ತನ್ನ ಅಸಂವಿಧಾನಿಕ ಷರತ್ತುಗಳಿಗೆ ಸರ್ಕಾರವನ್ನು ಮಣಿಸುವಲ್ಲಿ ಯಶಸ್ವಿಯಾಯಿತು ದೇಶದಲ್ಲಿನ ಇಂದಿನ ಅಸಹ್ಯ ಅರಾಜಕತೆಗೆ ನಾಗರೀಕ ಸಮಾಜ ಹಾಗೂ ಸರ್ಕಾರದ ಅಸಂವಿಧಾನಿಕ ನಡೆಯೇ ಕಾರಣ. ಜಗತ್ತಿನಲ್ಲಿಯೇ ನಮ್ಮದು ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಗಾಂಧಿ, ಸುಭಾಶ್ ಚಂದ್ರ ಬೋಸ್, ಭಗತ್‌ಸಿಂಗ್ ಹಾಗೂ ಅಸಂಖ್ಯಾತ ಅನಾಮಧೇಯ ಹುತಾತ್ಮರ ಹೋರಾಟದ ಫಲವಾಗಿ ನಾವು ಇಂದು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ.

ಪ್ರಿಯ ಸಂಪಾದಕರೇ,

ಅಣ್ಣಾ ಹಜಾರೆಯ ನಾಗರೀಕ ಸಮಾಜ "ತನ್ನ ಜನಲೋಕಪಾಲ" ಮಸೂದೆಯ ಜಾರಿಗಾಗಿ ಎರಡನೇ ಬಾರಿಗೆ ಉಪವಾಸ ನಿರಶನವನ್ನು ರಾಷ್ಟ್ರಪಿತ ಗಾಂಧೀಜಿ ಹಾಗೂ ಭಾರತಮಾತೆಯ ಅಂಕಿತದಲ್ಲಿ "ಎರಡನೇ ಸ್ವಾತಂತ್ರ್ಯ ಸಂಗ್ರಾಮ"ವೆಂದು ಆಗಸ್ಟ 16 ರಿಂದ ಆರಂಭಿಸಲಾಗಿದೆ.

ಈ ಉಪವಾಸ ನಿರಶನಕ್ಕೆ ಶಾಸಕಾಂಗದ ಫಲಾನುಭವಿಗಳು, ಕಾರ್ಯಾಂಗದ ಫಲಾನುಭವಿಗಳು, ನ್ಯಾಯಾಂಗದ ಫಲಾನುಭವಿಗಳು, ಧರ್ಮಾಂಗದ ಫಲಾನುಭವಿಗಳು ಹಾಗೂ ಸಮಾಜ ಘಾತುಕ ಶಕ್ತಿಗಳು ತಮ್ಮ ತಮ್ಮ ಶಕ್ತ್ಯಾನುಸಾರ ತನು-ಮನ-ಧನವಿತ್ತು ಕೃತಾರ್ಥ ಭಾವನೆಯಲ್ಲಿ ವಿಹರಿಸುತ್ತಿದ್ದಾರೆ.

ಸವಣೂರಿನ ಭಂಗಿಗಳು ಸೂರಿಗಾಗಿ ಮಲಾಭಿಷೇಕ ಮಾಡಿಕೊಂಡಾಗ, ಕಂಬಾಲಪಲ್ಲಿಯ ದಲಿತರ ದಹನದ ಆರೋಪಿಗಳು ಶಿಕ್ಷೆಯಿಲ್ಲದೆ ಖುಲಾಸೆಗೊಂಡಾಗ, ಚರ್ಚುಗಳ ಮೇಲೆ ಸರ್ಕಾರಿ ಪೋಷಿತ ಶಕ್ತಿಗಳು ದಾಳಿ ಮಾಡಿದಾಗ, 500 ವರ್ಷದ ಬಾಬ್ರಿ ಮಸೀದಿಯನ್ನು ರಾಮಭಕ್ತರು ಹಾಡುಹಗಲೇ ಕೆಡವಿದಾಗ, ಗುಜರಾತ್‌ನ ಮುಖ್ಯಮಂತ್ರಿ ನೇತೃತ್ವದಲ್ಲಿ ಮುಸ್ಲಿಮರ ಮಾರಣ ಹೋಮವಾದಾಗ ತೆಪ್ಪಗಿದ್ದ ಮಾಧ್ಯಮದವರು ಇಂದು ಉಪವಾಸ ನಿರಶನಗಳನ್ನು ಹತ್ತಿಕ್ಕುವದನ್ನು "ಪ್ರಜಾಪ್ರಭುತ್ವದ ಕಗ್ಗೊಲೆ" ಎಂದು ಬೊಬ್ಬಿರಿಯುತ್ತಿದ್ದಾರೆ.

ಐ.ಟಿ.-ಬಿ.ಟಿ. ಟೆಕ್ಕಿಗಳಿಗೆ ಗಾಂಧೀ ಟೋಪಿ, ರಾಷ್ಟ್ರಧ್ವಜ, ಮೇಣದ ಬತ್ತಿ ನೀಡಿ ಭಾವಾವೇಶದ ಘೋಷಣೆಗಳನ್ನು ಕೂಗಿಸಿ, ಹೊತ್ತಲ್ಲದ ಹೊತ್ತಿನಲ್ಲಿ ಪೂರಿ-ಆಲೂ ಮಟರ್, ಕೇಕ್, ಐಸ್‌ಕ್ರೀಂಗಳು ಮೆಲ್ಲುತ್ತಾ ಸ್ವಾತಂತ್ರ್ಯ ಅಥವಾ ಉಪವಾಸದ ಅರ್ಥವೇ ಗೊತ್ತಿರದ ಕಲ್ಕಿ ಸಂತ ತಿಯ ಪ್ರತೀಕದಂತಿರುವ ಅಣ್ಣಾ ಸಂತತಿಯ ಅಣುಕು-ಮಿಣುಕು ಹೋರಾಟಗಾರರನ್ನು ಅಪ್ರತಿಮ ಹೋರಾಟ ಗಾರರೆಂದು ಬಿಂಬಿಸಲಾಗುತ್ತಿದೆ.

ನಾಲ್ಕು ದಶಕ ಹಳೆಯದಾದ, ಎಂಟು ಬಾರಿ ಸಂಸತ್ತಿನಲ್ಲಿ ಮಂಡನೆಯಾದ ಲೋಕಪಾಲ್ ಮಸೂದೆಯನ್ನು ಅಪಹರಿಸಿ ತಂದೆ-ಮಗ ಇಬ್ಬರೂ ತಿದ್ದಿ ತೀಡಿದ, ಒಬ್ಬ ಎನ್.ಜಿ.ಓ., ಒಬ್ಬ ಮಾಜಿ ಐ.ಪಿ.ಎಸ್. ಒಬ್ಬ ಕಾವಿ ರಾಜಕಾರಣಿಯ ಬೆಂಬಲದೊಂದಿಗೆ ಗಾಂಧೀಜಿಯ ಮುಖವಾಡದ ಅಣ್ಣಾ ಹಜಾರೆಯ ನೇತೃತ್ವದ ಲೋಕಪಾಲ ಮಸೂದೆಯನ್ನು 120 ಕೋಟಿಯ ಜನದನಿಯಂತೆ ಜನಲೋಕ ಪಾಲ್ ಎಂದು ಬಿಂಬಿಸಿ, ಅದರ ಜಾರಿಗಾಗಿ ಗಡುವು ನೀಡುತ್ತಾ, ಬೆದರಿಸುತ್ತ ಜನದಂಗೆಗೆ ಕರೆನೀಡುತ್ತಿರುವವರಿಗೆ ಸಿಗುವ ಪ್ರಾಮುಖ್ಯತೆ ಮಾನ, ಸನ್ಮಾನಗಳ ಕಂಡು ಸಾಮಾನ್ಯ ಜನತೆ ದಂಗಾಗಿದೆ.

ನಾಲ್ಕು ತಿಂಗಳ ಹಿಂದೆ ಅಣ್ಣಾ ಜಂತರ್‌ಮಂತರ್‌ನಲ್ಲಿ ಮೊದಲನೇ ಬಾರಿಗೆ ಉಪವಾಸ ನಿರಶನ ಆರಂಭಿಸಿದಾಗ, ಯು.ಪಿ.ಎ. ಸರ್ಕಾರ 2 ಜಿ. ತರಂಗಗುಚ್ಛ ಹಗರಣದಲ್ಲಿ ಸಿಕ್ಕು ಜರ್ಜರಿತವಾಗಿತ್ತು. ಇಂತಹ ಸಮಯದಲ್ಲಿ ಅಣ್ಣಾರವರ ಉಪವಾಸ ಸರ್ಕಾರಕ್ಕೆ ಬೇಸಿಗೆಯಲ್ಲಿ ಬೀಸಿದ ತಂಗಾಳಿಯಂತಾಯಿತು. ದೇಶದ ಗಮನವನ್ನು ಬೇರೆಡೆಗೆ ಸೆಳೆಯಲು ಅಣ್ಣಾನನ್ನು ಓಲೈಸುವುದರ ಮೂಲಕ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ಸರ್ಕಾರ ವಿರೋಧ ಪಕ್ಷಗಳನ್ನು ಕಡೆಗಣಿಸಿ ಪ್ರಜಾತಂತ್ರಕ್ಕೆ ಅಪಚಾರವೆನಿಸುವ ರೀತಿಯಲ್ಲಿ ಕಾರ್ಯವೆಸಗಿ ಅಣ್ಣಾಪಡೆಯನ್ನು ಬಲಿಷ್ಠಗೊಳಿಸಿತು. ಅನಾಯಾಸವಾಗಿ ಸಿಕ್ಕ ಸರ್ಕಾರದ ಮನ್ನಣೆಯಿಂದಾಗಿ ನಾಗರೀಕ ಸಮಾಜ ಮದವೇರಿದ, ಅಂಕುಶವಿರದ ಆನೆಯಂತಾಯಿತು.

ಸುದ್ದಿಮಾಧ್ಯಮಗಳು, ದೇಶ ವಿದ್ರೋಹಿ ಶಕ್ತಿಗಳು ಹಾಗೂ ಘನವೆತ್ತ ಸರ್ಕಾರ ಒಟ್ಟಾಗಿ ನಾಲ್ಕುದಿನ ಉಪವಾಸ ಮಾಡಿದ ಅಣ್ಣಾನನ್ನು ಎರಡನೇ ಗಾಂಧಿ ಎಂದು ಪಟ್ಟವನ್ನು ಕಟ್ಟುವುದರ ಮೂಲಕ ಗಾಂಧೀಜಿಯ ಘನತೆಗೆ ಕುಂದುಂಟು ಮಾಡಿದ್ದಕ್ಕೆ ಗಾಂಧೀಜಿಯ ಸಂಪೂರ್ಣ ಫಲಾನುಭವಿಯಾದ ಕಾಂಗ್ರೆಸ್ ಪಕ್ಷವೇ ಕಾರಣ.

ಒಪ್ಪಂದ ಮಾಡಿಕೊಂಡ ನಾಗರೀಕ ಸಮಾಜ-ನಾಗರೀಕ ಸರ್ಕಾರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳದೆ ತಮ್ಮ ಸ್ವಯಂಪ್ರತಿಷ್ಠೆ, ಅಹಂಕಾರ ಹಾಗೂ ಗುಪ್ತಕಾರ್ಯಸೂಚಿ (Hidden Agenda)ಗೆ ಜೋತುಬಿದ್ದು ಸಮಸ್ಯೆ ಇನ್ನಷ್ಟು ಕಗ್ಗಂಟಾಗಲು ನಾಗರೀಕ ಸಮಾಜ ಹಾಗೂ ನಾಗರೀಕ ಸರ್ಕಾರದ ಅನಾಗರೀಕ ನಡೆಯೇ ಕಾರಣ.

ತಮ್ಮ ಪೊಳ್ಳು ಬೆದರಿಕೆಗೆ ಕುಗ್ಗಿದ ಸರ್ಕಾರವನ್ನು ಕಂಡು ಮನಸ್ಸಿನಲ್ಲೇ ಮಂಡಿಗೆ ತಿನ್ನತೊಡಗಿದ ಅಣ್ಣಾ ಪಡೆ ಗೋಲಿ ಖಾಯೆಂಗೇ, ಜೈಲ್ ಜಾಯೆಂಗೇ, ಲಡೇಂಗೇ, ಮರೇಂಗೇ (ಗೋಲಿ ತಿನ್ನೋಣ, ಜೈಲ್ ಸೇರೋಣ, ಹೋರಾಡೋಣ, ಮಡಿಯೋಣ) ಎನ್ನುತ್ತಾ ಮತ್ತೊಮ್ಮೆ ಸರ್ಕಾರವನ್ನು ನೀರಿಳಿಸಲು ಆಗಸ್ಟ 16 ರಿಂದ ಅದೇ ಜಂತರ್‌ಮಂತರ್‌ನಲ್ಲಿ ಉಪವಾಸ ನಿರಶನ ಪ್ರಾರಂಭಿಸಲು ಸಜ್ಜಾಗತೊಡಗಿತು.

ಪ್ರಜಾಸತ್ತಾತ್ಮಕ ಹಾಗೂ ಸಂವಿಧಾನದತ್ತ ಅಧಿಕಾರಗಳನ್ನು ಬಳಸಿಕೊಂಡ ನಾಗರೀಕ ಸಮಾಜ ಎರಡನೇ ಬಾರಿಗೆ ಉಪವಾಸ ನಿರಶನಕ್ಕೆ ಮುಂದಾದಾಗ ಅನುಮತಿ ನೀಡದೇ, ಉಪವಾಸ ಪ್ರಾರಂಭಕ್ಕೆ ಮುಂಚೆಯೇ ಜೈಲಿಗಟ್ಟಿ ರಾತ್ರೋರಾತ್ರಿ ರಾಹುಲ್‌ಗಾಂಧಿ ಹೇಳಿದರೆಂದು ಬಿಟ್ಟ ಸರ್ಕಾರ ಫ್ಯಾಸಿಸ್ಟ್ ರೀತಿಯಲ್ಲಿ ನಡೆದುಕೊಂಡು ಜನರ ಆಕ್ರೋಶಕ್ಕೆ ಕಾರಣವಾಯಿತು.

ಸರ್ಕಾರದ ಈ ಎಡಬಿಡಂಗಿತನದ ಪ್ರಯೋಜನ ಪಡೆದ ಅಣ್ಣಾ ಪಡೆ ತನ್ನ ಅಸಂವಿಧಾನಿಕ ಷರತ್ತುಗಳಿಗೆ ಸರ್ಕಾರವನ್ನು ಮಣಿಸುವಲ್ಲಿ ಯಶಸ್ವಿಯಾಯಿತು. ದೇಶದಲ್ಲಿನ ಇಂದಿನ ಅಸಹ್ಯ ಅರಾಜಕತೆಗೆ ನಾಗರೀಕ ಸಮಾಜ ಹಾಗೂ ಸರ್ಕಾರದ ಅಸಂವಿಧಾನಿಕ ನಡೆಯೇ ಕಾರಣ.

ಜಗತ್ತಿನಲ್ಲಿಯೇ ನಮ್ಮದು ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಗಾಂಧಿ, ಸುಭಾಶ್‌ಚಂದ್ರ ಬೋಸ್, ಭಗತ್‌ಸಿಂಗ್ ಹಾಗೂ ಅಸಂಖ್ಯಾತ ಅನಾಮಧೇಯ ಹುತಾತ್ಮರ ಹೋರಾಟದ ಫಲವಾಗಿ ನಾವು ಇಂದು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ. ಡಾ॥ ಬಿ ಆರ್. ಅಂಬೇಡ್ಕರ್‌ರವರ ಚಿಂತನೆಯಲ್ಲಿ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಭ್ರಾತೃತ್ವಗಳ ಮೂಲಕ ಪ್ರತಿಯೊಬ್ಬ ಪ್ರಜೆಗೂ ಬದುಕುವ ಹಕ್ಕು ಹಾಗೂ ಭದ್ರತೆಯನ್ನು ನೀಡಿದೆ.

ಗುಪ್ತ ಮತದಾನದ ಮೂಲಕ ಚುನಾಯಿಸುವ ಹಕ್ಕನ್ನು ನೀಡಲಾಗಿದೆ. ಸಂವಿಧಾನದ ಮೂಲ ಉದ್ದೇಶಗಳಿಗೆ ಧಕ್ಕೆ ಬಾರದಂತೆ ಆಡಳಿತ ನಡೆಸುವುದು ಇಂತಹ ಚುನಾಯಿತ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಸಂವಿಧಾನವನ್ನು ಚುನಾಯಿತ ಸರ್ಕಾರವಲ್ಲದೇ ಸಂವಿಧಾನೇತರ (Extra Constitutional) ವ್ಯಕ್ತಿಗಳು, ಧಾರ್ಮಿಕ ಮುಖಂಡರು, ಸಂಘ-ಸಂಸ್ಥೆಗಳು ನಿಗ್ರಹಿಸುವುದು ಪ್ರಜಾಸತ್ತೆಗೆ ಮಾರಕ. ಇಂತಹ ಮಾರಕ ಶಕ್ತಿಗಳಿಂದ ಸಂವಿಧಾನವನ್ನು ಕಾಪಾಡುವ ಹೊಣೆ ಪ್ರತಿಯೊಬ್ಬ ಪ್ರಜೆಯದಾಗಿರುತ್ತದೆ.

65 ವರ್ಷಗಳ ಸ್ವಾತಂತ್ರ್ಯದ ಈ ದೇಶದಲ್ಲಿ ಉಪವಾಸ, ನಿರಶನ, ಹೋರಾಟಗಳು ಅನವರತ. ಎರಡನೇ ಸ್ವಾತಂತ್ರ್ಯ ಸಂಗ್ರಾಮ, ಕ್ರಾಂತಿ, ದೇಶಭಕ್ತಿ, ಸಮಾಜ ಸೇವೆಗಾಗಿ ಉಪವಾಸ ಮಾಡಿ ಸಂವಿಧಾನ ಹಾಗೂ ಈ

(12ನೇ ಪುಟಕ್ಕೆ)

ಉಪವಾಸ: ಬಲ್ಲಿದರ ಹಕ್ಕು-ಬಡವರ ಕರ್ತವ್ಯ!

ಜಾಗತೀಕರಣ ಹಾಗೂ ಸಾಂಸ್ಕೃತಿಕ ಅತೃಪ್ತಿ

ಸಂಪಾದಕರೊಡನೆ ಸಂವಾದ

ಡಾ. ಎಸ್. ಬಿ. ಜೋಗುರ

ಪ್ರಿಯ ಸಂಪಾದಕರೇ,

ಜಾಗತೀಕರಣ ಎನ್ನುವದು ನಮ್ಮ ಕಾಲದ ಬಹುದೊಡ್ಡ ಪ್ರಭಾವ ಮತ್ತು ಪ್ರಕ್ರಿಯೆ. ಜಾಗತಿಕ ಮಟ್ಟದಲ್ಲಿ ಬೇರೆ ಬೇರೆ ರಾಷ್ಟ್ರಗಳ ಹಣೆಬರಹವನ್ನೇ ಫಿಕ್ಸ್ ಮಾಡುವ ನಿರ್ಣಾಯಕ ಸಂಗತಿಯದು. ಬಹುತ್ವದ ಪ್ರತೀಕವಾಗಿರುವ ವಿಶ್ವವನ್ನು ಮಾರುಕಟ್ಟೆಯ ಮೂಲಕ ಒಂದು ಸಾರೂಪ್ಯವಾದ ಮಾರ್ಗದಲ್ಲಿ ಮುನ್ನಡೆಸುವ ವ್ಯವಸ್ಥೆಯಾಗಿ ಜಾಗತೀಕರಣ ಕಾರ್ಯನಿರ್ವಹಿಸುತ್ತದೆ. ವಿಶ್ವ ಮಾರುಕಟ್ಟೆಯ ಕೀಲಿಕೈ ಎಂದೇ ಪರಿಗಣಿತವಾದ ಈ ಜಾಗತೀಕರಣದ ಪರಿಕಲ್ಪನೆಯನ್ನು ಬಹುತೇಕವಾಗಿ ಆರ್ಥಿಕ ವಿದ್ಯಮಾನಗಳ ಸುತ್ತಲೂ ಗಿರಕಿ ಹೊಡೆಯಲಿಕ್ಕಾಗಿಯೇ ಬಳಸಿರುವದಿದೆ. ಸಮಾಜವಿಜ್ಞಾನಿಗಳು ಜಾಗತೀಕರಣದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಡ್ಡ ಪರಿಣಾಮಗಳ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಂಡಂತಿಲ್ಲ. ತೃತೀಯ ರಾಷ್ಟ್ರಗಳ ಸಂದರ್ಭದಲ್ಲಿ ಜಾಗತೀಕರಣವು ಅಲ್ಲಿಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ಕೂಡಾ ಪ್ರಭಾವಿಸದೇ ಉಳಿಯಲಿಲ್ಲ ಎನ್ನುವದು ತಡವಾಗಿಯಾದರೂ ವಿಧಿತ.

ಜಾಗತೀಕರಣ ಎನ್ನುವ ಪದವನ್ನು 1985ರಲ್ಲಿ ಥಿಯೋಡರ್ ಲೆವಿಟ್ ಎಂಬ ಚಿಂತಕರು ಬಳಸಿದರು. ಅಲ್ಲಿಂದ ಈ ಪರಿಕಲ್ಪನೆ ಹೆಚ್ಚು ಜನಪ್ರಿಯವಾಗಿ ಬೇರೆ ಬೇರೆ ವಲಯಗಳಿಗೆ ಸಂಬಂಧಿಸಿ ಅನ್ವಯವಾಗತೊಡಗಿತು. ಮೊದಮೊದಲು ಕೇವಲ ಆರ್ಥಿಕ ವಲಯಕ್ಕಷ್ಟೇ ಸೀಮಿತವಾಗಿದ್ದ ಪರಿಕಲ್ಪನೆ, ನಂತರದ ದಿನಗಳಲ್ಲಿ ಜಾಗತಿಕ ವಲಯದ ಸಾಂಸ್ಕೃತಿಕ ಸಮನ್ವಯತೆಗೂ ಅದು ಅನ್ವಯವಾಗತೊಡಗಿತು. ರೊನಾಲ್ಡ್ ರಾಬರ್ಟ್‌ಸನ್ ಎನ್ನುವ ಚಿಂತಕರು ಹೇಳುವಂತೆ 'ಜಾಗತೀಕರಣ ಎನ್ನುವದು ಜಗತ್ತನ್ನು ಚಿಕ್ಕದಾಗಿಸುವ ಜೊತೆಗೆ ವಿಶ್ವವೇ ಒಂದು ಎನ್ನುವ ಪ್ರಜ್ಞೆಯನ್ನು ಬಲಗೊಳಿಸಿತು' ಎಂದಿರುವದನ್ನು ನೋಡಿದರೆ ಜಾಗತೀಕರಣವು ಎಲ್ಲ ರಾಷ್ಟ್ರಗಳ ಎಲ್ಲೆಯನ್ನು ಮೀರಿ ವಿಸ್ತರಿಸಿದ ಒಂದು ಪ್ರಬಲ ಪ್ರಕಿಯೆಯಾಗಿದೆ. ಹೀಗೆ ವಿಸ್ತರಿಸುವ ನೆಪದಲ್ಲಿ ಉತ್ತರದ ನೆಲೆಗಳು ದಕ್ಷಿಣದ ಪ್ರದೇಶಗಳನ್ನು ಉದ್ಧರಿಸಲಿಕ್ಕಾಗಿಯೇ ಇವೆ ಎನ್ನುವ ಭ್ರಮೆಯನ್ನು ಬಿತ್ತುತ್ತಲೇ ರಭಸಗೊಂಡ ಈ ಜಾಗತೀಕರಣದ ಹೊಡೆತದಲ್ಲಿ ದಕ್ಷಿಣದ ನೆಲೆಗಳು ತಮ್ಮತನವನ್ನೇ ಕಳೆದುಕೊಳ್ಳಬೇಕಾಯಿತು. ತನ್ನದಲ್ಲದ ಸಾಂಸ್ಕೃತಿಕ ರೀತಿ ನೀತಿಗಳನ್ನು ಅನಿವಾರ್ಯವಾಗಿ ತನ್ನದು ಎನ್ನುವಂತೆ ಒಪ್ಪಿಕೊಳ್ಳಬೇಕಾಯಿತು. ಈ ಬಗೆಯ ಸಾಂಸ್ಕೃತಿಕ ಒತ್ತಡದಲ್ಲಿ ಅಮೇರಿಕೆಯಂಥಾ ಬಲಾಢ್ಯ ರಾಷ್ಟ್ರಗಳ ಸ್ವಹಿತಾಸಕ್ತಿಯೂ ಹುದುಗಿರುವದಿತ್ತು. ಈ ಬಗೆಯ ಒತ್ತಡ ಬ್ರಿಟಿಷ ವಸಾಹತುಶಾಹಿಯಿಂದ ಮೊದಲ್ಗೊಂಡು ಅದು 'ಆಂಗ್ಲೋಬಲೈಜೇಶನ್' [Anglobalization] ಎಂದು ಗುರುತಿಸಿಕೊಂಡಿರುವದಿತ್ತು ಎಂದು ಹಾರ್ವರ್ಡ್ ವಿಶ್ವವಿದ್ಯಾಲಯದ ಇತಿಹಾಸದ ಅಧ್ಯಾಪಕ ನೀಲ್ ಫರ್ಗ್ಯುಶನ್ ಅಭಿಪ್ರಾಯಪಡುವದಿದೆ. ಆದರೆ ಈಗ ಜಾಗತೀಕರಣ ಎನ್ನುವದು ಅಮ್‌ಗ್ಲೋಬಲೈಜೇಶನ್ [Amglobalization] ಎಂದು ಗುರುತಿಸಲ್ಪಡುವದಿದೆ. ಅಂದರೆ ಅಮೇರಿಕೆಯ ಮೂಲಕ ಉಂಟಾಗಬಹುದಾದ ಜಾಗತೀಕರಣದ ಪ್ರಭಾವ ಎಂದರ್ಥ. ಇಂದು ಅಮೇರಿಕಾ ತನ್ನ ನೋಟವೇ ಜಾಗತಿಕ ನೋಟವಾಗಬೇಕು ಎಂದು ಬಯಸುವ, ನೋಡುವ ಕ್ರಮವೇ ಈ 'ಅಮ್‌ಗ್ಲೋಬಲೈಜೇಶನ್'

ಜಾಗತೀಕರಣದ ಕೂಸಾಗಿ ಅದರ ಬೆನ್ನ ಮೇಲೆ ಸವಾರಿ ಮಾಡುತ್ತಲೇ ಬಂದ ಜಾಗತಿಕ ಸಂಸ್ಕೃತಿಯ ಕಲ್ಪನೆಯ ಒತ್ತಡದಲ್ಲಿ ರಾಷ್ಟ್ರೀಯ ಸಂಸ್ಕೃತಿಯ ಪಾಠಗಳೇ ನಿರ್ಲಕ್ಷಕ್ಕೆ ಒಳಗಾದಂತಹ ವಾತಾವರಣ ನಿರ್ಮಾಣವಾಗಿದೆ. ಅತ್ಯಂತ ಅಪರಿಚಿತವಾದ ಭಾಷೆ, ಆಹಾರ, ವೇಷಭೂಷಣ, ಬಳಕೆಯ ವಸ್ತುಗಳು ಜಾಗತಿಕ ಮಾರುಕಟ್ಟೆಯ ಮೂಲಕ ಸ್ಥಳೀಯ ಸಂಸ್ಕೃತಿಯನ್ನು ಎರಡನೆ ಹಾಗೂ ಮೂರನೇ ಸ್ಥಾನಕ್ಕೆ ತಳ್ಳಿರುವದಿದೆ. ಭೋಗ ಸಂಸ್ಕೃತಿ ಹಾಗೂ ಭೌತ ಸಂಸ್ಕೃತಿಗಳ ಭರಾಟೆಯ ನಡುವೆ, ವಿಷಯರೂಪದ ಅಭೌತ ಸಂಸ್ಕೃತಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದೆ. ಜಾಗತೀಕರಣದ ಸಂದರ್ಭದಲ್ಲಿ ಸಾಂಸ್ಕೃತಿಕ ವ್ಯವಸ್ಥೆಯ ಬಗ್ಗೆ ಮಾತನಾಡುವದಾದರೆ ಅದು ಅಮೇರಿಕೆಯ ಜನಪ್ರಿಯ ಸಂಸ್ಕೃತಿ. ಮಹಾನಗರಗಳಲ್ಲಿ ವರ್ಣರಂಜಿತವಾಗಿ ವಿಜೃಂಭಿಸುವ ಮ್ಯಾಕ್ಡೊನಾಲ್ಡ್ ಫಾಸ್ಟ್ ಫುಡ್ ರೆಸ್ಟಾರೆಂಟ್‌ಗಳು, ಕೆಂಟಕಿ ಚಿಕನ್ ಶಾಪ್, ಎಲ್ಲೆಂದರಲ್ಲಿ ಕಣ್ಣಿಗೆ ಕುಕ್ಕುವ ಕೋಕಾ ಕೋಲಾ ಪಾನೀಯ, ಚಿಕ್ಕ ಮಕ್ಕಳ ಕೈಯಲ್ಲಿರುವ ಬಾರ್ಬಿ ಗೊಂಬೆಗಳು, ಹಾಟ್ ವೀಲ್ ಕಾರುಗಳು, ಕಿವಿಗೆ ಕರ್ಕಶವೆನಿಸಿದರೂ ಕೇಳಲೇಬೇಕಾದ ಪಾಪ್ ಗೀತೆಗಳು, ವಿದೇಶಗಳೊಂದಿಗೆ ಏಕಕಾಲಕ್ಕೆ ಬಿಡುಗಡೆಯಾಗುವ ಇಂಗ್ಲಿಷ ಚಿತ್ರಗಳು ಇವೆಲ್ಲವೂ ಸ್ಥಳೀಯ ಸಾಂಸ್ಕೃತಿಕ ಪರಿಸರದ ಮೇಲೆ ಗಾಢವಾದ ಪರಿಣಾಮವನ್ನು ಉಂಟು ಮಾಡಿ, ಪ್ರಜ್ಞಾತೀತವಾಗಿ ಸ್ವಕೀಯ ನೆಲದಲ್ಲಿ ಪರಕೀಯ ಭಾವನೆಯೊಂದಿಗೆ ಅತೃಪ್ತಿ ನೆಲೆಗೊಳ್ಳಲು ಕಾರಣವಾಗುತ್ತದೆ. ಮಾರುಕಟ್ಟೆಯ ಒತ್ತಡಗಳೊಂದಿಗೆ ಪ್ರವೇಶ ಮಾಡಿದ ಗ್ಲೋಬಲ್ ಕಲ್ಚರ್ ಸಾಂಪ್ರದಾಯಿಕ ಶಿಕ್ಷಣ, ವೈದ್ಯಕೀಯ, ಕಲೆ, ಸಾಹಿತ್ಯ, ವೇಷ ಭೂಷಣ, ಆಹಾರಪದ್ಧತಿ, ಲೋಕರೂಢಿ ಮುಂತಾದವುಗಳನ್ನು ಅಲ್ಲಾಡಿಸಿಬಿಟ್ಟಿದೆ. ಸಾಂಪ್ರದಾಯಿಕ ವೈದ್ಯ ಪದ್ಧತಿಯ ಜಾಗೆಯನ್ನು ವೈಜ್ಞಾನಿಕ ಅಲೋಪಥಿಕ ಮೆಡಿಸಿನ್ ಆಕ್ರಮಿಸಿತು, ಸಾಂಪ್ರದಾಯಿಕ ಲಲಿತ ಕಲೆಯ ಜಾಗೆಯಲ್ಲಿ ಸಮೂಹ ಮಾಧ್ಯಮಗಳು ವಕ್ಕರಿಸಿದವು, ಚಿತ್ರಕಲೆಯನ್ನು ಕಂಪ್ಯುಟರ್ ಗ್ರಾಫಿಕ್ಸ್ ಓವರ್ ಟೇಕ್ ಮಾಡಿದಂತಾಯಿತು. ಭರತನಾಟ್ಯ ಮತ್ತು ಇತರೆ ಸಾಂಪ್ರದಾಯಿಕ ನೃತ್ಯಗಳನ್ನು ಪಾಶ್ಚ್ಯಾತ್ಯ ನೃತ್ಯ ಮತ್ತು ಸಂಗೀತಗಳು ಹಿಂದೆ ಹಾಕಿದವು. ಸಾಹಿತ್ಯಕ ಕಲೆಯನ್ನು ಹ್ಯಾರಿ ಪಾಟರ್‌ನಂಥಾ ಕಾಮಿಕ್ಸ್ ಬರಹಗಳು ಆಕ್ರಮಿಸಿಕೊಂಡವು. ತೃತೀಯ ಜಗತ್ತಿನ ಸಂಸ್ಕೃತಿಯ ಮೇಲೆ ಅಮೇರಿಕೆಯಂಥಾ ರಾಷ್ಟ್ರಗಳು ಜಾಗತೀಕರಣದ ಮೂಲಕ ಉಂಟುಮಾಡಬಹುದಾದ ಅಪಾಯವನ್ನು ಹಂಟಿಂಗ್ಟನ್ ಎನ್ನುವ ಚಿಂತಕರು 'ನಾಗರಿಕತೆಗಳ ಟಕ್ಕಾಟಿಕ್ಕಿ' ಎಂದು ಕರೆದಿರುವದಿದೆ.

ಜಾಗತೀಕರಣ ಸ್ಥಳೀಯ ಸಂಸ್ಕೃತಿಯ ರೂಪ, ಪದಾರ್ಥಗಳಿಗೆ ಬಣ್ಣ ಬಣ್ಣದ ಪ್ಲಾಸ್ಟಿಕ್ ಕೊಟಯ ಕವಾಟು ತೊಡಿಸಿ ಹವಾನಿಯಂತ್ರಿತ ಮಾರುಕಟ್ಟೆ ಮಳಿಗೆಗಳಲ್ಲಿ ಹೊಂದಿಸಿಡುವ ತಂತ್ರಗಾರಿಕೆಯ ಜೊತೆಗೆ ಸ್ಥಾನಿಕ ಉತ್ಪಾದನೆಗಳನ್ನು ಕೂಡಾ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದೆ. ಎಳೆನೀರನ್ನು ಕೋಕಾ ಕೋಲಾ ಹೊಂದಿಸಿಡುವ ಫ್ರಿಜ್‌ನಲ್ಲಿ ಪ್ಲಾಸ್ಟಿಕ್ ಪೊಟ್ಟಣದಲ್ಲಿ 330 ಎಮ್.ಎಲ್ ಪ್ರಮಾಣದಲ್ಲಿ, ಬಹುರಾಷ್ಟ್ರೀಯ ಕಂಪನಿಯೊಂದರ ಹೆಸರಿನಲ್ಲಿ ಪ್ಯಾಕ್ ಮಾಡಿ ಇಡಲಾಗಿದೆ. ಪಾಪ್ಕಾರ್ನ್.. ಬಿಳಿ ಜೋಳ, ಜೋಳದ ರೊಟ್ಟಿ, ಸಜ್ಜಿ ರೊಟ್ಟಿ, ಶಾವಿಗೆ.. ಹಪ್ಪಳ.. ಸಂಡಿಗೆ.. ಇಂಥಾ ನೂರಾರು ದೇಶೀ ಉತ್ಪಾದನೆಗಳು ತಮ್ಮತನವನ್ನು ಕಳೆದುಕೊಂಡು ಮುಕ್ತ ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ಪೊಟ್ಟಣಗಳಾಗಿ ಕುಳಿತಿವೆ.

ಜಾಗತಿಕ ಸಂಸ್ಕೃತಿ ಎನ್ನುವದು ಜಾಗತೀಕರಣದ ಒಂದು ಮುಖ. ವಿಶ್ವದಲ್ಲಿ ಸಾರೂಪ್ಯ ಸಂಸ್ಕೃತಿಯನ್ನು ರೂಪಿಸಬೇಕು ಎಂದು ಹೊರಟ ಈ ಪ್ರಕ್ರಿಯೆಗೆ ಬಹುತ್ವದಲ್ಲಿ ನಂಬಿಕೆಯಿಲ್ಲ. ಪರಿಣಾಮವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವದೇ ಒಂದು ಬಹುದೊಡ್ಡ ಸವಾಲಾಗಿ ಪರಿಣಮಿಸಿತು. ತಮ್ಮದಲ್ಲದ ವಸ್ತು, ಪದಾರ್ಥಗಳು ಜಾಹೀರಾತುಗಳ ಮೂಲಕ ಅಡುಗೆ ಮನೆಯವರೆಗೆ ಬಂದು ತಲುಪಿದವು, ಅಮೇರಿಕೆಯಂಥಾ ರಾಷ್ಟ್ರಗಳು ಕೊಳ್ಳುಬಾಕ ಸಂಸ್ಕೃತಿಯನ್ನೇ ಭವ್ಯವಾಗಿ ವಿಜೃಂಭಿಸುತ್ತಿವೆ. ಅದರಲ್ಲೂ ಬ್ರಾಂಡೆಡ್ ಐಟೆಂಗಳನ್ನು ಕೊಳ್ಳುವ ಮೂಲಕ ಅಂತಸ್ತನ್ನು ಮೆರೆಯುವ ಕ್ರಮಕ್ಕೆ ಪ್ರೋತ್ಸಾಹ ನೀಡುವ ಮೂಲಕ, ಪರೋಕ್ಷವಾಗಿ ಕೊಳ್ಳುವದನ್ನೇ ಸಂಸ್ಕೃತಿಯನ್ನಾಗಿಸುವ ಅಪಾಯವನ್ನು ನೆನೆದು ತೃತೀಯ ರಾಷ್ಟ್ರಗಳು ಅತೃಪ್ತರಾಗುವದು ಸಹಜವೇ. ಸಂಸ್ಕೃತಿ ಎನ್ನುವದು ಒಂದು ರಾಷ್ಟ್ರದ ಜೀವನ ವಿಧಾನ. ಅಲ್ಲಿಯ ನಿಯಮಗಳು, ಕಟ್ಟಳೆಗಳೇ ಅದರ ಮೂಲ ಸತ್ವ, ಶಕ್ತಿ. ಸಾಮಾಜಿಕ ಜೀವನದ ಮೌಲ್ಯವಾಗಿ ಗುರುತಿಸಿಕೊಂಡ ಸಂಸ್ಕೃತಿ ಜಾಗತೀಕರಣದ ಹಾವಳಿಯಿಂದಾಗಿ ಮಾರುಕಟ್ಟೆಯ ಮತ್ತು ಕೊಳ್ಳುಬಾಕತನದ ಭಾಗವಾಗಿದ್ದು ಸಾಂಸ್ಕೃತಿಕ ಕಾಳಜಿಯಿರುವ ಯಾರೇ ಆಗಲಿ ಅತೃಪ್ತಗೊಳ್ಳುವದು ಸಹಜವೇ. □

ಪ್ರಗತಿಪರರ ಮುಂದಿನ ನಡೆ ಏನು?

ಸಂಪಾದಕರೊಡನೆ ಸಂವಾದ

ಬಿ. ಶ್ರೀಪಾದ್ ಭಟ್

ಪ್ರಿಯ ಸಂಪಾದಕರೇ,

ಆಕಾರವಿಲ್ಲದ, ಆತ್ಮವಿಲ್ಲದ ಈ ಭಯೋತ್ಪಾದನೆಯೆನ್ನುವ ದುಷ್ಕೃತ್ಯ ಇಂದು ಉಂಟು ಮಾಡುತ್ತಿರುವ ಸಾವು ನೋವುಗಳು ನಿಜಕ್ಕೂ ಬೇಸರ ತರಿಸುತ್ತವೆ ಹಾಗೂ ಖಂಡನೀಯ. ಇದು ಒಂದು ಉನ್ಮಾದದ, ಸೇಡಿನ ಕ್ರಮ. ಆದರೆ ಭಾರತದಲ್ಲಿ ಇದರ ಮೂಲ ಬೇರುಗಳಿರುವುದು 21 ವರ್ಷಗಳ ಹಿಂದಿನ ಅಡ್ವಾನಿಯವರ ಕೋಮುವಾದದ ರಥಯಾತ್ರೆಯಲ್ಲಿ ಮತ್ತು 19 ವರ್ಷಗಳ ಹಿಂದೆ

ಸಂಘ ಪರಿವಾರ ಪ್ರಾಯೋಜಿತ ಬಾಬರಿ ಮಸೀದಿ ಧ್ವಂಸದ ದುಷ್ಕೃತ್ಯದಲ್ಲಿ. ಅಲ್ಲಿವರೆಗೂ ಹಿಂದು ಹಾಗೂ ಅಲ್ಪಸಂಖ್ಯಾತರ ನಡುವೆ ಇದ್ದ ಅತ್ಯಂತ ಗೋಜಲು ಸಂಬಂಧಗಳು ಹದೆಗೆಡುವ ಸ್ಥಿತಿಗೆ ಮುಟ್ಟಿತು. ಇದು ನಾವು ಮತ್ತು ಅವರು ಎನ್ನುವ ಒಂದು ದೊಡ್ಡ ಕಂದರ ಹುಟ್ಟು ಹಾಕಿತು. 2002ರಲ್ಲಿ ನಡೆದ ಆಗಿನ ಗುಜರಾತ್ ಸರ್ಕಾರ, ನರೇಂದ್ರ ಮೋದಿ ಪ್ರಾಯೋಜಿತ ಗುಜರಾತ್ ಹತ್ಯಾಕಾಂಡ ಭಾರತದಲ್ಲಿ ಭಯೋತ್ಪಾದನೆ ಬೇರೂರುವಂತೆ ಮಾಡಿಬಿಟ್ಟಿತು. ಈಗ ಈ ಭಯೋತ್ಪಾದನೆಗಳಿಗೆ ಮೊದಲ ತಪ್ಪಿತಸ್ಥರು ಅಡ್ವಾನಿ, ನರೇಂದ್ರ ಮೋದಿ, ಹಾಗೂ ಸಂಘ ಪರಿವಾರ. ನಂತರದ ತಪ್ಪಿತಸ್ಥರು ತಮ್ಮ ಮತಾಂಧತೆಯ ಮೂಲಕ ಪರೋಕ್ಷವಾಗಿ ಇವರಿಗೆ ಸಹಕಾರ ನೀಡಿದ ಮುಸ್ಲಿಂ ಕಂದಾಚಾರಿಗಳು ಹಾಗೂ ಈ ದೇಶದಲ್ಲಿ ಕನಿಷ್ಠ 45 ವರ್ಷಗಳಷ್ಟು ಕಾಲ ಅಧಿಕಾರದಲ್ಲಿದ್ದರೂ ಸಂಘ ಪರಿವಾರದ ಕೋಮುವಾದವನ್ನಾಗಲಿ, ಮುಸ್ಲಿಂ ಕಂದಾಚಾರಿಗಳ ಮತಾಂಧತೆಯನ್ನಾಗಲಿ ಸಂಪೂರ್ಣವಾಗಿ ಬೇರು ಸಮೇತ ಕೀಳುವಂತಹ ರಾಜಕೀಯ ಮುತ್ಸದ್ದಿತನವಾಗಲಿ, ಸಾಮಾಜಿಕ ಬದ್ಧತೆಯಾಗಲಿ, ರಾಜಕೀಯ ಮಹತ್ವಾಕಾಂಕ್ಷೆಯಾಗಲಿ, ನೈತಿಕ ಧೈರ್ಯವಾಗಲಿ ಇಲ್ಲದ ಕಾಂಗ್ರೆಸ್ ಪಕ್ಷ. ಈ ಮೂಲಕ ಇಂದಿನ ಪರಿಸ್ಥಿತಿಯ ದುರ್ಲಾಭ ಪಡೆದುಕೊಂಡು ಸಂಘ ಪರಿವಾರ ಮತ್ತೊಮ್ಮೆ ತನ್ನ ಹೆಡೆಯೆನ್ನತ್ತತೊಡಗಿದೆ.

ಆದರೆ ಈ ಬಾರಿ ತನ್ನ ಕೋಮುವಾದದ, ಮುಸ್ಲಿಂ ದ್ವೇಷದ, ಜಾತೀವಾದದ ಮೂಲಭೂತ ಅಜೆಂಡವನ್ನು ಎಂದಿನಂತೆ ತನ್ನ ಹಿಡನ್ ಅಜೆಂಡವನ್ನಾಗಿರಿಸಿಕೊಂಡು, ಬಹಿರಂಗವಾಗಿ ಭ್ರಷ್ಟಾಚಾರದ ವಿರೋಧಿ ಆಂದೋಲನ್ನು ನೆಚ್ಚಿಕೊಂಡು ಹೊರಟಿರುವ ಈ ಸಂಘ ಪರಿವಾರಕ್ಕಾಗಲೆ ದಿಲ್ಲಿ ಎನ್ನುವ ಮಾಯಾವಿ ಕಾಡತೊಡಗಿದ್ದಾಳೆ. ಇಂದಿನ ಅತ್ಯಂತ ಗೋಜಲು ಸ್ಥಿತಿಯನ್ನು, ಭ್ರಷ್ಟಾಚಾರದ ವಿರುದ್ಧದ ಒಂದು ದೊಡ್ಡ ಅಲೆಯೇ ಎದ್ದಿದೆ ಎನ್ನುವ ಒಂದು ಫರೇಕ್, ಮುಖರಹಿತ ವಾತಾವರಣವನ್ನು ತಮ್ಮ ಅನುಕೂಲಕ್ಕೆ, ಭವಿಷ್ಯದ ಪ್ರಧಾನಿ ಪಟ್ಟಕ್ಕೆ ಅನುವಾಗುವಂತೆ ಬಳಸಿಕೊಳ್ಳಲು ಹೊರಟಿರುವ 85ರ ವಯಸ್ಸಿನ ಅಡ್ವಾನಿಯವರಿಗೆ 1990ರಲ್ಲಿ ತಮ್ಮ ಕೋಮುವಾದಿ, ಮುಸ್ಲಿಂ ದ್ವೇಷದ ರಥ ಯಾತ್ರೆ ಹುಟ್ಟು ಹಾಕಿದ ಕೋಮು ಗಲಭೆಗಳು, ಈ ಮೂಲಕ ಇಲ್ಲಿ ಭಯೋತ್ಪಾದನೆ ತನ್ನ ನೆಲೆ ಕಂಡುಕೊಳ್ಳಲು ಒಂದು ಒಪೆನಿಂಗ್ ಸಿಕ್ಕಿದ್ದು, ಇದಕ್ಕೆ ತಾನು ಸಂಪೂರ್ಣ ಹೊಣೆಗಾರ ಎನ್ನುವ ಪಾಪಪ್ರಜ್ಞೆಯಾಗಲಿ, ಅದಕ್ಕೆ ಪ್ರಾಯಶ್ಚಿತ್ತವಾಗಲಿ ಇಲ್ಲ. ಅದರ ಬದಲು ಅಮಾಯಕರ ಸಾವುಗಳಿಂದ, ಆ ದ್ವೇಷದ ಯಾತ್ರೆಯಿಂದ ಸಿಕ್ಕಿದ ಅಧಿಕಾರ ಮತ್ತೊಮ್ಮೆ ಇವರಿಗೆ ಇನ್ನಿಲ್ಲದ ದುರಾಸೆಗಳನ್ನು ಹುಟ್ಟಿ ಹಾಕಿದಂತಿದೆ.

ಮುಸ್ಲಿಂ ದ್ವೇಷದ, ಜಾತೀವಾದದ ಮೂಲಭೂತ ಅಜೆಂಡವನ್ನು ಎಂದಿನಂತೆ ತನ್ನ ಹಿಡನ್ ಅಜೆಂಡವನ್ನಾಗಿರಿಸಿಕೊಂಡು, ಬಹಿರಂಗವಾಗಿ ಭ್ರಷ್ಟಾಚಾರದ ವಿರೋಧಿ ಆಂದೋಲನ್ನು ನೆಚ್ಚಿಕೊಂಡು ಹೊರಟಿರುವ ಈ ಸಂಘ ಪರಿವಾರಕ್ಕಾಗಲೆ ದಿಲ್ಲಿ ಎನ್ನುವ ಮಾಯಾವಿ ಕಾಡತೊಡಗಿದ್ದಾಳೆ. ಇಂದಿನ ಅತ್ಯಂತ ಗೋಜಲು ಸ್ಥಿತಿಯನ್ನು, ಭ್ರಷ್ಟಾಚಾರದ ವಿರುದ್ಧದ ಒಂದು ದೊಡ್ಡ ಅಲೆಯೇ ಎದ್ದಿದೆ ಎನ್ನುವ ಒಂದು ಫರೇಕ್, ಮುಖರಹಿತ ವಾತಾವರಣವನ್ನು ತಮ್ಮ ಅನುಕೂಲಕ್ಕೆ, ಭವಿಷ್ಯದ ಪ್ರಧಾನಿ ಪಟ್ಟಕ್ಕೆ ಅನುವಾಗುವಂತೆ ಬಳಸಿಕೊಳ್ಳಲು ಹೊರಟಿರುವ 85ರ ವಯಸ್ಸಿನ ಅಡ್ವಾನಿಯವರಿಗೆ 1990ರಲ್ಲಿ ತಮ್ಮ ಕೋಮುವಾದಿ, ಮುಸ್ಲಿಂ ದ್ವೇಷದ ರಥ ಯಾತ್ರೆ ಹುಟ್ಟು ಹಾಕಿದ ಕೋಮು ಗಲಭೆಗಳು, ಈ ಮೂಲಕ ಇಲ್ಲಿ ಭಯೋತ್ಪಾದನೆ ತನ್ನ ನೆಲೆ ಕಂಡುಕೊಳ್ಳಲು ಒಂದು ಒಪೆನಿಂಗ್ ಸಿಕ್ಕಿದ್ದು, ಇದಕ್ಕೆ ತಾನು ಸಂಪೂರ್ಣ ಹೊಣೆಗಾರ ಎನ್ನುವ ಪಾಪಪ್ರಜ್ಞೆಯಾಗಲಿ, ಅದಕ್ಕೆ ಪ್ರಾಯಶ್ಚಿತ್ತವಾಗಲಿ ಇಲ್ಲ.

ಹಳೆಯೆದೆಲ್ಲ ಹಾಳಾಗಿ ಹೋಗಲಿ, ಕಡೇ ಪಕ್ಷ ಕಳೆದ 7 ವರ್ಷಗಳಿಂದ ಯುಪಿಎ ರೂಪದಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್‌ಗೆ ತನಗೆ ಸಿಕ್ಕಿರುವ ಒಂದು ಅಪರೂಪದ ಅವಕಾಶವನ್ನು, ತನ್ನೆಲ್ಲ ರಾಜಕೀಯ ಅನುಭವಗಳನ್ನು ಬಳಸಿಕೊಂಡು ಆದಷ್ಟು ಸಹನೀಯವಾದಂತಹ ಜನಪರ ಆಡಳಿತ ಕೊಡುಬಹುದಾಗಿತ್ತು. ಇದು ತನ್ನ ಅಂಗ ಪಕ್ಷಗಳನ್ನು ತನ್ನ ರಾಜಕೀಯ ಚಾಣಾಕ್ಷತನದಿಂದ ಆದಷ್ಟೂ ಜನಪರ ಸಿದ್ಧಾಂತಗಳಿಗೆ ಬಗ್ಗಿಸಿಕೊಂಡು ಈ ದೇಶಕ್ಕೆ ಒಂದು ಸಹನೀಯ ವಾತಾವರಣದ ಮುನ್ನಡಿ ಬರೆಯಬಹುದಗಿತ್ತು ಹಾಗೂ ಇದು ಕಾಂಗ್ರೆಸ್‌ಗೆ ಸಾಧ್ಯವಿತ್ತು. ಆದರೆ ಈಗ ಅದು ತನಗೇ ಒಂದು ದುರಂತಮಯ ಸ್ಥಿತಿಯನ್ನು ತಂದುಕೊಂಡು ಈ ಮೂಲಕ ಈ ದೇಶವನ್ನೇ ಒಂದು ಗೊಂದಲದ ಗೂಡನ್ನಾಗಿರಿಸಿರುವುದಲ್ಲದೆ ದೇಶದ ಭವಿಷ್ಯವನ್ನು ಅತ್ಯಂತ ಭಯಂಕರವನ್ನಾಗಿಸಿದೆ (ಊಹಿಸಿ ಈ ಬಿಜೆಪಿಯ ಎರಡನೇ, ಮೂರನೇ ದರ್ಜೆಯ ನಾಯಕರು, ನಾಯಕಿಯರು ಅಧಿಕಾರಕ್ಕೆ ಬಂದರೆ ಆಗುವ ಅನಾಹುತಗಳ ಸರಣಿಗಳ ಸ್ವರೂಪವನ್ನ!! ನೆನಸಿಕೊಳ್ಳಲು ಭಯವಾಗುತ್ತದೆ). ಯುಪಿಎ ಸರ್ಕಾರದ ಅದರಲ್ಲೂ ಕಾಂಗ್ರೆಸ್ ನವರ ಪ್ರಮುಖ ರಾಜಕೀಯ ನಿರ್ಧಾರಗಳು ಹಾಗೂ ನಡೆಗಳು ಒಂದರ ಮೇಲೊಂದರಂತೆ ತಿರುಮಂತ್ರ ಹೊಡೆಯುತ್ತಿವೆ ಹಾಗೂ ಸರ್ಕಾರ ಇಂದು ಪದೇ ಪದೇ ಮುಜುಗರ ಪರಿಸ್ಥಿತಿಯನ್ನು ಸೃಷ್ಟಿಸಿಕೊಂಡು ವಿಲಿವಿಲಿ ಒದ್ದಾಡುತ್ತಿರುವ ಸ್ಥಿತಿ ನಿಜಕ್ಕೂ ಶೋಚನೀಯ.

ಉದಾಹರಣೆಗಳಾಗಿ ಅಣ್ಣಾ ಹಜಾರೆಯವರ ಚಳವಳಿಯನ್ನು ಹ್ಯಾಂಡ್ಲ್ ಮಾಡಿದ ರೀತಿ, ತೆಲಂಗಾಣ ಚಳವಳಿಯನ್ನು ಅರ್ಥ ಮಾಡಿಕೊಳ್ಳುವದರಲ್ಲೇ ಸೋತಿರುವ ರೀತಿ, ಪ್ರಮುಖ ಅಂಗ ಪಕ್ಷವಾದ ತೃಣಮೂಲ ಕಾಂಗ್ರೆಸ್‌ನೊಂದಿಗೆ ನಡೆದುಕೊಳ್ಳುತ್ತಿರುವ ರೀತಿ, ಸದ್ಯಕ್ಕೆ ಶಾಂತಿ ಸ್ಥಿತಿಗೆ ಮರಳುತ್ತಿದೆಯೇನೋ ಎನ್ನುವ ಭ್ರಮೆ ಹುಟ್ಟಿಸುತ್ತಿರುವ ಕಾಶ್ಮೀರದ ಸ್ಥಿತಿಯನ್ನು ಅಲ್ಲಿನ ಪ್ರಾದೇಶಿಕ ಪಕ್ಷಗಳೊಂದಿಗೆ ಒಳಗೊಳ್ಳುವಿಕೆ ರಾಜಕಾರಣದ ಮೂಲಕ ಪರಿಸ್ಥಿತಿಯನ್ನು ಹತೋಟಿಗೆ ತರುವ ಕಾರ್ಯಕ್ರಮಗಳೇ ಇಲ್ಲದ ಒಂದು ನಿರ್ವಾತ ಸ್ಥಿತಿ ಹೀಗೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಅಷ್ಟೇಕೆ ಪ್ರತಿಪಕ್ಷವಾದ ಬಿಜೆಪಿಯಲ್ಲಿನ ನಾಯಕರಹಿತ ಗೊಂದಲ, ದಿಕ್ಕಿಲ್ಲದ ಸ್ಥಿತಿಯನ್ನು ರಾಜಕೀಯವಾಗಿ ತನ್ನ ಅನುಕೂಲಕ್ಕೆ ತಕ್ಕ ಹಾಗೆ ಬಳಸಿಕೊಳ್ಳುವ ಸಂಘಟನೆ ಆಧಾರಿತ ಕಾರ್ಯಕ್ರಮಗಳಾಗಲಿ ಕೂಡ ಇವರ ಬತ್ತಳಿಕೆಯಲ್ಲಿ ಇಲ್ಲವೆಂದರೆ ಈ ಕಾಂಗ್ರೆಸ್ಸಿಗರ ದುರಂತವನ್ನು ಊಹಿಸಬಹುದು NAC ಯಲ್ಲಿರುವ ಬುದ್ಧಿಜೀವಿಗಳಿಂದ ರೂಪಿತಗೊಂಡಂತಹ Communal Violence bill, food security bill, land acquisition bill ಈ ಪ್ರಮುಖ ಮಸೂದೆಗಳನ್ನು ದೇಶದ ಪ್ರಗತಿಪರ ಚಿಂತಕರೊಂದಿಗೆ, ಸಂಘಟನೆಗಳೊಂದಿಗೆ ಚರ್ಚಿಸಿ, ಅದನ್ನು ಜನಪರ ಕಾಳಜಿಯ, ಭವಿಷ್ಯದಲ್ಲಿ ಈ ನಾಡಿನ ದಲಿತರು, ರೈತರು, ಮುಸ್ಲಿಂಮರ ಬದುಕಿನಲ್ಲಿ ಬೆಳಕಾಗುವಂತೆ ಮುನರೂಪಿಸಿ

(12ನೇ ಪುಟಕ್ಕೆ)

ರದ್ದಾಗದ ಮಲಹೊರುವ ಪದ್ಧತಿ; ತಲೆ ತಗ್ಗಿಸಬೇಕಾದ ಸಮಾಜ

ಸಂಪಾದಕರೊಡನೆ ಸಂವಾದ

ಮಾರುತಿ. ಹೆಚ್.

ಸಮಾಜ ಕಲ್ಯಾಣ ಸಚಿವರು, ನಗರಾಭಿವೃದ್ಧಿ ಸಚಿವರು, ಮಲ ಹೊರುವ ಪದ್ಧತಿಯು ಇಲ್ಲವೇ ಇಲ್ಲವೆಂದು ಹೇಳಿಕೆ ನೀಡುತ್ತಿದ್ದಾರೆ. ಆದರೆ ಇತ್ತೀಚೆಗೆ ದೂರದರ್ಶನ ಮಾಧ್ಯಮಗಳ ಮೂಲಕ ಹಲವು ಕಡೆ ದಲಿತರು ಇಂದಿಗೂ ಮಲ ಹೊರುವ ದೃಶ್ಯಗಳು, ಮ್ಯಾನ್ ಹೋಲ್‌ಗಳಲ್ಲಿ ಮುಳುಗಿ ಶುದ್ಧಿ ಕಾರ್ಯ ಕೈಗೊಳ್ಳುತ್ತಿರುವ ಸುದ್ದಿಗಳು ಪ್ರಸಾರವಾದವು.

ಪ್ರಿಯ ಸಂಪಾದಕರೇ,

ಇತ್ತಿಚೆಗಷ್ಟೆ ಬೆಂಗಳೂರಿನ ವಸಂತನಗರದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ನೀರು ಮತ್ತು ಒಳಚರಂಡಿ ಸ್ವಚ್ಚತಾ ವಾಹನ ಲಾರಿ ನಂ:ಕೆಎ:04, ಸಿ:5127ಯ ಪೌರಕಾರ್ಮಿಕ ವ್ಯಕ್ತಿಯನ್ನು ಮಲಪೂರಿತ ಮ್ಯಾನ್ ಹೋಲ್‌ನಲ್ಲಿ ಸ್ವಚ್ಚತಾ ಕಾರ್ಯದ ನಿಮಿತ್ತ ಮಳೆಯಲ್ಲಿಯು ತೊಡಗಿಸಲಾಗಿತ್ತು. ನಾಗರಿಕ ಸಮಾಜವೆಂದು ಹೇಳಿಕೊಳ್ಳುವ ಈ ಸಮಾಜದಲ್ಲಿ ಇಂದಿಗೂ ಮಲ ಹೊರುವ ಪದ್ಧತಿ ಅಚರಣೆಯಲ್ಲಿರುವುದು ನಾಚಿಕೆಗೇಡಿನ ವಿಚಾರ.

ಭಾರತದಂತ "ಜಾತ್ಯಾತೀತ" ರಾಷ್ಟ್ರದಲ್ಲಿ ಅತ್ಯಾಧುನಿಕ ವಿಜ್ಞಾನ ಬೆಳೆದಿದ್ದರೂ ಮಲ ಹೊರುವ ಅಮಾನವೀಯ ಪದ್ಧತಿ ದೇಶದ ಹಲವು ಭಾಗಗಳಲ್ಲಿ ಇವತ್ತಿಗೂ ಯಾವುದೇ ಅಡ್ಡಿ ಆಂತಕಗಳಿಲ್ಲದೆ ನಡೆಯುತ್ತಿದೆ. ವ್ಯಕ್ತಿಯ ಆತ್ಮಗೌರವ ಸ್ವಾಭಿಮಾನ ಕುಂದಿಸುವ ದೊಡ್ಡದೊಂದು ಸಾಮಾಜಿಕ ಅನಿಷ್ಟ ಪದ್ಧತಿ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದೆ. ಈ ಹಿನ್ನೆಲೆಯಲ್ಲಿ ಮಲ ಹೊರುವ ಪೌರ ಕಾರ್ಮಿಕರಿಗೆ ಅತ್ಮಗೌರವ ಸ್ವಾಭಿಮಾನದ ಬದುಕು ಎಂದು?

ಸಂಬಂಧಪಟ್ಟ ನಗರಾಭಿವೃದ್ಧಿ ಸಚಿವರು, ಸಮಾಜ ಕಲ್ಯಾಣ ಸಚಿವರು, ಆಯುಕ್ತರುಗಳು ಇಂತಹ ಅಮಾನವೀಯ ಅಚರಣೆಯ ಬಗ್ಗೆ ದಿವ್ಯ ನಿರ್ಲಕ್ಷಿತರಾಗದೇ ತುರ್ತು ಕಾನೂನು ಕ್ರಮಗಳನ್ನು ಕೈಗೊಳ್ಳಬೇಕಿದೆ.

ಭೂಮಿಯಿಂದ ಆಕಾಶದೆತ್ತರದ ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿ, ಕಂಪ್ಯೂಟರಿಕರಣ ಈ ಪರಿ ಬೆಳೆದಿದ್ದರೂ, ಸರಕಾರದ ಅಧೀನ ಸಂಸ್ಥೆಗಳು ಇವನ್ನು ಬಳಸದೆ ಮಲ ಹೊರುವ ಕೆಲಸಕ್ಕೆ ಮಾನವರನ್ನು ಹೀನಾಯವಾಗಿ ಬಳಸುತ್ತಿರುವುದು ಈ ವಿಜ್ಞಾನದ ವಿಜೃಂಬಣೆ ಯಾರ ಉದ್ದಾರಕ್ಕೆ ಮೀಸಲಾಗಿಟ್ಟಿದೆ?

ಈ ದೇಶದ ದಲಿತರು ಸಫಾಯಿ ಕರ್ಮಚಾರಿಗಳಾಗಿ ಮಲ ಹೊರುವುದು, ಚರಂಡಿಗಳನ್ನು ಸ್ವಚ್ಚ ಮಾಡುವುದು, ಪಲಗೆ ಬಾರಿಸುವುದು, ಶೌಚಾಲಯ ಗುಂಡಿಗಳನ್ನು ಶುದ್ಧೀಕರಿಸುವುದು, ಹೆಣ ಸುಡುವುದು, ತೋಟಿ ಚಾಕರಿ ಮಾಡುವುದು, ಇತ್ಯಾದಿಗಳನ್ನು ಒಳಗೊಂಡಂತೆ ಸಮಾಜದ ಅತ್ಯಗತ್ಯ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಸಾವಿರಾರು ಅಸಂಘಟಿತ ಪೌರಕಾರ್ಮಿಕರು ಮುಖ್ಯವಾಗಿ ದಲಿತರು ಇಂದಿಗೂ ಅಪಾಯ ಮತ್ತು ಅಭದ್ರತೆಯಲ್ಲಿ ಬದುಕಿರುವುದು ದುರಾದೃಷ್ಟಕರ.

ಈ ವರ್ಷದ ಆರಂಭದಲ್ಲಿ ಪ್ರಧಾನಿ ಮನ್ ಮೋಹನ್‌ಸಿಂಗ್ ಈ ಮಲ ಹೊರುವ ಪದ್ಧತಿಯನ್ನು ಮನುಷ್ಯ ವಿರೋಧಿ ಆಚರಣೆಯೆಂದು, 6 ತಿಂಗಳ ಒಳಗೆ ಈ ಪದ್ಧತಿಯನ್ನು ರದ್ದುಗೊಳಿಸುವುದು ಸೇರಿದಂತೆ, ಗಂಭೀರ ಕ್ರಮಕ್ಕೆ ಆಗ್ರಹಿಸಿರುವುದು ಸ್ವಾಗತಾರ್ಹವಾದರೂ, ಇದೇ ಸರಕಾರಿ ಪ್ರಾಯೋಜಿತ ಸಂಸ್ಥೆಗಳಾದ ಗ್ರಾಮಸಭೆ, ಪುರಸಭೆ, ನಗರಸಭೆ ವ್ಯಾಪ್ತಿಯೊಳಗೆ ಕೆಲಸ ನಿರ್ವಹಿಸುವ ಪೌರ ಕಾರ್ಮಿಕರಿಗೆ ಸ್ವಚ್ಚತೆ ಹೆಸರಿನಲ್ಲಿ ಮಲ ಗೊಡಿಸುವ ಕೆಲಸದಲ್ಲಿ ನಿಯೋಜನೆ ಮಾಡಿರುವುದು ಸ್ಪಷ್ಟವಾಗಿದೆ.

ಕರ್ನಾಟಕದಲ್ಲಿ ನಾಲ್ಕು ದಶಕಗಳ ಹಿಂದೆಯೇ ಅಂದಿನ ನಗರಾಭಿವೃದ್ಧಿ ಸಚಿವರಾಗಿದ್ದ ಬಿ. ಬಸವಲಿಂಗಪ್ಪನವರು, ಮಲ ಹೊರುವ ಪದ್ಧತಿ ನೀಷೆಧ ಕಾಯ್ದೆ ಜಾರಿಗೆ ತಂದಿರುವ ಹೆಗ್ಗಳಿಕೆ ಇದ್ದರೂ, ಇಂದಿಗೂ ಕೋಲಾರದ ಕೆಜಿಎಫ್, ಚಾಮರಾಜನಗರ, ಮೈಸೂರು, ರಾಯ ಚೂರು, ಬೆಂಗಳೂರು ಮುಂತಾದ ಎಲ್ಲಾ ಜಿಲ್ಲೆಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಆಚರಣೆಯಲ್ಲಿರುವುದು ಕಾಣಬಹುದಾಗಿದೆ.

ಸಮಾಜ ಕಲ್ಯಾಣ ಸಚಿವರು, ನಗರಾಭಿವೃದ್ಧಿ ಸಚಿವರು, ಮಲ ಹೊರುವ ಪದ್ಧತಿಯು ಇಲ್ಲವೇ ಇಲ್ಲವೆಂದು ಹೇಳಿಕೆ ನೀಡುತ್ತಿದ್ದಾರೆ. ಆದರೆ ಇತ್ತೀಚೆಗೆ ದೂರದರ್ಶನ ಮಾಧ್ಯಮಗಳ ಮೂಲಕ ಹಲವು ಕಡೆ ದಲಿತರು ಇಂದಿಗೂ ಮಲ ಹೊರುವ ದೃಶ್ಯಗಳು, ಮ್ಯಾನ್ ಹೋಲ್‌ಗಳಲ್ಲಿ ಮುಳುಗಿ ಶುದ್ಧಿ ಕಾರ್ಯ ಕೈಗೊಳ್ಳುತ್ತಿರುವ ಸುದ್ದಿಗಳು ಪ್ರಸಾರವಾದವು.

ಮುಖ್ಯವಾಗಿ ರಾಯಚೂರಿನ ಒಬ್ಬ ಸಫಾಯಿ ಕರ್ಮಚಾರಿ ಮಲ ಹೊರುವ ಕಾಯಕದಲ್ಲಿ ನಿರತನಾಗಿದ್ದು, ಅದನ್ನು ಉದಯ ಟಿವಿ ಚಾನಲ್‌ನಲ್ಲಿ ಪ್ರಸಾರ ಮಾಡಲಾಗಿತ್ತು. ಅದೇ ಸಂದರ್ಭಕ್ಕೆ ಆ ಕೆಲಸ ನಿರ್ವಹಿಸುತ್ತಿದ್ದ ಪೌರ ಕಾರ್ಮಿಕರ ಎದೆ, ಬೆನ್ನು, ದೇಹ ಸೇರಿದಂತೆ ವಿವಿಧ ಅಂಗಾಂಗಗಳು ಸಾಂಕ್ರಾಮಿಕ ರೋಗರುಜಿನಗಳಿಗೆ ತುತ್ತಾಗಿರುವ ಉದಾಹರಣೆಗಳು ಪ್ರಸಾರವಾದವು.

ಈ ಸಾಂಕ್ರಾಮಿಕ ರೋಗ ಅವರ ಕುಟುಂಬದ ಸದಸ್ಯರನ್ನು ಸಹ ಬಿಟ್ಟಿಲ್ಲವೆಂಬುದು ಬೇರೆ ಮಾತು. ಆದರೆ ಈ ಕೆಲಸಗಳಿಗೆ ಅವರನ್ನು ನೇಮಿಸುವ ಪುರಸಭೆಗಳು, ನಗರಪಾಲಿಕೆಗಳು ಅವರ ಆರೋಗ್ಯದ ರಕ್ಷಣೆಗಾಗಿ ನೀಡಿರುವ ಕಾಳಜಿ ಎದ್ದು ತೊರುತ್ತದೆ.

ಕಳೆದ ವರ್ಷ ತಮ್ಮ ಬೇಡಿಕೆಗಳಿಗಾಗಿ ಸಣೂರಿನ ಭಂಗಿ ಸಮುದಾಯಕ್ಕೆ ಸೇರಿದ ಪೌರಕಾರ್ಮಿಕರು ಮೈ ಮೇಲೆ ಮಲ ಸುರಿದುಕೊಂಡು ಪ್ರತಿಭಟಿಸಿದ ಬೆನ್ನಲ್ಲೆ ಇತ್ತೀಚೆಗೆ ಬೆಳಗಾವಿಯ ಪೌರ ಕಾರ್ಮಿಕರು ಸಹ ಇದೇ ಮಾದರಿ ಅನುಸರಿಸಬೇಕಾಗಿ ಬಂದದ್ದು ವಿಷಾಧನಿಯ.

ಕಸ ಮತ್ತು ಕಕ್ಕಸ್ಸು ತುಂಬಿದ ಒಳಚಂರಂಡಿಯು ವಿಷಾಅನಿಲದಿಂದ ಕೊಡಿರುತ್ತದೆ. ಅಲ್ಲದೇ ಅದು ಅಪಾಯಕಾರಿ. ಇದನ್ನು ಪರಿಗಣಿಸದ ಗುತ್ತಿಗೆದಾರರು ಅಧಿಕಾರಿ ವರ್ಗ, ನಿರ್ಲಕ್ಷವಹಿಸಿ ಆ ವಿಷಾನಿಲದಿಂದ ಪಾರಾಗಲು ರಕ್ಷಣೆಗಾಗಿ ಮುಖವಾಡ, ಕೈ ಚೀಲಗಳನ್ನು ಕೊಡದೆ ಅವರ ಪ್ರಾಣದ ಬಗ್ಗೆ ಬೇಜವಾಬ್ದಾರಿಯಿಂದ ವರ್ತಿಸುವುದೆ ಹೆಚ್ಚು. ಹೀಗಿರುವಾಗ ಪೌರ ಕಾರ್ಮಿಕರ ಈ ಬವಣೆಯನ್ನು ತಪ್ಪಿಸುವವರು ಯಾರು? ಈ ವಿಷನಿಲದಿಂದ ಸಾವನ್ನಪ್ಪಿದ ವೀರ, ಮುರುಗ, ಮಹದೇವ, ಜೀವನ್, ಬೋಜ ಇಂತವರಿಗೆ ಯಾವ ರೂಪದ ಪರಿಹಾರ ದೊರೆಯಿತೋ ತಿಳಿಯದು.

ಮಲ ಹೊರುವ ಪದ್ಧತಿ ನಿರ್ಮೂಲನೆಯಾಗಬೇಕು ಅಲ್ಲದೆ ಮ್ಯಾನ್ ಹೋಲ್‌ಗಳಲ್ಲಿ ಸಫಾಯಿ ಕರ್ಮಚಾರಿಗಳು ಇಳಿದು ಕೆಲಸ ಮಾಡುವುದು ತಪ್ಪಬೇಕು. ಸಫಾಯಿ ಕರ್ಮಚಾರಿಗಳ ಮೇಲ್ಕೆ ಮಲ ಹೊರಿಸುವುದು ಇಲ್ಲವೆ ಆ ಕೆಲಸಕ್ಕೆ ಒತ್ತಾಯ ಮಾಡಿದವರ ಮೇಲೆ ಕ್ರಿಮಿನಲ್ ಮೊಕ್ಕದ್ದಮೆ ಹೂಡಬೇಕು.

ನಗರಸಭೆ, ಪುರಸಭೆ ಸೇರಿದಂತೆ ಎಲ್ಲಾ ಸ್ಥಳಿಯ ಸಂಸ್ಥೆಗಳು ಮಲ ಹೀರುವ ಯಂತ್ರಗಳನ್ನು ಖರೀದಿಸಬೇಕು. ಸಮರ್ಪಕವಾದಂತ ಯಂತ್ರ ಬಳಕೆಗೆ ಆದೇಶ ಹೊರಡಿಸಬೇಕು. ಪೌರಕಾರ್ಮಿಕರನ್ನು ಗುತ್ತಿಗೆ ಅಧಾರದ ಮೇಲೆ ನೇಮಿಸಿಕೊಂಡು ಶೋಷಣೆ ಮಾಡುವುದನ್ನು ತಪ್ಪಿಸಬೇಕು.

ಪೌರಕಾರ್ಮಿಕರ ಬಗ್ಗೆ ಸಮರ್ಪಕ ಸರ್ವೇಮಾಡಿ ಅವರಿಗೂ ಅರೋಗ್ಯ ವಿಮೆ, ಪಿಂಚಣಿ, ನಿವೃತ್ತಿ ವೇತನ, ಕೆಲಸದ ಖಾಯಂ ಸೇರಿದಂತೆ ಮೂಲಭೂತ ಸೌಲಭ್ಯ ಒದಗಿಸುವುದು ಸಂಬಂಧಪಟ್ಟ ಅಧಿಕಾರಿ ವರ್ಗದ್ದಾಗಬೇಕಿದೆ.

ಮನುಷ್ಯನೊಬ್ಬನ ಮಲವನ್ನು ಇನ್ನೊಬ್ಬರ ತಲೆ ಮೇಲೆ ಹೊರಿಸುವುದು, ದೇವರು ಧರ್ಮ ಕಂದಾಚಾರದ ನೆಪದಲ್ಲಿ ಈ ಕೊಳಕು ವ್ಯವಸ್ಥೆಯನ್ನು ಇಂದಿಗೂ ಉಳಿಸಿಕೊಂಡು ಹೋಗುತ್ತಿರುವುದು ನಾಚಿಕೆಗೇಡಿನ ಕೆಲಸ. ಈ ನಿಟ್ಟಿನಲ್ಲಿ ಈ ಪದ್ಧತಿ ರದ್ದಾಗಲಿ. □

ಸಮಾಜವನ್ನು ಹಾಳು ಮಾಡುತ್ತಿರುವ ಜ್ಯೋತಿಷಿಗಳು

ಸಂಪಾದಕರೊಡನೆ ಸಂವಾದ

ವಿ ಆರ್ ಮೌರ್ಯ

ಪ್ರಿಯ ಸಂಪಾದಕರೇ,

ಮಾನವ ಯುಗಗಳನ್ನು ದಾಟಿಕೊಂಡು ತನ್ನ ಮೃಗೀಯ ಪ್ರವೃತ್ತಿಯಿಂದ ಹೊರಬರುತ್ತ ನಾಗರೀಕನಾಗಿ ಸಾವಿರಾರು ವರ್ಷಗಳೇ ಕಳೆದುಹೋಗಿವೆ. ಪ್ರಕೃತಿಯ ಏರುಪೇರುಗಳಿಗೆ ಹೆದರಿ ದೆವ್ವಗಳನ್ನು ಕಲ್ಪಿಸಿಕೊಂಡು ಅದರಿಂದ ಬಚಾವಾಗಲು ದೇವರನ್ನು ಸೃಷ್ಟಿಸಿಕೊಂಡಿದ್ದಾನೆ. ಭಗತ್ ಸಿಂಗ್ ಹೇಳುವಂತೆ ಮನುಷ್ಯನ ದೌರ್ಬಲ್ಯಗಳೇ ದೇವರ ಹುಟ್ಟಿಗೆ ಕಾರಣವೂ ಹೌದು. ನಂತರದ ದಿನಗಳಲ್ಲಿ ತಿಳುವಳಿಕೆ ಬಂದಂತೆಲ್ಲ ಸಮುದಾಯದ ಕಲ್ಪನೆ ಮೂಡಿದಂತೆಲ್ಲ ತಮ್ಮೊಳಗೆ ಕೆಲವು ಕಾನೂನುಗಳ ಅವಶ್ಯಕತೆ ಕಂಡುಬಂದಾಗ ತಮಗೆ ತೋಚಿದ ಧರ್ಮಗಳನ್ನು ಸಹ ಮಾಡಿಕೊಂಡು ಬಂದಿರುತ್ತಾನೆ.

ಆದರೆ ಇತ್ತೀಚಿನ ದಿನಗಳಲ್ಲಿ ಮಾನವ ಕಂಪ್ಯೂಟರ್ ಯುಗದಲ್ಲಿದ್ದಾನೆ ಎಂದೆಲ್ಲ ಹೇಳಿಕೊಳ್ಳುತ್ತಿದ್ದರೂ, ಚಂದ್ರನ ಮೇಲೆ ಹೋಗಿ ಬಂದೆವು, ಮಂಗಳನ ಮೇಲೆ ಕಾಲಿಡುತ್ತೇವೆಂದು ಕೊಚ್ಚಿಕೊಳ್ಳುವ ನಾವುಗಳು ಸ್ವಲ್ಪವಾದರು ನಮ್ಮ ದೇಶದ ಮೂಢನಂಬಿಕೆಗಳನ್ನು ಗಮನಿಸಬೇಕಾಗಿದೆ. ವೈಜ್ಞಾನಿಕವಾಗಿ ನಾವೆಷ್ಟೆ ಮುಂದುವರಿದರೂ ಮೂಡ ನಂಬಿಕೆಗಳಿಗೇನು ನಮ್ಮ ದೇಶದಲ್ಲಿ ಬರವಿಲ್ಲ. ನೀಚ ಪದ್ಧತಿಗಳಿಗೇನು ಬರವಿಲ್ಲ!

ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಯಾವುದೇ ಟಿ.ವಿ ಚಾನಲ್ ನೋಡಿದರೂ ಒಬ್ಬೊಬ್ಬರು ಒಬ್ಬೊಬ್ಬ ಜ್ಯೋತಿಷಿಗಳನ್ನು ಗುತ್ತಿಗೆಗೆ ತೆಗೆದುಕೊಂಡಿದ್ದಾರೆ. ಅವರುಗಳ ಕೆಲಸವಿಷ್ಟೆ ದಿನಂಪ್ರತಿ ನಿಗದಿತ ಸಮಯದಲ್ಲಿ ಸುಳ್ಳು ಹೇಳುವುದು. ಜನಗಳನ್ನು ಕುರಿಗಳನ್ನಾಗಿ ಮಾಡುವುದು. ಅದನ್ನು ನಾವುಗಳೆಲ್ಲರು ನಾಚಿಕೆ ಬಿಟ್ಟು ಬಾಯಿಬಿಟ್ಟು ನೋಡುತ್ತಿದ್ದೇವೆ. ಹಾಗಾದರೆ ಆ ಜ್ಯೋತಿಷಿಗಳು ಕಲಿತಿರುವುದಾದರು ಏನು? ಅವರು ಪಡೆದಿರುವ ಡಿಗ್ರಿಗಳಾದರು ಯಾವುವು? ನಿಜಕ್ಕೂ ಯಾರಿಗು ಗೊತ್ತಿಲ್ಲ. ಆದರೆ ಮೇಲ್ನೋಟಕ್ಕೆ ಗಮನಿಸಿದರೆ ಬಹುತೇಕರು ಜನಸಾಮಾನ್ಯರಂತೆ ಓದಿಕೊಂಡಿದ್ದಾರೆ. ನಿರುದ್ಯೋಗಿಗಳಾಗಿ ಮೈಬಗ್ಗಿಸಿ ದುಡಿಯಲಾಗದೆ ಕೊನೆಗೆ ಈ ಸುಳ್ಳು ಹೇಳುವ ಕೆಲಸವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅವರೇ ಹೇಳಿಕೊಳ್ಳುವಂತೆ ಅವರು ಭವಿಷ್ಯ ಹೇಳಲು ಓದಿಕೊಂಡಿರುವ ಪುಸ್ತಕ ಜ್ಯೋತಿಷ್ಯಶಾಸ್ತ್ರ.

ಈ ಜ್ಯೋತಿಷ್ಯ ಶಾಸ್ತ್ರಕ್ಕೆ ಮೂಲ ಆಧಾರ ನವಗ್ರಹಗಳು. ನಮಗೆ ಈಗ ತಿಳಿದಿರುವಂತೆ 8 ಗ್ರಹಗಳಿವೆ. ಎರಡು ವರ್ಷ ಹಿಂದಕ್ಕೆ ಹೋಗಿ 9 ಗ್ರಹಗಳು ಎಂದುಕೊಂಡರೆ ಅವುಗಳನ್ನು ಈ ರೀತಿ ಪಟ್ಟಿ ಮಾಡಬಹುದು. ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ, ನೆಪ್ಚೂನ್, ಯುರೇನಸ್, ಮತ್ತು ಪ್ಲೂಟೊ. ಇವುಗಳೆಲ್ಲ ವಿಜ್ಞಾನ ನಮಗೆ ತಿಳಿಸಿರುವ ಗ್ರಹಗಳು, ನಮ್ಮ ಅನುಭವಕ್ಕೆ ಬಂದಿರುವ ಗ್ರಹಗಳು. ಆದರೆ ಜ್ಯೋತಿಷ್ಯ ಶಾಸ್ತ್ರದ ಕತೆಯೆ ಬೇರೆ. ಅದು ಹೇಳುವಂತೆ ಗ್ರಹಗಳ ಸಂಖ್ಯೆ 9, ಅವುಗಳು ಸೂರ್ಯ, ಚಂದ್ರ, ರಾಹು, ಕೇತು, ಬುಧ, ಮಂಗಳ, ಶುಕ್ರ, ಗುರು ಮತ್ತು ಶನಿ. ನಮಗೆಲ್ಲರಿಗು ತಿಳಿದಿರುವಂತೆ ಸೂರ್ಯ ಮತ್ತು ಚಂದ್ರ ಗ್ರಹಗಳೇ ಅಲ್ಲ. ಸೂರ್ಯ ನಕ್ಷತ್ರ, ಚಂದ್ರ ಉಪಗ್ರಹ. ಇನ್ನು ರಾಹು ಕೇತುಗಳನ್ನು ಸಾಕ್ಷಾತ್ ಜ್ಯೋತಿಷ್ಯ ಶಾಸ್ತ್ರ ಬರೆದವನೆ ನೋಡಿಲ್ಲ. ಇನ್ನು ಈ ಮರಿಗಳು ನೋಡಿರುತ್ತಾರ? ಏಕೆಂದರೆ ಇವು ಕೇವಲ ಕಲ್ಪನಾ ಗ್ರಹಗಳು! ಆದ್ದರಿಂದ ಅವುಗಳ ಸ್ಥಾನ ಯಾರೆ ಊಹಿಸಿದರೂ ಅದು ಬರಿ ಬೊಗಳೆಯೇ. ಈ ರೀತಿ ತನ್ನ ಲಾಭಕ್ಕಾಗಿ ಸತ್ಯವನ್ನೆ ತಿರುಚಲು ಜ್ಯೋತಿಷ್ಯಶಾಸ್ತ್ರ ತಿಣುಕಾಡುತ್ತದೆ.

ಅದಲ್ಲದೆ ಮೂರು ಜನಕ್ಕೆ ತಿಳಿದಿರುವ ಸುಳ್ಳನ್ನು ಸತ್ಯವೆಂದು ಹೇಳಿ 100 ಕೋಟಿಗಿಂತಲೂ ಹೆಚ್ಚು ಜನರನ್ನು ಕಾಲಕಾಲಗಳಿಂದಲು ಕುರಿಗಳನ್ನಾಗಿ ಮಾಡಿಕೊಂಡು ಬಂದಿದೆ! ಈ ರೀತಿ ಜ್ಯೋತಿಷ್ಯ ಶಾಸ್ತ್ರದ ಬುನಾದಿಯಾದ ಗ್ರಹಗಳ ಕಲ್ಪನೆಯೇ ತಿಳಿಗೇಡಿತನವಾಗಿರುವಾಗ ಇದರ ಮೇಲೆ ಕಟ್ಟಿರುವ ಶಾಸ್ತ್ರಗಳೆಲ್ಲ ಕೇವಲ ಸುಳ್ಳುಗಳೇ ಅಲ್ಲವೆ? ಕಲ್ಲುಬಂಡೆ, ಅನಿಲದೈತ್ಯಗಳಾಗಿರುವ ಗ್ರಹಗಳು ಮನುಷ್ಯನ ಭವಿಷ್ಯದ ಮೇಲೆ, ಅವನ ಆರೋಗ್ಯ, ಮದುವೆಗಳ ಮೇಲೆ ಪ್ರಭಾವ ಬೀರುತ್ತದೆಂದರೆ ನಂಬಬೇಕಾ? ಆದರೆ ನಂಬಿಕೊಂಡೆ ಬಂದಿದ್ದೇವೆ. ಎಲ್ಲೋ ತಿರುಗುತ್ತಿರುವ ಗ್ರಹಗಳು ಮನುಷ್ಯನನ್ನು ತಿರುಗಿಸಲು ಸಾಧ್ಯವೆ? ಇವರ ದೃಷ್ಟಿಯಲ್ಲಿ ಭೂಮಿ ಒಂದು ಗ್ರಹವೇ ಅಲ್ಲ. ಹಾಗಾದರೆ ಭೂಮಿ ಏನು?

ಗ್ರಹಣಗಳು ರಾಹು ಕೇತುವಿನಿಂದಾಗುತ್ತವೆ ಎಂದು ಬುರುಡೆ ಬಿಡುವ ಲ್ಯಾಪ್‌ಟಾಪ್ ಜ್ಯೋತಿಷಿಗಳಿಗೆ ಸೂರ್ಯ, ಚಂದ್ರ ಮತ್ತು ಭೂಮಿಯ ಭ್ರಮಣೆ ಪರಿಭ್ರಮಣೆಗಳ ಬಗ್ಗೆ ಅರಿವಿದೆಯೇ? ಗ್ರಹಣಗಳ ಕಾಲದಲ್ಲಿ ಊಟ, ನೀರು, ಸೇವಿಸಬಾರದು, ಗರ್ಬಿಣಿಯರು ಹೊರಗೆ ಹೋಗಬಾರದೆನ್ನುವ ಈ ಮೂಢರಿಗೆ ಗ್ರಹಣದ ಸಮಯದಲ್ಲೆ ಓಡಾಡುವ, ಉಣ್ಣುವ, ಒಳ್ಳೆ ಕೆಲಸಗಳನ್ನು ಮಾಡುವ ವಿದೇಶಿಯರು, ನಮ್ಮ ದೇಶದ ಪ್ರಗತಿಪರರು ಕಾಣುವುದಿಲ್ಲವೆ? ಇನ್ನು ರಾಹುಕಾಲ, ಗುಳಿಕಕಾಲ. ಯಮಗಂಡ ಕಾಲಗಳಿಗೆ ಜ್ಯೋತಿಷ್ಯದ್ದೇ ಆಧಾರ. ರಾಹು ಕೇತುಗಳೆ ಇಲ್ಲ ಇನ್ನು ಈ ಕಾಲಗಳು ಎಲ್ಲಿಂದ ಬಂದವು? ಇವುಗಳನ್ನು ಹೇಗೆ ನಂಬುವುದು? ಇರಲಿ ಒಂದು ಕ್ಷಣ ಈ ಕಾಲಗಳನ್ನು ನಂಬಿಯೆ ಬಿಡೋಣ. ನಂಬಿದರೆ ರಾಹುಕಾಲದಲ್ಲಿ ಶಾಲೆಗೆ ಹೋಗುವಂತಿಲ್ಲವೆ? ಆಸ್ಪತ್ರೆ, ಬಸ್ಸು, ರೈಲು, ವಿಮಾನ, ವ್ಯಾಪಾರ ವಹಿವಾಟು ಇತ್ಯಾದಿ ಎಲ್ಲವೂ ನಿಂತುಹೋಗಬೇಕೆಂದಾಯ್ತು. ಹಾಗಾದರೆ ಯಾವುದೆ ಒಳ್ಳೆ ಕೆಲಸವನ್ನು ರಾಹುಕಾಲದಲ್ಲಿ ಮಾಡಬಾರದು. ಉಸಿರಾಟ? ಉಸಿರಾಟ ಒಳ್ಳೆಯ ಕೆಲಸವಲ್ಲವೆ? ಆದ್ದರಿಂದ ಉಸಿರಾಟ ನಿಲ್ಲಿಸಬೇಕ? ಮೊದಲು ಜ್ಯೋತಿಷಿಗಳು ನಿಲ್ಲಿಸಲಿ ಆನಂತರ ನಾವು ಪ್ರಯತ್ನಿಸೋಣ ಎನ್ನುತ್ತದೆ ಈಗಿನ 1ನೇ ತರಗತಿ ಮಗು. ಆದರೆ ಬೆಳೆದು ಹೆಮ್ಮರವಾಗಿರುವ ನಮ್ಮ ದೇಶದ ಘಟಾನುಘಟಿಗಳಿಗೆ ಇದು ಅರ್ಥವಾಗಿಯೇ ಇಲ್ಲವಲ್ಲ. ಹಿರಿಯ ನಾಗರೀಕರಿಗೆ ಅರ್ಥವಾಗಿಲ್ಲವಲ್ಲ, ಇದೇ ಈ ದೇಶದ ದುರಂತ! ಅಪ್ಪ ಹಾಕಿದ ಆಲದ ಮರಕ್ಕೆ ನೇಣುಹಾಕಿಕೊಳ್ಳುವುದನ್ನು ನಮ್ಮ ದೇಶದ ಜನರು ಬಿಟ್ಟರೆ ಮುಕ್ಕಾಲು ಭಾಗ ಸಮಸ್ಯೆ ಬಗೆಹರಿದಂತೆಯೆ. ಪ್ರಶ್ನೆ ಮಾಡುವುದನ್ನಂತು ಕಲಿತುಬಿಟ್ಟರೆ ಪೂರ್ತಿ ಸಮಸ್ಯೆ ಬಗೆಹರಿದಂತೆಯೆ.

ಆದರೆ ಇಂತಹವರಿಗೆ ಸ್ವಂತ ಬುದ್ಧಿಯೆ ಇಲ್ಲವಲ್ಲ. ಇದ್ದಿದ್ದರೆ ಚಾತುರ್ವರ್ಣ ಪದ್ಧತಿ, ಜಾತಿ ಪದ್ಧತಿ ಇಂದಿಗು ಏಕೆ ಜೀವಂತವಾಗಿರುತ್ತಿತ್ತು? ನಮ್ಮ ದೇಶಕ್ಕೆ ಈ ಮೂಢ ನಂಬಿಕೆಗಳು, ಮೂಢಾಚಾರಗಳು ಅಂಟಿರುವ ಅತಿದೊಡ್ಡ ಶಾಪ ಎಂದು ನಾ ಹೇಳಲಾರೆ. ಏಕೆಂದರೆ ಇವುಗಳನ್ನು ಬೇಕೆಂದೆ ಹೇರಲಾಗಿದೆ. ದೇಶದ ದೊಡ್ಡ ದೊಡ್ಡವರೆಂದು ಅನಿಸಿಕೊಂಡಿರುವವರೆಲ್ಲ ಇದರ ದಾಸರೇ! ಭಕ್ತಿ ಇರಲಿ ಆದರೆ ಅದು ಸತ್ಯದ ತಳಹದಿಯ ಮೇಲಿರಲಿ ಎಂದು ಹೇಳಿದ ಬುದ್ಧನಂತಹ ಸುಜ್ಞಾನಿ ಜನಿಸಿದ ನಾಡಾಗಿದ್ದರು ಸಹ ದೇಶದ ಪ್ರಪ್ರಥಮ ಅಧ್ಯಕ್ಷರಾದ ಬಾಬು ರಾಜೆಂದ್ರ ಪ್ರಸಾದ್‌ರವರು 200 ಬ್ರಾಹ್ಮಣರ ಕಾಲನ್ನು ತೊಳೆಯುತ್ತಾರೆ. ದೇಶದ ಘಟಾನುಘಟಿಗಳೆ ಹೋಮ ಹವನಗಳನ್ನು ಮಾಡಿಸುತ್ತಾರೆ. 1985ರಲ್ಲಿ ತಪಸ್ವಿ ಶ್ರೀ ಶಿವಬಾಲಯೋಗಿ ಎಂಬ ಮೂಢ ಬೆಂಗಳೂರಿಗೆ ಬರಗಾಲ ಬಂದಾಗ, ಮಂತ್ರ ಪೂಜೆಯಿಂದ ಮಳೆ ತರಿಸುತ್ತೇನಿ ಎಂದವನು ಬುರುಡೆ ಬಿಟ್ಟಾಗ, ಅಂದಿನ ಸರ್ಕಾರದ ಕಾನೂನು ಮಂತ್ರಿ ಪ್ರೊ. ಲಕ್ಷ್ಮಿಸಾಗರ್ ಎಂಬ ಮತ್ತೊಬ್ಬ ಮೂಢ ಸಂವಿಧಾನವನ್ನೆ ಧಿಕ್ಕರಿಸಿ ಮಳೆಗಾಗಿ ಪೂಜೆ ನಡೆಸುವುದಾಗಿ ಹೇಳುತ್ತಾನೆ. ನಂತರ ಜಲ ಮಂಡಲಿ ದಿನಾಂಕವನ್ನೆ ನಿಗಧಿಪಡಿಸುತ್ತದೆ.

ಆದರೆ ಅಂದಿನ ಮಹಾನ್ ವಿಚಾರವಾದಿ ಡಾ. ಹೆಚ್. ನರಸಿಂಹಯ್ಯರವರು ಅದಕ್ಕೆ ನೇರ ಸವಾಲು ಹಾಕಿ ಸರ್ಕಾರಕ್ಕೆ ಛೀಮಾರಿ ಹಾಕುತ್ತಾರೆ. ಆದರೆ ಸ್ವಲ್ಪವೂ ನಾಚಿಕೆಯಿಲ್ಲದೆ ಆ ತಪಸ್ವಿ ಮಂತ್ರದಿಂದ ತಿಪ್ಪಗೊಂಡನಹಳ್ಳಿ ಜಲಾಶಯ ತುಂಬಿಸುವುದಾಗಿ ಬಲು ಪ್ರಚಾರ ಗಿಟ್ಟಿಸಿಕೊಳ್ಳುತ್ತಾನೆ. ಅಲ್ಲಿ ಪೂಜೆಯನ್ನು ಮಾಡಿದ ತಪಸ್ವಿ ಇನ್ನು ಒಂದು ತಿಂಗಳಲ್ಲಿ ಜಲಾಶಯ ತುಂಬುವುದಾಗಿ ಬಹಿರಂಗ ಹೇಳಿಕೆಯನ್ನೆ ನೀಡುತ್ತಾನೆ. ಆದರೆ ಮೂರು ತಿಂಗಳಾದರು ಜಲಾಶಯ ತುಂಬಲಿಲ್ಲ. ಅಷ್ಟರಲ್ಲಿ ಸ್ವಾಮಿ

ಬೆಂಗಳೂರು ಬಿಟ್ಟಿರುತ್ತಾನೆ. ಈ ರೀತಿ ಮೂಢನಂಬಿಕೆಗೆ ಸರ್ಕಾರವೇ ಬಲಿಯಾಗುತ್ತದೆ. ಪುಟ್ಟಪರ್ತಿ ಸಾಯಿಬಾಬ ತನ್ನ ಕೈಗಳಿಂದ ಚಿನ್ನದ ಉಂಗುರುಗಳನ್ನು, ವಿಭೂತಿಯನ್ನು ನೀಡುತ್ತಿದ್ದಾಗ ಪ್ರಶ್ನಿಸದೆ ಬಾಯಿ ಮುಚ್ಚಿಕೊಂಡಿತ್ತು ಜನಸ್ತೋಮ. ಆದರೆ ಮಹಾನ್ ವೈಚಾರಿಕಾವಾದಿ ಹೆಚ್. ನರಸಿಂಹಯ್ಯನವರು ನಮಗೆ ಉಂಗುರ ವಿಭೂತಿಗಳು ಬೇಡ ಕೊಡುವುದಾದರೆ ಕುಂಬಳಕಾಯಿ ಕೊಡಿ ಎಂದಾಗ ಅವರಿಗೆ ಸಹಕಾರ ನೀಡದೆ ಅವರನ್ನೆ ತೆಗಳಿತು ಈ ಮೂಢ ಜನತೆ. ಕೊನೆಗೆ ಛಲ ಬಿಡದ ಅವರು ಸಾಯಿ ಬಾಬಾಗೆ ನಿಮ್ಮ ಎಲ್ಲ ಪವಾಡಗಳನ್ನು ನಾನು ಸಹ ಮಾಡಬಲ್ಲೆ ದಯಮಾಡಿ ನನಗೆ ಆಹ್ವಾನ ಕೊಡಿ ಎಂದು ಎರಡು ಬಾರಿ ಪತ್ರ ಬರೆದರೆ ಅದಕ್ಕೂ ಉತ್ತರಿಸದೆ ಸೋತಿದ್ದರು ಸಾಯಿಬಾಬಾ.

ಈ ರೀತಿಯ ಲೆಕ್ಕವಿಲ್ಲದಷ್ಟು ಮೂಢನಂಬಿಕೆಗಳ ಸತ್ಯ ಘಟನೆಗಳನ್ನು ಹೇಳಬಹುದು. ಇದು ನಮ್ಮ ದೇಶದ ನೈಜ ಸ್ಥಿತಿ. ಇತ್ತೀಚೆಗಂತು ಲ್ಯಾಪ್‌ಟಾಪ್ ಜ್ಯೋತಿಷಿಗಳು, ದರ್ಪಣ ಜ್ಯೋತಿಷಿಗಳು, ಪಟಪಟನೆ ಸಂಸ್ಕೃತ ಹೇಳುವ ಜ್ಯೋತಿಷಿಗಳು, ಗಡ್ಡದಾರಿ, ಜುಟ್ಟುದಾರಿ, ಕಾವಿ ದಾರಿ ಜ್ಯೋತಿಷಿಗಳು ಟಿ.ವಿಗಳಲ್ಲಿ ದಿನ ಬೆಳಗಾದರೆ ಸುಳ್ಳುಗಳನ್ನು ಒದರುತ್ತ ಮಿಂಚುತ್ತಿದ್ದಾರೆ. ಇವರುಗಳನ್ನು ಇಟ್ಟುಕೊಂಡು ಮಾಧ್ಯಮಗಳು ಉತ್ತಮ ಸಮಾಜ ಸ್ಥಾಪಿಸುತ್ತಾರಂತೆ!! ಈಗಾಗಲೆ ಇವರುಗಳು ಸಾಧಿಸಿರುವ ಮಹಾನ್ ಕಾರ್ಯಗಳನ್ನು ಸಂಕ್ಷಿಪ್ತವಾಗಿ ಹೇಳಬಹುದು. ಒಬ್ಬ ಜ್ಯೋತಿಷಿ ಒಬ್ಬಳು ಹೆಂಗಸಿಗೆ ನಿನ್ನ ಗಂಡನಿಗೆ ಬೇರೆ ಹೆಣ್ಣಿನೊಂದಿಗೆ ಸಹವಾಸ ಇದೆ ಎಂದದ್ದನ್ನು ನಂಬಿ ಪಾಪ ಆ ಮೂಢೆ ಆತ್ಮಹತ್ಯೆ ಮಾಡಿಕೊಂಡಳು. ಪುನರ್ಜನ್ಮದ ಬಗ್ಗೆ ಕತೆಗಳನ್ನು ಕಟ್ಟಿದ್ದಕ್ಕೆ ಅದನ್ನೆ ನಂಬಿ ಮಕ್ಕಳುಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿವೆ. ಡೆತ್ ನೋಟ್‌ಗಳಲ್ಲಿ ಮುಂದಿನ ಜನ್ಮದಲ್ಲಿ ಹೀರೊ ಆಗಿ ಹುಟ್ಟುತ್ತೀನೆಂದು, ಜಿಲ್ಲಾಧಿಕಾರಿಯಾಗಿ ಹುಟ್ಟುತ್ತೀನೆಂದು ಸಾಯುತ್ತಿವೆ.

ಬಹುತೇಕ ಜನ ಜ್ಯೋತಿಷಿಗಳ ಮಾತು ನಂಬಿ ಪೂಜೆ ಪುನಸ್ಕಾರಗಳನ್ನು ಮಾಡಿಕೊಂಡು ಅಮೂಲ್ಯ ಸಮಯ ಮತ್ತು ದುಡಿದ ಹಣವನ್ನು ಚೆಲ್ಲುತ್ತಿದ್ದಾರೆ. ಇನ್ನು ಇವರುಗಳು ಹೇಳಿರುವ ಸುಳ್ಳುಗಳಿಗೆ ಲೆಕ್ಕವೆ ಇಲ್ಲ. ಕಳೆದ ವರ್ಷದ ಕೊನೆಯಷ್ಟೊತ್ತಿಗೆ ಉತ್ತರ ಭಾರತದ ಪ್ರಸಿದ್ಧ ಮಹಿಳೆ ಓರ್ವಳು ಸಾಯುತ್ತಾಳೆ ಎಂದು ಒಬ್ಬ ಸ್ವಾಮೀಜಿ ಹೇಳಿದ್ದ ಆದರೆ ಅದು ಸುಳ್ಳಾಯಿತು.

ಗ್ರಹಣಗಳ ಸಮಯದಲ್ಲಿ ಅಲ್ಲಿ ಭೂಕಂಪ ಆಗಬಹುದು ಇಲ್ಲಿ ಭೂಕಂಪ ಆಗಬಹುದು ಎಂದರು. ಆದರೆ ಅದೂ ಆಗಲಿಲ್ಲ. ಅಷ್ಟ ಗ್ರಹಗಳ ಕೂಟ ಏರ್ಪಟ್ಟಾಗ ಮತ್ತದೇ ಸುಳ್ಳಾಡಿದರು. ಇವೆಲ್ಲವನ್ನು ಬಹಿರಂಗವಾಗಿಯೆ ಮಾಧ್ಯಮದಲ್ಲಿ ಹೇಳಿದ್ದರು. ಆದರೆ ಇವೆಲ್ಲ ಸುಳ್ಳಾದಾಗ ಮಾಧ್ಯಮ ಅವೆಲ್ಲವನ್ನು ಪ್ರಕಟಿಸಲಿಲ್ಲ. ಏಕೆಂದರೆ ಎಲ್ಲಿವರೆಗೆ ಮೂಢ ಜನರಿರುತ್ತಾರೊ ಅಲ್ಲೀವರೆಗೆ ಮಾಧ್ಯಮಗಳ ಟಿ.ಆರ್.ಪಿ ರೇಟ್ ಏರುತ್ತಲೆ ಇರುತ್ತದೆ. ಆದ್ದರಿಂದ ಮುಂದಿನ ಸಮಾಜ ಉತ್ತಮಗೊಳ್ಳಬೇಕಾದರೆ ಇವೆಲ್ಲ ವನ್ನು ಪ್ರಶ್ನಿಸುವ ಪೀಳಿಗೆಯನ್ನು ತಯಾರು ಮಾಡಬೇ ಕಾಗಿದೆ. ಅದಕ್ಕೆ ಶಾಲೆಗಳಲ್ಲಿ ಮಕ್ಕಳಿಗೆ ಮೂಢನಂಬಿಕೆಗಳ ವಿರುದ್ಧ ಒಂದು ಅಭಿಯಾನ ಆರಂಬಿಸಲೇಬೇಕಾಗಿದೆ. ಇಲ್ಲವಾದರೆ ಭಾರತ ಮತ್ತೆ ಮನುವಾದಿಗಳ ಕೈಹಿಡಿತಕ್ಕೆ ಹೋಗುತ್ತದೆ. ಎಚ್ಚರ!!! ☐

ಉಪವಾಸ: ಬಲ್ಲಿದರ ಹಕ್ಕು-ಬಡವರ ಕರ್ತವ್ಯ!

(7ನೇ ಪುಟದಿಂದ)

ನೆಲದ ಕಾನೂನಿಗೆ ಮರ್ಯಾದೆ ನೀಡದೆ, ಹರಮಾರಿತನದ ಬೆದರಿಕೆಗಳಿಂದ ಹುತಾತ್ಮನಾಗುವ ಮಾನಸಿಕ ಸ್ಥಿತಿ ಆತ್ಮಹತ್ಯೆಗೆ ಸಮ ಹಾಗೂ ಪ್ರಜಾಸತ್ತೆಗೆ ದೊಡ್ಡ ಕಪ್ಪು ಮಸಿ.

ಭ್ರಷ್ಟಾಚಾರ ಎನ್ನುವುದು ದ್ವಿಮುಖಿ ವ್ಯವಹಾರ. ಭ್ರಷ್ಟಾಚಾರ ತಡೆಗೆ ಸಂವಿಧಾನದಲ್ಲಿ ಸಾಕಷ್ಟು ಕಾಯ್ದೆ ಕಾನೂನುಗಳಿವೆ. ಈ ಕಾಯ್ದೆ ಕಾನೂನುಗಳಡಿಯಲ್ಲಿಯೇ ಎ. ರಾಜಾ, ಕನ್ನಿಮೋಳಿ, ಕಲ್ಮಾಡಿ, ಕಟ್ಟಾಗಳು ಈಗಾಗಲೇ ಜೈಲು ಸೇರಿದ್ದಾರೆ.

ಲೋಕಾಯುಕ್ತರ ವರದಿಯಿಂದಾಗಿ ಒಬ್ಬ ಮುಖ್ಯಮಂತ್ರಿ ಹಾಗೂ 3 ಜನ ಮಂತ್ರಿಗಳು ಮಾಜಿಯಾಗಿದ್ದಾರೆ, 787 ಅಧಿಕಾರಿಗಳು ಸಿಕ್ಕಿಬಿದ್ದಿದ್ದಾರೆ. ಇದು ಮೇಲಿನ ಹಂತದ ಭ್ರಷ್ಟಾಚಾರದ ಮಾತಾಯಿತು. ಕೆಳ ಹಂತದಲ್ಲಿ ಅಂದರೆ ತಾಲ್ಲೂಕು ಕಛೇರಿ, ಪೋಲೀಸ್ ಠಾಣೆ, ಆಸ್ಪತ್ರೆ, ಕಂದಾಯ ಕಛೇರಿ, ಪುರಸಭೆ, ಆರ್.ಟಿ.ಓ. ಕಚೇರಿಗಳಲ್ಲಿ ನಡೆಯುವ ಭ್ರಷ್ಟಾಚಾರದ ದೌರ್ಜನ್ಯಕ್ಕೆ ಜನಸಾಮಾನ್ಯ ಬಲಿಯಾಗಿದ್ದಾನೆ. ಸರ್ಕಾರದ ಯೋಜನೆಗಳನ್ನು ಅನುಷ್ಠಾ ನಗೊಳಿಸುವ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ನಡುವಿನ ಶೇಕಡವಾರು ಹಂಚಿಕೆ ದಂಧೆಗೆ ಕಡಿವಾಣ ಹಾಕಬೇಕಾಗಿದೆ.

5 ಸಾವಿರ ಕೋಟಿ ಮೌಲ್ಯದ ಮನೆಯನ್ನು ಹೊಂದಿದ ಅಂಬಾನಿಗಳು, ತಿರುಪತಿ ವೆಂಕಟೇಶನಿಗೆ 45 ಕೋಟಿಯ ಕಿರೀಟವಿಟ್ಟ ರೆಡ್ಡಿಗಳು, ವಿಮಾನ, ಹೆಲಿಕಾಪ್ಟರ್‌ಗಳಲ್ಲಿ ಹಾರಾಡುವ ಸ್ವಾಮಿ, ಬಾಬಾಗಳು ಹಾಗೂ ಮಠಮಾನ್ಯಗಳನ್ನು ಭ್ರಷ್ಟಾಚಾರ ನಿಯಂತ್ರಣದ ತೆಕ್ಕೆಗೆ ತರಬೇಕಾಗಿದೆ.

ಪ್ರಜಾಸತ್ತೆಯ ನಾಲ್ಕನೇ ಅಂಗವೆಂದು ಪರಿಗಣಿಸಲಾದ ಮಾಧ್ಯಮಗಳು ತಮ್ಮ ಸಾಮಾಜಿಕ, ನೈತಿಕ ಹೊಣೆಯನ್ನು ಮರೆತು ಸಾಮಾನ್ಯ ಘಟನೆಯನ್ನು ಅಸಾಮಾನ್ಯ ಘಟನೆಯಾಗಿ, ಅಸಾಮಾನ್ಯ ಘಟನೆಯನ್ನು ಸಾಮಾನ್ಯ ಘಟನೆಯನ್ನಾಗಿ ಸತ್ಯಗಳನ್ನು ತಿರುಚುತ್ತಿದ್ದಾರೆ ಸುದ್ದಿ ಮಾಧ್ಯಮಗಳ ಭ್ರಷ್ಟ ಒಡೆಯರನ್ನೂ ಸಹ ಭ್ರಷ್ಟಾಚಾರ ನಿಯಂತ್ರಣದ ತೆಕ್ಕೆಗೆ ತರುವ ಅವಶ್ಯಕತೆ ಇದೆ.

ಈಗ ತುರ್ತಾಗಿ ಆಗಬೇಕಾದ ಕೆಲಸವೆಂದರೆ ಕೆಲವೇ ವ್ಯಕ್ತಿಗಳ ಗೊಡ್ಡು ಬೆದರಿಕೆಗೆ ಮಣಿಯದೇ ಭ್ರಷ್ಟಾಚಾರ ನಿಗ್ರಹಕ್ಕಾಗಿ 42 ವರ್ಷಗಳ ಹಿಂದಿನ ಲೋಕಪಾಲ್ ಮಸೂದೆಯನ್ನು ಇಂದಿನ ಅಗತ್ಯಗಳಿಗೆ ಅನುಗುಣವಾಗಿ ಮಾರ್ಪಾಡುಗಳನ್ನು ಮಾಡಿ ಎಲ್ಲಾ ಹಂತಗಳ ಭ್ರಷ್ಟಾಚಾರವನ್ನು ನಿಗ್ರಹಿಸುವ ಪಾರದರ್ಶಕತೆಯ, ಸಶಕ್ತ, ಪರಿಣಾಮಕಾರಿ, ಅರ್ಥಪೂರ್ಣ ಹಾಗೂ ಕಾರ್ಯಸಾಧುವಾದ ಲೋಕಪಾಲ್ ಮಸೂದೆಯ ಅವಶ್ಯಕತೆ ಇದೆ. ಇದಕ್ಕೆ ದೇಶದ ಪ್ರಜೆಗಳೆಲ್ಲರೂ ಚರ್ಚೆ, ಸಂವಾದ, ವಿಚಾರ ಸಂಕಿರಣಗಳ ಮೂಲಕ ಪಾಲ್ಗೊಂಡು ತಮ್ಮ ನಿಲುವುಗಳನ್ನು ಸ್ಥಾಯಿ ಸಮಿತಿಗೆ ಕಳುಹಿಸಬೇಕಾಗಿದೆ.

ಈ ಮಸೂದೆಯ ಜಾರಿಗಾಗಿ ರಾಜ್ಯ ಹಾಗೂ ದೇಶದ ಎಲ್ಲಾ ಜನಪ್ರತಿನಿಧಿಗಳು ಪಕ್ಷಭೇದ ಮರೆತು, ಕೀಳು ರಾಜಕಾರಣ ಮಾಡದೇ ಕಾಯ ವಾಚ ಮನಸಾ ಶ್ರಮಿಸಿ ಸಂವಿಧಾನದ ಹಾಗೂ ಸಂಸತ್ತಿನ ಘನತೆಯನ್ನು ಕಾಪಾಡಿ ಜನತೆಯ ವಿಶ್ವಾಸವನ್ನು ಮರಳಿಸಬೇಕಾಗಿದೆ. ☐

ಪ್ರಗತಿಪರರ ಮುಂದಿನ ನಡೆ ಏನು?

(9ನೇ ಪುಟದಿಂದ)

ನಂತರ ತನ್ನ ಎಲ್ಲಾ ರಾಜಕೀಯ ಚಾಣಾಕ್ಷತನ, ಮುತ್ಸದ್ದಿತನದೊಂದಿಗೆ ಸಂಸತ್ತಿನಲ್ಲಿ ಇದು ಅನುಮೋದನೆಗೊಳ್ಳುವಂತೆ ಒಂದು ವ್ಯವಸ್ಥಿತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದಾಗಿತ್ತು. ಈಗ ಆ ಸಾಧ್ಯತೆ ಸಂಪೂರ್ಣವಾಗಿ ನಾಶವಾಗಿದೆ. ಈ ಸುವರ್ಣಾವಕಾಶವನ್ನು ಹಾಳುಗೆಡುವಿದ ಕಾಂಗ್ರೆಸ್‌ನವರ ತಿಳಿಗೇಡಿ, ಆತ್ಮಹತ್ಯಾತ್ಮಕತನದ ರಾಜಕಾರಣದಿಂದ ಇಂದು ದೇಶದ ಭವಿಷ್ಯದ ರಾಜಕೀಯ ನಿಜಕ್ಕೂ ಗಾಬರಿ ಹುಟ್ಟಿಸುತ್ತದೆ. ಎಲ್ಲಾ ಪ್ರಗತಿಪರ ಹೋರಾಟಗಳು, ಸಂಘಟನೆಗಳು ದಣಿದುಗೊಂಡಂತಹ, ಸುಸ್ತಾದಂತಹ ಸ್ಥಿತಿ, ಪ್ರಗತಿಪರ ಚಿಂತಕರು ನಾವೆಲ್ಲ ರಾಜಕೀಯವಾಗಿ ಯಾವ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಎಂದು ಒಟ್ಟಾಗಿ ಚರ್ಚಿಸುವುದನ್ನು ಬಿಟ್ಟು ತಮ್ಮಲ್ಲಿನ ಕೇವಲ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಅದೇನೋ ಒಂದು ಜೀವನ್ಮರಣದ ಪ್ರಶ್ನೆಯೆನ್ನುವಂತೆ ಒಬ್ಬರಿಗೊಬ್ಬರು ಟೂ,ಟೂ ಬಿಟ್ಟುಕೊಳ್ಳುತ್ತಿರುವ ಬಾಲಿಶ ನಡವಳಿಕೆಗಳು, ಮುಂಬರುವ ಲೋಕಸಭಾ ಹಾಗೂ ಕರ್ನಾಟಕ ರಾಜ್ಯದ ಸಾರ್ವತ್ರಿಕ ಚುನಾವಣೆಗಳು ಫಲಿತಾಂಶದ ದಿಕ್ಕನ್ನು ಈಗಲೇ ಸೂಚಿಸುತ್ತಿವೆಯೇ ಎನ್ನುವ ಈ ಕರಿನೆರಳುಗಳು, ನಮಗೆಲ್ಲಾ ಇಷ್ಟೆಲ್ಲಾ ಭಯ, ಆತಂಕಗಳನ್ನು ಹುಟ್ಟಿಹಾಕಿವೆ.

ಇಂದಿನ ಕರ್ನಾಟಕದ ರಾಜಕೀಯದ ಮಟ್ಟಿಗೆ ಜನತೆ ಸಂಪೂರ್ಣ ಹತಾಶೆಗೊಂಡಿದ್ದಾರೆ. ಸಧ್ಯಕ್ಕೆ ಈ ಬಿಜೆಪಿಯ ಭ್ರಷ್ಟಾಚಾರಗಳು, ಕೇವಲ 2 ವರ್ಷಗಳ ಆಡಳಿತದಲ್ಲಿ ಅನೇಕ ಮಂತ್ರಿಗಳು ಜೈಲಲ್ಲಿರುವುದು, ಅಧಿಕಾರದ ದುರಾಸೆಗೆ ಆಪರೇಷನ್ ಮೂಲದ ಹೆಸರಿನಲ್ಲಿ ಒಂದು ಅಸಹ್ಯ, ಕಳಂಕಿತ ಪ್ರಕ್ರಿಯೆಯನ್ನು ಹುಟ್ಟುಹಾಕಿದ್ದು, ನಗರಸಭೆಯ ಸದಸ್ಯರಾಗಲೂ ನಾಲಾಯಕ್ಕಾದಂತಹ ಈ ರೆಡ್ಡಿಗಳು, ಶ್ರೀರಾಮುಲುರಂತಹ ಭ್ರಷ್ಟ, ಪಾತಕ ರಾಜಕಾರಣಿಗಳು ಕಳೆದ 3 ವರ್ಷಗಳಿಂದ ಈ ತಮ್ಮ ಕಬಳಿಕೆಗೆ, ದರ್ಬಾರಿಗೆ, ಅಟ್ಟಹಾಸಕ್ಕೆ ಅನುಕೂಲವಾಗಲು ಬಿಜೆಪಿ ಸರ್ಕಾರವನ್ನು ತಮಗೆ ಬೇಕಾದಗಲೆಲ್ಲ ಇಕ್ಕಟ್ಟಿಗೆ ಸಿಲುಕಿಸುತ್ತಾರೆಂದರೆ ಈ ಬಿಜೆಪಿಯ ಕರ್ಮಕಾಂಡ ಯಾವ ಮಟ್ಟದ್ದು ಎಂದು ಅರಿವಾಗುತ್ತದೆ.

ಬಿಜೆಪಿಯ ವಿರುದ್ಧದ ಜನತೆಯ ಈ ಆಕ್ರೋಶವನ್ನು ರಾಜಕೀಯವಾಗಿ ಬಳಸಿಕೊಳ್ಳುವಂತಹ ಸ್ಥಿತಿಯಲ್ಲಿ ಸದ್ಯಕ್ಕೆ ಕಾಂಗ್ರೆಸ್‌ಗಾಗಲಿ, ದಳಕ್ಕಾಗಲಿ ಇಲ್ಲ. ಕಡೇ ಪಕ್ಷ ಕರ್ನಾಟಕದ ಭವಿಷ್ಯದಲ್ಲಿ ಈ ಬಿಜೆಪಿ ಅಧಿಕಾರಕ್ಕೆ ಬರದಂತೆ ನಾವೆಲ್ಲ ಯಾವ ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು, ನಮ್ಮೆಲ್ಲರ ಮುಂದಿನ ನಡೆಗಳೇನು, ರಚನಾತ್ಮಕ ಕಾರ್ಯಕ್ರಮಗಳೇನು, ರಾಜಕೀಯ ನಿರ್ಧಾರಗಳೇನು ಎನ್ನುವುದನ್ನು ಎಲ್ಲಾ ಪ್ರಗತಿಪರ ಸಂಘಟನೆಗಳು, ಚಿಂತಕರು ಕೂಡಲೆ ತಮ್ಮ ಜಡತ್ವವನ್ನು ಕಳಚಿಕೊಂಡು ನಮಗೆಲ್ಲಾ ಕಾರ್ಯಸೂಚಿಗಳನ್ನು ಕೊಡಬೇಕಾಗಿದೆ. ಆಗಸ್ಟ್ ತಿಂಗಳಲ್ಲಿ ಜಾಫಟ್ ಹಾಗೂ ಅವರ ಗೆಳೆಯರು ನಡೆಸಿಕೊಟ್ಟಂತಹ ಪ್ರಗತಿಪರ ಚಳವಳಿಗಳು ಹಾಗೂ ಅದರ ಮುಂದಿನ ಸವಾಲುಗಳು ಎನ್ನುವ ಬಹಳ ಉತ್ತಮವಾದ 2 ದಿನಗಳ ಚಿಂತನ, ಮಂಥನ ಕಾರ್ಯಕ್ರಮಗಳಲ್ಲಿ ತೆಗೆದುಕೊಂಡಂತಹ ನಿರ್ಣಗಳನ್ನು ನಾವೆಲ್ಲ ತಾರ್ಕಿಕ ಅಂತ್ಯಕ್ಕೆ ಕೊಂಡಯ್ಯಬೇಕಾಗಿದೆ. ಇದಕ್ಕಾಗಿ ಕಾರ್ಯಕರ್ತರಾಗಿ ದುಡಿಯಲು ನಾವೆಲ್ಲ ರೆಡಿ. ☐

ನವಿಲು ಗರಿ ಬೆಲೆ: ರೂ. ೫೦/-
ಸಂ: ಡಾ. ಸಬಿಹಾ ಭೂಮಿಗೌಡ

ಇಪ್ಪತ್ತನಾಲ್ಕು ವಿದ್ಯಾರ್ಥಿಗಳು ರಚಿಸಿರುವ ಪ್ರಬಂಧ ಸಂಕಲನದ ಈ ಕೃತಿ ವಸ್ತು, ಧೋರಣೆ ಹಾಗೂ ನಿರ್ವಹಣೆಯ ವೈವಿಧ್ಯತೆಯಿಂದ ಗಮನ ಸೆಳೆಯುತ್ತದೆ. ಇಲ್ಲಿನ ಪ್ರಬಂಧಗಳು ತುಂಬಾ ಸ್ಪಷ್ಟವಾಗಿ ನಿರೂಪಿತಗೊಂಡಿವೆ. ಗಂಭೀರ, ಹಾಸ್ಯ, ವಿನೋದ ಮತ್ತು ಲವಲವಿಕೆಯ ಜೊತೆಗೆ ಸೃಜನಶೀಲತೆಯೂ ಅಡರಿದ್ದು ವಿಷಯದ ಆಯ್ಕೆಯಲ್ಲಿನ ಭಿನ್ನತೆಯಿಂದ ಹೊಸ ತಲೆಮಾರಿನ ಬರಹಗಾರರ ಬಗ್ಗೆ ಭರವಸೆ ಮೂಡಿಸುತ್ತದೆ. ಹೊಸದನ್ನು ಕಟ್ಟುವ ಹಾಗೂ ಅಕ್ಷರ ಪರಂಪರೆಯನ್ನು ಮುಂದುವರೆಸುವ ನಿಟ್ಟಿನಲ್ಲಿ ಇಂತಹ ಪ್ರಯೋಗ ಬರೆಯುವ ಚೈತನ್ಯವನ್ನು ಮತ್ತಷ್ಟು ಹೆಚ್ಚಿಸಿದೆ.

ಪ್ರ: ಲಡಾಯಿ ಪ್ರಕಾಶನ, ಗದಗ



ಅರಿವಿನ ದಾರಿಯ ಬೆಳಕುಗಳು
ಲೇ: ಸಮುಖಾನಂದ ಜಲವಳ್ಳಿ
ಬೆಲೆ: ರೂ. ೧೫೦/-

ಸ್ತ್ರೀ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಅಕ್ಕಮಹಾದೇವಿಯ ವೈರಾಗ್ಯ ಜೀವನ: ನಾಟ್ಯರಾಣಿ ಶಾಂತಲಾದೇವಿಯ ಕಲಾ ಪ್ರೇಮ, ರಾಜನೈತಿಕ ಪ್ರಜ್ಞೆ: ದಾದಿಯರ ಘನತೆಯನ್ನು ಎತ್ತಿಹಿಡಿಯುವ ಫ್ಲಾರೆನ್ಸ್ ನೈಟಿಂಗೇಲಳ ಸೇವಾ ಜೀವನ: ಗಿಡ-ಮರ, ಪ್ರಾಣಿ-ಪಕ್ಷಿಗಳ ಮೇಲೆ ಪ್ರೀತಿ ದಯೆ ತೋರಿದ ಸಂತ ಫ್ರಾನ್ಸಿಸ್ ಅಸಿಸ್ಸಿಯವರ ಸೋದರ ಭಾವ: ಸಂತ ಲಾರೆನ್ಸ್‌ರ ಜೀವನ ಮೌಲ್ಯ: ರೈಮಂಡ್ ಮಸ್ಕರೇನ್ಹಸರು ಅಜ್ಞಾನ, ಬಡತನ ರೋಗ-ರುಜಿನಗಳನ್ನು ತೊಲಗಿಸಲು ಕೈಗೊಂಡ ಸುಧಾರಣಾ ಕಾರ್ಯ-ಹೀಗೆ ಆರು ಜೀವ ಪ್ಪರ ಘನತೆಯನ್ನು ಎತ್ತಿ ಹಿಡಿಯುವ ನೃತ್ಯರೂ ಪಕಗಳು ಈ ಸಂಗ್ರಹದಲ್ಲಿವೆ.

ಪ್ರ: ಸಮುಖ ಪ್ರಕಾಶನ, ಕಿನ್ನಿಗೋಳಿ



ಹೊಸ ಪುಸ್ತಕ

ಅಮೇರಿಕಾ ಆ ಮುಖ
ಲೇ: ಡಾ. ಸಿ. ಎಸ್ ದ್ವಾರಕಾನಾಥ್
ಬೆಲೆ: ರೂ. ೮೦/-

ಈವರೆಗೆ ಕನ್ನಡದಲ್ಲಿ ಬಂದ ಅಮೇರಿಕಾ ಪ್ರವಾಸ ಕುರಿತ ಕಥನಗಳು ಆ ದೇಶದ ಒಂದು ಮುಖ ತೋರಿಸಿದ್ದರೆ, ಈ ಕೃತಿ ಹೀನ ಚರಿತ್ರೆಯನ್ನು ಸಮರ್ಥವಾಗಿ ತೆರೆದಿಡುತ್ತದೆ. ಅಮೇರಿಕನ್ನರ ಸಾಮ್ರಾಜ್ಯಶಾಹಿ ಅಹಂ ವಿರುದ್ಧ ನಿರಂತರವಾಗಿ ಹೋರಾಡುತ್ತಿರುವ ಆಫ್ರಿಕಾ ಮೂಲದ ಅಮೇರಿಕನ್ನರ ಮನೋಧೈರ್ಯವನ್ನು ಮನಮಿಡಿಯುವಂತೆ ಕಟ್ಟಿಕೊಡಲಾಗಿದೆ. ಅಲ್ಲಿನ ಅನಿವಾಸಿ ಭಾರತೀಯರ ಹಿಪಾಕ್ರಸಿಯನ್ನೂ ಜಾಲಾಡಿದ್ದು ಸಾಮಾಜಿಕ ಬದ್ಧತೆ, ಘನತೆ, ಆಳವಾದ ಮಾನವ ಪ್ರೇಮಕ್ಕಾಗಿ ತುಡಿಯುವ ಈ ಪ್ರವಾಸಿ ಕಥನ ಲೇಖಕರ ಮನೋಭೂಮಿಕೆಗೆ ಸಾಕ್ಷಿಪ್ರಜ್ಞೆಯಂತಿದೆ.

ಪ್ರ: ಲಡಾಯಿ ಪ್ರಕಾಶನ ಗದಗ





ಇಲ್ಲಿ ಯಾರೂ ಮುಖ್ಯರಲ್ಲ
ಲೇ: ರಹಮತ್ ತರೀಕೆರೆ
ಬೆಲೆ: ರೂ. ೧೬೦/-

ಸಾಮಾಜಿಕ ಮೌಲ್ಯಗಳ ಚರ್ಚೆಯೊಂದಿಗೆ ಸಾಹಿತ್ಯ ಮೀಮಾಂಸೆಯನ್ನು ಸಂವಾದಿಯಾಗಿ ಮಿಮರ್ಶಿಸಿರುವುದು ಈ ಕೃತಿಗೆ ಹೊಸತೊಂದು ಆಯಾಮವನ್ನು ದೊರಕಿಸಿಕೊಟ್ಟಿದೆ. ಕನ್ನಡದ ಸೃಜನಶೀಲ ಲೇಖಕರ ಸಾಹಿತ್ಯ ಕೃತಿಗಳ ಸಾರವನ್ನು ಹೀರಿಕೊಂಡು ಕನ್ನಡ ಸಾಹಿತ್ಯ ಮಿಮಾಂಸೆಯ ವಿನ್ಯಾಸಗಳನ್ನು ರೂಪಿರಿಸುವ ಹಾಗೂ ವಿಸ್ತರಿಸುವ ಪ್ರಯತ್ನ ಸರಳವಾಗಿ ಅಷ್ಟೇ ಪರಿಣಾಮಕಾರಿಯಾಗಿ ಒಡಮೂಡಿದೆ. ನಿರಂತರವಾಗಿ ಹೊಸ ಬದುಕನ್ನು ಪ್ರವೇಶಿಸುವ ನಮ್ಮೊಳಗಿನ ತುಡಿತಕ್ಕೆ ರೂಢಿಗತ ವಿಧಾನವನ್ನು ಮೀರಿ ಸಾಹಿತ್ಯದ ಅನುಸಂಧಾನವನ್ನು ಪ್ರತಿಪಾದಿಸಲಾಗಿದ್ದು ಕನ್ನಡದ್ದೇ ಚಿಂತನೆಗೆ ಇದೊಂದು ಅಮೂಲ್ಯ ಕೃತಿಯಾಗಿದೆ.

ಪ್ರ: ಲಡಾಯಿ ಪ್ರಕಾಶನ, ಗದಗ

'ನೆಲಗುಮ್ಮ'ದ ಸುತ್ತ-ಮುತ್ತ
ಲೇ: ಸುಮುಖಾನಂದ ಜಲವಳ್ಳಿ
ಬೆಲೆ: ರೂ. ೭೫/-

ವಸ್ತು, ಭಾಷೆ, ತಂತ್ರಗಳಲ್ಲಿ ನಾವೀನ್ಯತೆಯನ್ನು ತುಂಬಿಕೊಂಡ ಅರವತ್ತೊಂದು ಹನಿಗವಿತೆಗಳ ವಿಮರ್ಶೆಯ ಕೃತಿ ಇದು. ಸಣ್ಣ ಕವನಕ್ಕೆ ಎಷ್ಟೆಲ್ಲಾ ಸಾಧ್ಯತೆಗಳು ಎಂಬ ಅಚ್ಚರಿಯನ್ನು ವ್ಯಕ್ತಪಡಿಸುತ್ತಲೇ 'ಎದೆ'ಯ ಆವರಣದೊಳಗೆ ಅರಳಿಕೊಂಡ ಭಾವಗಳು ಸಹೃದಯರನ್ನು ಒಳಗು ಮಾಡಿಕೊಳ್ಳುವ ವಿಧಾನ, ಅನುಪಮ ಕೌಶಲ, ಮಾನವ ಕೇಂದ್ರಿತ ಪ್ರಜ್ಞೆಯೊಂದು ಕಾವ್ಯದ ಮೂಲಕ ಬದುಕನ್ನು ಹೇಗೆಲ್ಲಾ ಸ್ಪಂದಿಸಬಹುದು, ಎಚ್ಚರಿಸಬಹುದು, ಮೌಲ್ಯಗಳನ್ನು ಪ್ರತಿಪಾದಿಸಬಹುದು ಎಂಬ ಆಶಯ ಇಲ್ಲಿನ ವಿಮರ್ಶೆ ವ್ಯಕ್ತಪಡಿಸಿದೆ.

ಪ್ರ: ಸುಮುಖ ಪ್ರಕಾಶನ ಕಿನ್ನಿಗೋಳಿ, ದಕ್ಷಿಣ ಕನ್ನಡ



ಬೂಸಾ ಸಾಹಿತ್ಯ ಎಂದ ಮಾತು
ಲೇ: ಎಂ.ಬಿ. ಜಯಶಂಕರ್
ಬೆಲೆ: ರೂ. ೧೦೦/-

ಎಪ್ಪತ್ತರ ದಶಕದ 'ಬೂಸಾ ಸಾಹಿತ್ಯ' ಎಂಬ ಮಾತು ಎಬ್ಬಿಸಿದ ಹೊಸ ಅಲೆಯ ಪ್ರತೀಕದಂತಿರುವ ಈ ಸಂಕಲನದಲ್ಲಿನ ಕವನಗಳು ಹೊಸ ರೂಪಕಗಳನ್ನು ಹೆಕ್ಕಿ ತೆಗೆಯುವಲ್ಲಿ ಸಫಲವಾಗಿವೆ. ಬೇರೆ ಬೇರೆ ಆಶಯವಿದ್ದರೂ ಅಲ್ಲಿ ಹರಿಯುತ್ತಿರುವ ಧಾತು ಒಂದೇ ಆಗಿದೆ. ಸಮತೆ, ಪ್ರೀತಿ, ಮಾನವತೆ, ಒಲವು, ಪ್ರೇಮ, ಜ್ಞಾನ, ತ್ಯಾಗ ಮತ್ತು ಪ್ರಜ್ಞೆ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಉದಾತ್ತತೆಯನ್ನು ಹೊಂದಿದ್ದು ಗಾಢ ಸಮಾಜಮುಖಿ ಚಿಂತನೆಯಿದೆ. ದಲಿತ ಜನಸ್ತೋಮವನ್ನು ಜಾಗೃತಗೊಳಿಸುವ ಇಲ್ಲಿನ ಪ್ರಾಮಾಣಿಕ ಪ್ರಯತ್ನ ಪರಿಣಾಮಕಾರಿಯಾಗಿದೆ.

ಪ್ರ: ಅರಿವು ಪ್ರಕಾಶನ, ಮೈಸೂರು.

ಅಣ್ಣ ಹಜಾರೆ ಚಳವಳಿ:

ದಲಿತರು ಮತ್ತು ಕಮ್ಯುನಿಸ್ಟರು ಕಲಿಯದ ಪಾಠ

ಎನ್. ಕೆ. ಮೋಹನ್‌ರಾಂ

ಆಗಸ್ಟ್ 24ರಂದು ಬೆಂಗಳೂರಿನ ಸಭಾಂಗಣವೊಂದರಲ್ಲಿ ದಲಿತ-ಹಿಂದುಳಿದವರು ಆಯೋಜಿಸಿದ ಅಣ್ಣಾ ಹಜಾರೆ ವಿರೋಧಿ ಸಭೆಯಲ್ಲಿ ಹಾಜರಿದ್ದವರಲ್ಲಿ ನಾನೂ ಒಬ್ಬ. ಅಲ್ಲಿ ಅಣ್ಣಾ ವಿರುದ್ಧ ಕೇಳಿ ಬಂದ ಕ್ರಾಂತಿಕಾರಿ ದಲಿತರ ಆರೋಪಗಳು ಹೀಗಿವೆ:

1) ಅಣ್ಣಾ ಗಾಂಧಿಯಲ್ಲ. ಅಣ್ಣಾ ಗ್ರಾಮದಲ್ಲಿ ದಲಿತರ ಕೇರಿ ಊರಾಚೆಯಿದೆ. ಆ ಗ್ರಾಮದಲ್ಲಿ ಮಾಂಸ ತಿನ್ನಲು ಬಿಡುವುದಿಲ್ಲ. ಕುಡಿತ-ತಂಬಾಕು ಇಲ್ಲ. ಕೇಬಲ್ ಟಿವಿ-ಚಲನಚಿತ್ರ ನೋಡುವ ಹಾಗಿಲ್ಲ. ಗ್ರಾಮ ಪಂಚಾಯಿತಿ ಚುನಾವಣೆಗೆ ಅಣ್ಣಾ ಹೇಳಿದ ಅಭ್ಯರ್ಥಿಗಳನ್ನೇ ಒಪ್ಪಬೇಕು. ವಿರುದ್ಧದ ದನಿ ಎತ್ತಿದವರನ್ನು ಕಂಬಕ್ಕೆ ಕಟ್ಟಿ ಹೊಡೆಯುತ್ತಾರೆ. ಈತ ಸರ್ವಾಧಿಕಾರಿ. ಈತ ದಲಿತ ವಿರೋಧಿ.

2) ಅಣ್ಣಾ ಭ್ರಷ್ಟಾಚಾರದ ವಿವರಣೆಯೇ ವಿಧ್ವಂಸಕಾರಿ. ಅವರ ಭ್ರಷ್ಟಾಚಾರ ಪ್ರಣಾಳಿಕೆಯಲ್ಲಿ ಶಿಕ್ಷಣ, ಸಾಮಾಜಿಕ, ಜಾತಿ-ಧರ್ಮ, ಉದ್ಯೋಗ, ಆರ್ಥಿಕ, ಆರೋಗ್ಯ, ಸಂಪತ್ತುಗಳ ಅಸಮಾನತೆಯ ಕ್ರೌರ್ಯಗಳಿಗೆ ಜಾಗವಿಲ್ಲ. ಭ್ರಷ್ಟಾಚಾರ ಎಂದರೆ ಅಣ್ಣಾ ಹೇಳುವ ಸರಕಾರಿ ಲಂಚ ಮಾತ್ರವಲ್ಲ. ಅಣ್ಣಾ ಭ್ರಷ್ಟಾಚಾರ ವಿರೋಧಿ ಹೋರಾಟ ಹಾಸ್ಯಾಸ್ಪದ.

3) ಅಣ್ಣಾ ಅನಿರ್ದಿಷ್ಟ ಉಪವಾಸ ಬ್ಲಾಕ್ ಮೈಲ್ ತಂತ್ರ, ಇದು ಸಂಸತ್ ಮತ್ತು ಪ್ರಜಾತಂತ್ರ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ವಿರೋಧಿ ಶಕ್ತಿ.

4) ಅಣ್ಣಾ ತಂಡದಲ್ಲಿ ದಲಿತ, ಹಿಂದುಳಿದ, ಮಹಿಳೆ ಮತ್ತು ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯವಿಲ್ಲ. ಉದ್ದೇಶಪೂರ್ವಕವಾಗಿ ನಿರಾಕರಿಸಲಾಗಿದೆ.

5) ಅಣ್ಣಾ ಹೋರಾಟ ಜನ ಚಳವಳಿಯಲ್ಲ. ಮಧ್ಯಮ ವರ್ಗದವರ ಸ್ವಹಿತಾಸಕ್ತಿಗಳ ಬೂಟಾಟಿಕೆ. ಇದೆಲ್ಲ 24x7 ಕಾರ್ಪೊರೇಟ್ ಹಿಡಿತದ 24x7 ಇಂಗ್ಲಿಷ್ ಚಾನೆಲ್ಲುಗಳು ಸೃಷ್ಟಿಸಿದ ಸಮೂಹ ಸನ್ನಿ

6) ಅಣ್ಣಾ ಹಿಂದೆಂದೂ ರೈತರ ಆತ್ಮಹತ್ಯೆ, ಭೂಸ್ವಾಧೀನ ವಿರುದ್ಧದ ರೈತ-ಗಿರಿ-ಜನರ ಹೋರಾಟ, ನಕ್ಸಲ್ ಚಳವಳಿ, ಮತೀಯ ಹಿಂಸೆಗಳ ಬಗ್ಗೆ ಪ್ರತಿಭಟಿಸಿಲ್ಲ.



7) ಅಣ್ಣಾ ಹೋರಾಟಕ್ಕೆ ಯಾವ ಸಿದ್ಧಾಂತವೂ ಇಲ್ಲ. ಈತ ಗಾಂಧಿ, ಜೆಪಿ ಅಲ್ಲವೇ ಅಲ್ಲ.

* * * * * * *

ಮೇಲೆ ಹೇಳಿದ ಸಮಾರಂಭದಲ್ಲಿ ಪ್ರಸ್ತಾಪವಾದ ಒಂದು ಮುಖ್ಯ ವಿಷಯವಿದೆ. ಅದು, ದಲಿತರು ಇತಿಹಾಸದ ಪ್ರಮುಖ ಸಂದರ್ಭಗಳಲ್ಲಿ ತಮ್ಮ ನಿಷ್ಠೆ ಮತ್ತು ಪ್ರಾಮಾಣಿಕತೆಗಳನ್ನು ತಾವೇ ಸಮರ್ಥಿಸಿಕೊಳ್ಳಬೇಕಾದ ದಯನೀಯ ಪರಿಸ್ಥಿತಿಯುಂಟಾಗಿರುವುದು. ಸ್ವಾತಂತ್ರ್ಯಪೂರ್ವದಲ್ಲಿ ತಾವು ಬ್ರಿಟಿಷರ ಪರವಲ್ಲ, ತಾವೂ ಸ್ವಾತಂತ್ರ್ಯ ಹೋರಾಟಗಾರರು ಎಂದು ಪದೇ ಪದೇ ಸಮರ್ಥಿಸಿಕೊಂಡಂತೆಯೇ, ಈಗಲೂ ತಾವು ಜನ ವಿರೋಧಿಯಲ್ಲ ಎಂದು ಹೇಳಿಕೊಳ್ಳುವಂಥಹ ಅನಿವಾರ್ಯತೆ ಉದ್ಭವವಾಗಿರುವುದು. ಇದೇ ಪರಿಸ್ಥಿತಿ ನಮ್ಮ ಕಮ್ಯುನಿಸ್ಟರಿಗೂ ಬಂದಿದೆ. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಕಮ್ಯುನಿಸ್ಟರು ಬ್ರಿಟಿಷ್ ಸರಕಾರವನ್ನು ಬೆಂಬಲಿಸಿದ್ದು, ಜೆಪಿ ಚಳವಳಿಯನ್ನು ಭಾರತ ಕಮ್ಯುನಿಸ್ಟ್ ಪಕ್ಷ ಫ್ಯಾಸಿಸ್ಟ್ ಚಳವಳಿ ಎಂದು ಕರೆದರೆ, ಸಿಪಿಐ (ಎಂ) ಸ್ಪಷ್ಟ ನಿಲುವನ್ನು ತೆಗೆದುಕೊಳ್ಳಲು ಹಿಂಜರಿದಿದ್ದು, ಅಣ್ಣಾ ಚಳವಳಿಯನ್ನೂ ಸಹ ಕೊನೆಗಳಿಗೆಯಲ್ಲಿ ಅರೆಮನಸ್ಸಿನಿಂದ ಬೆಂಬಲಿಸಿದ್ದು -ಕಮ್ಯುನಿಸ್ಟರ ದುರಂತ. ದಲಿತರ ಮತ್ತು ಕಮ್ಯುನಿಸ್ಟರ ಈ ಹರಾಕಿರಿಗಳು ಸ್ವಯಂ ಸೃಷ್ಟಿಯ ಅಪರಾಧವೇ ಹೊರತು, ಬೇರೆಯವರನ್ನು ದೂಷಿಸುವಂತಿಲ್ಲ.

ದಲಿತ ಮತ್ತು ಕಮ್ಯುನಿಸ್ಟರು ಜನ ಚಳವಳಿಗಳನ್ನು ಅರ್ಥ ಮಾಡಿಕೊಳ್ಳುವುದೇ ಇಲ್ಲ. ದಲಿತರಿಗೆ, ಜಾತಿಯ ಅರ್ಹತೆಯಿಂದ ಪ್ರಾತಿನಿಧ್ಯವಿರಬೇಕು. ನಾಯಕತ್ವದಲ್ಲೂ ಶೇಕಡಾವಾರು ಇಲ್ಲದಿದ್ದರೆ, ಅದು ದಲಿತ ವಿರೋಧಿ ಮಾತ್ರವಲ್ಲ, ಮೀಸಲಾತಿ ವಿರೋಧಿ ಚಳವಳಿಯಾಗಿ ಕಾಣುತ್ತದೆ. ಕಮ್ಯುನಿಸ್ಟರದೂ ಅದೇ ಕಪ್ಪು-ಬಿಳುಪಿನ ಲೆಕ್ಕಾಚಾರ. ಜನ ಹೋರಾಟಗಳಲ್ಲಿ ಮಾರ್ಕ್ಸಿಸಂ ಲೇಪವಿಲ್ಲದಿದ್ದರೆ ಅದು ಜನ ವಿರೋಧಿ ಹೋರಾಟವಾಗಿ ಕಾಣುತ್ತದೆ. ಅದು ಪ್ರತಿಕ್ರಾಂತಿಯಾಗಿಯೂ ಕಾಣುತ್ತದೆ. ಮುಂದೊಂದು ದಿನ ತಮ್ಮನ್ನು ತಾವು ಸಮರ್ಥಿಸಿಕೊಳ್ಳಲಾಗದ ವಿಷಾದದ ಸ್ಥಿತಿಗೆ ತಲುಪುತ್ತಾರೆ.

ದಲಿತ ಮತ್ತು ಕಮ್ಯುನಿಸ್ಟರು ಜನ ಚಳವಳಿಗಳನ್ನು ಅರ್ಥ ಮಾಡಿಕೊಳ್ಳುವುದೇ ಇಲ್ಲ. ದಲಿತರಿಗೆ, ಜಾತಿಯ ಅರ್ಹತೆಯಿಂದ ಪ್ರಾತಿನಿಧ್ಯವಿರಬೇಕು. ನಾಯಕತ್ವದಲ್ಲೂ ಶೇಕಡಾವಾರು ಇಲ್ಲದಿದ್ದರೆ, ಅದು ದಲಿತ ವಿರೋಧಿ ಮಾತ್ರವಲ್ಲ, ಮೀಸಲಾತಿ ವಿರೋಧಿ ಚಳವಳಿಯಾಗಿ ಕಾಣುತ್ತದೆ. ಕಮ್ಯುನಿಸ್ಟರದೂ ಅದೇ ಕಪ್ಪು-ಬಿಳುಪಿನ ಲೆಕ್ಕಾಚಾರ. ಜನ ಹೋರಾಟಗಳಲ್ಲಿ ಮಾರ್ಕ್ಸಿಸಂ ಲೇಪವಿಲ್ಲದಿದ್ದರೆ ಅದು ಜನ ವಿರೋಧಿ ಹೋರಾಟವಾಗಿ ಕಾಣುತ್ತದೆ. ಅದು ಪ್ರತಿಕ್ರಾಂತಿಯಾಗಿಯೂ ಕಾಣುತ್ತದೆ. ಮುಂದೊಂದು ದಿನ ತಮ್ಮನ್ನು ತಾವು ಸಮರ್ಥಿಸಿಕೊಳ್ಳಲಾಗದ ವಿಷಾದದ ಸ್ಥಿತಿಗೆ ತಲಪುತ್ತಾರೆ.

ಇದಕ್ಕೆ ಮುಖ್ಯ ಕಾರಣ, ಮಧ್ಯಮ ವರ್ಗದವರ ಬಗ್ಗೆ ಈ ಇಬ್ಬರೂ ಬೆಳೆಸಿಕೊಂಡಿರುವ ಅಲರ್ಜಿ. ಕಮ್ಯುನಿಸ್ಟರಿಗೆ ಮಧ್ಯಮ ವರ್ಗ ಬೇಕೆ ಬೇಕು. ಕಾರಣ, ಲೆನಿನ್ ಹೇಳಿದಂತೆ ಕ್ರಾಂತಿ ಸಾಧ್ಯವಾಗುವುದು ಇವರಿಂದಲೇ. ಆದರೆ ಇವರು ಮಧ್ಯಮ ವರ್ಗವಾಗದೆ, ದುಡಿವ ವರ್ಗ ಆಗಬೇಕು. ಹೀಗಾಗಿಯೇ 40-50ರ ದಶಕದಲ್ಲಿ, ಕಮ್ಯುನಿಸ್ಟರು ಮಧ್ಯಮ ವರ್ಗದ ಬ್ಯಾಂಕ್, ಇನ್ಸೂರೆನ್ಸ್, ಸಾರ್ವಜನಿಕ ವಲಯಗಳ ನೌಕರರ ಸಂಘಗಳನ್ನು ಅಸೋಸಿಯೇಷನ್‌ಗಳೆಂದು ಕರೆದರು. ಬ್ಯಾಂಕ್ ಅಸೋಸಿಯೇಷನ್ ಇತ್ಯಾದಿ. ಕಾರಣ, ಯೂನಿಯನ್‌ಗಳು ಕೂಲಿಕಾರರದ್ದು ಮಾತ್ರ. ಆದರೆ ಆದ ದುರಂತವೇನೆಂದರೆ 50 ವರ್ಷಗಳ ಹೋರಾಟದಿಂದಾಗಿ, ಆರ್ಥಿಕವಾಗಿ ಸಶಕ್ತರಾಗಿ ಅಸೋಸಿಯೇಷನ್‌ಗಳ ಜೊತೆ ಯೂನಿಯನ್‌ಗಳೂ, ಮಧ್ಯಮ ವರ್ಗವಾದದ್ದು.

ದಲಿತರೂ ಅಷ್ಟೆ ಕಳೆದ 50 ವರ್ಷಗಳಲ್ಲಿ ಮೀಸಲಾತಿಯಿಂದಾಗಿ ಆರ್ಥಿಕ ಪ್ರಬಲರಾಗಿ, ಅತಿ ನಾಜೂಕು ಮಧ್ಯಮ ವರ್ಗವಾಗಿ ಗಣಹೋಮ, ಸತ್ಯನಾರಾಯಣ ಪೂಜೆಗಳನ್ನು ಮಾಡಿಕೊಂಡು ತುಪ್ಪದ ಸಜ್ಜಿಗೆ ತಿನ್ನುತ್ತಿದ್ದಾರೆ. ಬೇಕಾದಾಗ ಮಾತ್ರ, ತಮ್ಮ ತಾತ-ಮುತ್ತಾತಂದಿರ ಅವಮಾನಗಳ ನೆನೆದು ಕಣ್ಣೀರು ಹರಿಸುತ್ತಾರೆ.

ಅತಿ ಮುಖ್ಯವಾದದ್ದು ಎಂದರೆ, ಕ್ರಾಂತಿಯ, ಬದಲಾವಣೆಯ, ಪ್ರಗತಿಯ ಕನಸು ಕಾಣುವುದರೊಂದಿಗೆ ಎಲ್ಲ ಹೋರಾಟಗಳು-ಚಳವಳಿಗಳ ಸೃಷ್ಟಿಕರ್ತರು ಮಧ್ಯಮ ವರ್ಗವೇ. ಸ್ವಾತಂತ್ರ್ಯ ಹೋರಾಟ

ದಿಂದ, ಕಮ್ಯುನಿಸ್ಟ್-ಸಮಾಜವಾದ-ನಕ್ಸಲಿಸಂ ಚಳವಳಿಗಳೆಲ್ಲವೂ ಮಧ್ಯಮ ವರ್ಗದ ಸೃಷ್ಟಿ ಮತ್ತು ಸಂಚಲನೆಯೇ. ಆದರೆ ಏನೇ ಬದಲಾವಣೆಯಾದರೂ ಮಧ್ಯಮ ವರ್ಗಕ್ಕೆ ಯಾವ ಸವಲತ್ತೂ ಆಗುವುದಿಲ್ಲ. ಕ್ರಾಂತಿಯಾದರೆ, ಕೆಳವರ್ಗ ಫಲಾನುಭವಿಯಾದರೆ, ಮೇಲು ವರ್ಗ ಕಳೆದುಕೊಳ್ಳುತ್ತದೆ. ಮಧ್ಯಮ ಎಲ್ಲಿದ್ದಾನೋ ಅಲ್ಲೇ ಇರುತ್ತಾನೆ.

ತಾನಾಯಿತು, ತನ್ನ ಪಾಡಾಯಿತು. ತನ್ನ ಕುಟುಂಬ, ತನ್ನ ಕೆಲಸ, ಬಡ್ತಿ, ಸವಲತ್ತು, ಸುಖಗಳಿಂದಾಚೆ ನೋಡದ, ಯೋಚಿಸದ, ಭಾಗಿಯಾಗದ ಮಧ್ಯಮ ವರ್ಗ, ಅದರಲ್ಲೂ ಕೆಳ ಮಧ್ಯಮ ವರ್ಗ, ಅಪ್ಪಟ ಬ್ರಾಹ್ಮಣ ಆಧುನಿಕ ವಿಜ್ಞಾನದ ಸಕಲ ಸವಲತ್ತುಗಳನ್ನು ಬಳಸಿಕೊಂಡೂ ಜುಟ್ಟು-ಜನಿವಾರಗಳನ್ನು ಬಿಡದ, ಈ ಮಧ್ಯಮ ವರ್ಗ ನಮ್ಮ ಬಹುಪಾಲು ಸಾಹಿತ್ಯಕ್ಕೆ ವಸ್ತುವಾಗಿದ್ದು, ಸಹ ಹೌದು.

ಮಧ್ಯಮ ವರ್ಗವನ್ನು ಗೇಲಿ ಮಾಡಿದ್ದು, ಪ್ರಶ್ನಿಸುವಂತೆ ಮಾಡಿದ್ದು. ಮನೆಯಿಂದಾಚೆ ಬರುವಂತೆ ಮಾಡಿದ್ದು -70ರ ದಶಕ. ಲಂಕೇಶರ ಬಹುತೇಕ ಕತೆಗಳು ಮತ್ತು ಅವರ ಎಲ್ಲ ಸಾಮಾಜಿಕ ನಾಟಕಗಳ ವಸ್ತು-ಪಾತ್ರಗಳು ಮಧ್ಯಮ ವರ್ಗದ್ದು. ಮಧ್ಯಮ ವರ್ಗದ ಸೀತಾರಾಮ, ಶ್ಯಾಮ, ಕಂಠಿ-ವಿಟ್ಟಿ-ಕಿಟ್ಟಿಗಳನ್ನು, ಬಸವರಾಜ, ರುದ್ರಮೂರ್ತಿ, ಭರಮಪ್ಪಗಳನ್ನಾಗಿ ಮಾಡಿದ್ದು ಲಂಕೇಶರೇ.

21ನೇ ಶತಮಾನದ ಮಧ್ಯಮ ವರ್ಗ ಮುಂದುವರೆದು ಮತ್ತೂ ಬದಲಾಗಿದೆ. ಉದಾರೀಕರಣದ ಭಾಷೆಯಲ್ಲಿ ಈಗ ಕೆಂಪಯ್ಯ, ಕರಿಯಪ್ಪ, ದಾಸಯ್ಯ, ಚಿಕ್ಕಣ್ಣರೂ ಮಧ್ಯಮ ವರ್ಗದವರಾಗಿದ್ದಾರೆ. ಅಂದರೆ, ಮಾಸಿಕ ರೂ. 20,000ರಿಂದ ರೂ. 1,00,000ವರೆಗಿನ ವರಮಾನದವರು ಮಧ್ಯಮ ವರ್ಗದವರು. 1991ರಲ್ಲಿ 2 ಕೋಟಿಯಿದ್ದ ಮಧ್ಯಮ ವರ್ಗ 2011ರಲ್ಲಿ 16 ಕೋಟಿಯಾಗಿದ್ದು, 2015ರ ವೇಳೆಗೆ 30 ಕೋಟಿಯಾಗಲಿದೆ. ಇದರಲ್ಲಿ ರೂ. 2000ಗೂ ಹೆಚ್ಚು ವರಮಾನದ ಸುಮಾರು 10 ಕೋಟಿ ರೈತರನ್ನು ಸೇರಿಸಿಲ್ಲ. ದಿನಕ್ಕೆ ರೂ. 700 ವರಮಾನ ಇರದಿದ್ದರೆ, ನಗರಗಳಲ್ಲಿ ಬದುಕುವುದು ಅಸಾಧ್ಯವಾಗಿರುವಾಗ ಸಣ್ಣ ವ್ಯಾಪಾರಿಗಳು, ಡ್ರೈವರ್, ಬಡಗಿ, ಪ್ಲಂಬರ್‌ಗಳಂತವರನ್ನೂ ಸೇರಿಸಿದರೆ 2011ರಲ್ಲಿ ಮಧ್ಯಮ ವರ್ಗದ ಸಂಖ್ಯೆ 30 ಕೋಟಿಗೂ ಮೀರುತ್ತದೆ. 2015ರ ವೇಳೆಗೆ ಮಧ್ಯಮ ವರ್ಗ 40 ಕೋಟಿ ದಾಟುತ್ತದೆ. ರಾಜಧಾನಿಗಳಿಗಷ್ಟೇ ಸೀಮಿತವಾಗಿದ್ದ, ಈ ವಾಮನ ಈಗ ಜಿಲ್ಲಾ ಕೇಂದ್ರದಿಂದಾಚೆ ಸಾಗಿ ತಾಲ್ಲೂಕು ಮಟ್ಟ ಮಟ್ಟಿದ್ದಾನೆ. ಮನೆ. ಕಾರು-ವಾಹನ, ಎಲೆಕ್ಟ್ರಾನಿಕ್ಸ್ ಉಪಕರಣ, ಇನ್‌ಸೂರೆನ್ಸ್, ಕೇಬಲ್ ಟಿವಿ- ಈ ಮಾಸಿಕ ಕಂತುಗಾರರೆಲ್ಲರೂ ಈಗ ಈ ವಾಮನ ಸೇನೆಯಲ್ಲಿದ್ದಾರೆ. ಸಿಗುತ್ತಿರುವ ಇಂಜನಿಯರಿಂಗ್, ಬ್ಯಾಂಕಿಂಗ್, ವೈದ್ಯಕೀಯ ಶಿಕ್ಷಣ, ಉದಾರೀಕರಣದಿಂದಾಗಿ ಪ್ರತಿ ತಾಲ್ಲೂಕಿನಿಂದಲೂ 500-600 ಮಂದಿ ನಗರಗಳಲ್ಲಿ ಕೆಲಸಕ್ಕಿರುವುದರಿಂದ, ಇವರ ಹಳ್ಳಿಗಳ ಕುಟುಂಬವೂ ಮಧ್ಯಮ ವರ್ಗವಾಗಿದೆ. ಜೊತೆಗೆ ಮೊಬೈಲು, ಕೇಬಲ್ ಟಿವಿ, ಪತ್ರಿಕೆಗಳೂ ಇವರ ಸಂಖ್ಯೆಗೆ ಅನುವು ಮಾಡಿದೆ. ಇನ್ನು ಮಧ್ಯಮ ವರ್ಗ ಈ ದೇಶದ ಎಲ್ಲ ಚಟುವಟಿಕೆಗಳ ಬಹು ದೊಡ್ಡ ಶಕ್ತಿಯಾಗಿ ಬೆಳೆಯುತ್ತಿದೆ.

ಈಗ ಮಧ್ಯಮ ವರ್ಗ ಬೆಚ್ಚಿ ಬಿದ್ದು ಎಚ್ಚೆತ್ತಿದೆ. 1970ರ ದಶಕದ ವೋಟ್ ಬ್ಯಾಂಕ್ ರಾಜಕಾರಣದಿಂದ ಇವರು ರೋಸಿ ಹೋಗಿದ್ದಾರೆ. ಈಗಿನ ಜನತಂತ್ರ ವ್ಯವಸ್ಥೆ ವೋಟುಗಳಿಗಾಗಿ ಕೆಳವರ್ಗ, ನೋಟಿಗಾಗಿ ಮೇಲ್ವರ್ಗ ಸಾಕು ಎಂದು, ಮೂಲೆಗೆ ತಳಲ್ಪಟ್ಟಿರುವ ಇವರಿಗೆ ಲೋಕಪಾಲ, ಜನ-ಲೋಕಪಾಲ ಚರ್ಚೆ ಒಂದು ನೆವವಾಗಿದೆ. ತಮ್ಮನ್ನು ಕಡೆಗಾಣಿಸಿರುವ ರಾಜಕೀಯ ವ್ಯವಸ್ಥೆಯ ಬಗ್ಗೆ ಇವರ ರೋಷಕ್ಕೆ ಇದೊಂದು ಸಣ್ಣ ಸಬೂಬು. 2014ರ ಚುನಾವಣೆಯಲ್ಲಿ ಮಧ್ಯಮ ವರ್ಗದ ಪಾತ್ರ ದೊಡ್ಡದಿರುತ್ತದೆ.

> **ದಲಿತರು ಕಳೆದ 50 ವರ್ಷಗಳಲ್ಲಿ ಮೀಸಲಾತಿಯಿಂದಾಗಿ ಆರ್ಥಿಕ ಪ್ರಬಲರಾಗಿ, ಅತಿ ನಾಜೂಕು ಮಧ್ಯಮ ವರ್ಗವಾಗಿ ಗಣ ಹೋಮ, ಸತ್ಯನಾರಾಯಣ ಪೂಜೆಗಳನ್ನು ಮಾಡಿಕೊಂಡು ತುಪ್ಪದ ಸಜ್ಜಿಗೆ ತಿನ್ನುತ್ತಿದ್ದಾರೆ. ಬೇಕಾದಾಗ ಮಾತ್ರ, ತಮ್ಮ ತಾತ-ಮುತ್ತಾತಂದಿರ ಅವಮಾನಗಳ ನೆನೆದು ಕಣ್ಣೀರು ಹರಿಸುತ್ತಾರೆ.**

ಈ ಮಧ್ಯಮ ವರ್ಗದ ಹೋರಾಟವನ್ನು ಕೆಲವರು ಕಂತು ಹೋರಾಟವೆಂದೂ ನಗೆಯಾಡುತ್ತಾರೆ. ಕಾರಣ, ಬಹುತೇಕರು ತಮ್ಮ ಕೆಲಸ ಮುಗಿಸಿ ಸಂಜೆ ಸೇರುತ್ತಿದ್ದರೆ, ಮತ್ತಿಷ್ಟು ಜನ ರಜ ಹಾಕಿ ಬಂದು, ರಜಾ ಇಲ್ಲದಾಗ ಕೆಲಸಕ್ಕೆ ಹೋದರು. ಇನ್ನೂ ಮುಖ್ಯವೆಂದರೆ, ಇವರೆಲ್ಲ ಸರಕಾರ-ರಾಜ್ಯಪ್ರಭುತ್ವದ ಹಂಗಿನಲ್ಲಿಲ್ಲದಿರುವುದು.

ಈ ವಾಮನರ ಪ್ರತಿಭಟನೆ, ಸ್ವಾತಂತ್ರ್ಯೋತ್ತರ ಭಾರತದ ಅತ್ಯಂತ ವಿನೂತನ ಚಳವಳಿ. ಹಿಂಸೆ ಇಲ್ಲವೇ ಇಲ್ಲ. ಕಲ್ಲು ತೂರಾಟ, ಗಾಜು ಒಡೆಯುವುದು, ಬಸ್ ಸುಡುವುದು, ರಕ್ತ ಹರಿಸುವುದು- ಸರ್ವೇಸಾಮಾನ್ಯವಾಗಿರುವ ಇವಿಲ್ಲದೆ ಪ್ರತಿಭಟನೆ-ಚಳವಳಿಗಳನ್ನು ಊಹಿಸುವುದೇ ಅಸಾಧ್ಯವಾದ ಈ ಸ್ಥಿತಿಯಲ್ಲಿ, ಈ ಚಳವಳಿ ನಿಜ ಅರ್ಥದಲ್ಲಿ ಅಹಿಂಸಾತ್ಮಕವಾಗಿತ್ತು. ಸಾಮಾನ್ಯವಾಗಿ ಹೆಂಗಸರು-ಮಕ್ಕಳನ್ನು ತಮ್ಮ ಜೊತೆಯಲ್ಲಿ ಕರೆತಂದಿದ್ದು, ಪುಟ್ಟ ಮಕ್ಕಳನ್ನು ಈ ಚಳವಳಿಯಲ್ಲಿ ತೊಡಗಿಸಿದ್ದು ದಲಿತರಿಗೆ ಅದು ಕ್ಯಾಂಡಲ್ ಲೈಟ್ ಡಿನ್ನರ್‌ನ ಇನ್ನೊಂದು ಭಾಗ ಎನಿಸಿದರೆ ಆಶ್ಚರ್ಯವೇನಿಲ್ಲ.

ಜಾತಿ, ವರ್ಗ, ಧರ್ಮಗಳಿಂದಾಚೆ ನಿಲ್ಲಲು ಪ್ರಯತ್ನಿಸುತ್ತಿರುವ ಈ ಮಧ್ಯಮರ ಸಂಪರ್ಕ ಮಾಧ್ಯಮ ಸಹ ನಿಘೂಡ. ನಮ್ಮ ಕಾಲದ ಪೋಸ್ಟರುಗಳು. ಗೋಡೆ ಬರೆಹ, ಬಟ್ಟೆ ಬ್ಯಾನರುಗಳ ಜಾಗದಲ್ಲಿ ಎಸ್‌ಎಂಎಸ್, ಇಮೈಲ್, ಟ್ವೀಟರ್, ಪೇಸ್‌ಬುಕ್, ಬ್ಲಾಗ್‌ಗಳು ಬಂದಿದ್ದವು. ಎಲ್ಲರೂ ಆರೋಪಿಸುವಂತೆ 24x7 ಚಾನೆಲ್‌ಗಳು ಇವರನ್ನು ಸೃಷ್ಟಿಸಲಿಲ್ಲ. ಬದಲಾಗಿ ಇವರೇ 24x7 ಚಾನೆಲ್‌ಗಳನ್ನು ಸೃಷ್ಟಿಸಿದ್ದಾರೆ. ಬೆಂಗಳೂರಿನ ಒಂದು ಲಕ್ಷಕ್ಕೂ ಹೆಚ್ಚಿನ ಟೆಕ್ಕಿಗಳು 17 ಕಿ.ಮೀ. ಉದ್ದದ ಮಾನವ ಸರಪಳಿಯನ್ನು ಆಯೋಜಿಸಿದ್ದು ಕೇವಲ ಒಂದು ದಿನದಲ್ಲಿ ಬರೀ ಎಸ್‌ಎಂಎಸ್ ಮೂಲಕ ಟ್ವೆಂಟಿ-20 ಕ್ರಿಕೆಟ್ ಮ್ಯಾಚ್‌ನಂತಹ ಅಸಹ್ಯ ಆಟದ ಪ್ರಸಾರಕಿಂತ ಅಣ್ಣಾ ಚಳವಳಿಯ ನಿರಂತರ ಪ್ರಸಾರಗಳಲ್ಲಿ ಯಾವ ಅತಿರೇಕವೂ ಇಲ್ಲ.

ದುರಂತ ಎಂದರೆ ದಲಿತರು ಈ ಚಳವಳಿಯಲ್ಲಿ ಅಸ್ಪೃಶ್ಯರಾಗೇ ಉಳಿದರು. ಕಮ್ಯುನಿಸ್ಟರ, ಸಮಾಜವಾದಿಗಳ ಯಾವುದೇ ಟ್ರೇಡ್ ಯೂನಿಯನ್ನುಗಳು, ಸರಕಾರಿ ನೌಕರರ ಸಂಘಟನೆಗಳು ಸಹ ದೂರವಿದ್ದು, ಅಣ್ಣಾ ಚಳವಳಿ ಅವರ ವಿರುದ್ಧವೇ ಎಂಬುದನ್ನು ಸಾಧಿಸಿಬಿಟ್ಟರು.

* * * * * *

ಅಣ್ಣಾ ಹಜಾರೆಯಲ್ಲಿ ಜೆಪಿಯಷ್ಟು ಗೊಂದಲಗಳಿಲ್ಲ. ಸರಕಾರವನ್ನೇ ಉರುಳಿಸಲು ಹೊರಟ ಜೆಪಿಯಲ್ಲಿ, ಪರ್ಯಾಯ ವ್ಯವಸ್ಥೆಯ ಬಗ್ಗೆ ಸ್ಪಷ್ಟ ರೂಪವಾಗಲಿ, ನಾಯಕತ್ವ ಆಗಲಿ ಇರಲಿಲ್ಲ. ಸಿದ್ಧಾಂತಗಳಂತೂ ಜೆಪಿಗೆ ಬೇಕೇ ಇರಲಿಲ್ಲ. ಸರಕಾರ ರಚಿಸಲು ಅವಕಾಶವಾದಾಗ-ಮುದಿ ಸಂಸ್ಥಾ ಕಾಂಗ್ರೆಸ್ಸಿಗರು, ಹಿಂದೂತ್ವದ ಜನಸಂಘ, ಕರ್ಮಠ ಸ್ವತಂತ್ರ ಪಕ್ಷ, ಸದಾ ಗೊಂದಲದ ಸೋಷಲಿಸ್ಟರು ಬೇಕಾಯಿತು. ಜೆಪಿ ನೇತೃತ್ವದ ಸರಕಾರ 18 ತಿಂಗಳು ಬದುಕಿದ್ದೂ ಹೆಚ್ಚೇ.

ಅಣ್ಣಾ ಚಳವಳಿ ಒಂದು ಕಾಯ್ದೆಯ ಅನುಷ್ಠಾನಕ್ಕಾಗಿ ಮಾತ್ರ ಭ್ರಷ್ಟಾಚಾರ ವಿರೋಧಿ ಚಳವಳಿ ಎಂಬುದು ಅದಕ್ಕೆ ಒಂದು ಹೆಸರೇ ಹೊರತು, ಮತ್ಯಾವ ಪ್ರಾಮುಖ್ಯತೆಯೂ ಇಲ್ಲ. ಅಲ್ಲಿ ಭ್ರಷ್ಟಾಚಾರವನ್ನು ಲಂಚ ಎಂದು ಓದಿಕೊಳ್ಳಬಹುದು ಅದು ಸರಕಾರಿ ವಲಯಕ್ಕೆ ಮಾತ್ರ ಸೀಮಿತ.

1979ರ ಭ್ರಷ್ಟಾಚಾರ ವಿರೋಧ ಕಾಯ್ದೆಯಲ್ಲಿ ಅನೇಕ ನ್ಯೂನತೆಗಳು, ಮಿತಿಗಳಿವೆ. ಕಳೆದ 30 ವರ್ಷಗಳಲ್ಲಿ ಅದರ ಪರಿಣಾಮ ಶೂನ್ಯ. ಈ ಕಾಯ್ದೆಯಿಂದ ಶಿಕ್ಷೆಗೊಳಗಾದವರು ಸಣ್ಣ ಪುಟ್ಟ ನೌಕರರೇ ಹೊರತು, ಹಿರಿಯ ಅಧಿಕಾರಿಗಳಲ್ಲ. ಅವರನ್ನು ತುಂಬ ಜಾಣತನದಿಂದ ಹೊರಗಿಡಲಾಗಿದೆ. ಹೀಗಾಗಿ ಆ ಜಾಗದಲ್ಲಿ ಇನ್ನೂ ವಿಸ್ತಾರವಾದ, ಪರಿಣಾಮಕಾರಿ ಕಾಯ್ದೆ ಬೇಕಿದೆ. ಅದೇ ಜನ ಲೋಕಪಾಲ ಎಂಬುದಷ್ಟೇ ಅಣ್ಣಾ ಚಳವಳಿ.

ಈ ಲೋಕಪಾಲದಿಂದ ಲಂಚ ಸಂಪೂರ್ಣವಾಗಿ ಅಳಿಸಿ ಹೋಗುತ್ತದೆ ಎಂಬ ಭ್ರಮೆ ಅಣ್ಣಾ ತಂಡದ ಯಾರಿಗೂ ಇಲ್ಲ. ಸದ್ಯಕ್ಕೆ ಇದು ಬರಲಿ. ಇದು ಸರಿ ಹೋಗದಿದ್ದರೆ, ಮತ್ತೊಂದನ್ನು ಹುಡಕಬಹುದು. ಉದಾಹರಿಸಬಹುದಾದರೆ ಚೀನಾದಲ್ಲಿ ಕಳೆದ 10 ವರ್ಷಗಳಲ್ಲಿ ಸಾವಿರಾರು ಅಧಿಕಾರಿಗಳನ್ನೂ, ನೂರಾರು ನ್ಯಾಯಾಧೀಶರನ್ನೂ ಲಂಚದ ಆರೋಪದ ಮೇಲೆ ಜೈಲಿಗೆ ಹಾಕಿದ್ದಾರೆ. ಕೆಲವರನ್ನು ಗಲ್ಲಿಗೂ ಏರಿಸಿದ್ದಾರೆ. ಆದರೂ ಅದು ಸಂಪೂರ್ಣ ಲಂಚ ಮುಕ್ತವಾಗಿಲ್ಲ. ಜಮೀನುದಾರಿ ಪದ್ಧತಿಯಿಂದ ಈಗತಾನೆ ಆಚೆ ಬರುತ್ತಿರುವ ನಮಗೆ, ಲಂಚ ಮುಕ್ತ ಸಮಾಜಕ್ಕೆ ಇನ್ನೂ ಅನೇಕ ತಯಾರಿಗಳು. ಶಿಸ್ತು, ನಂಬಿಕೆಗಳು ಬೇಕು. ಅದಕ್ಕೆ ತಕ್ಕ ಕಾಲವೂ ಬೇಕು.

ಹಾಗಂತ ಸುಮ್ಮನೆ ಕುಳಿತುಕೊಳ್ಳಬೇಕೆ? ನಿತೀಶ್ ಕುಮಾರ್ ಬಿಹಾರದಲ್ಲಿ ಆರಂಭಿಸಿರುವುದು ಅನೇಕ ರಾಜ್ಯಕ್ಕೆ ಹರಡಿದೆ. ಮಹಾರಾಷ್ಟ್ರ ಸಹ ಅದನ್ನೇ ಅನುಸರಿಸಲಿದೆ. ಲೋಕಪಾಲದ ಉದ್ದೇಶ ಇಷ್ಟೇ.

ಭ್ರಷ್ಟ ರಾಜಕಾರಣ, ಅಧಿಕಾರಶಾಹಿಗಳು ಸಯಾಮಿ ಅವಳಿಗಳು. ಲೋಕಪಾಲ 40 ವರ್ಷವಾದರೂ ಬರಲಿಲ್ಲ. ಆದ್ದರಿಂದ ಜನಲೋಕಪಾಲದ ನಂತರ ಮುಂದಿನ ಹೋರಾಟ ಚುನಾವಣೆ ಸುಧಾರಣೆಗಳಿಗಾಗಿ, ಎಂದು ಅಣ್ಣಾ ಹೇಳಿದ್ದಾರೆ. ಈಗಿನ ಚುನಾವಣೆಗಳು ಪ್ರಜಾಸತ್ತೆಯ

(25ನೇ ಪುಟಕ್ಕೆ)

ಆದದ್ದೆಲ್ಲಾ ಒಳಿತೇ ಆಯಿತು

ಡಾ॥ ತುಮಕೂರು ಚಂದ್ರಕಾಂತ

ಕರ್ನಾಟಕದಲ್ಲಿ ನಡೆಯುತ್ತಿರುವ ರಾಜಕೀಯ ವಿದ್ಯಮಾನಗಳು ಎಂತಹ ನಿರಾಸಕ್ತರನ್ನೂ ಬಡಿದೆಬ್ಬಿಸಿವೆ. ಯಾವ ರಾಜಕೀಯ ನಿಲುವನ್ನು ತಾಳದೆ, ಅತ್ಯಂತ ಸಿನಿಕತನದಿಂದಲೂ ಒಂದು ರೀತಿಯ ಸಾಮಾಜಿಕ ಬೇಜವಾಬ್ದಾರಿಯಿಂದಲೂ ತೆವಳುತ್ತಿದ್ದ ಮದ್ಯಮವರ್ಗವನ್ನು ಚುಚ್ಚಿ-ಚುಚ್ಚಿ ಎಚ್ಚರಗೊಳಿಸಿ ಪ್ರಜಾತಂತ್ರದಲ್ಲಿ ಸುಮ್ಮನಿರುವುದು ಒಂದು ಘೋರ ಅಪರಾಧ ಎಂಬ ಬಾವನೆಯನ್ನು ಸ್ವಲ್ಪಮಟ್ಟಿಗಾದರೂ ಮೂಡಿಸಿ ತಮ್ಮ ತಮ್ಮಲೇ ಒಂದಿಷ್ಟು ಸೀರಿಯಸ್ ಆದ ಚರ್ಚೆಗೆ ದಾರಿ ಮಾಡಿಕೊಟ್ಟಿದೆ. ಸ್ವಾವಲಂಬನೆ, ದೇಶ ಪ್ರೇಮ, ನಿಸ್ವಾರ್ಥ ಸೇವೆ ಮೊದಲಾದ ಅಮೂಲ್ಯವಾದ ಪದಗಳಿಂದಲೂ, ಗುಜರಾತ್ ಮಾದರಿ ಅಭಿವೃದ್ಧಿ ಮುಖಾಂತರ ರಾಮರಾಜ್ಯದ ಪ್ರತಿಷ್ಠಾಪನೆ ಮುಂತಾದ ಮಂತ್ರಗಳಿಂದಲೂ, ತಾವು ಇತರೆ ರಾಜಕೀಯ ಪಕ್ಷಗಳಿಗಿಂತ ಭಿನ್ನ ಎಂಬ ಮಿರಿಮಿರಿ ಮಿಂಚುವ ಪೋಷಾಕಿನಿಂದಲೂ ಕಂಗೊಳಿಸುತ್ತಿದ್ದ ಭಾರತೀಯ ಜನತಾ ಪಕ್ಷದ ಸರ್ಕಾರ ಯಡಿಯೂರಪ್ಪನವರ ನೇತೃತ್ವದಲ್ಲಿ ಸಾಕಷ್ಟು ಕೆಸರು, ಮಸಿ, ಹೊಲಸು ಇತ್ಯಾದಿಗಳನ್ನು ಮೆತ್ತಿಕೊಂಡು ಅತಿ ವಿಶಿಷ್ಟವಾಗಿ ಎಲ್ಲರ ಮುಂದೆ ಬೆತ್ತಲಾಗಿದ್ದೆ ಅಲ್ಲದೇ ಈ ಹಿಂದೆ ಭೂತ-ಬೇತಾಳಗಳಂತೆ ಕಾಡಿವೆ ಎಂದು ಬಾಜಪದವರು ದೂರುತ್ತಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ನೇತೃತ್ವದ ಸರ್ಕಾರಗಳೇ ಲೇಸೆಂದು ಜನ ಸಾಮಾನ್ಯರಿಗೆ ಅನ್ನಿಸತೊಡಗಿದೆ. ಕಾರಣಗಳು ಸ್ಪಟಿಕದಷ್ಟು ಸ್ಪಷ್ಟವಾಗಿವೆ.

ಯಡಿಯೂರಪ್ಪನವರು ಮತ್ತು ಅವರ ಮಂತ್ರಿ ಮಂಡಲದ ಅನೇಕ ಸಚಿವರು ಅತ್ಯಂತ ಕೀಳುಮಟ್ಟದಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಧಿಕಾರದ ದುರುಪಯೋಗ ಮುಂತಾದ ಅಪರಾಧಗಳನ್ನು ಮಾಡಿ ಅವುಗಳು ಒಂದೊಂದಾಗಿ ಹೊರ ಬರುತ್ತಿದ್ದಂತೆ ಅವರುಗಳು ನಡೆದುಕೊಂಡ ರೀತಿ ಮತ್ತು ಕೊಡುತ್ತಿದ್ದ ಸಮಜಾಯಿಶಿ ನಿಜಕ್ಕೂ ಅತ್ಯಂತ ನಾಚಿಕೆಗೇಡು. ಬಂದ ಆಪಾದನೆಗಳನ್ನು ಎದುರಿಸಲು ಮತ್ತು ಮಾಡಿದ ತಪ್ಪುಗಳನ್ನು ಮುಚ್ಚಲು ಇವರುಗಳು ಉಪಯೋಗಿಸುತ್ತಿರುವ "ಬುದ್ಧಿವಂತಿಕೆಯ" ಮಾತುಗಳು ಅನೇಕವೇಳೆ ಬಾಲಿಶವಾಗಿಯೂ, ಅತಾರ್ಕಿಕವಾಗಿಯೂ ಮತ್ತು ಅಸಹ್ಯಕರವಾಗಿಯೂ ಕಂಡು, ಒಬ್ಬ ಸಾಮಾನ್ಯರಲ್ಲಿ ಸಾಮಾನ್ಯನಿಗೂ "ಇವರೆಲ್ಲಾ ನಮ್ಮನ್ನು ಏನೆಂದು ತಿಳಿದಿದ್ದಾರೆ?" ಎನ್ನುವ ಪ್ರಶ್ನೆ ಮೂಡಿದೆ. ಅದೂ ಅಲ್ಲದೆ ತನ್ನನ್ನು ಮೂರ್ಖರಲ್ಲಿ ಮೂರ್ಖ ಎಂದು ಪರಿಗಣಿಸಿರುವ ಇವರ ಬಗ್ಗೆ ಅಗಾಧ ಕೋಪ ಉಂಟುಮಾಡಿದೆ. ನೈತಿಕತೆ ಬಗ್ಗೆ ಅತ್ಯಂತ ದೊಡ್ಡ ದನಿಯಲ್ಲಿ ಮಾತನಾಡುತ್ತಾ ನೈತಿಕತೆಯೇ ತಮ್ಮ ಜೀವವೆಂದು ಬೀಗುತ್ತಿದ್ದ ಬಾ.ಜ.ಪ ಕರ್ನಾಟದಲ್ಲಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೊಸ್ಕರ (ದೇಶ ಸೇವೆಗೋಸ್ಕರ?) "ಅಪರೇಶನ್ ಕಮಲ" ಎಂಬ ಭೀಕರ ಪ್ರಜಾತಾಂತ್ರಿಕ ವಿರೋಧಿ ಅಸ್ತ್ರವನ್ನು ಯಾವುದೇ ಎಗ್ಗಿಲ್ಲದೇ ಬಳಸಿ ತನ್ನ ಅನುದಿನದ ಸಮರ್ಥಕರನ್ನೂ ಬೆಚ್ಚಿ ಬೀಳಿಸಿದ್ದು ನಿಜ. ಇದಕ್ಕೆ ಆಗ ರಾಜಾಧ್ಯಕ್ಷರಾಗಿದ್ದ ಸದಾನಂದಗೌಡರು ಕೊಟ್ಟ ಉತ್ತರ, "ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳಲ್ಲಿ ಬೇಸತ್ತು ನಮ್ಮ ಬಿಜೆಪಿ ಕಾರ್ಯಕ್ರಮಗಳಿಗೆ ಮನಸೋತು ಬರುತ್ತಿರುವ ರಾಜ್ಯಪರ ಕಾಳಜಿ ಉಳ್ಳ ಶಾಸಕರನ್ನು ಬರಮಾಡಿಕೊಂಡರೆ ತಪ್ಪೇನು? ಇದು ಯಾವ ರೀತಿಯಲ್ಲೂ ಕಾನೂನು ವಿರೋಧಿ ಅಲ್ಲ" ಎಂದು.

ಶ್ರೀ ಯಡಿಯೂರಪ್ಪನವರು ತಮ್ಮ ಮೇಲಿದ್ದ (ಜೆಡಿಎಸ್‌ನಿಂದ ಮೋಸ ಹೋದ ಮುಗ್ಧ ಮಾನವ!) ಅನುಕಂಪದೊಂದಿಗೆ ತಮ್ಮ ಜನಾಂಗದ ಮಠಾಧೀಶರ ಕೃಪಾಶೀರ್ವಾದವನ್ನು ಬಳಸಿ ಬಹುಶಃ ಬಾಜಪದ ಹೈಕಮಾಂಡ್ ಕೂಡಾ ಅಚ್ಚರಿಗೊಳ್ಳುವ ಫಲಿತಾಂಶವನ್ನು ತಂದು ಅದರ ಮುಖಾಂತರ "ತಾವು ಮಾವುತನಿಗೆ ಮಣಿಯಲಾರದ ಆನೆ" ಎಂದು ತೋರಿಸಿದರು. ಅಲ್ಲಿಂದಾಚೆಗೆ ಪ್ರಾರಂಭವಾದದ್ದು ಕರ್ನಾಟಕದ ಜನತೆಯ ದುರಾದೃಷ್ಟ ಹಾಗೂ ಬಾಜಪದ ಹೈಕಮಾಂಡಿನ ಅಪ್ರಸ್ತುತತೆ. ತಮ್ಮ ಮಂತ್ರಿ ಮಂಡಲದಲ್ಲಿ "ಹೊಸಬರು" ಪಡೆದುಕೊಂಡ ಸವಲತ್ತುಗಳು ನಿಷ್ಠಾವಂತರನ್ನು ಕೆರಳಿಸಿದರೆ ಅದೇ ಮಂತ್ರಿ ಮಂಡಲದಲ್ಲಿ ಅಸಮಾನ್ಯ ಕಾರಣಗಳಿಂದ ಕು॥ ಶೋಬಾ ಕರಂದ್ಲಾಜೆಯವರು ಏಕೈಕ ಮಹಿಳಾ ಅಭ್ಯರ್ಥಿಯಾಗಿ ನಿಯೋಜಿಸಲ್ಪಟ್ಟದ್ದು ಅನೇಕ ಅನೂಹ್ಯ ಕಂಪನಗಳಿಗೆ ಕಾರಣವಾಯಿತು. ಇದು ಮುಂದುವರೆದು ತಮ್ಮ ಪುತ್ರ ಶ್ರೀ ರಾಘವೇಂದ್ರನನ್ನು ಲೋಕಸಭಾ ಸದಸ್ಯನನ್ನಾಗಿ ಮಾಡಲೇ ಬೇಕಾದ ಅನಿವಾರ್ಯತೆಗೆ ಸಿಲುಕಿದರು. ಆಗತಾನೇ ನಂಜನಗೂಡು ನಂಜುಂಡೇಶ್ವರನ ಮೇಲಾಣೆ ಇಟ್ಟು ಕೌಟುಂಬಿಕ ರಾಜಕಾರಣಕ್ಕೆಡೆ ಮಾಡುವುದಿಲ್ಲ ಎಂದಿದ್ದ ಯಡಿಯೂರಪ್ಪನವರು ತದ್ವಿರುದ್ಧ ಮಾರ್ಗಹಿಡಿದು ರಾಘವೇಂದ್ರನ ಆಯ್ಕೆ ಪಕ್ಷದ ಮುಖಂಡರಿಗೆ ಬಿಟ್ಟ ವಿಚಾರ. ಇದರಲ್ಲಿ ನನ್ನ ಪಾತ್ರವೇನೂ ಇಲ್ಲ ಎಂದರು. ತದನಂತರ ಅವರು ಅನೇಕಬಾರಿ ನಂಜುಂಡೇಶ್ವರನ ದರ್ಶನ ಪಡೆದ್ದು ನಿಜ. ಆದರೆ ಅವರು ತಮ್ಮ ಆಣೆ ಪ್ರಮಾಣದ ಕೇಸನ್ನು ಯಾವ "ತಾಂತ್ರಿಕ" ಕಾರಣ ಕೊಟ್ಟು ಗೆದ್ದರೋ ತಿಳಿಯದಾಯಿತು. ಇರಲಿ, ಅಲ್ಲಿಂದಾಚೆಗೆ ಅವರು ತಮ್ಮ ಪುತ್ರದ್ವಯರ ಹಾಗೂ ಇತರೆ ಹತ್ತಿರದ ಸಂಬಂಧಿಗಳ ಕಡೆಯಿಂದ ಬರುತ್ತಿದ್ದ ಅನೇಕ ರೀತಿಯ ದುರ್ವಾಸನೆಯನ್ನೂ ಸಾಮಾನ್ಯವಾಗಿ, ಇದೆಲ್ಲಾ ವಿರೋಧ ಪಕ್ಷಗಳ ತಿಪ್ಪೆ ಗುಂಡಿಯಿಂದಲೂ ಕೆಲವು ಅತೃಪ್ತರ ಕೋಣೆ ಮನೆಯಿಂದಲೂ ಬರುತ್ತಿದೆ ಎಂದು ಉಡಾಫೆ ಹೊಡೆಯುತ್ತಿದ್ದರು. ನಂತರ ಅದು ತಮ್ಮ ಮನೆಯಿಂದಲೇ ಬರುತ್ತಿರುವ ದುರ್ನಾತ ಎಂದು ತೋರಿಸಿದಾಗ ಹೇಳಿದರು "ಇದೆಲ್ಲಾ ಕಚಡಾ, ಕಾಂಗ್ರೆಸ್ ಮತ್ತು ಜೆಡಿಎಸ್‌ನವರು ನಮ್ಮ ಮನೆಗೆ ತಂದು ಸುರಿದಿದ್ದಾರೆ."

ಕರ್ನಾಟಕದ ಸೌಭಾಗ್ಯ ಎಂದರೆ ಇಲ್ಲಿನ ಲೋಕಾಯುಕ್ತ ಶ್ರೀ ಸಂತೋಷ ಹೆಗ್ಡೆ, ವಿರೋಧ ಪಕ್ಷಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿರುವ(?) ರಾಜ್ಯಪಾಲರಾದ ಮಾನ್ಯ ಭಾರದ್ವಾಜ್‌ರವರು, ಭಾರಿ ಸಾಮಾಜಿಕ ಕಾಳಜಿಯ ವಕೀಲರಾದ ಸಿರಾಜಿನ್‌ಪಾಷ ಮತ್ತು ಬಾಲ ರಾಜ್ ಮುಂತಾದವರು. ಇವರುಗಳ ಸಕ್ರಿಯ ಪ್ರಯತ್ನದ ಫಲವೇ ಯಡಿಯೂರಪ್ಪನವರ ರಾಜಿನಾಮೆ ಪ್ರಹಸನ. ಇದನ್ನು ಪ್ರಹಸನ ಎಂದು ಕರೆಯಲೇ ಬೇಕಾದ್ದಕ್ಕೆ ಅನೇಕ ಕಾರಣಗಳಿವೆ. ಈ ಪ್ರಹಸನ ಮುಂಖಾತರ ಕರ್ನಾಟಕದ ಜನತೆ ಈ "ಬುದ್ಧಿವಂತ" ಜನರ ಬೆತ್ತಲನ್ನು ಪರಿಪೂರ್ಣವಾಗಿ ಕಂಡು ಇವರ ಬಗ್ಗೆ ಇದ್ದ ಆದರಾಭಿಮಾನಗಳು ಪ್ರಶ್ನಾರ್ಹವಾದವು. ಹಾಗಾಗಿ ಈ ಪ್ರಸಂಗವು ಕರ್ನಾಟಕದ ಜನತೆಗೆ ಒಂದುರೀತಿಯ ವರಪ್ರಸಾದವಾಯಿತು. ವಿರೋಧ ಪಕ್ಷಗಳ ನ್ನೊಳಗೊಂಡಂತೆ ಎಲ್ಲಾ ಧುರೀಣರ ಮತ್ತು ಅವರ ಬೆಂಬಲಿಗರ ಸಂಪೂರ್ಣ ಪರಿಚಯ ಪಡೆದು ಕರ್ನಾಟಕದ ಜನತೆ ಧನ್ಯವಾದದ್ದೇ ಅಲ್ಲದೆ ಮುಂಬರಲಿರುವ ಚುನಾವಣೆ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವಂತಾಯಿತು.

ದಕ್ಷಿಣ ಆಫ್ರಿಕಾದ ಒಂದು ಕಥೆಯಲ್ಲಿ ಬರುವ ಪ್ರಸಂಗ ಈ ಸಂದರ್ಭಕ್ಕೆ ಹೊಂದುತ್ತದೆ. ಅಲ್ಲಿನ ಒಂದು ಬಹು ಪ್ರಸಿದ್ಧ ವೈದ್ಯಕೀಯ ಕಾಲೇಜಿನ ಮಾನವ ಅಂಗಶಾಸ್ತ್ರದ ಪ್ರೊಫೆಸರ್ ಒಬ್ಬರು ಪಾದ್ರಿ ಒಂದು ದಿನ ಒಂದು ಭೀಕರ ಅಪಘಾತದಲ್ಲಿ ಒಂದೇ ಕುಟುಂಬದ ಎಲ್ಲರೂ ಸತ್ತು ಹೋಗಿರುತ್ತಾರೆ. ಅವರು ಹೆಣಗಳ ಅಂತ್ಯಸಂಸ್ಕಾರ ಮಾಡಲು ಯಾರೂ ಮುಂದೆ ಬರುವುದಿಲ್ಲ. ಅಷ್ಟೂ ಹೆಣಗಳನ್ನು ಆ ಕಾಲೇಜಿಗೆ ಅಂಗಶಾಸ್ತ್ರದ ಅಧ್ಯಯನಕ್ಕೆ ಕೊಡಲಾಗುತ್ತದೆ ಆಗ ಆ ಪಾದ್ರಿ ಮತ್ತು ಪ್ರೊಫೆಸರ್ ಆಗಿದ್ದ ಆ ವ್ಯಕ್ತಿ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ಒಬ್ಬ ಪಾದ್ರಿಯಾಗಿ ಈ ದುರಂತ ಅತ್ಯಂತ ನೋವಿನ ಸಂಗತಿಯಾಗಿ ತೋರು

ಕರ್ನಾಟಕದ ಸೌಭಾಗ್ಯ ಎಂದರೆ ಇಲ್ಲಿನ ಲೋಕಾಯುಕ್ತ ಶ್ರೀ ಸಂತೋಷ ಹೆಗ್ಡೆ, ವಿರೋಧ ಪಕ್ಷಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿರುವ(?) ರಾಜ್ಯಪಾಲರಾದ ಮಾನ್ಯ ಭಾರದ್ವಾಜ್‌ರವರು, ಭಾರಿ ಸಾಮಾಜಿಕ ಕಾಳಜಿಯ ವಕೀಲರಾದ ಸಿರಾಜಿನ್‌ಪಾಷ ಮತ್ತು ಬಾಲ ರಾಜ್ ಮುಂತಾದವರು. ಇವರುಗಳ ಸಕ್ರಿಯ ಪ್ರಯತ್ನದ ಫಲವೇ ಯಡಿಯೂರಪ್ಪನವರ ರಾಜಿನಾಮೆ ಪ್ರಹಸನ. ಇದನ್ನು ಪ್ರಹಸನ ಎಂದು ಕರೆಯಲೇ ಬೇಕಾದ್ದಕ್ಕೆ ಅನೇಕ ಕಾರಣಗಳಿವೆ. ಈ ಪ್ರಹಸನ ಮುಂಖಾತರ ಕರ್ನಾಟಕದ ಜನತೆ ಈ "ಬುದ್ಧಿವಂತ" ಜನರ ಬೆತ್ತಲನ್ನು ಪರಿಪೂರ್ಣವಾಗಿ ಕಂಡು ಇವರ ಬಗ್ಗೆ ಇದ್ದ ಆದರಾಭಿಮಾನಗಳು ಪ್ರಶ್ನಾರ್ಹವಾದವು.

ತ್ತದೆ. ಸತ್ತ ಎಲ್ಲರ ಆತ್ಮಕ್ಕೂ ಶಾಂತಿಸಿಗಲಿ. ಒಬ್ಬ ಮಾನವ ಅಂಗಶಾಸ್ತ್ರದ ಪ್ರೊಫೆಸರ್ ಆಗಿ ನಾನು ಇದನ್ನು ಒಂದು ಅಮೂಲ್ಯ ಅವಕಾಶದಂತೆ ಕಾಣುತ್ತೇನೆ. ಇಲ್ಲಿ ಸತ್ತಿರುವವರಲ್ಲಿ ಹೆಣ್ಣು-ಗಂಡು ಇದ್ದಾರೆ ಮತ್ತು ಎಲ್ಲಾ ವಯಸ್ಸಿನವರೂ ಇದ್ದಾರೆ. ಇದು ಅಂಗಶಾಸ್ತ್ರ ಕಲಿಯಲು ನಮ್ಮ ಮುಂದಿರುವ ಅತ್ಯಂತ ವಿಶಿಷ್ಟ ಸುಸಂದರ್ಭವಾಗಿದೆ." ಈ ಪ್ರಕರಣದಿಂದ ಅಲ್ಲಿನ ವಿದ್ಯಾರ್ಥಿಗಳು ಅಂಗಶಾಸ್ತ್ರದಲ್ಲಿ ಅತ್ಯುತ್ತಮ ಪರಿಣಿತಿಯನ್ನು ಪಡೆದು ಶ್ರೇಷ್ಠ ವೈದ್ಯರಾಗುತ್ತಾರೆ. ಕರ್ನಾಟಕದ ಜನತೆಗೂ ಈ ಸುಸಂದರ್ಭ ಬಂದಿದೆ. ಅಧಿಕಾರದಲ್ಲಿದ್ದ ಅನೇಕರ ದೆಸೆಯಿಂದ ಆದ ಈ ರಾಜಕೀಯ ಅಪಘಾತದಲ್ಲಿ ಕಾನೂನು ಪಾಲನೆ, ಸಾಂವಿಧಾನಿಕ ಔಚಿತ್ಯ, ಪ್ರಾಮಾಣಿಕತೆ, ನೈತಿಕತೆ ಮುಂತಾದವುಗಳೆಲ್ಲಾ ಸತ್ತು ಬಿದ್ದಿವೆ. ಇವುಗಳು ನಡೆದ ಘಟನೆ ಮತ್ತು ಹಿನ್ನೆಲೆಗಳನ್ನು ಛೇದಮಾಡಿ ತೋರಿಸಲು ಸಂತೋಷ್ ಹೆಗ್ಡೆ, ಮಾನ್ಯ ಭಾರದ್ವಾಜ್ ಸಿರಾಜಿನ್, ಬಾಲರಾಜ್, ಲೋಕಾಯುಕ್ತ ಕೋರ್ಟ್ ಮತ್ತು ಮಾಧ್ಯಮಗಳು ಸಿದ್ಧವಾಗಿ ನಿಂತಿವೆ. ನಾವೆಲ್ಲಾ ಆಸಕ್ತಿಯಿಂದಲೂ ಜವಾಬ್ದಾರಿಯಿಂದಲೂ ಗಮನಿಸಬೇಕಾದದ್ದು ಮಾತ್ರ ಬಾಕಿ ಇದೆ.

ಯಡಿಯೂರಪ್ಪನವರ ಮೇಲೆ ಬಾರಿಬಾರಿ ಬರುತ್ತಿದ್ದ ಆರೋಪಗಳನ್ನು ಗಮನಿಸಿ. ತಮ್ಮ ಮಗನಿಗೆ ಜಿ ಕೆಟಗರಿಯಲ್ಲಿ ಬಿಡಿಎ ನಿವೇಶನ ಕೊಟ್ಟಿದ್ದನ್ನು ಪ್ರಶ್ನಿಸಿದಾಗ ಹೇಳಿದರು. "ಈ ರೀತಿಯ ಹಂಚಿಕೆ ಎಲ್ಲಾ ಮುಖ್ಯಮಂತ್ರಿಗಳ ಕಾಲದಲ್ಲೂ ನಡೆದಿವೆ. ಅದೂ ಅಲ್ಲದೆ ಪುತ್ರ ರಾಘವೇಂದ್ರ ತನ್ನ ನಿವೇಶನವನ್ನು ಹಿಂತಿರುಗಿಸಿ ಬಹುದೊಡ್ಡ ಮೌಲ್ಯವನ್ನು ಮೆರೆದಿದ್ದಾನೆ." ಪ್ರಾಜ್ಞರಾದ ಯಾರಿಗಾದರೂ ಕೋಪ ಬರುವುದು ಜವಾಬ್ದಾರಿಯುತ ಸ್ಥಾನದಲ್ಲಿದ್ದವರು ಕೀಳುದರ್ಜೆಯ ಸ್ವಾರ್ಥಕ್ಕಾಗಿ ತಮಗೆ ಪ್ರಜಾಸತ್ತೆಯಲ್ಲಿ ಕೊಡಲ್ಪಟ್ಟಿರುವ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಾಗ. ಈ ಕೋಪ ಮುಂದೆ ಅಸಹ್ಯವನ್ನುಂಟು ಮಾಡುವುದು. ತಮ್ಮ ತಪ್ಪುಗಳನ್ನು ಕುತರ್ಕದಿಂದ ಸಮರ್ಥಿಸಿಕೊಂಡು ಜನತೆಯನ್ನು ಮೂರ್ಖರನ್ನಾಗಿಸುವಾಗ. ಹೀಗೆ "ಅಸಹ್ಯ"ವಾಗಿ ರೂಪಾಂತರ ಹೊಂದಿದ "ಕೋಪ" ಮುಂದೆ ಅಂತಹ ವ್ಯಕ್ತಿಗಳಿಗೆ ಮತ್ತು ಪಕ್ಷಗಳಿಗೆ ದಾರುಣವಾದ ಚುನಾವಣಾ ಫಲಿತಾಂಶಗಳನ್ನು ತಂದು ಕೊಟ್ಟಿರುವುದು ನಮ್ಮ ಮುಂದಿದೆ.

ಹೀಗೆ ಕೋಪವನ್ನು ಅಸಹ್ಯವಾಗಿ ಪರಿವರ್ತಿಸಿದ ಘಟನಾವಳಿಗಳನ್ನು ನೋಡಿರಿ. ಬೇಲಿಕೇರಿ ಬಂದರಿನಲ್ಲಿ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದ್ದ ಲಕ್ಷಾಂತರ ಟನ್ ಅದಿರು ಮಾಯವಾದಾಗ ಹೇಳಿದರು "ನಾವು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ನಿಷ್ಠುರ ಕ್ರಮ ಕೈಗೊಳ್ಳುತ್ತೇವೆ." ಆದರೆ ಕ್ರಮ ಕೈಗೊಂಡದ್ದು ಈ ಪ್ರಕರಣವನ್ನು ಬಯಲಿಗೆ ತಂದ ಅಧಿಕಾರಿಯ ಮೇಲೆ. ಲೋಕಾಯುಕ್ತರ ವರದಿ ಸನಿಹವಾಗುತ್ತಿದ್ದಂತೆ ಯಡಿಯೂರಪ್ಪನವರು ಮಾರೀಷಸ್‌ಗೆ ತೆರಳಿದರು. ಹತ್ತು ಸಾವಿರ ಪುಟದಷ್ಟು ಬೃಹತ್ ವರದಿ. ಇದು ಮಾಹಿತಿ ತಂತ್ರಜ್ಞಾನ ಯುಗ. ಅನೇಕರ ನಿರೀಕ್ಷೆ ಮತ್ತು ಭಯದಂತೆ ವರದಿಯ "ಕೆಲವು ಆಯ್ದ" ಭಾಗಗಳ ಸೋರಿಕೆಯಾಯ್ತು. ಲೋಕಾಯುಕ್ತರು ತಲ್ಲಣಗೊಂಡರು. ಬಾಜಪದ ವಕ್ತಾರ ಧನಂಜಯ ಕುಮಾರ್ ಸಂತೋಷಭರಿತರಾದರು ಮತ್ತು ಹುಸಿ ಆತ್ಮವಿಶ್ವಾಸದಿಂದ ಪತ್ರಿಕಾಗೋಷ್ಠಿ ನಡೆಸಿ ಇಂತೆಂದರು "ವರದಿ ಸೋರಿಕೆಯಾಯ್ತು. ಈಗ ತನ್ನ ಪವಿತ್ರತೆಯನ್ನು ಸಂಪೂರ್ಣವಾಗಿ ಕಳೆದುಕೊಂಡುಬಿಟ್ಟಿದೆ." ಅಂದರೆ ಇದು 10



ಸಾವಿರ ಪುಟಗಳ ಕಸ ಎನ್ನುವಂತೆ ಮಾತನಾಡಿದರು. ಜನತೆಗೆ ಮತ್ತು ಕಾನೂನಿಗೆ ಈ ರೀತಿಯ "ಪೌರಾಣಿಕ ಪವಿತ್ರತೆ" ಬೇಕಾಗಿರಲಿಲ್ಲ ಎನ್ನುವುದು ಬೇರೆ ಮಾತು. ಯಡಿಯೂರಪ್ಪನವರು ಕೂಡಲೇ ರಾಜಿನಾಮೆ ನೀಡಬೇಕೆಂದು ಬಾಜಪದ ಹೈಕಮಾಂಡ್ ಫರ್ಮಾನು ಹೊರಡಿಸಿದ ಮೇಲೆ ಯಡಿಯೂರಪ್ಪನವರೆಂದರು "ನನಗೆ ಇನ್ನೂ ನಾಲ್ಕು ದಿನ ಕಾಲಾವಕಾಶ ಬೇಕು. ಅಮಾವಾಸ್ಯೆ ಕಳೆದ ನಂತರ ರಾಜೀನಾಮೆ ಕೊಡುತ್ತೇನೆ. ಏಕೆಂದರೆ ನಾನು ಯಾವುದೇ ಶುಭಕಾರ್ಯವನ್ನು ಅಮಾವಾಸ್ಯೆ ದಿನಗಳಲ್ಲಿ ಮಾಡುವುದಿಲ್ಲ." ಇದು ಯಾರ ಕಿವಿಗೆ ಚಂಡು ಹೂ ಇಡುವ ಮಾತು? ರಾಜಿನಾಮೆ ಕೊಡುವುದು ಒಂದು ಶುಭಕಾರ್ಯವೆ? ತಾವು ರಾಜಿನಾಮೆ ಕೊಡುವುದು ಕರ್ನಾಟಕದ ಮಟ್ಟಿಗೆ ಶುಭಕಾರ್ಯ ಎಂದು ತಮ್ಮ ಅಂತರಾತ್ಮಕ್ಕೆ ತಿಳಿದಿತ್ತೇ? ಈ ಪ್ರಕರಣದಿಂದ ಸ್ಫೂರ್ತಿಗೊಂಡ ಜೆಡಿಎಸ್‌ನ ಕುಮಾರಸ್ವಾಮಿಯವರು ಬಿಜೆಪಿ ಹೈಕಮಾಂಡ್‌ನ್ನು ಲೋ ಕಮಾಂಡ್ ಎಂದೂ ಕೊನೆಗೆ ನೋ ಕಮಾಂಡ್ ಎಂದೂ ಪ್ರಾಸಬದ್ಧವಾಗಿ ಹೇಳಿ ಖುಷಿಪಟ್ಟರು. ಆಗ ಹೈಕಮಾಂಡ್ ಹೇಳಿದ್ದೇನು? ನಾವು ಒಬ್ಬ ವ್ಯಕ್ತಿಯ ಧಾರ್ಮಿಕ ನಂಬಿಕೆಗಳನ್ನು ಗೌರವಿಸುತ್ತೇವೆ! ಜನತೆಗೆ ಒಂದು ಅಂಶವಂತೂ ತಿಳಿದಿತ್ತು! ಆ ನಾಲ್ಕು ದಿನಗಳು ಯಡಿಯೂರಪ್ಪನವರು ಕಾಂಗ್ರೆಸ್ ಮತ್ತು ಜೆಡಿಎಸ್ ನವರ "ಕಣ್‌ಸನ್ನೆಗಾಗಿ" ಕಾಯುತ್ತಿದ್ದಿರಬೇಕು!

ರಾಜೀನಾಮೆ ನಂತರದ ನಾಟಕವನ್ನು ನೋಡಿರಿ. ಅನೇಕ ಗುಂಪುಗಳಾಗಿ ಚದುರಿದ್ದ ಶಾಸಕರು ಕೊನೆಗೆ ಎರಡು ಗುಂಪುಗಳಾಗಿ ಧೃವೀಕರಣಗೊಳ್ಳಲು ನಾಲ್ಕು ದಿನಗಳು ಬೇಕಾಯ್ತು. ಆಗ ಪತ್ರಕರ್ತರು ಕೇಳಿದರು ಇದೇನು ಶಿಸ್ತಿನ ಪಕ್ಷವೆಂದು ತಾವುಗಳು ಪ್ರತಿಪಾದಿಸುತ್ತಿದ್ದ ತಮ್ಮಲ್ಲಿ ಇಂತಹ ಗುಂಪುಗುಳಿತನ? ಇದಕ್ಕೆ ಉತ್ತರ, ಕೋರ್ಟುಗಳಲ್ಲಿ ವಕೀಲರಿಂದ ತೀವ್ರ ತರಬೇತಿ ಹೊಂದಿದ ಸಾಕ್ಷಿದಾರರ ಉತ್ತರದಂತಿತ್ತು. "ಅವು ಗುಂಪುಗಳಲ್ಲ! ಸಮಾನಮನಸ್ಕರ ಸಮಾಲೋಚನಾ ಚಾವಡಿಗಳು. ನಮ್ಮಲ್ಲಿ ಯಾವುದೇ ಗುಂಪುಗಾರಿಕೆ ಇಲ್ಲ!"

ಮುಖ್ಯಮಂತ್ರಿಯನ್ನಾಗಿ ಯಾರನ್ನು ಮಾಡಬೇಕೆಂಬ ಒಮ್ಮತದ ನಿರ್ಧಾರ ಕೇಂದ್ರದ ವೀಕ್ಷಕರಾಗಿ ಬಂದಿದ್ದ ರಾಜನಾಥ್ ಸಿಂಗ್ ಮತ್ತು ಅರುಣ್ ಜೈಟ್ಲಿಯವರಿಂದ ಸಾಧ್ಯವಾಗದೇ ಹೋದಾಗ "ನಮ್ಮಲ್ಲಿ ದೆಹಲಿ-ಲಕೋಟೆ ರೀತಿಯ ಕಾಂಗ್ರೆಸ್ ಸಂಪ್ರದಾಯವಿಲ್ಲ. ನಾವು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಚುನಾವಣೆ ನಡೆಸುತ್ತೇವೆ" ಎಂದು ಹೇಳಿ ಚುನಾವಣೆ ನಡೆಸಿದರು. ಆದರೆ ಮತಪತ್ರದಲ್ಲಿ ಮತದಾರರ ಹೆಸರು ಮತ್ತು ಸಹಿಯನ್ನು ಕಡ್ಡಾಯಗೊಳಿಸಲಾಗಿತ್ತು. ಅಂದರೆ ಅದು ಗುಪ್ತ ಮತದಾನವಾಗಿರಲಿಲ್ಲ ಇದಕ್ಕೆ ಕಾರಣವನ್ನು ನೀಡುವ ಗೋಜಿಗೆ ಯಾರೂ ಹೋಗಲೇ ಇಲ್ಲ. ಬಾಜಪ ವರಿಷ್ಠ ವೆಂಕಯ್ಯ ನಾಯ್ಡು ಎಂದಿನಂತೆ ತಮ್ಮ ಬಾಲಿಶ ಭಾಷೆಯಲ್ಲಿ "ಡೊಂಟ್ ಪುಟ್ ಎಡೆಡ್ ಲೈನ್ ಫಾರಾ ದಿ ಸೇಕ್ ಆಫ್ ಯುವರ್ ಹೆಡ್ ಲೈನ್" ಎಂದು ಪತ್ರಕರ್ತರಿಗಾಗಿ ಪ್ರಾಸ ಕೊಡಿಸುವುದರಲ್ಲಿ ತಲ್ಲೀನರಾಗಿದ್ದರು.

ಸಂಪುಟ ರಚನೆ ಸಂದರ್ಭದಲ್ಲಂತೂ ಎಂದೂ ಕಾಣದ ಭೀಕರ ರಾಜಕೀಯ ರಣರಂಗ ನಿರ್ಮಾಣವಾಗಿತ್ತು. ಯಡ್ಡಿ-ಶೆಟ್ಟ ಬಣಗಳೆಂದು ಜನಪ್ರಿಯವಾಗಿದ್ದ ಎರಡೂ ಬಣಗಳು ಯಾವುದೇ ಸಂಕೋಚವಿಲ್ಲದೆ ಸಂಪದ್ಭರಿತ ಖಾತೆಗಳ ಚೌಕಾಶಿಗೆ ತೊಡಗಿದವು. ರೆಡ್ಡಿ ಬ್ರದರ್ಸ್ ಅಂತೂ ಒಂದು ಕಾಲದಲ್ಲಿ "ಅಮ್ಮ" ಎಂದು ಕರೆಯತ್ತಿದ್ದ ಸುಷ್ಮಾಸ್ವರಾಜ್‌ರವರು ಇವರ ಕೆಸರುಗುಂಡಿಯನ್ನು ನೋಡಿ ಎಚ್ಚೆತ್ತುಕೊಂಡು ದೂರಾಗುತ್ತಿದ್ದಂತೆ ಒಂದು ವಿಚಿತ್ರ ಕಳವಳಕ್ಕೊಳಗಾಗಿ ತೀವ್ರ ಅಭದ್ರತೆಯಿಂದ ಒಂದು ಕಾಲದಲ್ಲಿ "ದುಷ್ಟ" "ಕಂಸ" ಇತ್ಯಾದಿ ಪದಗಳಿಂದ ಬೈದಿದ್ದ ಯಡಿಯೂರಪ್ಪನವರನ್ನು "ಅಪ್ಪಾ" ಎಂದು ಗೋಗರೆಯತೊಡಗಿದ್ದು ಮತ್ತು ಅದು ಜನತೆಗೆ ಅತ್ಯಂತ ಅಸಹ್ಯಕರವಾಗಿ ಕಂಡದ್ದು ಸುಳ್ಳಲ್ಲ.

ಅತ್ತಕಡೆ ನೋಡಿ, ಕಟ್ಟಾ ತಂದೆ-ಮಗ ಕೆ.ಐ.ಡಿ.ಬಿ.ಯ ಹಗರಣಗಳ ಸರಮಾಲೆಗೆ ಸಿಲುಕಿ ರೈತ ಕುಟುಂಬಗಳ ಹಿಡಿ ಶಾಪಕ್ಕೆ ಗುರಿಯಾಗಿ ಜೈಲು ಪಾಲಾದರು. ಅವರಲ್ಲಿದ್ದ ಅಪರಿಮಿತ ಅನೈತಿಕ ಸಂಪತ್ತು ಅವರನ್ನು ಕಾಪಾಡಲಾಗಲಿಲ್ಲ. ಕೊನೆಗೆ ಅನಾರೋಗ್ಯದ ಕಾರಣದಿಂದ ತಂದೆ ಮಾತ್ರ ಜೈಲಿನ ಹೊರಗೆ ಜೈಲಾಗಿದ್ದಾರೆ. ಆರ್. ಕೆ. ಲಕ್ಷ್ಮಣ್ ರವರ ಒಂದು ವ್ಯಂಗ್ಯ ಚಿತ್ರದಲ್ಲಿ ಒಬ್ಬ ರಾಜಕಾರಣಿ ತೀವ್ರ ನಿಗಾಘಟಕದಲ್ಲಿ ಮಲಗಿ ತನ್ನ ಸ್ನೇಹಿತನಿಗೆ ಹೇಳುತ್ತಾನೆ "ನಾನು ಇಲ್ಲಿ ದಾಖಲಾಗಿರುವುದು ನನ್ನ ಹಿತೈಷಿಗಳಾದ ವಕೀಲರ ಸಲಹೆಯಂತೆ." ಇದು ಎಷ್ಟೊಂದು ನಿಜ! ಎಫ್.ಐ.ಆರ್ ದಾಖಲಾದ ಕೂಡಲೇ ರಕ್ತದೊತ್ತಡ ಮತ್ತು ರಕ್ತದಲ್ಲಿ ಸಕ್ಕರೆ ಏರು ಪೇರಾಗುತ್ತದೆ. ವಾರಂಟ್ ಹೊರಟೊಡನೆ ಎದೆ ನೋವು ಕಾಣಿಸಿಕೊಳ್ಳುತ್ತದೆ. ಪೊಲೀಸಿನವರು ಬಂದಕೂಡಲೇ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ದಾಖಲು! ಇದೆಲ್ಲಾ ಎಂಥಾ ನಾಟಕ? ಮಂತ್ರಿಗಳೂ, ಮುಖ್ಯಮಂತ್ರಿಗಳೂ ಆಗಿದ್ದಾಗ ಒಂದು ದಿನವು ಕಾಣದ ಈ ಬೇನೆಗಳು ವಿಚಾರಣೆ ಪ್ರಾರಂಭವಾಗುತ್ತಿದ್ದಂತೆ ಅಮರಿಕೊಳ್ಳುತ್ತವೆಯೇ? ಕಟ್ಟಾರವರನ್ನು ಜೈಲಿಗೆ ಕಳುಹಿಸುವಾಗ ಅವರ ವಕೀಲರು ಅನಾರೋಗ್ಯದ ಪ್ರಶ್ನೆ ಎತ್ತಿದರು. ಆಗ ನ್ಯಾಯಧೀಶರೆಂದರು "ಜೈಲಿನಲ್ಲೇ ಚಿಕಿತ್ಸೆ ದೊರೆಯುತ್ತದೆ."

ಜನತೆಯಲ್ಲಿ ಈ ರೀತಿಯ ಭಂಡ ನಾಟಕಗಳಿಂದ ಕೋಪವೂ ಅವುಗಳ ಅತಾರ್ಕಿಕ ಸಮರ್ಥನೆಗಳಿಂದ ಅಸಹ್ಯವೂ ಶೀಘ್ರಗತಿಯಲ್ಲಿ ಬೆಳೆಯಲು ಆಸ್ಪದ ಮಾಡಿಕೊಟ್ಟ ಇಂದಿನ ರಾಜಕಾರಣಿಗಳು ಒಂದು ರೀತಿಯಲ್ಲಿ ಅಭಿನಂದನಾರ್ಹರು. ದಕ್ಷಿಣ ಆಫ್ರಿಕಾದ ಪಾದ್ರಿ-ಡಾಕ್ಟರ್ ಹೇಳಿದಂತೆ ಇದು ತೀರಾ ದುರಾದೃಷ್ಟಕರ ಆದರೆ ಇವರುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಒಂದು ಸುವರ್ಣಾವಕಾಶವನ್ನು ನಾವು ಪಡೆದೆವು. ಇದರ ನೆರವಿನಿಂದ ಮುಂದಿನ ಚುನಾವಣೆಯಲ್ಲಿ ನಿಸ್ವಾರ್ಥ ಹಾಗೂ ವಿವೇಕಯುತ ಯುವ ನಾಯಕರನ್ನು ಆರಿಸುವ ಛಲ ಎಲ್ಲರಲ್ಲೂ ಮೂಡುತ್ತಿದೆ. ಆದದ್ದೆಲ್ಲಾ ಒಳಿತೇ ಆಯಿತು........ □

ಲೋಹಿಯಾ-ಜೆಪಿ ಹೋರಾಟದ ಹೆಜ್ಜೆಗಳು...

ಯು.ಎನ್. ಸಂಗನಾಳಮಠ

ಭ್ರಷ್ಟಾಚಾರ ಬೆಲೆ ಏರಿಕೆ ಅಸಮಾನತೆ ನಿರುದ್ಯೋಗ ಮುಂತಾದ ಸಮಸ್ಯೆಗಳ ವಿರುದ್ಧ ಹೋರಾಡಿರಿ. ಪಕ್ಷಪಾತ ತ್ಯಜಿಸಿರಿ, ಅಹಿಂಸಾ ಮಾರ್ಗದಿಂದ ಐಕ್ಯತೆಯಿಂದ ಮುನ್ನುಗ್ಗಿರಿ ಸಂಪೂರ್ಣ ಕ್ರಾಂತಿಯಾಗಲಿ, ಸಾಮಾಜಿಕ ನ್ಯಾಯಕ್ಕಾಗಿ ನವ ಸಮಾಜ ನಿರ್ಮಾಣಕ್ಕಾಗಿ ನಮ್ಮ ಹೋರಾಟ ಎಂದು ಯುವಜನತೆಗೆ ಕರೆ ಕೊಟ್ಟ ಧೀಮಂತ ನಾಯಕ ಜಯಪ್ರಕಾಶ ನಾರಾಯಣ, ಮತ್ತೆ ಮೂರು ದಶಕಗಳ ನಂತರ ಇಂಥದೇ ಹೋರಾಟದ ಕರೆಯನ್ನು ದೇಶ ಹೊಂದಬೇಕಾಯಿತು.

ಅಕ್ಟೋಬರ್ 11 ಜೆಪಿ ಜನ್ಮದಿನ. ಅಕ್ಟೋಬರ್ 8-1979 ಜೆಪಿ ಚಿರನಿದ್ರೆಗೆ ಸಂದ ದಿನ. ಹಾಗೆ ಅಕ್ಟೋಬರ್ 12-1967 ಲೋಹಿಯಾ ಅಗಲಿದ ದಿನ. ಗುರುವಿನ ಸಪ್ತಕ್ರಾಂತಿ ಶಿಷ್ಯನ ಸಂಪೂರ್ಣ ಕ್ರಾಂತಿ ಸಮಾಜ ಪರಿವರ್ತನೆಗೆ, ಹೊಸ ಮನುಷ್ಯನ ನಿರ್ಮಾಣಕ್ಕೆ ದಾರಿದೀಪಗಳು, ಇಬ್ಬರೂ ಸತ್ಯಾಗ್ರಹಿಗಳು, ಉತ್ಸಾಹಿಗಳು, ಲೋಹಿಯಾ ಅಪ್ಪಟ ಸಮಾಜವಾದಿ. ಬಡವ-ಬಲ್ಲಿದ. ನಾಯಕ-ಅನುಯಾಯಿ, ಅಧಿಕಾರಿ-ನೌಕರ, ಶ್ರೇಷ್ಠ-ಕನಿಷ್ಠ, ಕರಿಯ-ಬಿಳಿಯ, ಮಹಲು-ಗುಡಿಸಲು ಈ ಮುಂತಾದ ಮಾನವ ನಿರ್ಮಿತ ಅಸಮಾನತೆಗಳನ್ನು ಮೀರಿದ ಸರ್ವಸಮಾನ ದೃಷ್ಟಿ ಹೊಂದಿದವರು. ಈ ಅಂತರವನ್ನು ಮಾತು-ಕೃತಿಗಳಲ್ಲಿ ಹೋಗಲಾಡಿಸಿದವರು. ಅಧಿಕಾರದ ದರ್ಪಕ್ಕೆ ಅವರ ಉತ್ತರ ಉಗ್ರ-ವ್ಯಗ್ರ. ಸಾಮಾನ್ಯರೊಂದಿಗೆ ಶಾಂತ-ಪ್ರಶಾಂತ, ಅವರ ಮತ್ತೊಂದು ಸಂಕಲ್ಪ ಜಾತಿ ನಿರ್ಮೂಲನೆ, ಅವರ ಪ್ರಕಾರ "ಜಾತಿ ಒಂದು ಪ್ರಬಲ ತತ್ವ ಸೈದ್ಧಾಂತಿಕವಾಗಿ ಜಾತಿಯನ್ನು ಮಾನ್ಯ ಮಾಡದವರು ನಿತ್ಯ ವ್ಯವಹಾರದಲ್ಲಿ ಅದರಿಂದ ಮುಕ್ತರಾಗಿಲ್ಲ.

ಜಾತಿ ಒಂದು ವಿಮೆ ಇದಕ್ಕೆ ನಿಯಮಿತವಾಗಿ ಪ್ರೀಮಿಯಂ ಕಟ್ಟಬೇಕಾಗಿಲ್ಲ. ಯಾವುದೇ ಮಾರ್ಗದಿಂದಲೂ ಫಲಕಾರಿಯಾಗದಾಗ ಜಾತಿ ಬಾಂಧವ್ಯ ತನ್ನ ಆಟ ಆಡುತ್ತದೆ." ಈ ಮಾತು ಈಗಲೂ ಸತ್ಯವಾಗಿದೆ. ಹಿಂದುಳಿದ ವರ್ಗಗಳಿಗೂ ಆತ್ಮವಿಶ್ವಾಸ ಮೂಡಿಸಿದ್ದರು. ಹಿಂದುಳಿದ ಜಾತಿ ಸಮುದಾಯಗಳ ಸಬಲೀಕರಣಕ್ಕಾಗಿ, ಲಿಂಗಾಧಾರಿತ ತಾರತಮ್ಯಗಳ ವಿರುದ್ಧ, ಆಡಳಿತ ಮತ್ತು ಉತ್ಪಾದನಾ ಕ್ಷೇತ್ರಗಳಲ್ಲಿ ವಿಕೇಂದ್ರೀಕರಣಕ್ಕಾಗಿ, ಸ್ವಾತಂತ್ರ್ಯಾನಂತರ ಭಾರತದಲ್ಲಿ ಶಿಕ್ಷಣ ಮತ್ತು ಆಡಳಿತದಲ್ಲಿ ಆಂಗ್ಲ ಮಾಧ್ಯಮ ನೆಲೆಗೊಂಡದ್ದರ ವಿರುದ್ಧವಾಗಿ ನಿರಂತರವಾಗಿ ಬರಹ ಮತ್ತು ಹೋರಾಟಗಳ ಮೂಲಕ ಹೋರಾಡಿದರು. ಅವರ ಜೀವಿತಾವಧಿಯಲ್ಲಿ ಅವರು ಪ್ರತಿಪಾದಿಸಿದ ವಿಚಾರಗಳು ಪ್ರಭಾವಿಸದೇ, ನಂತರದ ದಶಕಗಳಲ್ಲಿ ಕೆಲವು ಬದಲಾವಣೆಗಳು ಜಾರಿಗೆ ಬಂದವು.

ಲೋಹಿಯಾ ತಾವು ನಂಬಿದ ತತ್ವಗಳಿಗಾಗಿ ಸರ್ವಸ್ವವನ್ನು ತ್ಯಾಗ ಮಾಡಿದರು. ಬಡವರ ಬಗ್ಗೆ ತುಡಿಯುತ್ತಿದ್ದ ಅವರ ಜೀವ ಎಂದೂ ಅಧಿಕಾರವನ್ನು ಬಯಸಲಿಲ್ಲ. ಗಾಂಧಿಯವರ ಶಿಷ್ಯರಾಗಿದ್ದು, ಭಾರತದ ವಿದೇಶಾಂಗ ನೀತಿಯನ್ನು ರೂಪಿಸಲು ನೆಹರೂ ಲೋಹಿಯಾರನ್ನು ಕೇಳಿಕೊಂಡಿದ್ದರು. ಇದು ಲೋಹಿಯಾರ ಚಾಣಾಕ್ಷ ಮತಿಗೆ ಸಂದ ಗೌರವ. ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಮತ್ತು ನೆಹರೂ ನೀತಿ ದೇಶಕ್ಕೆ ಮಾರಕ ಎಂದು ಖಂಡಿಸಿ, ಕಾಂಗ್ರೆಸ್ ತ್ಯಜಿಸಿ ಸಮಾಜವಾದಿ ಪಕ್ಷ ಕಟ್ಟಿದರು. ಗಾಂಧಿ ರಾಮರಾಜ್ಯ ಬಯಸಿದರೆ ಲೋಹಿಯಾ 'ಸೀತಾರಾಮ ರಾಜ್ಯ' ಬಯಸಿದ್ದರು. ಮಹಿಳೆಯರಿಗೆ ಅಪಾರ ಗೌರವ ಕೊಡುತ್ತಿದ್ದರು. ಲೋಹಿಯಾ ವೈಚಾರಿಕತೆ ಕಾರಣದಿಂದ ಸಮಾಜವಾದಿ ಪಕ್ಷ ಪುಟ್ಟ ರಾಜಕೀಯ ಪಕ್ಷವಾಯಿತು. ಆದರೆ ಲೋಹಿಯಾ ದೊಡ್ಡವರಾದರು, ಲೋಹಿಯಾವಾದ ಉಳಿಯಿತು. ಕ್ಷುದ್ರ ರಾಜಕಾರಣದಿಂದ ಲೋಹಿಯಾರಿಗೆ ದೊರೆಯಬೇಕಾದ ಮನ್ನಣೆ ದೊರೆಯಲಿಲ್ಲ. ಲೋಹಿಯಾರ ಕಲ್ಪನೆಯ ಭೂಸುಧಾರಣೆ ಜಾರಿಗೆ ಬಂದಿದ್ದರೆ ಇಂದಿನ ನಿರುದ್ಯೋಗ ಸಮಸ್ಸೆ ಸಂಪೂರ್ಣ ನಿರ್ನಾಮವಾಗುತ್ತಿತ್ತು. ಆದರೆ ರಾಜಕೀಯ ನಾಯಕರ ದೂರದೃಷ್ಟಿಯ ವೈಫಲ್ಯದಿಂದ ಕಾಯ್ದೆ ಅತಂತ್ರವಾಗಿದೆ.

ಜಯಪ್ರಕಾಶ ನಾರಾಯಣ ಗಾಂಧೀಜಿಯ ಮೌಲ್ಯಗಳನ್ನು,

ಜೆಪಿ ಮತ್ತು ಲೋಹಿಯಾ ಕರ್ನಾಟಕದ ಮೇಲೆ ಹಲವು ರೀತಿಯಿಂದ ಪ್ರಭಾವ ಬೀರಿದ್ದಾರೆ. ಹಲವು ಬಾರಿ ಕರ್ನಾಟಕಕ್ಕೆ ಬಂದಿದ್ದರು, ಜೆಪಿ ಭೂದಾನ ಚಳವಳಿಯಲ್ಲಿದ್ದಾಗ ಹಲವು ಬಾರಿ ಕರ್ನಾಟಕಕ್ಕೆ ಮತ್ತು ತುರ್ತು ಪರಿಸ್ಥಿತಿ ಕಾಲದಲ್ಲಿ ಬೆಂಗಳೂರಿನ ಗಾಂಧಿ ಭವನದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ್ದರು. ಅಂದು ಅವರ ಸಂಪೂರ್ಣಕ್ರಾಂತಿಯ ಬಗೆಗಿನ ಭಾಷಣ ನೂರಾರು ಯುವಕರನ್ನು ಬಡಿದೆಬ್ಬಿಸಿತು. ಜನತಾ ಪಕ್ಷ ತಲೆ ಎತ್ತಲು ಬೆಂಗಳೂರು ಕಾರಣವಾಯಿತು.

ಸಮತ ವಿನೋಬಾರ ಆದರ್ಶಗಳನ್ನು, ಲೋಹಿಯಾರ ವಿಚಾರಗಳನ್ನು ಆಚರಣೆಗೆ ತಂದ ಮಾನವತಾವಾದಿ, ದೇಶಾಭಿಮಾನಿ, ಸ್ವಾತಂತ್ರ್ಯ ಹೋರಾಟಗಾರ, ಸ್ವಾತಂತ್ರ್ಯ ನಂತರ ದೇಶದ ರಾಜಕೀಯ ಪರಿಶುದ್ಧತೆಗಾಗಿ ಮುಡುಪಾಗಿಟ್ಟರು. ಉನ್ನತ ವ್ಯಾಸಂಗಕ್ಕಾಗಿ ಅಮೇರಿಕಾಗೆ ತೆರಳಿ, ತಾಯಿಯ ಅನಾರೋಗ್ಯದಿಂದ ಆರ್ಥಿಕ ತೊಂದರೆಯಿಂದ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಭಾರತಕ್ಕೆ ಬಂದರು. ಎಂ.ಎನ್. ರಾಯ್ ಅವರ ಬರೆಹಗಳಿಂದ ಪ್ರಭಾವಿತರಾದರು. 1929ರಲ್ಲಿ ನೆಹರೂ ಸಂಪರ್ಕವಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಶಕ್ತಿ ಹೋರಾಟ ಆರಂಭಿಸಿದರೂ, ಗಾಂಧಿ ಪ್ರಭಾವದಿಂದ ಅಹಿಂಸಾ ಚಳವಳಿಗೆ ಮನ ಸೋತರು. ನೆಹರೂ ನೀಡಿದ ರಹಸ್ಯ ಪತ್ರಗಳನ್ನು ಸರೋಜಿನಿ ನಾಯ್ಡು ಅವರಿಗೆ ಮಾರುವೇಷದಿಂದ ತಲುಪಿಸಿದಾಗ ಬಂಧಿತರಾದರು. 1932ರಲ್ಲಿ ಕಾನೂನು ಭಂಗ ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸ ಅನುಭವಿಸಿದರು. ಮುಂದೆ ಲೋಹಿಯಾ, ಮಿನೂ ಮಸಾನಿ, ಅಶೋಕ ಮೆಹತಾ, ಅಚ್ಯುತ ಪಟವರ್ಧನ, ಎನ್.ಜಿ ಗೋರೆ ಪ್ರಭಾವದಿಂದ 1934ರಲ್ಲಿ ರೈತರ, ಕಾರ್ಮಿಕರ ಸಂಘಟನೆಗಾಗಿ ಸಮಾಜವಾದಿ ಕಾಂಗ್ರೆಸ್ ಪಕ್ಷ ಸಂಘಟಿಸಿದರು.

ಬಂಧಿತರಾಗಿದ್ದ ಜೆ.ಪಿ 1942ರ ಚಳವಳಿಯಲ್ಲಿ ಭಾಗವಹಿಸಲು ದೀಪಾವಳಿ ದಿನದಂದು ಖೈದಿಗಳು ಹಬ್ಬದ ಸಂಭ್ರಮದಲ್ಲಿದ್ದಾಗ ಮಾರು ವೇಷದಿಂದ ಪಲಾಯನ ಮಾಡಿ ಗಾಂಧೀಜಿಯನ್ನು ಭೇಟಿಯಾದರು. ಲೋಹಿಯಾ ಅರುಣಾ ಅಸಿಫ್ ಅಲಿಯುವರೊಂದಿಗೆ ಹೋರಾಟಕ್ಕೆ ಉಗ್ರರೂಪ ನೀಡಿದರು. ಪುನಃ ಲಾಹೋರ ಆಗ್ರಾದಲ್ಲಿ ಬಂಧಿತರಾಗಿ 1946ರಲ್ಲಿ ಬಿಡುಗಡೆಯಾದರು. ಭೂಗತರಾಗಿ ಚಳವಳಿಗೆ ಹುರಿದುಂಬಿಸಿದ್ದರು. ದೇಶದ ವಿಭಜನೆಗೆ ವ್ಯಥೆ ಪಟ್ಟರು. 1949ರಲ್ಲಿ ಸಮಾಜವಾದಿ ಪಕ್ಷ ಸಂಘಟಿಸಿದರು. 1951ರಲ್ಲಿ ನೆಹರೂ ಮಂತ್ರಿ ಸ್ಥಾನಕ್ಕೆ ಆಹ್ವಾನಿಸಿದರೂ ಸೇರಲಿಲ್ಲ. ಜೆಪಿ ಅಧಿಕಾರದ ಹಿಂದೆ ಹೋದವರಲ್ಲ.

ಸ್ವಾತಂತ್ರ್ಯಾನಂತರ ಜೆಪಿ ಅನೇಕ ಜನಪರ ಚಳವಳಿಗಳಲ್ಲಿ ತೊಡಗಿಸಿಕೊಂಡರು. 1957ರಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷದಿಂದ ಹೊರಬಂದು ಲೋಕನೀತಿಯ ತತ್ವದ ಮೇಲೆ ಜನತಂತ್ರ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಲೇಖನ-ಜನಸಂಘಟನೆ ಮೂಲಕ ಹೋರಾಟ ಆರಂಭಿಸಿದರು. ಸರ್ವೋದಯ ಚಳವಳಿ, ಬಿಹಾರದ ವಿದ್ಯಾರ್ಥಿ ಚಳವಳಿ, ಸಂಪೂರ್ಣಕ್ರಾಂತಿ, ಭ್ರಷ್ಟಾಚಾರ ವಿರೋಧಿ ಚಳವಳಿಗಳನ್ನು ಸಂಘಟಿಸಿದರು. ಭೂದಾನ ಯಜ್ಞದ ಮೂಲಕ ಗ್ರಾಮೋದ್ಯೋಗ ಪ್ರಧಾನ ಅಹಿಂಸಾತ್ಮಕ ಕ್ರಾಂತಿ ಎನ್ನುವ ವಿನೋಬಾ ಮಾತು ಜೆಪಿಗೆ ಪ್ರಭಾವ ಬೀರಿತು. ಭೂದಾನ ಚಳವಳಿಯಲ್ಲಿ ಲಕ್ಷಾಂತರ ಎಕರೆ ನೆಲವನ್ನು ದಾನ ಪಡೆದರು. ಬಿಹಾರದ ಹಳ್ಳಿಯೊಂದರಲ್ಲಿ ನೈಸರ್ಗಿಕ ಮಳೆ ನೀರನ್ನು ಸಂಗ್ರಹಿಸಲು ಆಣೆಕಟ್ಟು ನಿರ್ಮಿಸಿ ಗೊಬ್ಬರ ಅನಿಲ ಘಟಕಗಳನ್ನು ಸ್ಥಾಪಿಸಿದರು. ಅಹಿಂಸೆ ಶಾಂತಿ ಮಂತ್ರಗಳಿಂದ ಉಗ್ರಗಾಮಿಗಳಾಗಿದ್ದ ನಾಗಾ ಮತ್ತು ನಕ್ಸಲೈಟ್ ಸಮಸ್ಯೆಗಳನ್ನು ಪರಿಹರಿಸಿದರು. ಅರವತ್ತರ ಉತ್ತರಾರ್ಧದಲ್ಲಿ ಮಧ್ಯಪ್ರದೇಶ, ಉತ್ತರ ಪ್ರದೇಶ, ರಾಜಸ್ಥಾನಗಳಲ್ಲಿ ಢಕಾಯಿತರ ಗುಹೆಗಳನ್ನು ಪ್ರವೇಶಿಸಿ ಕಷ್ಟ ಸುಖಗಳನ್ನು ವಿಚಾರಿಸಿ ಮಾನವೀಯ ಗುಣವುಳ್ಳ ನಾಗರಿಕರನ್ನಾಗಿ ಮಾಡಿದರು. ಪ್ರಸಿದ್ಧ ಢಕಾಯಿತರಾದ ಮನಸಿಂಗ, ಮಾಧೋಸಿಂಗ ಶರಣಾಗತರಾದರು. 1974ರ

ಜೆಪಿ ಅವರಿಗೆ ರಾಜಕೀಯ ಎಂದರೆ ಅಧಿಕಾರದಲ್ಲಿ ಜನರ ಮೇಲೆ ಅಧಿಕಾರ ಚಲಾಯಿಸುವದಲ್ಲ ಬದಲಿಗೆ ಇರುವ ಅಧಿಕಾರವನ್ನು ಜನರ ಒಳಿತಿಗೆ ಬಯಸುವದು. ಸರಕಾರದಿಂದ ಹೊರಗಿದ್ದರೆ ಅಧಿಕಾರ ಚುಕ್ಕಾಣಿ ಹಿಡಿದವರ ತಪ್ಪುಗಳನ್ನು ಖಂಡಿಸಬಹುದು, ಎಂದು ಜೆಪಿ ಸಾರಿ ಹೇಳಿದ್ದರು.

ಸಂಪೂರ್ಣ ಕ್ರಾಂತಿಯ ಸಂದರ್ಭದಲ್ಲಿ ಜೆಪಿ ಪರಿಪೂರ್ಣ ನಾಯಕರಾದರು. ಆಗ ಗುಜರಾತ್ ನವ ನಿರ್ಮಾಣ ಸಮಿತಿ ಹೆಸರಿನಲ್ಲಿ ವಿದ್ಯಾರ್ಥಿಗಳು ಪ್ರಾರಂಭಿಸಿದ ಭ್ರಷ್ಟಾಚಾರ ವಿರುದ್ಧ ಚಳವಳಿಯ ನಾಯಕತ್ವ ವಹಿಸಿದರು. ಸಂಪೂರ್ಣಕ್ರಾಂತಿಗೆ ಲಕ್ಷ ಲಕ್ಷ ಜನರು ಬೆಂಬಲಿಸಿದರು. ಪಾಟ್ನಾದಲ್ಲಿ ಚಳವಳಿಕಾರರ ಮೇಲೆ ದೌರ್ಜನ್ಯ ನಡೆದು ಜೆ.ಪಿ ಬಂಧಿತರಾದರು.

"ಸಂಸದಿಯ ನಿಯಮ ಕಾನೂನುಗಳ ಬಗ್ಗೆ ಇಂದಿರಾ ಅವರಿಗೆ ಇನ್ನಷ್ಟು ಜ್ಞಾನ ಇದ್ದಿದ್ದರೆ ಅವರು ತುರ್ತುಸ್ಥಿತಿಯನ್ನು ತಪ್ಪಿಸುವದು ಸಾಧ್ಯವಿದ್ದಿತು. ಆದರೆ ಈ ವಿಷಯದಲ್ಲಿ ಅವರಿಗೆ ಸಾಕಷ್ಟು ಕೊರತೆಗಳಿದ್ದವು. ಹೀಗಾಗಿ ಅವರು ತಮ್ಮ ಸಲಹೆಗಾರರು ಹಾಗೂ ಕಾನೂನು ತಜ್ಞರನ್ನು ಅವಲಂಬಿಸಬೇಕಾಗುತ್ತಿತ್ತು. ಇವರೆಲ್ಲರಿಗೂ ಇಂದಿರಾ ಸ್ವಭಾವ ಗೊತ್ತಿತ್ತು. ಎಚ್ಚರಿಕೆಗಿಂತ ಕಟ್ಟುನಿಟ್ಟಿನ ಕ್ರಮವನ್ನೇ ಇಂದಿರಾ ಬಯಸುತ್ತಾರೆಂದು ಇವರೆಲ್ಲ ತಿಳಿದಿದ್ದರು. ತುರ್ತುಸ್ಥಿತಿ ಘೋಷಣೆಯೊಂದೇ ಉಳಿದಿರುವ ದಾರಿ ಎಂದು ಕಾನೂನು ಪರಿಣತರು ಹೇಳಿದರು. ರಾಜಕೀಯ ಸಲಹೆಗಾರರಿಗೂ ಖಾಸಗಿ ವೈದ್ಯರಿಗೂ ಸಾಕಷ್ಟು ವ್ಯತ್ಯಾಸವಿರುತ್ತದೆ. ವೈದ್ಯನಾದವನು ತಪ್ಪಾಗಿ ಚಿಕಿತ್ಸೆ ಮಾಡಿದರೆ ಪ್ರಮಾದವನ್ನು ಅವನ ಮೇಲೆ ಹೊರಿಸಬಹುದು. ಆದರೆ ರಾಜಕೀಯ ಸಲಹೆಗಾರನಾದವನು ತಪ್ಪು ಸಲಹೆ ಕೊಟ್ಟರೆ ಅದು ಒಪ್ಪಿತವಾಗಿ ಜಾರಿಯಾದರೆ. ಅದರ ಹೊಣೆಯನ್ನು ಸಲಹೆಗಾರನು ಹೊರುವದಿಲ್ಲ. ಪ್ರಧಾನಿಯ ತಲೆಗೆ ಕಟ್ಟುತ್ತಾರೆ. ಅದಕ್ಕೆ ಪ್ರಧಾನಿಯೇ ಬೆಲೆ ತೆರಬೇಕಾಗುತ್ತದೆ. ತುರ್ತುಸ್ಥಿತಿ ಘೋಷಣೆ ಸಂದರ್ಭದಲ್ಲಿ ಆದದ್ದೂ ಇದೆ."...

"ತುರ್ತುಸ್ಥಿತಿಯನ್ನು ಹೇರುವ ನಿರ್ಧಾರ ಎಷ್ಟು ಶೀಘ್ರ, ಅನಿರೀಕ್ಷಿತವಾಗಿತ್ತೋ ಅದನ್ನು ಕೊನೆಗೊಳಿಸುವ ತೀರ್ಮಾನ ಇನ್ನೂ ಶೀಘ್ರ ನಾಟಕೀಯವಾಗಿತ್ತು... ಮುಂದೆ ಚುನಾವಣಾ ಪ್ರಚಾರ ಕಾವೇರುತ್ತಿದ್ದಂತೆ ಅವರಿಗೆ ಅನಿಸಿರಬೇಕು ತಾನು ಸೋಲಿನ ಮಾರ್ಗದಲ್ಲಿ ನಡೆಯುತ್ತಿದ್ದೇನೆಂದು... ತುರ್ತು ಸ್ಥಿತಿ ಘೋಷಣೆಯನ್ನು ವಾಪಸ್ ಪಡೆದಾಗ ಅದನ್ನು ಹೇರಿದ ತಪ್ಪಿಗೆ ಇಂದಿರಾ ಪಶ್ಚಾತ್ತಾಪ ಹೊಂದಿರಬೇಕು... ತುರ್ತುಸ್ಥಿತಿಯಿಂದ ಇಂದಿರಾಗಾಂಧಿ ಒಂದು ಸಂಗತಿಯ ನ್ನಂತೂ ಸಾಧಿಸಿದರು. ಮುಂದಿನ ಯಾವ ಪ್ರಧಾನಿಯೂ ಇಂಥ ಕ್ರಮಕ್ಕೆ ಮುಂದಾಗಬಾರದೆನ್ನುವ ಪಾಠ" ಹೀಗೆ ಇಂದಿರಾಗಾಂಧಿ ಆಪ್ತ ಕಾರ್ಯದರ್ಶಿ ಎಚ್ ವೈ ಶಾರದಾ ಪ್ರಸಾದ್ ತಮ್ಮ 'ಕಾಲದೇಶ' ಕೃತಿಯಲ್ಲಿ ದಾಖಲಿಸಿದ್ದಾರೆ. ತುರ್ತುಸ್ಥಿತಿ ಸಂದರ್ಭದಲ್ಲಿ ಜೆಪಿ ಜೈಲು ಸೇರಿದರು. 1977ರಲ್ಲಿ ಬಿಡುಗಡೆಯಾಗಿ ವಿವಿಧ ರಾಜಕೀಯ ಪಕ್ಷಗಳನ್ನು ಒಂದೆಡೆ ಸೇರಿಸಿ 'ಜನತಾ ಪಕ್ಷ' ರಚಿಸಿ, ಮುಂದೆ ದೇಶದಲ್ಲಿ ಪ್ರಥಮ ಕಾಂಗ್ರೆಸ್ಸೇತರ ಸರಕಾರ ಅಧಿಕಾರದಲ್ಲಿ ಬಂದಿತು. ಮೊರಾರ್ಜಿ ದೇಸಾಯಿ ಪ್ರಧಾನಿಯಾದರು. ರಾಜನಾರಾಯಣ್, ಜಾರ್ಜ್ ಫರ್ನಾಂಡಿಸ್, ಚರಣ ಸಿಂಗ್, ಕೇಂದ್ರ ಸರಕಾರದಲ್ಲಿ ಸೇರಿದರೆ, ಬಿಹಾರದಲ್ಲಿ ಶರದ್ ಯಾದವ್, ಲಾಲೂ ಪ್ರಸಾದ್, ರಾಮವಿಲಾಸ್ ಪಾಸ್ವಾನ್, ಉತ್ತರ ಪ್ರದೇಶದಲ್ಲಿ ಮುಲಾಯಂಸಿಂಗ್ ಯಾದವ್. ಓರಿಸ್ಸಾದ ಪಾಟ್ನಾಯಕ್ ಇವರೆಲ್ಲ ಜೆಪಿ. ಚಳವಳಿಯ ನಾಯಕರು.

'ಜೆಪಿ ಅವರ ಆಯ್ದ ಕಾರ್ಯಗಳು' ಎಂಬ ಪುಸ್ತಕದ ಲೇಖಕರಾಗಿದ್ದ ಬಿಮಲ್‌ರಾಯ್ "ರಾಜಕೀಯ ತಂತ್ರಗಾರಿಕೆ, ಧೀಃಶಕ್ತಿ ಮತ್ತು ಜನಪ್ರಿಯತೆ ಈ ಮೂರು ವಿಷಯಗಳಲ್ಲಿ ಜೆಪಿ ಅವರು ನೆಹರೂಗೆ ಸರಿಸಾಟಿ ಇದ್ದರು" ಎಂದಿದ್ದಾರೆ. ನೆಹರೂ ನಂತರ ಜೆಪಿ ಪ್ರಧಾನಿಯಾಗುವರೆಂಬ ನಂಬಿಕೆ ಬಲವಾಗಿದ್ದಿತು. ಪ್ರಧಾನಿಯಾಗುವ ಅರ್ಹತೆ ಇದ್ದಿತು. ಆದರೆ ಕಾಂಗ್ರೆಸ್ಸಿನ ಕೆಲ ಎಡಪಂಥೀಯರು. ಜೆಪಿ ರಾಜಕೀಯ ನಿರ್ಧಾರಗಳಿಗೆ ಬೇಸರ ಹೊಂದಿದ್ದರು. ಇನ್ನೊಂದೆಡೆ ಬಲ ಪಂಥೀಯರು ಕಮ್ಯುನಿಸ್ಟರು ಜೆಪಿ ವಿರುದ್ಧವಾಗಿದ್ದರು. ಜೆಪಿ ಕೇವಲ ಮಾತನಾಡುತ್ತಾರೆ ಆದರೆ ಏನನ್ನೂ ಮಾಡುವವರಲ್ಲ ಎಂಬುದು ನೇರ ಅಭಿಪ್ರಾಯವಾಗಿತ್ತು ಎಂದಿದ್ದಾರೆ ಶಾರದಾಪ್ರಸಾದ್.

ಜೆಪಿ ಅವರಿಗೆ ರಾಜಕೀಯ ಎಂದರೆ ಅಧಿಕಾರದಲ್ಲಿ ಜನರ ಮೇಲೆ ಅಧಿಕಾರ ಚಲಾಯಿಸುವದಲ್ಲ ಬದಲಿಗೆ ಇರುವ ಅಧಿಕಾರವನ್ನು ಜನರ ಒಳಿತಿಗೆ ಬಯಸುವದು. ಸರಕಾರದಿಂದ ಹೊರಗಿದ್ದರೆ ಅಧಿಕಾರ ಚುಕ್ಕಾಣಿ ಹಿಡಿದವರ ತಪ್ಪುಗಳನ್ನು ಖಂಡಿಸಬಹುದು, ಆ ಮೂಲಕ ಅಧಿಕಾರದ ದುರ್ಬಳಕೆಯನ್ನು ತಪ್ಪಿಸಬಹುದು, ಅನ್ಯಾಯದ ವಿರುದ್ಧ ಪ್ರತಿಭಟಿಸಬಹುದು, ಜನಹಿತ ಕಾಪಾಡಬಹುದು. ಪ್ರತಿಯೊಬ್ಬರ ವ್ಯಕ್ತಿ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯವನ್ನು ಪ್ರಶ್ನಿಸುವ ಹಕ್ಕು ಯಾವ ಮಹಾ ನಾಯಕನಿಗೂ ಸರಕಾರಕ್ಕೂ ಇಲ್ಲ ಎಂದು ಜೆಪಿ ಸಾರಿ ಹೇಳಿದ್ದರು. ಹೀಗಾಗಿ ಜೆಪಿ ಸಾಕ್ಷಿ ಪ್ರಜ್ಞೆಯ ಸಂಕೇತವಾಗಿದ್ದರು.

ಜನತಾಪಕ್ಷ ಅಧಿಕಾರಕ್ಕೆ ಬಂದಾಗ ಜೆಪಿ ಡಯಾಲಿಸಿಸ್ ಚಿಕಿತ್ಸೆಗಾಗಿ ಆಸ್ಪತ್ರೆ ಸೇರಿದರು. ಹೀಗಾಗಿ ಸಲಹೆ ಸೂಚನೆಯಿಂದ ಪಕ್ಷ ವಂಚಿತವಾಯಿತು. ನಾಯಕರ ಒಳಜಗಳದಿಂದ ಪಕ್ಷ ನಾಶವಾದುದನ್ನು ಕಣ್ಣಾರೆ ಕಂಡು ವ್ಯಥೆಪಟ್ಟರು. ಆದರೆ ಪುನಃ ಇಂದಿರಾಗಾಂಧಿ ಅಧಿಕಾರ ಹೊಂದಿದ್ದನ್ನು ನೋಡಲು ಜೆಪಿ ಬದುಕಿರಲಿಲ್ಲ. (8.10.79) ಸಂಪೂರ್ಣ ಕ್ರಾಂತಿಯ ಹರಿಕಾರರಾದ ಜೆ.ಪಿ ರಾಷ್ಟ್ರ ರಾಜಕಾರಣದಲ್ಲಿ ಮೌಲ್ಯಯುತವಾದ ಕಾಂಗ್ರೆಸ್ಸೇತರ ಸರಕಾರ ರಚನೆಗೆ ಕಾರಣರಾಗಿ ಎರಡನೆಯ ಪೀಳಿಗೆಯ ಆದರ್ಶ ರಾಜಕಾರಣಿಗಳ ಪ್ರಾರಂಭಕ್ಕೆ ಕಾರಣರಾದರು. ಇಂಥ ಮಹಾನಾಯಕನ ಜನ್ಮಶತಾಬ್ದಿ ಕಾರ್ಯಕ್ರಮ ಸಹ ನೆರವೇರಲಿಲ್ಲ ಎಂಬುದು ಅಸಮಾಧಾನ.

ಜೆಪಿ ಮತ್ತು ಲೋಹಿಯಾ ಕರ್ನಾಟಕದ ಮೇಲೆ ಹಲವು ರೀತಿಯಿಂದ ಪ್ರಭಾವ ಬೀರಿದ್ದಾರೆ. ಹಲವು ಬಾರಿ ಕರ್ನಾಟಕಕ್ಕೆ ಬಂದಿದ್ದರು, ಜೆಪಿ ಭೂದಾನ ಚಳವಳಿಯಲ್ಲಿದ್ದಾಗ ಹಲವು ಬಾರಿ ಕರ್ನಾಟಕಕ್ಕೆ ಮತ್ತು ತುರ್ತು ಪರಿಸ್ಥಿತಿ ಕಾಲದಲ್ಲಿ ಬೆಂಗಳೂರಿನ ಗಾಂಧಿ ಭವನದಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದರು. ಅಂದು ಅವರ ಸಂಪೂರ್ಣಕ್ರಾಂತಿಯ ಬಗೆಗಿನ ಭಾಷಣ ನೂರಾರು

ಯುವಕರನ್ನು ಬಡಿದೆಬ್ಬಿಸಿತು. ಜನತಾ ಪಕ್ಷ ತಲೆ ಎತ್ತಲು ಬೆಂಗಳೂರು ಕಾರಣವಾಯಿತು.

ಲೋಹಿಯಾರ ಸಾಂಸ್ಕೃತಿಕ ತಾತ್ವಿಕ ರಾಜಕೀಯ ಚಿಂತನೆಗಳು ಕರ್ನಾಟಕದಲ್ಲಿ ಸಾಕಷ್ಟು ಪ್ರಭಾವ ಬೀರಿದವು. ಕನ್ನಡದಲ್ಲಿ ನವ್ಯ ಸಾಹಿತ್ಯ, ದಲಿತ ಬಂಡಾಯ ಸಾಹಿತ್ಯ ಚಳವಳಿಗಳ ಹಿಂದೆ ಪ್ರತ್ಯಕ್ಷ-ಪರೋಕ್ಷವಾದ ಲೋಹಿಯಾ ಚಿಂತನೆಯ ಪ್ರಭಾವ ಒಂದಲ್ಲ ಒಂದು ರೀತಿಯಿಂದ ಆಗಿದೆ. ಕರ್ನಾಟಕ ಸರಕಾರದ ಕನ್ನಡ-ಸಂಸ್ಕೃತಿ ಇಲಾಖೆ ಸಮಗ್ರ ಲೋಹಿಯಾ ಸಾಹಿತ್ಯವನ್ನು ಹಲವು ಸಂಪುಟಗಳಲ್ಲಿ ಅನುವಾದ ಮಾಡಿ ಕಡಿಮೆ ದರದಲ್ಲಿ ಒದಗಿಸಿದೆ. ಲೋಹಿಯಾ ಹಲವು ಕೃತಿಗಳನ್ನು ರಚಿಸಿದ್ದಾರೆ. ಡಾ. ಲೋಹಿಯಾ ಅವರ ಬರಹಗಳು ನಿರಂತರವಾಗಿ ಕನ್ನಡಕ್ಕೆ ಅನುವಾದವಾಗಿವೆ. ಅನುವಾದಕರಲ್ಲಿ ಕೆ.ವಿ ಸುಬ್ಬಣ್ಣ, ಗೋಪಾಲಕೃಷ್ಣ ಅಡಿಗ, ಹಸನ್ ಸುರಕೋಡ, ನಟರಾಜ ಹುಳಿಯಾರ್, ಡಿ. ಎಸ್ ನಾಗಭೂಷಣ, ಚಿಂತಾಮಣಿ ಕೊಡ್ಲೆಕೆರೆ, ಎಸ್.ಆರ್ ವಿಜಯಶಂಕರ ಪ್ರಮುಖರು. ಹಾಗೆ ಯು.ಆರ್ ಅನಂತಮೂರ್ತಿ, ಪೂಚಂತೇ, ಪಿ. ಲಂಕೇಶ್, ಚಂಪಾ, ಡಿ. ಆರ್ ನಾಗರಾಜ, ಡಾ॥ ಲೋಹಿಯಾರಿಂದ ಪ್ರಭಾವಿತರಾದವರು.

ಹಿಂದೆ ಪುರೋಹಿತಶಾಹಿಯನ್ನು ವಿರೋಧಿಸಿದ ವಿಚಾರವಾದಿ ಕುವೆಂಪು ಅವರ ಚಿಂತನಾ ಕ್ರಮದಿಂದ ಬೇರೆಯಾಗಿ, ಇತ್ತ ಪೂರ್ವದ ವೈದಿಕ ಮಿಮಾಂಸೆಯೂ ಅಲ್ಲದೆ ಅತ್ತ ಮಾರ್ಕ್ಸ್‌ನ ಪಶ್ಚಿಮದ ತತ್ವ ಚಿಂತನೆಯೂ ಆಗದ ಬೇರೊಂದು ಸಮಾಜವಾದಿ ಕ್ರಮದ 'ಬ್ರಾಹ್ಮಣ' 'ಶೂದ್ರ' ಕಲ್ಪನೆಯನ್ನು ಅನಂತಮೂರ್ತಿಯವರಿಗೆ ಬೆಳೆಸಿಕೊಳ್ಳಲು ಕಾರಣರಾದವರು ಡಾ॥ ಲೋಹಿಯಾ ಎನ್ನುತ್ತಾರೆ ಎಸ್. ಆರ್ ವಿಜಯಶಂಕರ. ಪೂಚಂತೇ ಅವರು ಲೋಹಿಯಾರ ತತ್ವ ಚಿಂತನೆ, ಕುವೆಂಪುರವರ ಕಲಾಸೃಷ್ಟಿ, ಕಾರಂತರ ಜೀವನ ದೃಷ್ಟಿ ಮತ್ತು ಬದುಕಿನ ಪ್ರಯೋಗಶೀಲತೆ ಈ ಮೂರೇ ನನ್ನ ಸಾಹಿತ್ಯ ರಚನೆಯ ಮೇಲೆ ಗಾಢ ಪರಿಣಾಮವನ್ನುಂಟು ಮಾಡಿವೆ ಎನ್ನುತ್ತಾರೆ. ತನಗೆ ತಿಳಿದಿರದಿದ್ದ ನಿಗೂಢ ಅಪರಿಚಿತ ಭಾರತದ ಬಗ್ಗೆ ಕಣ್ಣು ತೆರೆಸಿದ್ದು ಲೋಹಿಯಾ ಎನ್ನುತ್ತಾರೆ ತೇಜಸ್ವಿ. ತನ್ನ ಜೀವನ ವಿಧಾನ, ಬರೆಹಗಾರನಾಗಿ ಗ್ರಹಿಸುವ ಕ್ರಮ, ಆಲೋಚನ ಅಭಿವ್ಯಕ್ತಿ ವಿಧಾನ ಎಲ್ಲವೂ ಲೋಹಿಯಾ ಚಿಂತನೆಯಲ್ಲಿ ಬದಲಾಯಿತು ಎನ್ನುತ್ತಾರೆ.

ಲೋಹಿಯಾ ಪ್ರಕಾರ ವರ್ಗ ಎಂದರೆ ಚಲನೆ ಸಾಮರ್ಥ್ಯವುಳ್ಳ ಜಾತಿ. ಜಾತಿ, ಎಂದರೆ ಚಲನೆ ರಹಿತವಾದ ವರ್ಗ. ವರ್ಗದಿಂದ ಜಾತಿಗೆ, ಜಾತಿಯಿಂದ ವರ್ಗಕ್ಕೆ ನಡೆಯುವ ಚಲನೆಯನ್ನು ಪ್ರತಿ ಸಮಾಜ ನಾಗರಿಕತೆ ಬಲ್ಲದು. ಎಲ್ಲ ಆಂತರಿಕ ವಿದ್ಯಮಾನಗಳ ಮೂಲದಲ್ಲೂ ಈ ಚಲನೆ ಇರುತ್ತದೆ ಎನ್ನುವರು. ಇಂದಿನ ಆಡಳಿತಗಾರರ ವರ್ಗದ ಮುಖ್ಯ ಲಕ್ಷಣಗಳು ಮೂರು-ಮೇಲು ಜಾತಿ, ಶ್ರೀಮಂತಿಕೆ ಮತ್ತು ಇಂಗ್ಲೀಷ್ ಜ್ಞಾನ ಭಾರತದಲ್ಲಿ ಮೇಲೆ ಬಂದವರಲ್ಲಿ ಹೆಚ್ಚಿನವರು ಮೇಲುಜಾತಿ ಶ್ರೀಮಂತಿಕೆ ಅಥವಾ ಆಂಗ್ಲ ಭಾಷೆ ಈ ಮೂರರಲ್ಲಿ ಎರಡು ಹೊಂದಿರುತ್ತಾರೆ. ಲೋಹಿಯಾ "ಪಂಚಸ್ತಂಭ ವಿಶ್ವ ಸರಕಾರ"ದ ಕಲ್ಪನೆ ನೀಡಿದರು- ಗ್ರಾಮ, ಜಿಲ್ಲೆ, ರಾಜ್ಯ, ರಾಷ್ಟ್ರ ಮತ್ತು ವಿಶ್ವ ಸರಕಾರದ ಪ್ರಜೆಯಾಗುವ ಸಂಪೂರ್ಣ ಸಮಾನತೆಯ ಆದರ್ಶ ವಿಶ್ವಕಲ್ಪನೆ. ಇದು ಮಾರ್ಕ್ಸ್‌ಗಿಂದ ಭಿನ್ನ ಚಿಂತನೆ. ಕರ್ನಾಟಕದ ಜಾಗತೀಕರಣ ಸಂದರ್ಭದಲ್ಲಿ ಜಗತ್ತಿನ ಮಾರುಕಟ್ಟೆಯ ಗ್ರಾಹಕನಾಗುವ ಬದಲು ವಿಶ್ವ ಸರಕಾರದ ಸಮಾನ ಹಕ್ಕು- ಕರ್ತವ್ಯಗಳ ಪ್ರಜೆಯಾಗುವದು ಹೇಗೆ ಎಂಬ ಚಿಂತನೆಗೆ ಲೋಹಿಯಾ ವಿಚಾರ ಪರ್ಯಾಯ ಚಿಂತನೆ ಒದಗಿಸಲು ಶಕ್ತವಾಗಿದೆ ಎನ್ನುತ್ತಾರೆ ವಿಜಯಶಂಕರ.

1951ರಲ್ಲಿ ಸಮಾಜವಾದಿ ಪಕ್ಷದ ಸಂಘಟನೆಗಾಗಿ ಗದಗ ಜಿಲ್ಲೆಯ ರೋಣ ತಾಲ್ಲೂಕಿಗೆ ಬಂದಾಗ ಅವರ ಒಡನಾಡಿಯಾದ ಘಟನೆಯನ್ನು ಅಬ್ಬಗೇರಿ ವಿರೂಪಾಕ್ಷಪ್ಪನವರು, 1939ರಲ್ಲಿ ಜನವರಿಯಲ್ಲಿ ರಾಮಮನೋಹರ ಲೋಹಿಯಾ ಅವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ದ್ವಿತಿಯ ಯುವಜನ ಸಮ್ಮೇಳನ ನಡೆಯಿತು. ಅದೇ ತಿಂಗಳಲ್ಲಿ ಶ್ರೀ ಜಯಪ್ರಕಾಶ ನಾರಾಯಣರು ಧಾರವಾಡದಲ್ಲಿ ಕರ್ನಾಟಕ ಯುವಜನ ಸಂಘದ ಕೇಂದ್ರ ಕಾರ್ಯಾಲಯವನ್ನು ಉದ್ಘಾಟಿಸಿದರೆಂದು ಯುವಜನ ಸಂಘದ ಕಾರ್ಯದರ್ಶಿ ಪತ್ರಕರ್ತ ಬೂದಿಹಾಳಮಠ ಸ್ಮರಿಸುತ್ತಾರೆ. 50ರ ದಶಕದ ಪ್ರಾರಂಭದಲ್ಲಿ ನಡೆದ ಕಾಗೋಡು ಸತ್ಯಾಗ್ರಹ ಲೋಹಿಯಾ ಅವರು ಪಾಲ್ಗೊಂಡು ಬಂಧಿತರಾದ ಪ್ರಸಂಗವೂ ಆಗಿದೆ. (ಲೋಹಿಯಾ ವ್ಯಕ್ತಿ ವಿಚಾರ)

ಲೋಹಿಯಾರ ಕಲ್ಪನೆಯ ಭೂಸುಧಾರಣೆಯನ್ನು ಒಪ್ಪಿ ದಿ. ದೇವರಾಜ ಅರಸ್ ಅವರು ಕರ್ನಾಟಕದಲ್ಲಿ ಕ್ರಾಂತಿಕಾರಿ ಭೂಸುಧಾರಣೆ ಕಾಯ್ದೆಯನ್ನು ಜಾರಿಗೊಳಿಸಿದರು. ಆದರೆ ಈ ಕಾಯ್ದೆ ವಿಫಲವಾಗುತ್ತಲಿದೆ. ಉಳುವವನಿಗೆ ಹೊಲದ ಮೇಲೆ ಹಕ್ಕಿಲ್ಲ. ಭೂಮಾಲಿಕ ರೈತನ ಹೆಸರಿನಲ್ಲಿ ಹಕ್ಕು ಚಲಾಯಿಸುತ್ತಿದ್ದಾನೆ. ರೈತನ ಹೆಸರಿನಲ್ಲಿ ಎಲ್ಲ ಪಕ್ಷಗಳೂ ಕಣ್ಣಾ-ಮುಚ್ಚಾಲೆ ಆಟ ಆಡುತ್ತಲಿವೆ. ಈಗ ನಡೆಯುತ್ತಿರುವದು ಭೂಕಬಳಿಕೆ. ಕೃಷಿಕರು, ವಿದ್ಯಾರ್ಥಿಗಳು ಕಾರ್ಮಿಕರು ಯುವಕರು ಜನಪರ ಹೋರಾಟಕ್ಕೆ ಅಣಿಯಾಗಬೇಕು. ಮತ್ತೊಂದು ಜೆಪಿ ಚಳವಳಿ ಆಗಬೇಕು.

ಇಂದಿರಾ ಸರ್ವಾಧಿಕಾರದ ವಿರುದ್ಧ ಯಾವ ಅಧಿಕಾರವಿಲ್ಲದೆ ಜೆಪಿ ಎದ್ದು ನಿಂತರು. ಜನಶಕ್ತಿ ಎಷ್ಟು ಪ್ರಬಲ ಎಂಬುದನ್ನು ಯಾವ ರೀತಿ ಬದಲಾವಣೆ ತರಬಲ್ಲದು ಎಂಬುದನ್ನು ತೋರಿಸಿದವರು ಲೋಹಿಯಾ. ಜೆಪಿ ಮತ್ತು ಲೋಹಿಯಾರನ್ನು ಒಟ್ಟಿಗೆ ಪರಿಚಯಿಸುವದು ಇಂದಿನ ಪೀಳಿಗೆಗೆ ಅವಶ್ಯವಾಗಿದೆ.

ಕೊನೆ ಮಾತು: ಬ್ರಿಟಿಷರು ಜೆಪಿ ಅವರನ್ನು ಹಿಡಿದುಕೊಟ್ಟವರಿಗೆ ಅಥವಾ ಸುಳಿವು ನೀಡಿದವರಿಗೆ ಆ ಕಾಲದಲ್ಲೇ ಹತ್ತುಸಾವಿರ ರೂ. ಬಹುಮಾನ ಕೊಡುವದಾಗಿ ಘೋಷಿಸಿದ್ದರು. ಸೆಪ್ಟಂಬರ್ 1943ರಲ್ಲಿ ಜಯಪ್ರಕಾಶರನ್ನು ಸೆರೆಹಿಡಿದು ಲಾಹೋರ ಜೈಲಿನಲ್ಲಿಟ್ಟು ಚಿತ್ರಹಿಂಸೆ ನೀಡಿದಾಗ- "ನನ್ನನ್ನು ಜೀವಂತ ಸುಟ್ಟುಹಾಕಿದರೂ ನಾನೇನು ಸಂಕಟಪಡಲಾರೆ.. ಬ್ರಿಟಿಷರಾದ ನಿಮ್ಮ ಎದುರಿಗೆ ಹೋರಾಡಿ ಸಾಯುವದೆಂದರೆ ನನಗೆ ಪರಮಾನಂದ ನೆನಪಿರಲಿ" ಎಂದರಂತೆ.

1942ರ ಚಳವಳಿಯಲ್ಲಿ ರಾಜನಾರಾಯಣ್‌ರನ್ನೂ ಜೀವಂತವಾಗಿ, ನಿರ್ಜೀವವಾಗಿ ತಂದೊಪ್ಪಿಸುವವರಿಗೆ 5000 ರೂ. ಬಹುಮಾನ ಎಂದು ಬ್ರಿಟಿಷ್ ಸರಕಾರ ಘೋಷಿಸಿತು "ರಾಜ್‌ನಾರಾಯಣ ಅಂಥವರು ಭಾರತದಲ್ಲಿ ಮೂರರಿಂದ ನಾಲ್ಕು ಜನ ಕಾಣಸಿಗಬಹುದು. ಸಿಂಹ ಗುಂಡಿಗೆಯ ಗಾಂಧಿತತ್ವಗಳನ್ನು ರೂಢಿಯಲ್ಲಿಟ್ಟುಕೊಂಡಿರುವ ಅಪರೂಪದ ವ್ಯಕ್ತಿತ್ವ" ಎಂದರು ಲೋಹಿಯಾ, ರಾಜನಾರಾಯಣ್ 80ಕ್ಕೂ ಹೆಚ್ಚು ಸಲ ಬಂಧನಕೊಳಗಾಗಿದ್ದರು.! □

ಸಂವಾದ





ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ - ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ನಳಚರಿತೆಯೊಳಗಿನ ಬಹುಚರಿತೆಯ ಎಳೆಗಳು

ಜಯಪ್ರಕಾಶ ಶೆಟ್ಟಿ ಎಚ್.

> **ಕನ್ನಡ ಸಾಂಸ್ಕೃತಿಕ ಚರಿತ್ರೆಯ ಮಧ್ಯಕಾಲೀನಯುಗ ಮತ ಪರಂಪರೆಯ ನೆಲೆಯಲ್ಲಿ ಜನ ಧರ್ಮದ ಭಾಗವಾಗಿ ಹೋದ ಆರೂಢ, ನಾಥ, ಸೂಫಿ ಮುಂತಾದ ಶ್ರಮಣ ಪರಂಪರೆಗಳ ಜೊತೆಗಿನ ಕೊಡು-ಕೊಳುಗೆಯ ಕಾಲಘಟ್ಟ. ಮತ ಪಂಥಗಳ ಎಲ್ಲೆಕಟ್ಟುಗಳನ್ನು ಕೊಡವಿಕೊಂಡು ಜ್ಞಾನದ ಹುಡುಕಾಟದಲ್ಲಿ ನಿರತವಾದ ಅವ ದೂತ ಪರಂಪರೆಯ ಬೇರುಗಳು ಬಲವಾಗಿ ಬೆಳೆದ ಕಾಲ. ರಾಜಕೀಯವಾಗಿ ವಿಜಯನಗರ ದಂತಹ ಅರಸು ಪರಂಪರೆಯೊಂದು ತನ್ನೆಲ್ಲಾ ವೈಭವವನ್ನು ಅನುಭವಿಸಿಯೂ ಶಿಥಿಲಗೊಂಡ ಸಂಕ್ರಮಣ ಕಾಲ.**

ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ಕನಕನದು ಭಿನ್ನಭಿನ್ನ ಕಾರಣಗಳಿಗಾಗಿ ಅತಿಹೆಚ್ಚು ಸಂವಾದಕ್ಕೆ ತೆರೆದುಕೊಳ್ಳುತ್ತಿರುವ ವ್ಯಕ್ತಿತ್ವ. ವ್ಯಾಸಕೂಟದ ನಂಟಿನಿಂದ ದಾಸನಾಗಿ, ತನ್ನ ವೈಚಾರಿಕತೆಯಿಂದ ಜೀವಪರ ಚಿಂತಕನಾಗಿ, ತನ್ನ ಸಾಮಾಜಿಕ ಹಿನ್ನೆಲೆಯಿಂದ ಜಾತಿ ಅಸ್ಮಿತೆಯ ಭಾಗವಾಗಿ ಪರಿಗಣಿಸಲ್ಪಟ್ಟವನಿವನು. ಐಹಿಕವನ್ನು ಮರೆತ 'ದಾಸತ್ವ'ದ ಪಾರಮಾರ್ಥಿಕ ಲೌಕಿಕತೆಯ ನೆಲೆಯಲ್ಲಾಗಲಿ, ಇಲ್ಲವೇ ನಿರ್ದಿಷ್ಟ ಜಾತಿ ಅಸ್ಮಿತೆಯ ಐಕಾನ್ ನೆಲೆಯಲ್ಲಾಗಲಿ ಅಚ್ಚಿಗೆ ಒಗ್ಗದ ವ್ಯಕ್ತಿತ್ವ ಈತನದು. ಹಾಗಾಗಿ ಕನಕನೊಳಗಿನ ಸೃಜನಶೀಲ ಮನಸ್ಸನ್ನು ಅದರ ಗುಣಾತ್ಮಕ ಆಶಯಗಳಿಗಾಗಿ 'ದಾಸತ್ವ' ಮತ್ತು 'ಜಾತಿ ಅಸ್ಮಿತೆ'ಯ ಮುಸುಕು ಹಾಕದೆ ಪರಿಭಾವಿಸಿಕೊಳ್ಳಬೇಕಾದ ಅವಶ್ಯಕತೆಯಿದೆ.

ಐತಿಹಾಸಿಕವಾಗಿ ಕನ್ನಡ ಸಾಂಸ್ಕೃತಿಕ ಚರಿತ್ರೆಯ ಮಧ್ಯಕಾಲೀನ ಯುಗ ಮತಪರಂಪರೆಯ ನೆಲೆಯಲ್ಲಿ ಜನಧರ್ಮದ ಭಾಗವಾಗಿ ಹೋದ ಆರೂಢ, ನಾಥ, ಸೂಫಿ ಮುಂತಾದ ಶ್ರಮಣ ಪರಂಪರೆಗಳ ಜೊತೆಗಿನ ಕೊಡು-ಕೊಳುಗೆಯ ಕಾಲಘಟ್ಟ, ಮತಪಂಥಗಳ ಎಲ್ಲೆಕಟ್ಟುಗಳನ್ನು ಕೊಡವಿಕೊಂಡು ಜ್ಞಾನದ ಹುಡುಕಾಟದಲ್ಲಿ ನಿರತವಾದ ಅವದೂತ ಪರಂಪರೆಯ ಬೇರುಗಳು ಬಲವಾಗಿ ಬೆಳೆದ ಕಾಲ. ರಾಜಕೀಯವಾಗಿ ವಿಜಯನಗರದಂತಹ ಅರಸು ಪರಂಪರೆಯೊಂದು ತನ್ನೆಲ್ಲಾ ವೈಭವವನ್ನು ಅನುಭವಿಸಿಯೂ ಶಿಥಿಲಗೊಂಡ ಸಂಕ್ರಮಣ ಕಾಲ.

ಅಧಿಕಾರ ಮತ್ತು ಲೋಲುಪತೆಗಾಗಿ ಜನ ಮತ್ತು ನಾಡನ್ನು ದಿಕ್ಕೆಡಿಸುವ ಸಂಘರ್ಷಗಳು ನಡೆಯುತ್ತಿದ್ದ ಪಾಳೆಪಟ್ಟುಗಳ ನಡುವಿನ ತಿಕ್ಕಾಟದ ಕಾಲ. ಇಂತಹದೊಂದು ಐತಿಹಾಸಿಕ ಕಾಲಘಟ್ಟದ ಮೂಲಕ ಹಾದು ಬಂದಿರಬಹುದಾದ ಕನಕ ಅಭಿವ್ಯಕ್ತಿಯ ಬಹುಪ್ರಕಾರಗಳಲ್ಲಿ ತನ್ನನ್ನು ತೊಡಗಿಸಿಕೊಂಡವನು. ಕೀರ್ತನೆ, ಮುಂಡಿಗೆಗಳ ಜೊತೆಗೆ ಷಟ್ಪದಿ, ಸಾಂಗತ್ಯದ ಮಾಧ್ಯಮದಲ್ಲಿ ಪುರಾಣ ಮತ್ತು ಕಲ್ಪಕತೆಗಳಿಗೆ ಕಾವ್ಯದ ರೂಪು ಕೊಟ್ಟವನು. ಕನಕ ಮತ್ತವನ ಕಾಲವನ್ನು ವಿವರಿಸಿಕೊಳ್ಳುವ ದೃಷ್ಟಿಯಿಂದ ಅಭಿವ್ಯಕ್ತಿಯ ವಿಸ್ತೃತ ಪ್ರಕಾರಗಳಾದ ಕಾವ್ಯಗಳು ಹೆಚ್ಚು ಸರಕನ್ನು ಒದಗಿಸಬಲ್ಲ ಆಕರಗಳಾಗುತ್ತವೆ. ಈ ಹಿನ್ನೆಲೆಯಲ್ಲಿ ನಳಚರಿತೆಯನ್ನು ಗಮನದಲ್ಲಿಟ್ಟುಕೊಂಡು ಕೆಲವು ಟಿಪ್ಪಣಿಗಳನ್ನು ಮುಂದಿಡಲು ಇಲ್ಲಿ ಪ್ರಯತ್ನಿಸಲಾಗುತ್ತದೆ.



ಕನಕ ವಿರಚಿತ ನಳಚರಿತೆಯ ಕಥಾನಕದ ಹಂದರ ಪಾರಂಪರಿಕವಾದುದು. ಕೃತಿಯಲ್ಲಿಯೇ ಹೇಳಲಾಗಿರುವಂತೆ ಸೂತ ಮುನಿಯಿಂದ ಅಗಸ್ತ್ಯನ ಮೂಲಕ ರೋಮಶನವರೆಗೆ ಮುನಿಕುಲದ ನಡುವೆ ಚಾಲ್ತಿಗೆ ಬಂದ ಕಥೆ. ಹೇಳು-ಕೇಳು ಮಾದರಿಯಲ್ಲಿ ಹೇಳಿದ ಮತ್ತು ಕೇಳಿದ ಎಂಬೆರಡು ನಿತ್ಯ ಕೇಂದ್ರಗಳ ನಡುವೆ ಆವರ್ತನ ರೂಪದಲ್ಲಿ ಬಿತ್ತರಗೊಂಡ ಕಥೆ. ಇಂತಹ ರೂಢಿಯ ಕಥಾನಕವೊಂದನ್ನು ಕಾವ್ಯ ವಸ್ತುವಾಗಿ ಬಳಸುವ ವೇಳೆ, ಮೂಲ(?) ಕಥೆಯ ವಿನ್ಯಾಸದಲ್ಲಿ ಮಹತ್ತರವಾದ ಬದಲಾವಣೆ ಇಲ್ಲವೇ ಸೇರ್ಪಡೆ ಮಾಡುವ ಸ್ವಾತಂತ್ರ್ಯವನ್ನು ಕವಿಯೊಬ್ಬ ಸಾಕಷ್ಟು ಪ್ರಮಾಣದಲ್ಲಿ ಕಳೆದುಕೊಂಡಿರುತ್ತಾನೆ. ಆದರೂ ತನ್ನ ಭಾಷಿಕ ವಿನ್ಯಾಸದಲ್ಲಿ ಸಮಕಾಲೀನ ಜೀವನಾನುಭವವನ್ನು ಬಳಸಿ ಕೃತಿಗೆ ಜೀವ ತುಂಬುವ ಕೆಲಸವನ್ನು ಮಾಡಬಲ್ಲ ಅವನ ಸ್ವಾತಂತ್ರ್ಯವನ್ನು ಯಾರೂ ಕಸಿಯಲಾಗದು. ಅದೇ ಸಂದರ್ಭದಲ್ಲಿ ಕೃತಿಯೊಂದು ತನ್ನನ್ನು ಓದಲಾಗುವ ಕಾಲದೊಂದಿಗೆ ಮುಖಾಮುಖಿ ಯಾಗುವ ಮೂಲಕವೂ ಪಡೆದುಕೊಳ್ಳಬಹುದಾದ ಅರ್ಥಸ್ವಾತಂತ್ರ್ಯ ವನ್ನೂ ನಿರ್ಬಂಧಿಸಲಾಗದು. ಹಾಗಾಗಿ ಕೃತಿಯ ಎಲ್ಲ ವಿವರಗಳಿಗೆ ಕೃತಿಕಾರನನ್ನು ಹೊಣೆಗಾರನನ್ನಾಗಿಸದೆಯೂ, ಕೃತಿಯೊಳಗಿನ ಅನೇಕ ಸಂಗತಿಗಳ ಜತೆಗೆ ಚರಿತ್ರೆ ಮತ್ತು ವರ್ತಮಾನಗಳೆಂಬ ಉಭಯ ನೆಲೆಗಳಿಂದ ಸಂವಾದ ನಡೆಸುವ ಅವಕಾಶವನ್ನು ಪ್ರತಿಯೊಂದು ಸಾಹಿತ್ಯ ಕೃತಿಯೂ ಉಳಿಸಿಕೊಡಿರುತ್ತದೆ. ಈ ಹಿನ್ನೆಲೆಯಲ್ಲಿ ನಳಚರಿತೆಯೊಳಗಿನ ಬಹುಚರಿತೆಯ ಬೇರೆ ಬೇರೆ ಎಳೆಗಳನ್ನು ವಿವರಿಸಿಕೊಳ್ಳುವ ಯತ್ನ ಇಲ್ಲಿದೆ. ಸಾಂಪ್ರದಾಯಿಕ ಕಥಾಹೂರಣವನ್ನು ಪರಿಚಯಿಸುವುದಕಿಂತ ಮಿಗಿಲಾಗಿ, ಕೃತಿಯೊಳಗೆ ಧ್ವನಿತವಾಗುವ ನಾಡಿನ ಚರಿತೆಯ ಬಹುತ್ವದ ಸಾಧ್ಯತೆಗಳನ್ನು ಕಂಡುಕೊಳ್ಳುವ ಯತ್ನದಲ್ಲಿ ಚರಿತೆಯನ್ನು ಕ್ರಮ, ನಡೆ, ಪರಂಪರೆಗಳೆಂಬ ವಿಶಾಲಾರ್ಥದಲ್ಲಿ ಗ್ರಹಿಸಿ ಕೊಳ್ಳಲಾಗಿದೆ. ಆ ಮೂಲಕ ಸಾಮಾನ್ಯವಾಗಿ ವ್ಯಾಖ್ಯಾನಿಸಲ್ಪಡುವ ಮುನಿ, ಪ್ರಭು, ಜನ, ಮಹಿಳಾ ಸಾಂಸ್ಥಿಕ ನೆಲೆಗಳ ಜೊತೆಗೆ ಕಥೆ ಮತ್ತು ದಾನಗಳೆಂಬ ಸಾಂಸ್ಥಿಕ ಸ್ತರಗಳನ್ನು ಒಳಗೊಂಡು ಬಹುಸ್ತರಗಳಲ್ಲಿ ನಾಡಿನ ನಿರಂತರ ಚರಿತ್ರೆಯ ಎಳೆಗಳನ್ನು ಜೋಡಿಸುವ ಯತ್ನ ಮಾಡಲಾಗಿದೆ.

ಕಥಾಚರಿತೆ

ನಳಚರಿತೆಯ ವಸ್ತು ನಳ-ದಮಯಂತಿಯರ ಪ್ರೇಮ-ಸಮಾಗಮ-ವಿಯೋಗ-ಸಂಯೋಗದ ಕಥನ. ಕಥೆ ತೆರೆದುಕೊಳ್ಳುವುದು ನಳನಂತೆಯೇ ಜೂಜಿ ನಲ್ಲಿ ನೆಲ ಕಳೆದುಕೊಂಡ ಮಹಾಭಾರತದ ಧರ್ಮರಾಜನಿಗಾಗಿ. ಕಥೆ ಹೇಳುವವನು ರೋಮಶನೆಂಬ ಮುನಿ. ನಡುಗನ್ನಡ ಕಾಲಘಟ್ಟದ ಬಹುಮಟ್ಟಿನ ಕಾವ್ಯಗಳಂತೆ ಈ ಕಾವ್ಯವೂ ಹೇಳು-ಕೇಳು ಮಾದರಿಯಲ್ಲಿದೆ. ಗಮನಿಸಬೇಕಾದ ಸಂಗತಿಯೆಂದರೆ ಕಥೆಯ ಉಗಮ, ವಿಕಾಸ, ಬಿತ್ತರದ ಪ್ರಕ್ರಿಯೆಯಲ್ಲಿ 'ಹೇಳುವ' ಮತ್ತು 'ಕೇಳುವ' ಘಟಕಗಳಿಗೆ ಸಂಬಂಧಿಸಿದಂತೆಯೂ ಒಂದು ಪರಂಪರೆಯಿದೆ. ಬದಲಾದ ಕಾಲದ ನಡುವೆಯೂ ಬದಲಾಗದ ಸಾಂಸ್ಥಿಕ ಅಸ್ತಿತ್ವಗಳ ಮೂಲಕವೇ ಹರಿದು ಬಂದ ನಿರೂಪಣಾ ಕ್ರಮದ ಚರಿತ್ರೆಯಿಲ್ಲಿದೆ. ಮೌಖಿಕ ಪರಂಪರೆಗಿಂತ ಭಿನ್ನವಾಗಿ ಕಥೆಯ ಕರ್ತೃತ್ವದ ಹಾಗೂ ಪ್ರಸರಣದ ಹಕ್ಕನ್ನು ಅಕ್ಷರಿಕ ಪರಂಪರೆಯವಾರಸುದಾರರಾದ ಮುನಿ ಮೂಲಕ್ಕೂ, ಆಲಿಸುವ ಹಕ್ಕನ್ನು ಅವರ ಪೋಷಕರಾದ ರಾಜರಿಗೂ ಸೀಮಿತಗೊಳಿಸಿಕೊಳ್ಳಲಾಗಿದೆ. ಹೀಗೆ (ಕಥೆ) ಪನರಾವರ್ತನೆಯಲ್ಲಿಯೂ ಎರಡು ಸ್ಥಿರ ಧ್ರುವಗಳ ನಡುವೆಯೇ ತನ್ನ ಅಸ್ತಿತ್ವ ಕಂಡುಕೊಳ್ಳುವ ಮೂಲಕ ಅಕ್ಷರಿಕ ಕಥಾಪರಂಪರೆಯ ಚರಿತ್ರೆ ಹೆಣೆದುಕೊಳ್ಳುತ್ತದೆ.

ರಾಜಕಥೆಯನ್ನು ರಾಜರಿಗೆ ಹೇಳುವ ಹೊಣೆ ಹೊರುವ ಮುನಿಕುಲ ಕಥೆಯ ಸೃಜನೆ ಮತ್ತು ಮನರಾವರ್ತನೆಯಲ್ಲಿ ತಾನೇ ಭಾಗವಹಿ ಸುತ್ತದೆ. ಪಠ್ಯದ ನಿರ್ಮಿತಿ ಮತ್ತು

ಪ್ರಸರಣದಲ್ಲಿ ಸ್ವಯಂ ಭಾಗವಹಿಸುವ ಈ ಶಕ್ತಿಕೇಂದ್ರ ಪಥ್ಯವನ್ನು ಸ್ಥಿರ ಪಥ್ಯವಾಗಿಸುವ ಜೊತೆಗೆ ಪವಿತ್ರೀಕರಿಸಿ ಅನುಸರಣೀಯಗೊಳಿಸುತ್ತದೆ. ಅರಸೊತ್ತಿಗೆಯ ಬಿಕ್ಕಟ್ಟಿನ ಘಳಿಗೆಯಲ್ಲಿ ಅದರೊಳಗಿನ ಆತ್ಮಸ್ಥೈರ್ಯವನ್ನು ಜಾಗೃತಗೊಳಿಸುವ ಪ್ರಕ್ರಿಯೆಯ ಬಾಗವಾಗಿ ಕಥೆ ಕಟ್ಟಿ ನಿರೂಪಿಸುತ್ತಿದ್ದುದಕ್ಕೆ ಚರಿತ್ರೆಯನ್ನು ಕಟ್ಟುವ ನಿರೂಪಕ ಪ್ರಜ್ಞೆ, ಶಕ್ತಿಕೇಂದ್ರದ ಜೊತೆಗೆ ತನಗಿರುವ ಒಡನಾಟಕ್ಕೂ ಸಾಂಸ್ಥಿಕ ಮಾದರಿಯ ಚರಿತೆಯೊಂದನ್ನು ಧ್ವನಿಸತ್ತದೆ. ಸೂತನಿಂದ ಮುನಿಗಡಣಕ್ಕೂ, ಆ ಮುನಿಗಡಣದ ಅಗಸ್ತ್ಯನಿಂದ ರಾಮನಿಗೆ ತ್ರೇತಾ ಯುಗದಲ್ಲಿ ಹೇಳಲ್ಪಟ್ಟ ಕಥೆ, ದ್ವಾಪರದಲ್ಲಿ ರೋಮಶನಿಂದ ಧರ್ಮರಾಯನಿಗೆ ಬಿತ್ತರಗೊಳ್ಳುತ್ತದೆ. ಬದಲಾದ ಯುಗಗಳಲ್ಲಿಯೂ ಬದಲಾಗದ ಪದವಿ, ಅಸ್ತಿತ್ವಗಳುಳ್ಳ ಈ ನಿರ್ದಿಷ್ಟ ಶಕ್ತಿಕೇಂದ್ರಗಳ ನಡುವೆ ಸ್ಥಿರ ಮಾದರಿಯಲ್ಲಿಯೇ ಪುನರಾವರ್ತನೆಗೊಳ್ಳುವ ಕಥೆ ತನ್ನದೇ ಚರಿತ್ರೆಯನ್ನು ಕಟ್ಟಿಕೊಳ್ಳುತ್ತದೆ.

ಇಂದಿಗೂ ಆಳುವ ವರ್ಗದ ಬಿಕ್ಕಟ್ಟಿನ ಘಳಿಗೆಗಳಲ್ಲಿ ಅದಕ್ಕೆ ಶಕ್ತಿ ತುಂಬುವ ಸಲುವಾಗಿ ಕಥೆಯನ್ನು ಉತ್ಪಾದಿಸಿ ಬಿತ್ತರಿಸುವ ಚರಿತ್ರೆ ಮುಂದುವರೆದಿದೆ. ಆಳುವವರ ಬಿಕ್ಕಟ್ಟನ್ನು ತಮ್ಮ ಬಿಕ್ಕಟ್ಟೆಂದೇ ಪರಿಭಾವಿಸಿಕೊಂಡು ಪ್ರಭುತ್ವ ಕೇಂದ್ರದ ಸುತ್ತ ಗಿರಕಿಹೊಡೆಯುವ ಸನ್ಯಸನ ರೂಪವೇ ನಮ್ಮೆದುರಿಗಿದೆ. ಪ್ರಜಾಪ್ರಭುತ್ವವೆಂದು ಕರೆದುಕೊಂಡ ಕಾಲಘಟ್ಟದ ಕೇವಲ ಆಕಸ್ಮಿಕವಾಗಿ 'ವಿರಕ್ತಿ' ಮತ್ತು 'ಪ್ರಭುತ್ವ'ಗಳ ಒಡಬೆರಕೆಯಿರುವುದಲ್ಲ. ಕಥಾ ಪರಂಪರೆಯ ಜೊತೆಗೆ ಇದಕ್ಕೂ ಒಂದು ಚರಿತ್ರೆ, ಪರಂಪರೆಯಿದೆ. ಸೂತ, ಅಗಸ್ತ್ಯ, ಶಾಂಡಿಲ್ಯ, ರೋಮಶರುಗಳು ಹೊಸ ಹೆಸರು, ಹೊಸ ಪದಗಳೊಂದಿಗಿದ್ದಾರೆ. ಅದೇ ತೆರನಾಗಿ ರಾಮ, ಧರ್ಮರಾಯಾದಿಗಳು ಹೊಸ ಪ್ರಕ್ರಿಯೆಯಲ್ಲಿ ಶಕ್ತಿಕೇಂದ್ರವನ್ನು ಆಕ್ರಮಿಸಿಕೊಂಡಿದ್ದಾರೆ. ಪಥ್ಯಗಳ ಪುನರುತ್ಪಾದನೆಯಲ್ಲಿ ಚರಿತ್ರೆಯ 'ಚಕ್ರ'ವನ್ನು ತಿರುಗಿಸುತ್ತಲೇ, ಅಧಿಕಾರದ ಮರುಸ್ಥಾಪನೆಯ ಯತ್ನಗಳು ಸಾಗಿಕೊಂಡು ಬಂದಿವೆ. ಈ ಸ್ಥಿರ ಮಾದರಿಯ ಕಥಾಚರಿತ್ರೆಯನ್ನು ಬಳಸಿಕೊಂಡರೂ ಕನಕನ ನಳಚರಿತೆಯ ಒಟ್ಟು ವಿನ್ಯಾಸವು ಬಹುಮುಖಿಯಾಗಿ ತೆರೆದುಕೊಳ್ಳುತ್ತದೆ.

ಮುನಿ, ದ್ವಿಜಚರಿತೆ

ರಾಜತ್ವಕ್ಕೆ ಬೇಕಾದ ಕಥೆ, ಚರಿತ್ರೆಗಳ ನಿರ್ಮಿತಿಯ ಮೂಲಕ ಜನಸಮ್ಮತಿಯನ್ನು ಉತ್ಪಾದಿಸುವ ಜೊತೆಗೆ ಅದಕ್ಕೆ ಬೇಕಾದ ಆಶೀರ್ವಾದ ನೀಡುತ್ತಾ ಬಂದ ಬಹುಮುಖ್ಯ ಧಾರ್ಮಿಕ ಶಕ್ತಿಕೇಂದ್ರವೇ ವಿರಕ್ತಿಯ ಮಾದರಿಯದೆಂದು ಸಾರಿಕೊಳ್ಳುವ ಮುನಿತ್ವ. ಈ ಮುನಿ ಪದವಿಯ ನೆರಳಿಗಂಟಿಕೊಂಡೇ ರಾಜಾದಾಯವೆಂಬ ಹಸುವನ್ನು ಸದಾ ಹೀರುವ ಮೂಲಕ ದಾನಸಮಾಜದ ಫಲಾನುಭವಿಯಾಗಿ ಮುಂದುವರಿದುಬಂದ ವರ್ಗವೇ ಧರಣಿಯಮರರದು. ಪ್ರಭುತ್ವದ ಒಡನಾಡಿಗಳಾದ ಈ ಎರಡು ವರ್ಗಗಳು ಅರಸೊತ್ತಿಗೆಯ ಜೊತೆಗೆ ಹೊಂದಿದ ಸಂಬಂಧ ನಳಚರಿತೆಯ ಕಥನಕ್ರಮದಲ್ಲಿ ಬೆರೆತಿರುವುದರಿಂದಾಗಿ ಕೃತಿಯೊಳಗೆ ಮುನಿ, ದ್ವಿಜಚರಿತೆಯ ಎಳೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ಪ್ರಭುಶಕ್ತಿಯೊಂದು ತನ್ನ ಸಂಚಯಿತ ದೌರ್ಬಲ್ಯದಿಂದಲೋ, ಪರಾಕ್ರಮಣವನ್ನು ತಡೆಯದ ಸ್ಥಿತಿಯಿಂದಲೋ ಅಧಿಕಾರವನ್ನು ಕಳೆದುಕೊಂಡಾಗ, ಅದರ ಅವಲಂಬನೆಯಲ್ಲಿದ್ದವರೋ ಅಥವಾ ಆಶೀರ್ವಾದ

ರಾಜಸಮೃದ್ಧಿಯ ಘಳಿಗೆಗಳಲ್ಲಿ ಚರಿತ್ರೆಯುದ್ದಕ್ಕೂ ಅದರ ಫಲಾನುಭವಿಗಳಾದವರು ಪ್ರಭುತ್ವಕ್ಕೆ ಬೇಕಾದ ರಾಜಕಥೆ, ರಾಜ್ಯಕಥೆಗಳನ್ನು ಕಟ್ಟಿ ಜನಸಮ್ಮತಿಯನ್ನು ಉತ್ಪಾದಿಸಿಕೊಟ್ಟವರುಗಳೇ. ಅಧಿಕಾರ ಕೇಂದ್ರಕ್ಕೆ ಬೇಕಾದ ಮೂಲ ಪರಿಕರಗಳಾದ ಭಾಷೆ ಮತ್ತು ಧಾರ್ಮಿಕ ಚಹರೆಗಳನ್ನು ಹದಮಾಡಿಕೊಡುವ ಮೂಲಕ ಪ್ರಭು ಚರಿತವನ್ನು ವಿಮಲಚರಿತವಾಗಿಸಬಲ್ಲವರಿವರು. ಇವರನ್ನು ಅನುಸರಿಸಿ ಧಾರ್ಮಿಕ ಸಾಂಸ್ಥೀಕರಣದ ಮೇಲುಸ್ತರವನ್ನು ಆಕ್ರಮಿಸಿಕೊಂಡು, ಶಾಸ್ತ್ರಸಂಗತಿಗಳ ಪರಿಚಾರಿಕೆಯ ಮೂಲಕ ಅಧಿಕಾರ ಸ್ಥಾಪಿಸಿಕೊಂಡ ಇನ್ನೊಂದು ವರ್ಗವೆಂದರೆ ದ್ವಿಜ/ಧರಣಿಯಮರರದು. ದಾನವನ್ನು ಮೌಲ್ಯವಾಗಿಸಿ ಹಣ, ಹಸು, ಹೊನ್ನುಗಳೆಂಬ ಸುವಸ್ತುಗಳನ್ನು ಪಡೆಯುತ್ತಿದ್ದ ಈ ದ್ವಿಜಪುರೋಹಿತರುಗಳು, ಇತಿಕಾಸಕಾರರು ಸರಿಯಾಗಿಯೇ ಗುರುತಿಸಿದಂತೆ 'ಜನರನ್ನು ದೋಚುವ ರಾಜನನ್ನೇ ದೋಚಬಲ್ಲವರು'

ಮಾಡಿಕೊಂಡಿದ್ದವರೋ ಕಂಗಾಲಾಗಿಬಿಡುತ್ತಾರೆ. ಸಂಭವಾಮಿ ಯುಗೇ ಯುಗ್ಗೇ ಎಂದು ಕಾತರಿಸುವ ಈ ವರ್ಗ, ಯಥಾಸ್ಥಿತಿಯ ಮರು ಸ್ಥಾಪನೆಗಾಗಿ ವರ್ತಮಾನವನ್ನು ನಿರಾಕರಿಸುವ ಕಥೆಗಳನ್ನು ಕಟ್ಟುವ ಜೊತೆಗೆ ಜನಸಮ್ಮತಿಯ ಉತ್ಪಾದನೆಗೆ ಹೊಸ ದಾರಿಗಳನ್ನು ಹುಡುಕುತ್ತದೆ. ಇದರ ಪರಿಣಾಮವೆಂಬಂತೆ ಲೌಕಿಕವನ್ನು ನೀಗಿಕೊಂಡದ್ದೆಂದು ಘೋಷಿಸಿಕೊಳ್ಳುವ ಸನ್ಯಾಸತ್ವ ಅರಸೊತ್ತಿಗೆಗೆ ಹೇಸುವ ಬದಲು, ಅದರ ಬುಡ ಗಟ್ಟಿ ಮಾಡುವ ಯತ್ನದಲ್ಲಿ ತೊಡಗುತ್ತದೆ. ಜನರ ಆತ್ಮೋದ್ಧಾರದ ಮಾರ್ಗದರ್ಶಕರು ತಾವೆಂದು ಹೇಳಿಕೊಳ್ಳುತ್ತಾ, ಆಳುವ ವರ್ಗದ ಊಳಿಗಕ್ಕೆ ಪ್ರತಿಯಾಗಿ ಪಡೆದ ದೋಚುವಿಕೆಯ ಹಿಂಸೆಯನ್ನು ದಾನವೆಂಬ ಮೌಲ್ಯವಾಗಿ ಪರಿವರ್ತಿಸಿಕೊಳ್ಳುತ್ತದೆ.

ರಾಜಸಭೆಯ ಸಂಭ್ರಮವನ್ನು ಅಮರಸಭೆಯೊಂದಿಗೆ ಸಮೀಕರಿಸುವ ಮುನಿಕುಲಕ್ಕೆ ಆಕ್ರಮಣ, ಕಪ್ಪಸಂಗ್ರಹಣೆಗಳೇ ಯಶಸ್ವಿ ರಾಜತ್ವವಾಗುತ್ತದೆ. ಪ್ರಭುತ್ವದ ದೋಚುವಿಕೆಯನ್ನೇ ಆರ್ಥಿಕ ಸಮೃದ್ಧಿಯ ಸಂಕೇತವೆಂದು ಹೊಗಳುವ ಮುನಿಸಂದೋಹ ರಾಜತ್ವದ ಸಂಭ್ರಮದ ಘಳಿಗೆಯಲ್ಲಿ ಅತಿ ಪ್ರಾಧಾನ್ಯತೆಯನ್ನು ಪಡೆಯುತ್ತದೆ, ಅಧಿಕಾರದ ಸ್ವರೂಪ ಮತ್ತು ಕಾನೂನುಗಳ ಮಾದರಿಗಳನ್ನು ನಿರ್ಧರಿಸುವ ಬಹುಮುಖ್ಯ ಶಕ್ತಿಕೇಂದ್ರವಾಗುತ್ತದೆ. ತಮ್ಮ ಭಾಷಿಕ ಜಗತ್ತಿನಲ್ಲಿಯೂ ಆಳುವವರ್ಗಕ್ಕೆ ಬೇಕಾದುದನ್ನೇ ಅಚ್ಚುಹಾಕಿ ಪ್ರಸರಣಗೊಳಿಸುವ ಈ ಮುನಿಗಡಣಕ್ಕೆ ಯುದ್ಧ, ಹಿಂಸೆಗಳು ಕ್ಷಾತ್ರಸಂಭ್ರಮದ ಸಂಗತಿಗಳಾಗುತ್ತವೆ. ಇವರ ಈ ಭಾಷಾಭಿವ್ಯಕ್ತಿಗಳೇ ಸಾಮ್ರಾಜ್ಯಶಾಹಿ ಮನಸ್ಸಿನ ಸೃಷ್ಟಿಯಾದ ಯುದ್ಧದ ಸರಕುಗಳಾದ ಯೋಧರನ್ನು ಉತ್ಪಾದಿಸುವ ಸಾಧನಗಳಂತಿವೆ. ದೇಶದ ಹೆಮ್ಮೆಯ ಸಾಂಸ್ಕೃತಿಕ ದಾಖಲಾತಿಗಳೆಂದು ಆಳುವವರ್ಗದ ತುತ್ತೂರಿಗಳು ಸಾರುವ ವೀರಗಲ್ಲು, ಮಾಸ್ತಿಗಲ್ಲುಗಳೆಂಬ ಬಲಿಪೀಠಗಳ ಹಿಂದೆ ಇಂತಹ ವಿರಕ್ತರು, ಲೋಕೋದ್ಧಾರಕರ ನೆರಳುಗಳೇ ಕಂಡರೆ ಅಚ್ಚರಿಯಿಲ್ಲ.

ರಾಜಸಮೃದ್ಧಿಯ ಘಳಿಗೆಗಳಲ್ಲಿ ಚರಿತ್ರೆಯುದ್ದಕ್ಕೂ ಅದರ ಫಲಾನುಭವಿಗಳಾದವರು ಪ್ರಭುತ್ವಕ್ಕೆ ಬೇಕಾದ ರಾಜಕಥೆ, ರಾಜ್ಯಕಥೆಗಳನ್ನು ಕಟ್ಟಿ ಜನಸಮ್ಮತಿಯನ್ನು ಉತ್ಪಾದಿಸಿಕೊಟ್ಟವರುಗಳೇ. ಅಧಿಕಾರಕೇಂದ್ರಕ್ಕೆ ಬೇಕಾದ ಮೂಲ ಪರಿಕರಗಳಾದ ಭಾಷೆ ಮತ್ತು ಧಾರ್ಮಿಕ ಚಹರೆಗಳನ್ನು ಹದಮಾಡಿಕೊಡುವ ಮೂಲಕ ಪ್ರಭುಚರಿತವನ್ನು ವಿಮಲಚರಿತವಾಗಿಸಬಲ್ಲವರಿವರು. ಇವರನ್ನು ಅನುಸರಿಸಿ ಧಾರ್ಮಿಕ ಸಾಂಸ್ಥೀಕರಣದ ಮೇಲುಸ್ತರವನ್ನು ಆಕ್ರಮಿಸಿಕೊಂಡು, ಶಾಸ್ತ್ರಸಂಗತಿಗಳ ಪರಿಚಾರಿಕೆಯ ಮೂಲಕ ಅಧಿಕಾರ ಸ್ಥಾಪಿಸಿಕೊಂಡ ಇನ್ನೊಂದು ವರ್ಗವೆಂದರೆ ದ್ವಿಜ/ಧರಣಿಯಮರರದು. ದಾನವನ್ನು ಮೌಲ್ಯವಾಗಿಸಿ ಹಣ, ಹಸು, ಹೊನ್ನುಗಳೆಂಬ ಸುವಸ್ತುಗಳನ್ನು ಪಡೆಯುತ್ತಿದ್ದ ಈ ದ್ವಿಜ ಪುರೋಹಿತರುಗಳು, ಇತಿಕಾಸಕಾರರು ಸರಿಯಾಗಿಯೇ ಗುರುತಿಸಿದಂತೆ 'ಜನರನ್ನು ದೋಚುವ ರಾಜನನ್ನೇ ದೋಚಬಲ್ಲವರು'. ಕೃತಿಯೊಳಗಿನ ರಾಜಸಭೆಯ ಪರಮಗೌರವ ಮತ್ತು ದಾನಸಂದಾಯದ ವಿವರಗಳು ಈ ಸಮುದಾಯ ಸ್ಥಾಪಿಸಿಕೊಂಡುಬಂದ ಅದರ ಅಧಿಕಾರಚರಿತೆಗೆ ಸಾಕ್ಷಿಯಾಗಿದೆ.

ತಮ್ಮ ಸ್ಥಾನಬಲದಿಂದ ರಾಜಾದಾಯದಲ್ಲಿ ಪಾಲು ಪಡೆಯುವ ದ್ವಿಜರು ಮತ್ತು ಅವರ ಹಿರಿಯಣ್ಣನಂತಿರುವ ಮುನಿವರರ ಸೌಲಭ್ಯಗಳು ಗತಕಾಲದ ಜೊತೆಗೆ ನಿಂತುಹೋದಚರಿತ್ರೆಯಲ್ಲ. ಅಧಿಕಾರದಲ್ಲಿರುವವರನ್ನು ಬಹಿರಂಗವಾಗಿ ಸಮರ್ಥಿಸುವ, ಅವರ ಪರವಾಗ ರಾಜಧರ್ಮದ ವ್ಯಾಖ್ಯಾನ ಕೊಡುವ ಕೆಲಸಗಳು ನಮ್ಮ ಕಣ್ಣೆದುರಿಗೇ ನಡೆಯುತ್ತಿವೆ. ಧಾರ್ಮಿಕ ಶಕ್ತಿಕೇಂದ್ರಗಳ ಪೀಠ, ಪೇಟಗಳ ಜೋಳಿಗೆ ತುಂಬಿಸಿ ಜನರನ್ನು ಸಂತೈಸುವ ಕೆಲಸಗಳು ನಿರಂತರವಾಗಿ ಜಾರಿಯಲ್ಲಿವೆ. ಗತ ರಾಜರುಗಳ ಕತೆ ಹೇಳಿ, ಗುಡಿ ಕಟ್ಟಿ, ಉತ್ಸವ ನಡೆಸಿ, ಹಸು-ಕರುಗಳ ಪುರಾಣ ಹೇಳಿ ಸಮುದಾಯದ ಬಲವನ್ನು ಅಧಿಕಾರಕ್ಕಾಗಿ ಕ್ರೋಢೀಕರಿಸಲು ಸಾಧ್ಯವೆಂಬುದನ್ನು ನಮ್ಮೆದುರಿಗಿನ ಈ ಶಕ್ತಿಕೇಂದ್ರಗಳು ನಿಜಗೊಳಿಸುತ್ತಿವೆ. ಹೀಗಾಗಿಯೇ ಉಳ್ಳವರಿಗೆ ದಾನ ಇರದವರಿಗೆ ಸಮಾದಾನವೆಂಬುದು ವ್ಯಂಗ್ಯವಾದರೂ ಮುಂದುವರೆದುಬಂದ ಸತ್ಯವಾಗಿದೆ.

ಪವಿತ್ರಾತ್ಮರುಗಳಿಗೆ ನೀಡಲಾದ ಉಡುಗೊರೆಗಳಿಂದಲೇ ಅಪವಿತ್ರಾತ್ಮರುಗಳಾದ ಸಾಮಾನ್ಯರುಗಳು ತೃಪ್ತಿಪಟ್ಟುಕೊಂಡುಬಂದ ಚರಿತ್ರೆಯೇ ಕೃತಿಯ ಒಳ ವಿನ್ಯಾಸದಲ್ಲಿದೆ. ತಮ್ಮ ಪಾಲು ಪಡೆಯದೆಯೂ ಪಾರಂಪರಿಕ ಬುದ್ಧಿಜೀವಿಗಳ ಸಮೃದ್ಧಿಯಲ್ಲಿ ನೆಮ್ಮದಿ ಕಂಡ ಈ ನಾಡಿನದಾನ-ಸಮಾದಾನದ ಚರಿತ್ರೆಯೇ ಈ ಮೂಲಕ ತೆರೆದು ಕೊಳ್ಳುತ್ತದೆ.

ಪ್ರಭುಚರಿತೆ

ಕೃತಿ ಘೋಷಿಸಿಕೊಂಡಂತೆ "ಭೂತಳೇಂದ್ರರೊಳಧಿಕಬಲ ವಿಖ್ಯಾತನಹ ನಳಚಕ್ರವರ್ತಿಯು ಭೂತಳವ

ಪಾಲಿಸಿದನಾತನ ವಿಮಲಚರಿತೆ"ಯೇ ಇಲ್ಲಿನ ಕಥಾವಸ್ತು. ರಾಜಚರಿತೆಯೊಂದನ್ನು ವಿಮಲಚರಿತೆಯೆಂದು ಕರೆಯುವ ಮೂಲಕ ಯಾವ ಅಂಶಗಳಿಗೆ ಮಾನ್ಯತೆ ದಕ್ಕಿದೆ? ರಾಜಕಥನವನ್ನು ಹೀಗೆ ಕೈವಾರಿಸುವವರಾರು? ಈ ವಿಮಲಚರಿತೆಯ ಹೂರಣದಲ್ಲಿರುವ ಸಾಂಸ್ಥಿಕ ಸಂಗತಿಗಳಾವುವು? ಪಾರಂಪರಿಕವಾದ ರಾಜಚರಿತ್ರೆಯನ್ನು ಕಟ್ಟುತ್ತಲೇ ಕವಿ ಕನಕ ಕಟ್ಟಿಕೊಡುವ ರಾಜಚರಿತೆಯೊಳಗಿರುವ ಪಾರಂಪರಿಕತೆಯ ಚೌಕಟ್ಟನ್ನು ಮೀರಿದ ಆಶಯಗಳಾವುವು? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಮೂಲಕ ಕೃತಿಯೊಳಗಿನ ಪ್ರಭುಚರಿತ್ರೆಯ ಮಾದರಿಯನ್ನು ಹುಡುಕಿಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ರಾಜತ್ವದ ನಿರೂಪಣೆಯಲ್ಲಿ ಕೃತಿ ಅದರ ಪ್ರದರ್ಶಕ ಗುಣ, ಯಥಾಸ್ಥಿತಿ ಕಾಯುವಿಕೆ, ಯುದ್ಧ, ಹಿಂಸೆ ಮತ್ತು ವ್ಯಸನಗಳನ್ನು ತೋರುವ ಜೊತೆಗೆ ಮಾನವೀಯ ಆಶಯದ ಭಾಗವಾಗಿ ತರುವ ಅದರ ನಾಚುವ ಗುಣವನ್ನು ಗಮನಿಸಬಹುದಾಗಿದೆ.

ನಳಚರಿತೆಯಲ್ಲಿನ ಅರಸೊತ್ತಿಗೆಯ ಪ್ರಧಾನ ಗುಣ ಸಮೃದ್ಧಿಯ ಕರುಹುಗಳಾಗಿ ಖ್ಯಾತಿ, ಕೀರ್ತಿಗಳೆಂಬ ಅಭೌತಿಕ ಸಂಗತಿಗಳ ಜೊತೆಗೆ ಅಸಂಖ್ಯ ಗೋಪುರ, ಬಹುಸಂಖ್ಯೆಯ ದೇಗುಲ, ಬಹುಗಾತ್ರದ ಪ್ರಾಕಾರಗಳುಳ್ಳ ಮಹತ್ತು ಬೃಹತ್ತುಗಳೆಂಬ ಭೌತಿಕ ರಚನೆಗಳ ಪ್ರದರ್ಶನ. "ದಿಗಂತದವನೀಶ್ವರರು ಕಪ್ಪವ ತೆರುವರಗಣಿತ ದುರವಿಜಯ ದೋರ್ಬಲರು ಮಣಿಮಯ ಮಕುಟವರ್ಧನರು ಚರಣಕಾನತರಾಗಿ ನಳಭೂವರನ ಭಜಿಸುತಲಿರ್ಧರು.." ಎಂಬಂತೆ ಬಲ ಮತ್ತು ಸಂಪತ್ತು ಹೆಚ್ಚುಗಾರಿಕೆಯಾಗಿ ಪರಿಭಾವಿತವಾಗುವ ಈ ವಿವರಗಳ ಮೂಲಕ ಅರಸೊತ್ತಿಗೆಯೆಂದರೆ, ಬಲಹೀನರ ಸ್ವಾತಂತ್ರ್ಯ ಹರಣ ಮತ್ತು ಸಂಪತ್ತಿನ ಸಂಗ್ರಹದ ಬಲಾಢ್ಯರ ಚರಿತೆಯಾಗುತ್ತದೆ.

ಆಡಳಿತದ ವಿವರಗಳನ್ನು ನೀಡುತ್ತಾ ನಳಮಹಾರಾಜನ ಪ್ರಭುತ್ವವನ್ನು ಕೃತಿ, "ಕ್ರೋಧಗಳಿಲ್ಲದಿಹ ಸದ್ಧರ್ಮಜೀವಿಗಳ ಮೆರೆದಾಟದ ತಾಣ"ವಾಗಿ ಕಲ್ಪಿಸುತ್ತದೆ. ಸದ್ಧರ್ಮವೆಂದರೇನೆಂದು ವಿವರ ಒದಗಿಸುವಂತೆ_

"ಪತಿಯರಿಗೆ ವಂಚಿಸರು ಸತಿಯರು
ಸುತರು ಪಿತೃಗಳನುಡಿಗಳನುತಾವತಿಗಳೆಯರಾಚಾರ
ವರ್ಣಾಶ್ರಮಧರ್ಮದಲಿ ಮತಿಯುತರು.........
ಜನಸಮ್ಮತದೊಳೊಪ್ಪುವುದು ನೈಷದನೃಪನ ರಾಜ್ಯದಲಿ" ಎಂಬ ಚಿತ್ರಣ ನೀಡುತ್ತದೆ. ಇದು ರೂಢಮೂಲ ಆಚರಣೆಗಳ ಉಲ್ಲಂಘನೆಯಾಗದಂತೆ, ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವ ಪ್ರಮಾಣಬದ್ಧ ರೂಪಗಳ ರಕ್ಷಣೆಯ ಮೂಲಕ ಸಾಧಿಸುವ ಪಾರಂಪರಿಕ ಅಧಿಕಾರ ಕೇಂದ್ರಗಳ ಬಲವರ್ಧನೆಯ ಆಡಳಿತ. ಆಳುವ ಕೇಂದ್ರಗಳು ಉಲ್ಲೇಖಿಸುವ ಚರಿತ್ರೆಯ ಸುವರ್ಣಯುಗಗಳೆಲ್ಲವೂ ಬಹುಮಟ್ಟಿಗೆ ಈ ಮಾದರಿಯವುಗಳೇ ಆಗಿವೆ. ಇದೆಲ್ಲವನ್ನೂ ಕಾವ್ಯದೊಳಗೆ ನಿರೂಪಿಸುವವನು ರೋಮಶಮುನಿ! ಕಟ್ಟಲಾಗುವ ಚರಿತ್ರೆಗೂ ಚರಿತೆಯ ನಿರ್ಮಾತೃಗಳಿಗೂ ಇರುವ ರಾಜಕೀಯ ಸಂಬಂಧದ ನೆಲೆಯಲ್ಲಿ ಈ ವಿವರಗಳನ್ನು ಗಮನಿಸಬೇಕು.

ಸಾಂಸ್ಥಿಕ ಧರ್ಮ ಮಾನ್ಯ ಮಾಡಿದ ಮೌಲ್ಯಗಳ ಪ್ರಶ್ನೆಯಿಲ್ಲದ ಅನುಸರಣೆಯೇ, ಇಲ್ಲಿ ನಿರೂಪಿತವಾದ 'ಸದ್ಧರ್ಮದ ಮೆರೆದಾಟದ ತಾಣ'. ನಮ್ಮೆದುರಿಗಿನ ಮತೀಯ ಮೂಲಭೂತವಾದಿಗಳಿಗೆ, ಧಾರ್ಮಿಕ ನಾಯಕರುಗಳಿಗೆ ಪ್ರಜಾಸತ್ತಾತ್ಮಕಯುಗ ವರ್ತಮಾನದಲ್ಲಿ ಒದಗಿಸಿದ ಪ್ರಶ್ನಿಸುವ ಅವಕಾಶಗಳು ಧರ್ಮದ ಕೇಡಿನಂತೆ ಕಾಣಿಸುತ್ತವೆ. ಹಕ್ಕು ಕೇಳುವ ಎಲ್ಲಾ ಚಳವಳಿಗಳು ಅವರುಗಳಿಗೆ ಧರ್ಮನಾಶಕವಾಗಿ ಭಾಸವಾಗುತ್ತವೆ. ಇದಕ್ಕೆ ಅವಕಾಶವಾಗದ ಹಾಗೆ ಸಮ್ಮತಿಯನ್ನು ಉತ್ಪಾದನೆಗೈದು ಆಳುವ ಶಕ್ತಿಕೇಂದ್ರವು 'ಸದ್ಧರ್ಮಪರಿಪಾಲಕ'ನಾಗಿ ಸುವರ್ಣಯುಗದ ನೇತಾರನಾಗುತ್ತದೆ. ಇಂತಹ ಶಕ್ತಿಕೇಂದ್ರದಲ್ಲಿ 'ಮಂತ್ರಿ ಪುರೋಹಿತರೂ, ಅರಸನನ್ನು ರಂಜಿಸುವ ಮಲ್ಲಗಾಯಕರೂ, (ಗಣಿಕೆಯರಾಗಿ) ವನಿತೆಯರೂ' ಅವಕಾಶ ಪಡೆಯುತ್ತಾರೆ. ಅಧಿಕಾರ ಸ್ಥಾಪಿಸಲು ಕೊರಳು ನೀಡುವ ಯೋಧರಾಗಲೀ, ಬೆವರಿನ ಬೆಲೆಯನ್ನು ತೆರಿಗೆಯಾಗಿ ನೀಡುವ ಜನರಾಗಲೀ ಅಂಚಿನಲ್ಲಿಯೇ ಉಳಿದು ಬಿಡುತ್ತಾರೆ. ನಳಚರಿತೆ ಚಿತ್ರಿಸುವ ರಾಜಸಭೆಗಳ ಮಾದರಿಗಳು ಇದಕ್ಕಿಂತ ಭಿನ್ನವಲ್ಲ. ಎಲ್ಲ ಕಾಲಗಳ ಅರಸೊತ್ತಿಗೆಯ ಚರಿತೆ ಫಲಾನುಭವಿಗಳ ಕಣ್ಣಿನಲ್ಲಿ ವೈಭವಯುತ, ಧರ್ಮಪರ.

ಯುದ್ಧ ಮತ್ತು ವ್ಯಸನಗಳು ಅರಸುಚರಿತೆಯ ಜೊತೆಗೆ ಬಿಡಿಸಲಾಗದಂತೆ ಬೆಸೆದ ಸಂಗತಿಗಳು. ನಳ ಮತ್ತು ಪುಷ್ಕರರ ನಡುವಿನ ಅಧಿಕಾರ ಹಸ್ತಾಂತರದ ನಿರ್ಣಾಯಕ ಸಂದರ್ಭಗಳಾಗಿ ಎರಡು ಜೂಜುಗಳೇ ಬರುತ್ತವೆ. ರಾಜ್ಯ, ಜನಸಮುದಾಯ ಇವೆಲ್ಲವೂ ವ್ಯಕ್ತಿಯೊಬ್ಬನ ವ್ಯಸನಕ್ಕಾಗಿ ಒಡ್ಡಬಹುದಾದ ವಸ್ತುರೂಪದ ಸಂಗತಿಗಳಾಗುತ್ತವೆ. ಈ ಜೂಜಿನ ಜೊತೆಗೆ ಪ್ರಭುವಿನ ಪರಾಕ್ರಮ ಪ್ರಕಟನದ ಅಥವಾ ಆಸ್ತಿಗ್ರಹಣದ ಭಾಗವಾಗಿ ಯುದ್ಧವೂ ಘಟಿಸುತ್ತದೆ. ನಳಚರಿತೆಯ ಒಂಬತ್ತನೆಯ ಸಂಧಿಯಲ್ಲಿ ಸುಮಾರು ಹದಿನೆಂಟು ಷಟ್ಪದಿಗಳು ನಳ-ಪುಷ್ಕರರ ಸೇನೆಗಳ ನಡುವಿನ ಹೋರಾಟವನ್ನು ವರ್ಣಿಸುತ್ತವೆ. ಜೂಜಿನಲ್ಲಿ ಯಕಶ್ಚಿತ್ ವಸ್ತುವಾಗುವ ಅದೇ ಜನ ಇಲ್ಲಿ ತಮ್ಮ ತಮ್ಮ ರಾಜರುಗಳಿಗಾಗಿ ನೆತ್ತರಕೋಡಿ ಹರಿಸುತ್ತಾರೆ. ಅಪಾಯವಷ್ಟನ್ನೂ ಮೈಮೇಲೆ ಎಳೆದುಕೊಳ್ಳುವ, ರಕ್ತದ ಹೊಳೆಯನ್ನೇ ಉತ್ಪಾದಿಸಿ ತಮ್ಮನ್ನು ಅದರಲ್ಲಿಯೇ ಅದ್ದಿಕೊಳ್ಳಬಲ್ಲ ಸೇನೆಯೆಂಬುದು ಅರಸೊತ್ತಿಗೆಯ ಸೃಷ್ಟಿ.

ಅಧಿಕಾರದ ಚರಿತ್ರೆಯಲ್ಲಿ ಎಲ್ಲ ಪೀಠಗಳಡಿಯ ಹೆಣಗಳಾಗುತ್ತಾ ಬಂದ ಸಬಾಲ್ಟ್ರನ್‌ಗಳೇ ಜಯದ ಚಿಕ್ಕಾಸಿಗೆ ವಾರಸುದಾರರಾಗದೆಯೂ ವೀರತ್ವದ ಅಮಲಿನಲ್ಲಿ ತೇಲಿಸಲ್ಪಟ್ಟವರು. ಯುದ್ಧವಿಲ್ಲದೆ ಅರಸೊತ್ತಿಗೆಗೆ ಅಸ್ತಿತ್ವವೇಯಿಲ್ಲವೆಂಬಂತೆ ಪ್ರೇಮಕಥೆಗಳಾದ ರಾಜಕಥೆಗಳಲ್ಲಿಯೂ ಯುದ್ಧ ಚಿತ್ರಣಗಳು ಬೆರೆತುಕೊಂಡಂತಿವೆ. ನಳಚರಿತೆಯಲ್ಲಿ ಅಧಿಕಾರದ ಸ್ಥಿತ್ಯಂತರಗಳು ಜೂಜಿನಲ್ಲಿಯೇ ನಿರ್ಧರಿತವಾಗುತ್ತವೆಯಾದರೂ ನಳನಿಗೆ ಅಧಿಕಾರ ಬರುವ ಘಳಿಗೆಯಲ್ಲಿ ದೀರ್ಘವಾದ ಯುದ್ಧವೇ ಘಟಿಸುತ್ತದೆ. ಬಹುಶಃ ಅಧಿಕಾರದ ಚರಿತ್ರೆಯೊಂದನ್ನು ಹಿಂಸೆಯಿಂದ ಬೇರ್ಪಡಿಸಿ ನೋಡಲಾರದ ವಾಸ್ತವವನ್ನೇ ಕವಿ ಕನಕ ಈ ಮೂಲಕ ಸೂಚಿಸುತ್ತಿರಬಹುದು.

ಅಧಿಕಾರದ ಚರಿತ್ರೆಯಲ್ಲಿ ಎಲ್ಲ ಪೀಠಗಳಡಿಯ ಹೆಣಗಳಾಗುತ್ತಾ ಬಂದ ಸಬಾಲ್ಟ್ರನ್‌ಗಳೇ ಜಯದ ಚಿಕ್ಕಾಸಿಗೆ ವಾರಸುದಾರರಾಗದೆಯೂ ವೀರತ್ವದ ಅಮಲಿನಲ್ಲಿ ತೇಲಿ ಸಲ್ಪಟ್ಟವರು. ಯುದ್ಧವಿಲ್ಲದೆ ಅರಸೊತ್ತಿಗೆಗೆ ಅಸ್ತಿತ್ವವೇಯಿಲ್ಲ ವೆಂಬಂತೆ ಪ್ರೇಮಕಥೆಗಳಾದ ರಾಜಕಥೆಗಳಲ್ಲಿಯೂ ಯುದ್ಧ ಚಿತ್ರಣಗಳು ಬೆರೆತುಕೊಂಡಂತಿವೆ. ನಳಚರಿತೆಯಲ್ಲಿ ಅಧಿಕಾರದ ಸ್ಥಿತ್ಯಂತರಗಳು ಜೂಜಿನಲ್ಲಿಯೇ ನಿರ್ಧರಿತವಾಗುತ್ತವೆಯಾದರೂ ನಳನಿಗೆ ಅಧಿಕಾರ ಬರುವ ಘಳಿಗೆಯಲ್ಲಿ ದೀರ್ಘವಾದ ಯುದ್ಧವೇ ಘಟಿಸುತ್ತದೆ. ಬಹುಶಃ ಅಧಿಕಾರದ ಚರಿತ್ರೆಯೊಂದನ್ನು ಹಿಂಸೆಯಿಂದ ಬೇರ್ಪಡಿಸಿ ನೋಡಲಾರದ ವಾಸ್ತವವನ್ನೇ ಕವಿ ಕನಕ ಈ ಮೂಲಕ ಸೂಚಿಸುತ್ತಿರಬಹುದು.

ಅರಸೊತ್ತಿಗೆಯ ಈ ನಕಾರಾತ್ಮಕ ಮುಖಗಳನ್ನು ತೋರಿದ ಕೃತಿ, ತನ್ನ ಘೋಷಣೆಯ ನಿರ್ಮಲ ಚಾರಿತ್ರ್ಯದ ಭಾಗವಾಗಿ ನಳಪ್ರಭುವಿನ ಮಾನವೀಯ ಮುಖವೊಂದನ್ನು ಅನಾವರಣ ಮಾಡುತ್ತದೆ. ಸಾಂಸ್ಥಿಕ ವ್ಯವಸ್ಥೆಯೊಂದು ತನ್ನ ರಾಚನಿಕ ಸ್ವರೂಪಕ್ಕನುಸಾರವಾಗಿ ಪಾರಂಪರಿಕವಾಗಿ ಪಡೆಯಬಹುದಾದ ಅಪಮೌಲ್ಯಗಳ ಜೊತೆಗೆ ತನ್ನನ್ನು ಮಾನವೀಯವಾಗಿಸಿಕೊಳ್ಳುವ ದಾರಿಯಿರುವುದನ್ನೂ ಕೃತಿ ದಾಖಲಿಸುತ್ತದೆ. ಗಮನಿಸಬೇಕಾದ ಸಂಗತಿಯೆಂದರೆ ಅರಸನಿಗೆ ಇಂತಹ ಮಾನವೀಯತೆಯ ಪಾಠ ದೊರೆಯುವುದು ಆಚಾರ್ಯ ಪರಂಪರೆಯಿಂದಲ್ಲ, ಬದಲಾಗಿ ಒಂದು ಸಾಮಾನ್ಯ ಹಂಸದಿಂದ! ಪಾಠವಷ್ಟೇ ಮುಖ್ಯವಲ್ಲ, ಪಾಠಕನೂ ಅದಕ್ಕೆ ತಕ್ಕವನಾಗಿರಬೇಕಲ್ಲವೇ? ನಳಚರಿತೆ ಪಾಠದೊಂದಿಗೆ ಪಾಠಕನನ್ನೂ ಅದಕ್ಕೆ ತಕ್ಕವನಾಗಿಯೇ ಚಿತ್ರಿಸುತ್ತದೆ.

ರಾಜರುಗಳ ಸಪ್ತವ್ಯಸನಗಳಲ್ಲೊಂದು ಬೇಟೆ. ಹೆಸರೇ ಸೂಚಿಸುವಂತೆ ಅದು ಜೀವಹಿಂಸೆಯ ಮೂಲಕ ಮಾಂಸ ಮತ್ತು ಮೋಜನ್ನು ಪಡೆಯುವ ಮಾರ್ಗ. ನಳ ಹಂಸವನ್ನು ಬೇಟೆಯಾಗುವುದು ಈ ಕೊಲುದಾಣದಲ್ಲಿ. ಕೊಲ್ಲಲೆಂದೇ ಕಾಡಿಗೆ ದಾಳಿಯಿಟ್ಟವರಿಗೆ ಜೀವದ ಬೆಲೆಯ ಪಾಠ ಹೇಳುವ ಬಲಿಪಶುವಿನ ಸ್ಥಾನದಲ್ಲಿರುವ ಹಂಸ ನಳನಿಗೆ ವಿನಯಪೂರ್ವಕವಾಗಿ ಮತ್ತಷ್ಟೇ ತೀಕ್ಷ್ಣವಾಗಿ ಪ್ರಶ್ನೆಯನ್ನಿಡುತ್ತದೆ. ಹಂಸದ ರೂಪಕ್ಕೆ ಮಾರುಹೋಗಿ ಅದರೆಡೆಗೆ ಕೈಚಾಚುವ ನಳನ ಕೈಯ್ಯಲ್ಲಿ ಬಂಧಿಯಾಗುವ ಹಂಸ ರಾಜನಾದವನು ಪಾಲಿಸಬೇಕಾದ ರಾಜಧರ್ಮದ ಪಾಠ ಹೇಳುತ್ತಾ, ಈ ಹೊತ್ತಿನಲ್ಲಿ ಹೇಳುವ ಪ್ರತಿಯೊಂದು ಮಾತು ಅಧಿಕಾರದ ಹಿಂಸೆಯನ್ನು ಮೊನೆಮಾತುಗಳಾಗಿ ಇರಿಯತ್ತವೆ.

"ಕೈಸದರದವರನು ಕೊಲುವುದುಚಿತವೆ ಹೇಳು ?"
"ತರವೆ ಬಿಡು ಪರಹಿಂಸೆ ದೋಷವಿದು"
"(ನನ್ನಮನೆಯಲಿ)ಮಡದಿಸುತರುಮ್ಮಳವನೋಡು"

ತನ್ನ ಪ್ರಶ್ನೆಗಳ ಮೂಲಕ ಮಾತನಾಡಿದ ಹಂಸದ ಮಾತಿಗೆ ನಳ ತೋರುವ ಪ್ರತಿಕ್ರಿಯೆ ಹೌಲಿಕವಾದುದು. ಆತ ಉತ್ತರಿಸುವುದಿಲ್ಲ, ಸಮರ್ಥಿಸಿಕೊಳ್ಳುವುದಿಲ್ಲ, ಮಾತನಾಡುವುದಿಲ್ಲ, ನಾಚುತ್ತಾನೆ!

ಈ ಸಂದರ್ಭವನ್ನು ಕಾವ್ಯದಾಚೆಗಿನ ಎಲ್ಲ ಬಗೆಯ ಲಭ್ಯವಾಗುವ ಪಾಲು ಮತ್ತು ಆಧ್ಯತೆಗಳು ಅಧಿ ಕಾರ ಹೊಂದಿದ ವರ್ಗದ ಆಸಕ್ತಿಗಳನ್ನು ಅವಲಂಬಿಸಿರುತ್ತದೆ. ನಳಚರಿತೆಯ ಮುಖ್ಯವಸ್ತು ಸಂಯೋಗ ವಿಯೋಗ-ಪುನಃಸಂಯೋಗದ ವಿವಿಧ ಹಂತಗಳಲ್ಲಿ ಅನಾವರಣಗೊಳ್ಳುವ ಪ್ರೀತಿ. ಕುಟುಂಬವೆಂಬುದು ಪ್ರೀತಿಯ ಬುನಾದಿಯ ಮೇಲೆ ಕಟ್ಟಲಾಗುವ ಸಂಯೋಜಿತ ಘಟಕ. ಇದರ ಸಮಾನಪಾಲುದಾರರಾದ ಗಂಡು-ಹೆಣ್ಣುಗಳು ಸಂಸ್ಕೃತಿಯೆಂದು ಹೇಳಲಾಗುವ ಸಾಮಾಜಿಕ ಜೀವನಕ್ರಮದಲ್ಲಿ ಸ್ಥಿತಗೊಂಡಿರುವುದು ಮಾತ್ರ ಅಧಿಕಾರ ಮತ್ತು ಅಧೀನ ಸಂಬಂಧದ ನೆಲೆಯಲ್ಲಿ.

ನಮ್ಮೆದುರಿಗಿನ ಅಧಿಕಾರ ಮತ್ತು ಹಿಂಸೆಯ ಮಾದರಿಗಳಲ್ಲಿ ಬಹುತ್ವವಿದೆ. ಮತೀಯ ನೆಲೆಯಲ್ಲಿ ನಿರೂಪಣೆಗೊಳ್ಳುತಿರುವ ರಾಷ್ಟ್ರೀಯವಾದದ ಹಿಂಸಾತ್ಮಕ ಆವೃತ್ತಿಗಳು ಪರಿಕಲ್ಪಿಸಿ ಕೊಡುತ್ತಿರುವ 'ಸ್ವ' ಮತ್ತು 'ಅನ್ಯ'ದ ಮಾದರಿಗಳು ಪ್ರೇರೇಪಿಸುತ್ತಿರುವ ಹಿಂಸೆ ನಮ್ಮೆದುರಿಗೇ ಸಂಭವಿಸುತ್ತಿರುವ ವಾಸ್ತವವಿದೆ. ನೆಲದ ಮೇಲಿನ ಗೌರ ವರಾಹಿತ್ಯದ ಆರೋಪದಲ್ಲಿ ಸಮುದಾಯಗಳ ಮೂಲೋ ತ್ಪಾಟನೆಗೆ ನೆಲಪ್ರೀತಿಯ ಗೌರವ ದಕ್ಕಿಸಿಕೊಡಲಾಗುತ್ತಿದೆ. ಅಭಿವೃದ್ಧಿಯ ಹೊಸ ಪರಿಭಾಷೆಗಳಡಿಗೆ ಹೊಸ ಆರ್ಥಿಕ ವಲಯಗಳ ನಿರ್ಮಾಣದ ಮೂಲಕ ಉತ್ಪಾದನೆಗೊಳ್ಳುತ್ತಿರುವ ಹಿಂಸೆಯನ್ನು ಸಮೃದ್ಧಿಯ ಹೆಸರಲ್ಲಿ ಸಮರ್ಥಿಸಿಕೊಳ್ಳಲಾಗುತ್ತಿದೆ. ಶತಮಾನಗಳ ಕಾಲದಿಂದಲೂ ಬದುಕಿಕೊಂಡು ಬಂದ ನೆಲೆಗಳನ್ನು ಕಳೆದುಕೊಳ್ಳುವುದು ನ್ಯಾಯ ಸಮ್ಮತವಾಗುತ್ತಿವೆ. ತಮ್ಮ ನೆಲೆಗಳ ಹಕ್ಕು ಕೇಳುವುದು ರಾಷ್ಟ್ರ ಮತ್ತು ನೆಲದ್ರೋಹದ ಪ್ರಶ್ನೆಯೆನಿಸುತ್ತಿವೆ.

ಜಾತಿನೆಲೆಯ ಅಧಿಕಾರ ಶಕ್ತಿಗಳು ತಮ್ಮ ಪಾರಂಪರಿಕ ಯಜಮಾನ್ಯಕ್ಕಾಗಿ ನಡೆಸುವ ದೌರ್ಜನ್ಯಗಳನ್ನು ಸಹಾನುಭೂತಿಯ ಕಣ್ಣುಗಳಿಂದ ನೋಡಲಾಗುತ್ತಿದೆ. ಇದರ ಜೊತೆಗೆ ಸಮುದಾಯ ಸಂಪತ್ತಿನ ಯಜಮಾನಿಕೆಗಾಗಿ ನಡೆಸುವ ಎಲ್ಲ ಬಗೆಯ ಭ್ರಷ್ಟಾಚಾರಗಳು ಸಾಮಾಜಿಕ ಒಪ್ಪಿಗೆಯನ್ನು ಪಡೆದುಕೊಳ್ಳುತ್ತಲೇ ಸಾಗಿವೆ. ಪ್ರಭುತ್ವಶಕ್ತಿ ತಾನು ಮಾಡುವ ದುಡಿಮೆ/ಕ್ರಿಯೆಯನ್ನು ಎಲ್ಲ ಬಗೆಯ ನೈತಿಕತೆಯಿಂದ ವಿಮುಖವಾಗಿಸಿಕೊಂಡು ಉತ್ತರದಾಯಿತ್ವವನ್ನಾಗಲೀ, ನೈತಿಕ ಭಯವನ್ನಾಗಲೀ ಎದುರಾಗುತ್ತಲೇ ಇಲ್ಲ. ಸಹಜವಾಗಿ ಸಂವಾದವನ್ನೇ ನಿರಾಕರಿಸಿಕೊಳ್ಳುತ್ತಾ ಬರುವ ಮೂಲಕ ಸಂವೇದನೆಯನ್ನು ಕಳೆದುಕೊಂಡಿರುವ ಈ ಅಧಿಕಾರ ಕೇಂದ್ರಗಳು ನಾಚುವ ಪ್ರಶ್ನೆಯನ್ನೇ ಎದುರುಗೊಳ್ಳುತ್ತಿಲ್ಲ.

ಹೀಗೆ ಅಧಿಕಾರ/ಪ್ರಭುತ್ವವನ್ನು ರಾಜತ್ವದ ಸಂಸ್ಥೆಯಿಂದಾಚೆಗೆ ವಿಸ್ತರಿಸಿಕೊಂಡು ನೋಡಿದಾಗ ಕಾವ್ಯ ಕೊಡುವ ಪ್ರಭುಚರಿತದ ಮಾನವೀಯ ಮುಖ ಮತ್ತಷ್ಟು ಜೀವಪರವಾಗಿ ಕಾಣುತ್ತದೆ. ರಾಷ್ಟ್ರವೆಂಬ ಕಲ್ಪಿತಾವೃತ್ತಿಯ ಸಂದರ್ಭದಲ್ಲಿ ಮತೀಯ ಸಂಖ್ಯಾಶಕ್ತಿಗಳೂ, ಜಾತಿ ಮತ್ತು ಆರ್ಥಿಕತೆಯ ಸಂದರ್ಭದಲ್ಲಿ ಜಾತಿ ಹಾಗೂ ವರ್ಗಶಕ್ತಿಗಳೂ, ತಮ್ಮ ನಡೆಯಲ್ಲಿ ಈ ನೆಲೆಯ ಜೀವಪರವಾದ ಸಂವಾದ ಸಾಧ್ಯತೆಯನ್ನು ಮುಕ್ತವಾಗಿರಿಸಿ ದಲ್ಲಿ ಆರೋಗ್ಯಕರವಾದ ಅಧಿಕಾರದ ಚರಿತ್ರೆ ಖಂಡಿತಾ ಸಾಧ್ಯವಿದೆ. 'ಬದುಕಿ ಬದುಕಲು ಬಿಡಿ'ಯೆಂಬುದು ಎಲ್ಲ ಕಾಲದ ಅಧಿಕಾರ ವಂಚಿತರ ಕೂಗು ಮತ್ತು ಆಶಯ. ಭಾಷೆ ಮೂಲಭೂತವಾಗಿ ಅಧಿಕಾರ ಹೊಂದಿದವರ ಸ್ವತ್ತು. ಅಧಿಕಾರರಹಿತರು ಮಾತಿಲ್ಲದವರೂ ಹೌದು. ಪಶುಪಕ್ಷಿಗಳು ಹಕ್ಕೊತ್ತಾಯಕ್ಕಾಗಿ ಮಾನವ ಭಾಷೆಯ ಮಾಧ್ಯಮವನ್ನು ಬಳಸುವುದು ದನಿಯಿಲ್ಲದವರು ದನಿತೆಗೆದು ಮಾತನಾಡಿದಂತೆಯೇ. ನಳನ ಪ್ರತಿಕ್ರಿಯೆ ಅಂತಹ ದಮನಿತರ ನಿರೀಕ್ಷೆಯ ಮೂರ್ತರೂಪ.

ಮತೀಯನೆಲೆಯಲ್ಲಿ ನಿರೂಪಣೆಗೊಳ್ಳುತಿರುವ ರಾಷ್ಟ್ರೀಯವಾದದ ಹಿಂಸಾತ್ಮಕ ಆವೃತ್ತಿಗಳು ಪರಿಕಲ್ಪಿಸಿಕೊಡುತ್ತಿರುವ 'ಸ್ವ' ಮತ್ತು 'ಅನ್ಯ'ದ ಮಾದರಿಗಳು ಪ್ರೇರೇಪಿಸುತ್ತಿರುವ ಹಿಂಸೆ ನಮ್ಮೆದುರಿಗೇ ಸಂಭವಿಸುತ್ತಿರುವ ವಾಸ್ತವವಿದೆ. ನೆಲದಮೇಲಿನ ಗೌರವ ರಾಹಿತ್ಯದ ಆರೋಪದಲ್ಲಿ ಸಮುದಾಯಗಳ ಮೂಲೋತ್ಪಾಟನೆಗೆ ನೆಲಪ್ರೀತಿಯ ಗೌರವ ದಕ್ಕಿಸಿಕೊಡಲಾಗುತ್ತಿದೆ. ಅಭಿವೃದ್ಧಿಯ ಹೊಸ ಪರಿಭಾಷೆಗಳಡಿಗೆ ಹೊಸ ಆರ್ಥಿಕ ವಲಯಗಳ ನಿರ್ಮಾಣದ ಮೂಲಕ ಉತ್ಪಾದನೆಗೊಳ್ಳುತ್ತಿರುವ ಹಿಂಸೆಯನ್ನು ಸಮೃದ್ಧಿಯ ಹೆಸರಲ್ಲಿ ಸಮರ್ಥಿಸಿಕೊಳ್ಳಲಾಗುತ್ತಿದೆ.

ಹಿಂಸೆಯನ್ನು ಧರಿಸಿಕೊಂಡೇ ಇರುವ ಪ್ರಭುತ್ವವು ಹಿಂಸೆಯನ್ನು ತ್ಯಜಿಸಿಬಿಡಬೇಕೆನ್ನುವುದಕ್ಕಿಂತಲೂ, ಅದನ್ನು ಆಯ್ಕೆಯ ಮೇಲೆ ಪ್ರಯೋಗಿಸಬೇಕೆಂಬುದು ನಳಚರಿತೆಯ ಬಹುಮುಖ್ಯ ಧ್ವನಿ. ಅಶಕ್ತರ ಮೇಲೆ ಬಲ ಪ್ರಯೋಗಿಸುತ್ತಲೇ ಅವರ ಸಹನೆಯನ್ನೂ ಆಗ್ರಹಿಸುವ ಪ್ರಭುತ್ವ ಪ್ರಾಯೋಜಿತ ಹಿಂಸೆಗಳಿಗೆ ಪ್ರತಿಯಾಗಿ ವಿರೋಧದ ಕೂಗುಗಳು ಚರಿತ್ರೆಯುದ್ದಕ್ಕೂ ಏಳುತ್ತಲೇ ಬಂದಿವೆ. ಆದರೆ ಕೇಳಿಸಿಕೊಳ್ಳುವ ಮತ್ತು ನಾಚುವ ಗುಣವನ್ನೇ ಕಳೆದುಕೊಂಡಿರುವ ಪ್ರಭುತ್ವದ ಕಾರ್ಖಾನೆಗಳಿಂದ ಗ್ರೆಗರಿ ಪತ್ರಾವೊ, ಎಸ್‌ಇಜೆಡ್, ರಾಷ್ಟ್ರೀಯ ಉದ್ಯಾನವನ, ಖೈರ್ಲಾಂಜಿ, ಬೆಂಡಿಗೇರಿ, ಕಂಬಾಲಪಲ್ಲಿ, ದಂತೇವಾಡ, ಗೋದ್ರಾಗಳೆಂಬ ಸರಕುಗಳು ಉತ್ಪಾದಿತವಾಗುತ್ತಲೇ ಸಾಗಿವೆ. ಸಂವೇದನೆಯನ್ನೇ ಕಳೆದುಕೊಂಡಿರುವ ಶಕ್ತಿ ಕೇಂದ್ರಗಳ ಈ ಅಧಿಕಾರ ಚರಿತ್ರೆಯ ನಡುವೆ, 'ಕೇಳುವ ಕಿವಿ ಮತ್ತು ನಾಚುವ ಮನಸ್ಸು'ಗಳೆರಡನ್ನೂ ಕಾಪಿಟ್ಟುಕೊಂಡ ನಳನ ಚರಿತೆ ಅರಸೊತ್ತಿಗೆಗೂ ಒಂದು ವಿಮಲ ಚರಿತೆಯ ಸೇರ್ಪಡೆಯನ್ನು ಸಾಧ್ಯವಾಗಿಸಿದೆ.

ಸತಿಚರಿತೆ:

ಚರಿತ್ರೆಯ ವ್ಯಕ್ತ ಸಂಗತಿಗಳಲ್ಲಿ ಸಾಮಾಜಿಕ ಘಟಕಗಳಿಗೆ ಲಭ್ಯವಾಗುವ ಪಾಲು ಮತ್ತು ಆಧ್ಯತೆಗಳು ಅಧಿಕಾರ ಹೊಂದಿದ ವರ್ಗದ ಆಸಕ್ತಿಗಳನ್ನು ಅವಲಂಬಿಸಿರುತ್ತದೆ. ನಳಚರಿತೆಯ ಮುಖ್ಯವಸ್ತು ಸಂಯೋಗ-ವಿಯೋಗ-ಪುನಃಸಂಯೋಗದ ವಿವಿಧ ಹಂತಗಳಲ್ಲಿ ಅನಾವರಣಗೊಳ್ಳುವ ಪ್ರೀತಿ. ಕುಟುಂಬವೆಂಬುದು ಪ್ರೀತಿಯ ಬುನಾದಿಯ ಮೇಲೆ ಕಟ್ಟಲಾಗುವ ಸಂಯೋಜಿತ ಘಟಕ. ಇದರ ಸಮಾನಪಾಲುದಾರರಾದ ಗಂಡು-ಹೆಣ್ಣುಗಳು ಸಂಸ್ಕೃತಿಯೆಂದು ಹೇಳಲಾಗುವ ಸಾಮಾಜಿಕ ಜೀವನಕ್ರಮದಲ್ಲಿ ಸ್ಥಿತಗೊಂಡಿರುವುದು ಮಾತ್ರ ಅಧಿಕಾರ ಮತ್ತು ಅಧೀನ ಸಂಬಂಧದ ನೆಲೆಯಲ್ಲಿ.

ಹೆಣ್ಣು ತನ್ನ ಲೈಂಗಿಕಾವಸ್ಥೆಯ ಕಾರಣದಿಂದ ಮಹಿಳೆಯೆಂಬ ಸಾಮಾನ್ಯ ಮಾದರಿಯಲ್ಲಿ ಗುರುತಿಸಲ್ಪಡುವುದಕ್ಕಿಂತ, ಅಪೇಕ್ಷಿತ ಮತ್ತು ನಿರಾಕೃತ ವಿನ್ಯಾಸಗಳಲ್ಲಿ ವಿವರಿಸಲ್ಪಡುವುದನ್ನು ಕಾಣುತ್ತೇವೆ. ಹೆಣ್ಣು ಎನ್ನುವ ಲಿಂಗಾಧಾರಿತ ವಿಭಾಗೀಕರಣದಲ್ಲಿ ಗುರುತಿಸುವುದಕ್ಕೂ, ಸತಿ/ಸಾಧ್ವಿ/ಗರತಿಯೆಂಬ ಅಪೇಕ್ಷಿತ ನಿರ್ಮಿತ ಮಾದರಿಗಳ ಮೂಲಕ ಗುರುತಿಸುವುದಕ್ಕೂ ಅಂತರವಿದೆ. ವಂಚನೆ, ಚಂಚಲತೆ, ಮೋಸಗಳ ಆವೃತ್ತಿಯಂತಿರುವ ಹೆಣ್ತನದ ಜೊತೆಗಿನ ಒಡನಾಟವೆಂದರೆ ಅದು ಅಪಾಯದ ಜೊತೆಗಿನ ಒಡನಾಟದಂತೆ. ನಳಚರಿತೆಯಂತಹ ಪ್ರೀತಿಯ ಕಥೆಯೂ ಹೆಣ್ಣನ್ನು ಚಿತ್ರಿಸುವುದು ಇದಕ್ಕಿಂತ ಭಿನ್ನವಾಗೇನೂ ಅಲ್ಲ. ದಮಯಂತಿಯನ್ನು ಬಯಸುವ ಇಂದ್ರ ಆಕೆಯೊಡನೆ ತನಗಾಗಿ ದೌತ್ಯ ನಡೆಸುವಂತೆ ಕೇಳಿದಾಗ, ಅದಕ್ಕೆ ಪ್ರತಿಕ್ರಿಯೆ ನೀಡುವ ನಳ ಹೆಣ್ಣುಗಳ ಸ್ವಭಾವಗಳ ವ್ಯಾಖ್ಯಾನಕ್ಕೆ ಇಳಿದುಬಿಡುತ್ತಾನೆ.

ಅವನ ವಿವರಣೆಯ ಮೇರೆಗೆ, "ಇಂದುಮುಖಿಯರ ಗುಣವ ತಿಳಿಯಲಸಾಧ್ಯ", "ಮಾಯೆಗಳ ಹೆಣ್ಣುವರು.. ನಿತ್ಯದಿಹುಸಿಯನಾಡುವರು. ...ಅನ್ಯಾಯಮಾಡುವರು", "ಮನವವಂಚಿಸಿ ಮಾತನಾಡುವರು". ಹೀಗೆ ಕಟ್ಟಲಾಗಿರುವ ಹೆಣ್ತನದಲ್ಲಿ ಮಾಯೆ, ವಂಚಕಿಯೆಂಬ ಅಪವಿತ್ರೀಕರಣಗೊಂಡ ಮಹಿಳಾಚರಿತೆಯೇ ತೆರೆದುಕೊಳ್ಳುತ್ತದೆ. ದೋಷಾರೋಪಣೆಗೆ ಗುರಿಯಾದ ನಡತೆಯುಳ್ಳ ಗುಣಭಂಜಕಿಯಾಗಿಯೇ ಕಟ್ಟಿಕೊಂಡ ಸ್ತ್ರೀತ್ವದ ಅಚ್ಚನ್ನು ಹೀಗೆ ಕಥಾನಾಯಕನೇ ಹೊರಗೆಡಹುವ ಮೂಲಕ ಅದನ್ನೊಂದು ನಂಬಬಾರದ ಜೈವಿಕ ಮಾದರಿಯಾಗಿ ಘೋಷಿಸುವಂತಿದೆ.

ಪೂರ್ಣ ನಕಾರಾತ್ಮಕವಾದ ಸ್ತ್ರೀತ್ವದ ಮೇಲಣ ಮಾದರಿಗಿಂತ ಭಿನ್ನವಾಗಿ ಮೌಲ್ಯದ ನೆಲೆಯಲ್ಲಿ ಕಟ್ಟಲಾದ ಇನ್ನೊಂದು ಅಚ್ಚು ಪತಿವ್ರತೆಯದ್ದು ಅಥವಾ ಸತಿತನದ್ದು. ಈ ಗೌರವದ ಪೀಠಕ್ಕೂ ನೀತಿಸಂಹಿತೆಯುಂಟು. ಹೆಣ್ತನದ ಅಪವಿತ್ರೀಕೃತ ಮಾದರಿಗಿಂತ ಪೂರ್ಣ ಭಿನ್ನವಾದ ಗೌರವವನ್ನು ಪಡೆಯಲು ನೀತಿಸಂಹಿತೆಯನ್ನು ಚಾಚೂ ತಪ್ಪದೆ ಪಾಲಿಸಬೇಕು. ನಳಚರಿತೆ ದಮಯಂತಿಯನ್ನು ಚಿತ್ರಿಸುವುದೇ ಈ ನೀತಿಸಂಹಿತೆಯನ್ನು ತನ್ನ ಕರ್ತವ್ಯವೆಂಬಂತೆ ಪಾಲಿಸುವ ಸತಿಯರುಗಳ ಪ್ರತಿನಿಧಿಯಾಗಿ. ಪತಿಯಾದವನು ನಡುಗಾಡಿನಲ್ಲಿ ಬಿಟ್ಟುಕಳೆದ ತಪ್ಪಿತಸ್ಥನಾಗಿಯೂ, ಆತನಿಂದ ದೂರಾದುದಕ್ಕೆ ಸಕಲಸುಖಗಳನ್ನು ತ್ಯಾಗಮಾಡಿ ಜೀವಿಸುವ ವ್ರತನಿಷ್ಠ ಬದುಕು ತನ್ನಂತವಳ ಅನಿವಾರ್ಯ ಆಯ್ಕೆಯೆಂಬಂತೆ ದಮಯಂತಿ, "ಪತಿವಿಹೀನೆಯಾದ ಸತಿಗೆ ಸುವ್ರತ, ಸುಭೋಜನ, ಸುಖಗಳೆಂಬುದು ಯೋಗ್ಯವೇ"ಎಂದೇ ಒಪ್ಪಿಕೊಳ್ಳುತ್ತಾಳೆ. ಆದರೆ ಸತಿಯರ ರೂಢಿಪ್ರಜ್ಞೆಯ ಭಾಗವಾಗಿಯಷ್ಟೇ ಈ ಸಂಹಿತೆಗಳು ಚಾಲ್ತಿಯಲ್ಲಿರುವುದಿಲ್ಲ.

ಈ ಅಚ್ಚಿನ ಫಲಾನುಭವಿಗಳಾದ ಪುರುಷರೂ ಅಚ್ಚಿನ ಅನುಸರಣೆ ಮತ್ತು ಉಲ್ಲಂಘನೆಗೆ ಪ್ರಮಾಣಪತ್ರ ನೀಡುವ ಮೂಲಕ ಅದರ ರಕ್ಷಣೆಗೆ ನಿಂತವರೇ. ಪತಿಯ ಗುಣ ದೋಷವನ್ನೇ ಪ್ರಶ್ನಿಸದಿರುವುದು 'ಪತಿವ್ರತವನಾಚರಿಸುವ' ಬಗೆಯೆಂದು ವ್ಯಾಖ್ಯಾನಿಸುವ ನಳ, ದಮಯಂತಿಯ ಪುನಸ್ವಯಂವರಕ್ಕೆ ಪ್ರತಿಕ್ರಿಯಿಸುವುದು, 'ದ್ರೋಹಿಯಾ ದಮಯಂತಿ' ಎಂದು. ತನ್ನದೇ ಕಾರಣ

ದಿಂದಾಗಿ ನೆಲೆಕಳೆದುಕೊಳ್ಳುವಂತಾದ ಹೆಣ್ಣು, ತನ್ನ ಹಂಗು ಹರಿದುಕೊಳ್ಳುತ್ತದೆ ಎನ್ನುವ ಘಳಿಗೆಯಲ್ಲಿ ಅದನ್ನು ದ್ರೋಹವೆಂದೇ ಕರೆಯಬಲ್ಲ ಪುರುಷಾಧಿಕಾರದ ಧ್ವನಿಯಲ್ಲೇ ಅವನು ಮಾತನಾಡುತ್ತಾನೆ. ಕಾವ್ಯದ ನಡುವೆ ಹಾದುಹೋಗುವ ಹೇಳಿಕೆಗಳಂತಿರುವ ಈ ಮಾತುಗಳು ಹೆಣ್ಣಿನ ಸಾಮಾಜಿಕ ಚರಿತ್ರೆಯ ದೃಷ್ಟಿಯಿಂದ ಬಹಳ ಮುಖ್ಯವಾದ ಮಾತುಗಳೂ ಹೌದು.

ಗಮನಿಸಬೇಕಾದ ಅಂಶವೆಂದರೆ ನಳಚರಿತೆಯಲ್ಲಿ ನಳ ತೊರೆದ ತರುವಾಯದ ದಮಯಂತಿಯ ಪಾಡು ಕೌಟುಂಬಿಕ ಚೌಕಟ್ಟಿನ ಹೊರಗಡೆ ಬಿದ್ದ ಹೆಣ್ಣಿನ ಏಕಾಂಗಿ ಹೋರಾಟವನ್ನು ನೆನಪಿಸುವಂತಿರುವುದು. ಈ ದೇಶದೊಳಗೆ ಅನಾದಿಕಾಲದಿಂದ ಗಂಡಂದಿರ ಜೂಜು, ವ್ಯಸನಗಳಿಗೆ ಬಲಿಯಾಗಿ ಬದುಕನ್ನು ಸರಿದಾರಿಗೆ ತರಲು ಹೋರಾಡುತ್ತಾ ಬಂದ ಅಸಂಖ್ಯ ತಾಯಂದಿರ ಪಡಿಪಾಟಲು ದಮಯಂತಿಗಿಂತ ಭಿನ್ನವೇನೂ ಅಲ್ಲ. ಕುಟುಂಬದೊಳಗಡೆ ಎರಡನೆ ಸ್ಥಾನಕ್ಕೆ ತಳ್ಳಲ್ಪಟ್ಟೂ, ಅಧೀನಾವಸ್ಥೆಯನ್ನು ಅನುಭವಿಸಿಯೂ ಸಂಸಾರವನ್ನು ಮುನ್ನಡೆಸುವ ಹೊಣೆಗಾರಿಕೆಯೊಂದಿಗೆ, ಗಂಡ ಬಿಟ್ಟವಳೆಂಬ ಅಪಖ್ಯಾತಿಯಲ್ಲಿ ಬದುಕುತ್ತಿರುವ ಅಸಂಖ್ಯ ಒಂಟಿ ತಾಯಂದಿರ ಚರಿತ್ರೆಯ ಜೊತೆಗೆ ದಮಯಂತಿಯ ಚರಿತ್ರೆಯೂ ಸೇರಿಕೊಳ್ಳುತ್ತದೆ.

ಕುಟುಂಬವೆಂಬ ರಚನೆ ಸಿದ್ಧಗೊಂಡ ಮೇಲೆ ಪ್ರೀತಿಯ ನಲ್ಲನ ಜಾಗ ಪತಿಯದಾಗುತ್ತದೆ. ಹಾಗಾಗಿ ಪ್ರೇಮಕ್ಕಿಂತ ಹೆಚ್ಚಾಗಿ ಸಾಮಾಜಿಕ ಸ್ಥಾನಮಾನಕ್ಕಾಗಿ ಗಂಡನೆಂಬವನ ಕೂಟ ಈ ಒಂಟಿ ತಾಯಂದಿರ ಪಾಲಿಗೆ ಅನಿವಾರ್ಯವಾಗುವ ಹಾಗೆ ದಮಯಂತಿಗೂ ಪತಿವಿರಹಿತೆಯ ಬದುಕಿನ ಬಿಡುಗಡೆ ಮುಖ್ಯವಾಗುತ್ತದೆ. ಹೀಗಾದಾಗ ಗಂಡಂದಿರು ಹುಡುಕಿಕೊಳ್ಳಬೇಕಾದ ವಸ್ತುವಾಗುತ್ತಾರೆ. ಇಂತಹ ಸ್ಥಿತಿಯಲ್ಲಿಯೂ ಹುಡುಕಿ ದಕ್ಕಿಸಿಕೊಳ್ಳುವ ಗಂಡ ದಯಾಪರನಾಗಿಯೂ, ಹುಡುಕಿಕೊಂಡವಳು ಅವನ ಕರುಣೆಗೆ ಬಾಜನಳಾದಂತವಳಾಗಿಯೂ ಪರಿಭಾವಿಸಲ್ಪಡುತ್ತಾರೆ!. ಅದು ಅವಳ ಚರಿತ್ರೆಯಾಗದೆ ಅವನ ಚರಿತ್ರೆಯಾಗುತ್ತದೆ.

ಕುಟುಂಬವೆಂಬ ರಚನೆ ಸಿದ್ಧಗೊಂಡ ಮೇಲೆ ಪ್ರೀತಿಯ ನಲ್ಲನ ಜಾಗ ಪತಿಯದಾಗುತ್ತದೆ. ಹಾಗಾಗಿ ಪ್ರೇಮಕ್ಕಿಂತ ಹೆಚ್ಚಾಗಿ ಸಾಮಾಜಿಕ ಸ್ಥಾನಮಾನಕ್ಕಾಗಿ ಗಂಡನೆಂಬವನ ಕೂಟ ಈ ಒಂಟಿ ತಾಯಂದಿರ ಪಾಲಿಗೆ ಅನಿವಾರ್ಯವಾಗುವ ಹಾಗೆ ದಮಯಂತಿಗೂ ಪತಿವಿರಹಿತೆಯ ಬದುಕಿನ ಬಿಡುಗಡೆ ಮುಖ್ಯವಾಗುತ್ತದೆ. ಹೀಗಾದಾಗ ಗಂಡಂದಿರು ಹುಡುಕಿಕೊಳ್ಳಬೇಕಾದ ವಸ್ತುವಾಗುತ್ತಾರೆ. ಇಂತಹ ಸ್ಥಿತಿಯಲ್ಲಿಯೂ ಹುಡುಕಿ ದಕ್ಕಿಸಿ ಕೊಳ್ಳುವ ಗಂಡ ದಯಾಪರನಾಗಿಯೂ, ಹುಡುಕಿಕೊಂಡವಳು ಅವನ ಕರುಣೆಗೆ ಬಾಜನಳಾದಂತವಳಾಗಿಯೂ ಪರಿಭಾವಿಸಲ್ಪಡುತ್ತಾರೆ!. ಅದು ಅವಳ ಚರಿತ್ರೆಯಾಗದೆ ಅವನ ಚರಿತ್ರೆಯಾಗುತ್ತದೆ.

ನಳಚರಿತೆ ಮೇಲ್ನೋಟಕ್ಕೆ ಪಾರಂಪರಿಕವಾದ ಸಂಗತಿಯನ್ನು ಎತ್ತಿಹಿಡಿಯುವ ಯತಾಸ್ಥಿತಿವಾದಿಯಾಗಿ ಪಾತಿವ್ರತ್ಯದ ಮೌಲ್ಯವನ್ನು ಉಜ್ವಲೀಕರಿಸಿದಂತೆ ಕಂಡರೂ, ಅದರ ಒಡಲೊಳಗಿರುವುದು ನಿರಾಕರಣಗೊಂಡ ಹೆಣ್ತನದ ಚರಿತ್ರೆಯೆಂಬುದು ಹೆಚ್ಚು ಸೂಕ್ತ. ಇಲ್ಲಿಯ ಪಾತ್ರಗಳು ಆಡುವ ಮಾತುಗಳನ್ನು ಸಮರ್ಥನೆಯಾಗಿ ತೆಗೆದುಕೊಳ್ಳದೆ ದಾಖಲೆಯಾಗಿ ಅರ್ಥೈಸಿದಾಗ ನಮ್ಮ ಸಮಕಾಲೀನ ಮನುಷ್ಯ ಬದುಕಿನ ಎಳೆಗಳು ಬೇರೊಂದು ರೀತಿಯಲ್ಲಿ ತೆರೆದುಕೊಂಡಂತೆ ಖಂಡಿತಾ ಭಾಸವಾಗುತ್ತವೆ.

ಅಧಿಕಾರದ ಜೊತೆಗಿನ ಸಂಬಂಧ ಹೊಂದಿರುವ ಸಂಸ್ಥೆಗಳು ಎಲ್ಲಾ ಕಾಲಗಳಲಿಯ ಸತ್ಯ. ಅವುಗಳ ಹೆಸರು ಬದಲಾಗಬಹುದಷ್ಟೆ, ಆದರೆ ಕಾರ್ಯವಿಧಾನಗಳಲ್ಲಿ ಅಂತಹ ಮಹತ್ತರವಾದ ವ್ಯತ್ಯಾಸವೇನೋ ಇರಲಾರದು. ಯಾವುದೇ ಒಂದು ಮಾನವ ಸಮಾಜದ ಚರಿತ್ರೆ ಎಂದರೆ ಅದರ ಘಟಕಗಳು ಅಧಿಕಾರದ ಜೊತೆಗೆ ಅನುಭವಿಸುವ ಯಜಮಾನಿಕೆ, ನಡೆಸುವ ಸಂಘರ್ಷ, ಸಂವಾದ, ಏರ್ಪಡಿಸಿಕೊಳ್ಳುವ ರಾಜಿ, ಹೊಂದುವ ಅವಲಂಬನೆ ಹಾಗೂ ಅಧೀನತೆಯ ಬಹುವಿನ್ಯಾಸಗಳಲ್ಲಿ ತೆರೆದುಕೊಳ್ಳುವ ಪ್ರಕ್ರಿಯೆಯೇ ಆಗಿದೆ. ಈ ಹಿನ್ನೆಲೆಯಲ್ಲಿ ನಳಚರಿತೆಯಂತಹ ಕೃತಿಯೊಂದರ ಜೊತೆಗಿನ ಸಮಕಾಲೀನ ಸಂವಾದವೆಂದರೆ ಅಧಿಕಾರದ ಜೊತೆಗಿನ ಬಹುರೂಪದ ಸಂಬಂಧಗಳ ನೆಲೆಯಲ್ಲಿ ಅದರೊಳಗಿನ ಭಾಷಿಕ ವಿವರಗಳನ್ನು ವಿವರಿಸಿಕೊಳ್ಳುವುದೇ ಆಗಿರುತ್ತದೆ.

ಪಾರಂಪರಿಕ ಕಥಾ ಹಂದರವನ್ನು 'ಚರಿತೆ'ಯಾಗಿ ಹೆಳ ಹೊರಡುವ ಕವಿ ಬಳಸುವ ಭಾಷೆಯಲ್ಲಿ ಮೈತಳೆಯುವ ಕೃತಿ ತನ್ನ ಸಮಕಾಲೀನ ಸಂದರ್ಭದ ಅನೇಕ ವಿವರಗಳೊಂದಿಗೆ ಹಾದು ಬಂದಿರುತ್ತದೆ. ಅದೇ ಸಂದರ್ಭದಲ್ಲಿ ತನ್ನನ್ನು ಓದಿಕೊಳ್ಳಲಾಗುವ ಕಾಲದ ಒತ್ತಡಗಳಿಗೂ ತನ್ನದೇ ಆದ ರೀತಿಯಲ್ಲಿ ಮುಖಾಮುಖಿಯಾಗುತ್ತಿರುತ್ತದೆ. ಹೀಗೆ ಗತ-ವರ್ತಮಾನಗಳೆರಡರ ನೆಲೆಯಲ್ಲಿಯೂ ಕಾಲದ ಸಂಗತಿಗಳೊಂದಿಗೆ ಒಡನಾಡುವ ಕೃತಿ ಕಾಲದ ವಿದ್ಯಮಾನವಾದ ಚರಿತ್ರೆಯ ಬಹುತ್ವದ ಜೊತೆಗೂ ಒಡನಾಟ ಬೆಳೆಸುತ್ತದೆ. ಯಾವುದೇ ಕೃತಿ 'ಒಂದು ಚರಿತ್ರೆ'ಯನ್ನು ಹೇಳಿ ಮುಗಿಯಲಾರದು. ತಾನು ಹೇಳದ ಚರಿತೆಯನ್ನು ತನ್ನೊಳಗಿನ ಮೌನದ ಮೂಲಕವಾಗಿಯೂ ತುಂಬಿಕೊಳ್ಳುವ ಕೃತಿಯೊಂದರ ಒಳಗನ್ನು ಪ್ರವೇಶ ಮಾಡಿದಾಗ ಅದರ ಬಹುಧ್ವನಿಗಳು ಕೇಳಿಸಿಯೇ ತೀರುತ್ತವೆ. ಈ ಹಿನ್ನೆಲೆಯಲ್ಲಿ ಸಮಕಾಲೀನ ಜೀವನ ಸಂದರ್ಭವನ್ನು ವಿಶೇಷವಾಗಿ ಪ್ರಭಾವಿಸುತ್ತಿರುವ ಮತೀಯ ಮತ್ತು ರಾಜಕೀಯ ಶಕ್ತಿಗಳ ಜೊತೆಗೆ ಗುದ್ದಾಡಿಕೊಳ್ಳುತ್ತ ತಮ್ಮ ಪ್ರತಿರಾಜಕಾರಣವನ್ನು ಮುರಿದು ಕಟ್ಟುತ್ತಲೇ ಬರುತ್ತಿರುವ ದಮನಿತರ ಹಾಗೂ ಮಹಿಳೆಯರ ಪಾಡು ಮತ್ತು ಆಶೋತ್ತರಗಳನ್ನು ಒಟ್ಟೊಟ್ಟಿಗೆ ಇರಿಸಿ ಅರ್ಥೈಸುವ ಅವಕಾಶ ನಳಚರಿತೆಯಲ್ಲಿದೆ. ಹಾಗಾಗಿ ನಳಚರಿತೆ ಎಂಬುದು ನಳನೊಬ್ಬನ ಬದುಕಿನ ಏಳು-ಬೀಳುಗಳ ಚರಿತೆಯಷ್ಟೇ ಆಗದೆ, ನಾಡಿನ ಬಹುಮೂಲದ ಬದುಕುಗಳ ಚರಿತೆಯಾಗುವ ಮೂಲಕ ಬಹುಚರಿತೆಯ ದನಿಯಾಗುತ್ತದೆ. □

ದಲಿತರು ಮತ್ತು ಕಮ್ಯುನಿಸ್ಟರು ಕಲಿಯದ ಪಾಠ

(15ನೇ ಪುಟದಿಂದ)

ಎಲ್ಲ ಮೌಲ್ಯಗಳನ್ನು ಧಿಕ್ಕರಿಸಿವೆ. ಪ್ರಜಾ ತಂತ್ರವೇ ಬೇಡ ಎನ್ನುವ ಹತಾಷ ಪರಿಸ್ಥಿತಿ ನಮಗೊದಗಿರುವ ದುರಂತದಿಂದ ಪಾರಾಗಬೇಕಾದರೆ, ಸದ್ಯಕ್ಕೆ ಹಜಾರೆಯೇ ಗತಿ. ಇನ್ನೊಂದು ಹೋರಾಟ, ಚಳವಳಿ ಬೆಳೆಯುವವರೆಗೆ ಅಣ್ಣಾ ಇರಲಿ. ಸಿನಿಕತನ ಬೇಡ.

* * * * * * *

ಮೀಸಲಾತಿಯಿಂದಾಚೆ ಏನನ್ನೂ ಯೋಚಿಸಲಾಗದ ದೀವಾಳಿತನ, ದಲಿತ ನಾಯಕತ್ವದ ಶೋಚನೀಯ ಪರಿಸ್ಥಿತಿಯನ್ನು ತೋರಿಸುತ್ತದೆ. ನಮ್ಮಷ್ಟಕ್ಕೆ ನಮ್ಮನ್ನು ಬಿಡಿ, ನಮಗೆ ಬೇಕಾದ್ದನ್ನು ನಾವು ಮಾಡಿಕೊಳ್ಳುತ್ತೇವೆ. ದಲಿತರ ಉಸಾಬರಿ ದಲಿತರಿಗೇ ಇರಲಿ ಎಂಬ ಆತಂಕಕಾರಿ ಸಂಕೇತಗಳಿಂದಲೇ, ದಲಿತರು ದ್ವೀಪಗಳಾಗುತ್ತಿದ್ದಾರೆ. ಇದು, ಮೀಸಲಾತಿಯನ್ನು ಅಜೀರ್ಣವಾಗುವಷ್ಟು ಅನುಭವಿಸಿದ, ದಲಿತ ಮೇಲ್ವರ್ಗದ, ದಲಿತ ಮೇಲು ಜಾತಿಯ ದಲಿತ ನಾಯಕರ ಅಪಾಯಕಾರಿ ನಿಲುವು. 40 ವರ್ಷಗಳಿಂದ ರಾಜಕೀಯದಲ್ಲಿ ಬೇರೂರಿರುವ ದಲಿತ ನಾಯಕರು ಶೋಷಿತ ದಲಿತರ, ದಲಿತರಲ್ಲಿನ ದಲಿತರೊಡನೆ ಮೀಸಲಾತಿಯ ಸುಖವನ್ನು ಹಂಚಿಕೊಳ್ಳಲು ವಿರೋಧವಿದ್ದಾರೆ. ಆದ್ದರಿಂದ ತಿಂಗಳಿಗೆ ರೂ.1.5 ಲಕ್ಷ ಸಂಬಳ ತೆಗೆದುಕೊಳ್ಳುವವನು ಭ್ರಷ್ಟ ಎನ್ನುವ ದಲಿತರ ವಿತಂಡವಾದ ದಲಿತರಿಗೂ ಅನ್ವಯಿಸುತ್ತದೆ. ಎರಡು ತಲೆಮಾರು ಮೀಸಲಾತಿಯನ್ನು ತಿಂದು ತೇಗಿದ ದಲಿತನೂ ಭ್ರಷ್ಟನೇ, ಎಂದು ಅವರು ಹೇಳುತ್ತಾರೆ. ಈಗಾಗಲೇ ದಲಿತರೊಬ್ಬರು, ಮೀಸಲಾತಿಯ ಮಾನದಂಡಗಳಿಗೆ ಬದಲಾವಣೆ ಕೋರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿದೆ.

* * * * * * *

ಎಲ್ಲವನ್ನೂ ಸರಳೀಕರಿಸ ಬಾರದು. ದಲಿತರಲ್ಲೂ ಮಧ್ಯಮ ವರ್ಗವಿದೆ. ಮಧ್ಯಮರಲ್ಲೂ ದಲಿತರಿದ್ದಾರೆ. ದಲಿತರು ಬಹುಜನರಾಗಬೇಕು. 70ರ ದಶಕದಲ್ಲಿ, ದಲಿತ ಸಂಘರ್ಷ ಸಮಿತಿಯೊಂದಿಗೆ ಎಲ್ಲ ಪ್ರಗತಿಪರ ಶಕ್ತಿಗಳೂ ಇದ್ದವು. ದಸಂಸ ಸಹ ಎಲ್ಲ ಪ್ರಗತಿಪರ ಹೋರಾಟಗಳಲ್ಲಿ ಸಮಭಾಗಿಯಾಗಿತ್ತು. 70ರ ಸಿನಿಕತನವನ್ನೂ ಮರೆಯುವುದು ಖಂಡಿತಾ ಒಳ್ಳೆಯದು. ದಲಿತರು ದಾರಿ ತಪ್ಪಬಾರದು.

* * * * * * *

ಅಣ್ಣಾ ಮೇಲಿನ ಎಲ್ಲ ಆರೋಪಗಳಿಗೆ ಮೇಲೆ ಉತ್ತರವಿದೆ. ಅಣ್ಣಾ ದಲಿತ ವಿರೋಧಿ ಎಂಬುದನ್ನು ತಿಳಿದುಕೊಳ್ಳಲು, ಸರಿಪಡಿಸಲು, ಮಹಾರಾಷ್ಟ್ರದ ದಲಿತ ಗೆಳೆಯರಿದ್ದಾರೆ. ಮಹಾರಾಷ್ಟ್ರದ ದಲಿತ ಹೋರಾಟವೇ, ಕರ್ನಾಟಕದ ದಸಂಸದ ಹುಟ್ಟಿಗೆ ಸ್ಫೂರ್ತಿಯಾದದ್ದು ಎಂಬುದು ಇಂದಿನ ದಲಿತ ಹುಡುಗರಿಗೆ ತಿಳಿದಿಲ್ಲ. ಅಣ್ಣಾ ತಪ್ಪು ಮಾಡಿದ್ದರೆ, ಅವರು ಅದನ್ನು ನೋಡಿಕೊಳ್ಳುತ್ತಾರೆ. ಸರಿಯಾಗಿ ತಿಳಿಯದೆ, ಬೆಂಗಳೂರಲ್ಲಿ ಕೂತು ಬಡಬಡಿಸುವುದು ಬೇಡ. ಅಷ್ಟೇ ಅಲ್ಲ, ಅಣ್ಣಾ ಹಜಾರೆ ಜನಾರ್ದನ ರೆಡ್ಡಿಗಿಂತ ಭ್ರಷ್ಟ ಎನ್ನುವ ಭಯಂಕರರನ್ನೂ ದಲಿತರು ದೂರವಿಡುವುದು ಎಲ್ಲರ ಆರೋಗ್ಯಕ್ಕೆ ಅನಿವಾರ್ಯವಿದೆ. ಕಮ್ಯುನಿಸ್ಟ್‌ರೂ ಈ ಕಟು ವಾಸ್ತವಕ್ಕೆ ಹೊಂದಿಕೊಳ್ಳಬೇಕಿದೆ. □

ಸ್ನೇಹಮಯಿ ಫ್ಯಾಸಿಸಂ...

ಡಾ. ಸಿ. ಜಿ. ಲಕ್ಷ್ಮೀಪತಿ

ಇತ್ತೀಚಿಗೆ ವಿಚಾರ ಸಂಕೀರ್ಣ ಒಂದರಲ್ಲಿ ಮಾತನಾಡುತ್ತಾ ನನ್ನ ಗೆಳೆಯರೊಬ್ಬರು 'ಅಣ್ಣಾ ಹಜಾರೆ ನೇತೃತ್ವದ ಭ್ರಷ್ಟಾಚಾರ ವಿರೋಧಿ ಆಂದೋಲನವು ತಣ್ಣಗಾದಂತೆ ಕಂಡುಬರುತ್ತಿದೆ' ಎಂದರು. ಆದರೆ ಭ್ರಷ್ಟಾಚಾರ ವಿರೋಧಿ ಹೋರಾಟವು ತಣ್ಣಗಾದಂತೆ ಕಂಡು ಬಂದರೂ ಭ್ರಷ್ಟಾಚಾರ ವಿರೋಧಿ ಹೋರಾಟದ ಹಿಂದಿರುವ ಮನೋಭಾವವು ಕಡಿಮೆಯಾದಂತೆ ಕಂಡುಬರುವುದಿಲ್ಲ. ಎಲ್ಲಿಯವರೆಗೆ ಫ್ಯಾಸಿಸ್ಟ್ ಶಕ್ತಿಗಳು ಜೀವಂತವಾಗಿರುತ್ತವೋ ಅಲ್ಲಿಯವರೆಗೂ ಈ ರೀತಿಯ ಹೋರಾಟಗಳು ಮಣಿಯುವಂತೆ ಅಥವಾ ತಣ್ಣಗಾಗುವುದು ಸಾಧ್ಯವೇ ಇಲ್ಲ. ಅಣ್ಣಾ ಭ್ರಷ್ಟಾಚಾರ ವಿರೋಧಿ ಆಂದೋಲನವನ್ನು ಕೈಗೆತ್ತಿಕೊಂಡಾಗ ಅದನ್ನು ಗಾಂಧಿವಾದಿ ಹೋರಾಟವೆಂಬಂತೆ ಬಿಂಬಿಸಲಾಯಿತು. ಗಾಂಧೀಜಿಯವರ ತತ್ವಗಳನ್ನು ಜಾರಿಗೆ ತರುವ ಏಕಮಾದ್ವಿತೀಯ ನಾಯಕರಂತೆ ಅಣ್ಣಾ ಹಜಾರೆಯವರನ್ನು ಮಾಧ್ಯಮಗಳು ಮತ್ತು ಮೆಲ್ಜಾತಿ ಮತ್ತು ಮೇಲು ವರ್ಗಗಳು ಬಿಂಬಿಸಿದವು.

ಅದು ನಿಜವೇ? ಅಣ್ಣಾ ಹಜಾರೆಯವರು ನಿಜವಾಗಲೂ ಗಾಂಧೀವಾದಿಯಾಗಿದ್ದಾರೆಯೇ ಅತವಾ ಪ್ರಜಾಸತ್ತಾತ್ಮಕವಾಗಿದ್ದಾರೆಯೇ ಎಂಬ ಪ್ರಶ್ನೆಯು ಉದ್ಭವಿಸುತ್ತದೆ. ಮಹಾತ್ಮಗಾಂಧಿಯವರ ಮೊಮ್ಮಗ ತುಷಾರ್ ಗಾಂಧಿಯವರು 'ಅಣ್ಣಾ ಹಜಾರೆಯವರ ಹೋರಾಟವನ್ನು ಯಾವುದೇ ಕಾರಣಕ್ಕೂ ಗಾಂಧೀಜಿಯವರ ಹೋರಾಟದೊಂದಿಗೆ ಸಮೀಕರಿಸುವುದಾಗಲಿ ಹೋಲಿಸುವುದಾಗಲಿ ಮಾಡಬಾರದೆಂದೂ, ಅದು ಗಾಂಧೀ ತತ್ವ ಮಾರ್ಗದಲ್ಲಿ ನಡೆಯುತ್ತಿಲ್ಲವೆಂದು' ಸೂಕ್ಷ್ಮ ಹೇಳಿಕೆಯನ್ನು ನೀಡಿದರು. ಗಾಂಧೀಜಿಯವರ ಹೋರಾಟದಲ್ಲಿ ಶತ್ರುಗಳನ್ನು ಗೆಲ್ಲುವ ಮತ್ತು ಪ್ರೀತಿಸುವ ತಂತ್ರವಿತ್ತು. ಆದರೆ ಇವರ ಹೋರಾಟದಲ್ಲಿ ಶತ್ರುವನ್ನು ಸೃಷ್ಟಿಸಿಕೊಳ್ಳುವ ತಂತ್ರವಿದೆ ಎಂದು ಹೇಳಿದರು. ಹಾಗಾದರೆ ಈ ಮಾತುಗಳನ್ನು ನಾವು ಮತ್ತಷ್ಟು ಸೂಕ್ಷ್ಮವಾಗಿ ಅವಲೋಕಿಸಬಹುದು.

ಶತ್ರುಗಳನ್ನು ಸೃಷ್ಟಿಸುವುದು ಏಂದರೇನು? ಶತ್ರುಗಳನ್ನು ಸೃಷ್ಟಿಸುವವರು ಯಾರು ಮತ್ತು ಯಾತಕ್ಕಾಗಿ ಸೃಷ್ಟಿಸುತ್ತಾರೆ? ಈ ಪ್ರಶ್ನೆಗಳ ಮೂಲವು ನಮ್ಮನ್ನು ಫ್ಯಾಸಿಸ್ಟ್ ವಾದದ ಕಡೆಗೆ ಕೊಂಡೋಯ್ಯುತ್ತದೆ. ಈ ಫ್ಯಾಸಿಸ್ಟ್ ವಾದದ ಕಡೆಗೆ ಕೊಂಡೊಯ್ಯುತ್ತದೆ ಎಂಬುದನ್ನು ಚರ್ಚಿಸುವ ಮೊದಲು ಈಗಿರುವ ಫ್ಯಾಸಿಸ್ಟ್‌ವಾದದ ಮಾದರಿಗಳನ್ನು ನಾವು ಯೋಚಿಸಬಹುದು. ಫ್ಯಾಸಿಸಂ ಎಂಬುದು ಮೂರ್ತ ರೂಪದಲ್ಲಿ ಪ್ರಕಟವಾದದ್ದು ಇಟಲಿ ಮತ್ತು ಜರ್ಮನಿಯಲ್ಲಿ ಮುಸಲೋನಿ ಮತ್ತು ಹಿಟ್ಲರ್‌ನ ಆಡಳಿತದ ಫ್ಯಾಸಿಸಂ ಎಲ್ಲರಿಗೂ ಗೋಚರವಾಗುತ್ತಿತ್ತು. ಏಕೆಂದರೆ ಅದರ ಹಿಂಸಾತ್ಮಕ ಸ್ವರೂಪವೇ ಹಾಗಿತ್ತು. ಅದರಲ್ಲಿ ಬಳಸುತ್ತಿದ್ದ ಸಂಕೇತಗಳು, ದ್ವೇಷಮಯ ಭಾಷೆ, ಪ್ರತೀಕಾರ ಭಾವ, ಜನಾಂಗೀಯ ದ್ವೇಷ ಕಣ್ಣಿಗೆ ರಾಚುವಂತಿದ್ದವು. ಆದರೆ ಈಗ ಭ್ರಷ್ಟಾಚಾರ ವಿರೋಧಿ ಹೋರಾಟದಲ್ಲಿ ಬಳಸುತ್ತಿರುವ ಸಂಕೇತಗಳು ತ್ರಿವರ್ಣ ಧ್ವಜ, ಗಾಂಧೀಜಿಯವರ ಟೋಪಿ ಮತ್ತು ಅಣ್ಣಾ ಹಜಾರೆ ಮತ್ತು ಅವರ ತಂಡದಲ್ಲಿರುವವರ ಪದ ಬಳಕೆಯು ಬಹಳ ಶಾಂತ ಮತ್ತು ಸೌಮ್ಯ ಸ್ವಾಭಾವದಲ್ಲಿರುವಂತೆ ತೋರುತ್ತದೆ. ಆದುದರಿಂದ ಯಾವ ಕಾರಣಕ್ಕೂ ನಾವು ಈ ಹೋರಾಟವನ್ನು ಹಿಟ್ಮರ್ ಮತ್ತು ಮುಸಲೋನಿ ಫ್ಯಾಸಿಸಂಗೆ ಹೋಲಿಸಲಾಗುವುದಿಲ್ಲ ಎಂಬುದು ಬಹುತೇಕ ಜನರ ಭಾವನೆಯಾಗಿದೆ.

ಸೂಕ್ಷ್ಮವಾಗಿ ಪರಿಶೀಲಿಸಿದರೆ ಫ್ಯಾಸಿಸಂನಲ್ಲಿ ಅನೇಕ ಹಂತಗಳು ಕಂಡುಬರುತ್ತವೆ. ಈಗ ಕಂಡುಬರುತ್ತಿರುವ ಫ್ಯಾಸಿಸಂ ಬಹಳ ಶಾಂತಿ ಸ್ವರೂಪದ್ದು–ಇದನ್ನು ನಾವು 'ಸ್ನೇಹಮಯಿ ಫ್ಯಾಸಿಸಂ' ಎನ್ನಬಹುದು. ಹಿಟ್ಲರ್ ಮಾದರಿಯ ಫ್ಯಾಸಿಸಂ ಅನ್ನು ಗುರುತಿಸುವುದು ಅಷ್ಟೇನು ಕಷ್ಟವಾಗುತ್ತಿರಲಿಲ್ಲ. ಏಕೆಂದರೆ ಅದು ತನ್ನಷ್ಟಕ್ಕೆ ತಾನೇ ಫ್ಯಾಸಿಸಂ' ಎಂದು ನೇರವಾಗಿ ಯಾವ ಮುಲಾಜಿಲ್ಲದೆ ಪ್ರಕಟಿಸಿಕೊಳ್ಳುತ್ತಿತ್ತು. ಆದರೆ ಸ್ನೇಹಮಯಿ ಫ್ಯಾಸೀಸಂ ಮಾದರಿ ಮಾತ್ರ ಬಹಳ ಭಯಾನಕವಾದುದು. ಅದನ್ನು ಹೇಗೆಂದು ಯೋಚಿಸೋಣ. ಕಳೆದ ಆರು ದಶಕಗಳಿಂದ ಜನರ ಮನೋಭಾವದಲ್ಲಿ ಅಪಾರ ಬದಲಾವಣೆ ಉಂಟಾಗುತ್ತಿದೆ. ಸಾಮಾನ್ಯ ಜನರು ಅನೇಕ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ. ದೇಶದಲ್ಲಿ ಯಾವುದೇ ಒಂದು ಅರಾಜಕ ವಾತಾವರಣ ಉಂಟಾದಾಗ, ಚುನಾವಣಾ ಅಕ್ರಮ ನಡೆದಾಗ ಅಥವಾ ಭ್ರಷ್ಟಾಚಾರದ ಅಕ್ರಮ ಬಯಲಾದಾಗ ಭಾರತದಲ್ಲಿ ಏಕೆ ಮಿಲಟರಿ ಆಡಳಿತ ತರಬಾರದು ಎಂದೋ ಅಥವಾ ಇನ್ಯಾವುದೋ ಸರ್ವಾಧಿಕಾರಿ ಆಡಳಿತವನ್ನು ಬೆಂಬಲಿಸುವ ಮಾತುಗಳನ್ನು ಕೇಳುತ್ತೇವೆ. ಈ ರೀತಿಯ ಮಾತುಗಳ ಹಿಂದೆ ಅಡಗಿರುವುದು ಯಾವ ರೀತಿಯ ಮನೋಭಾವ?

ದೇಶದಲ್ಲಿ ಯಾವುದೇ ಒಂದು ಅರಾಜಕ ವಾತಾವರಣ ಉಂಟಾದಾಗ, ಚುನಾವಣಾ ಅಕ್ರಮ ನಡೆದಾಗ ಅಥವಾ ಭ್ರಷ್ಟಾಚಾರದ ಅಕ್ರಮ ಬಯಲಾದಾಗ ಭಾರತದಲ್ಲಿ ಏಕೆ ಮಿಲಟರಿ ಆಡಳಿತ ತರಬಾರದು ಎಂದೋ ಅಥವಾ ಇನ್ಯಾವುದೋ ಸರ್ವಾಧಿಕಾರಿ ಆಡಳಿತವನ್ನು ಬೆಂಬಲಿಸುವ ಮಾತುಗಳನ್ನು ಕೇಳುತ್ತೇವೆ. ಈ ರೀತಿಯ ಮಾತುಗಳ ಹಿಂದೆ ಅಡಗಿರುವುದು ಯಾವ ರೀತಿಯ ಮನೋಭಾವ? ಈ ರೀತಿಯ ಮಾತುಗಳು ಆರು ದಶಕಗಳಿಂದಲೂ ಕೇಳಿಬರುತ್ತಿದೆ ಎಂದರೆ ಭಾರತದ ಮನೋಭೂಮಿಕೆಯಲ್ಲಿ ಎಲ್ಲೋ ಒಂದು ಕಡೆ ಫ್ಯಾಸಿಸಂ ಜೀವಂತವಾಗಿದೆ ಎಂದೇ ಅರ್ಥ.

ಈ ರೀತಿಯ ಮಾತುಗಳು ಆರು ದಶಕಗಳಿಂದಲೂ ಕೇಳಿಬರುತ್ತಿದೆ ಎಂದರೆ ಭಾರತದ ಮನೋಭೂಮಿಕೆಯಲ್ಲಿ ಎಲ್ಲೋ ಒಂದು ಕಡೆ ಫ್ಯಾಸಿಸಂ ಜೀವಂತವಾಗಿದೆ ಎಂದೇ ಅರ್ಥ. ಭಾರತದ ಜನರು ಜಾತಿ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿರುವವರಾದ್ದರಿಂದ ಅವರು ಈ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಒಗ್ಗಿಕೊಳ್ಳಲು ಕಷ್ಟಪಡುತ್ತಿರುವಂತೆ ತೋರುತ್ತದೆ. ಏಕೆಂದರೆ ಜಾತಿ ವ್ಯವಸ್ಥೆಯ ಮೂಲ ಗುಣವೇ ಫ್ಯಾಸಿಸ್ಟ್ ಆಗಿದೆ. ತಾನು ಇತರರಿಗಿಂತ ಹೆಚ್ಚು ತಾನು ಇತರರಿಗಿಂತ ಕಡಿಮೆ ಮತ್ತು ತಾನು ಇತರರನ್ನು ಆಳಲು ಹಕ್ಕುಳ್ಳವನು ಎಂಬ ಮನೋಭಾವ ಎಲ್ಲಿ ಜಾತಿ ವ್ಯವಸ್ಥೆ ಇದೆಯೊ ಅಲ್ಲಿ ಪ್ರಬಲವಾಗಿ ಕಾಣುತ್ತದೆ.

ಅದೇ ಮನೋಭಾವವು ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಒಗ್ಗಿಕೊಳ್ಳಲು ಅಥವಾ ಹೊಂದಿಕೊಳ್ಳಲು ಹೆಚ್ಚೇನು ಕಷ್ಟಪಡಬೇಕಾಗಿಲ್ಲ. ಹಾಗಾಗಿಯೇ ಬ್ರಿಟಿಷರು ಹೋದ ನಂತರ ಬ್ರಿಟಿಷರು ಇದ್ದಾಗ ಚೆನ್ನಾಗಿತ್ತು, ಅವರ ಆಡಳಿತದಲ್ಲಿ ಭಾರತ ಚೆನ್ನಾಗಿತ್ತು ಎಂಬ ವಿನ್‌ಸ್ಟನ್ ಚರ್ಚಿಲ್‌ನ ಘೋಷಣೆಯನ್ನು ಆಗಾಗ ಉಲ್ಲೇಖಿಸುತ್ತಿರುತ್ತಾರೆ. ಒಟ್ಟಾರೆಯಾಗಿ ಈ ಜನರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಫ್ಯಾಸಿಸ್ಟ್ ಆಡಳಿತವನ್ನು

ಬಯಸುತ್ತಿದ್ದಾರೆ ಎಂದೇ ಅರ್ಥ. ಆದರೆ ಜರ್ಮನಿಯ ಫ್ಯಾಸಿಸ್ಟ್ ಮನೋಭಾವಕ್ಕೂ ಭಾರತದಲ್ಲಿ ಆರು ದಶಕಗಳಿಂದ ಚಾಲ್ತಿಯಲ್ಲಿರುವ ಫ್ಯಾಸಿಸ್ಟ್ ಮನೋಭಾವಕ್ಕೂ ವ್ಯತ್ಯಾಸವಿದೆ.

ಭಾರತದಲ್ಲಿ ಈಗ ತಲೆ ಎತ್ತಿರುವ ಫ್ಯಾಸಿಸಂ ಅನ್ನು ಸ್ನೇಹಮಯಿ ಫ್ಯಾಸಿಸಂ ಎಂದು ಕರೆಯಬಹುದು. ಸ್ನೇಹಮಯಿ ಫ್ಯಾಸಿಸಂ ಏಕೆಂದರೆ ಇದು ನೇರವಾಗಿ ಯಾವುದೇ ಒಂದು ಗುಂಪನ್ನು ಎದುರು ಹಾಕಿಕೊಳ್ಳದೆ ಅಥವಾ ಇಂಥಾ ಒಂದು ಗುಂಪನ್ನು ಶತ್ರುವೆಂದು ಘೋಷಿಸದೆ ಪ್ರಜಾಪ್ರಭುತ್ವ ವಿರೋಧಿ ಎಂದು ತೋರಿಸಿಕೊಳ್ಳದೆ ತಾನಾಗಿ ಎಲ್ಲಾ ರೀತಿಯಲ್ಲೂ ಅತ್ಯಂತ ಸ್ನೇಹಮಯಿ ಎಂದು ವರ್ತಿಸುತ್ತದೆ. ಉದಾಹರಣೆಗೆ ರಾಷ್ಟ್ರೀಯ ಸ್ವಯಂ ಸೇವಾ ಸಂಘ, ವಿಶ್ವ ಹಿಂದು ಪರಿಷತ್ ಮೊದಲಾದವು ತಮ್ಮ ಸಾಂಸ್ಕೃತಿಕ ರಾಜಕಾರಣದಲ್ಲಿ ತಮ್ಮ ಫ್ಯಾಸಿಸ್ಟ್ ಅಜೆಂಡಾವನ್ನೇ ಪ್ರಚಾರ ಮಾಡಿದರು ಕೂಡ ಅವುಗಳನ್ನು ಫ್ಯಾಸಿಸ್ಟ್ ಶಕ್ತಿ ಎಂದು ಸಾಮಾನ್ಯ ಜನರು ಏಕೆ ಗುರುತಿಸುತ್ತಿಲ್ಲ ಎಂದರೆ ಅವುಗಳ ವರ್ತನೆಯಲ್ಲಿ ಜನರ ಸ್ನೇಹವನ್ನು ಗೆಲ್ಲುವ, ಸ್ನೇಹಮಯವಾಗಿಯೇ ಜನರಲ್ಲಿ ಫ್ಯಾಸಿಸ್ಟ್ ವಾದವನ್ನು ಹರಡುವ ಒಂದು ವಿಶೇಷವಾದ ತಂತ್ರವನ್ನು ಅಳವಡಿಸಿಕೊಳ್ಳಲಾಗಿದೆ. ಇಂತಹ ವಿಶೇಷ ತಂತ್ರದ ಪರಿಣಾಮದ ಫಲವಾಗಿ ಕಳೆದ ಆರು ದಶಕಗಳ ಕಾಲದಿಂದ ರಾಷ್ಟ್ರೀಯ ಸ್ವಯಂ ಸೇವಾ ಸಂಘ, ಭಾರತೀಯ ಜನತಾಪಕ್ಷ ಮುಂತಾದ ಬಲಪಂಥೀಯ ಗುಂಪುಗಳು ನಡೆಸಿದ ಸಾಮೂಹಿಕ ಕಾರ್ಯಚರಣೆಯ ಫಲಶ್ರುತಿಯಾಗಿ ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಹೋರಾಟ ಮೂಡಿ ಬಂದಿದೆ. ಫ್ಯಾಸಿಸಂ ಎಲ್ಲಾ ಸಂದರ್ಭಗಳಲ್ಲಿಯೂ ಕಾರ್ಪೋರೇಟ್ ಜಗತ್ತಿನ ಜೊತೆ ಸಾಮ್ರಾಜ್ಯಶಾಹಿ ದೊರೆಗಳ ಜೊತೆಗೆ ಬಹುರಾಷ್ಟ್ರೀಯ ಕಂಪನಿಗಳ ಜೊತೆ ನಿಕಟವಾದ ಸಂಬಂಧವನ್ನು ಹೊಂದಿರುತ್ತವೆ. ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಜಾಹಿರಾತಿನ ಮೂಲಕ ಅತ್ಯಂತ ಸ್ನೇಹಮಯಿಯಾಗಿಯೇ ತಮ್ಮ ವಸ್ತುಗಳನ್ನು ಮಾರಾಟ ಮಾಡುತ್ತವೆ ಮತ್ತು ತಮ್ಮ ಅಭಿಪ್ರಾಯಗಳನ್ನು ಹೇರುತ್ತವೆ. ಇದಕ್ಕೆ ಪೂರಕವಾಗಿ ಎನ್.ಜಿ.ಓಗಳು ವರ್ತಿಸುತ್ತವೆ. ಭಾರತದಲ್ಲಿರುವಂತಹ ಸ್ವಯಂ ಸೇವಾ ಸಂಸ್ಥೆಗಳು ಬಹುರಾಷ್ಟ್ರೀಯ ಕಂಪನಿಗಳ ದಲ್ಲಾಳಿಗಳಂತೆ ವರ್ತಿಸುತ್ತಾ ಹಂತಹಂತವಾಗಿ ಪ್ರಜಾಸತ್ತಾತ್ಮಕವಾದ ಬೇರುಗಳನ್ನು ಅಲುಗಾಡಿಸುತ್ತಿವೆ. ಅದರ ಪರಿಣಾಮವಾಗಿಯೇ ಅಣ್ಣಾ ಮತ್ತು ಅವರ ಟೀಮ್‌ನಲ್ಲಿದ್ದ ಎನ್.ಜಿ.ಓ. ಮುಖ್ಯಸ್ಥರು ಈ ಭ್ರಷ್ಟಾಚಾರ ವಿರೋಧಿ ಆಂದೋಲನದ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು.

ಸ್ನೇಹಮಯಿ ಫ್ಯಾಸಿಸಂನ ತಂತ್ರಗಳನ್ನು ಅಣ್ಣಾ ಹಜಾರೆ ಮತ್ತವರ ತಂಡ ಹೇಗೆ ನಿರ್ವಹಿಸಿತು ಎಂಬುದನ್ನು ತಿಳಿದುಕೊಳ್ಳೋಣ. ಭಾರತದ ಪ್ರಜೆಯಾಗಿ ಪ್ರತಿಯೊಬ್ಬರಿಗೂ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವ ಎಲ್ಲಾ ಹಕ್ಕು ಇದೆ. ಆದರೆ ಅವರು ಅನುಸರಿಸಿದ ತಂತ್ರ ಮಾತ್ರ ಹೋರಾಟಕ್ಕಿಂತ ಹೆಚ್ಚಾಗಿ ಒತ್ತಡ ಹೇರುವ ಬ್ಲಾಕ್‌ಮೇಲ್ ತಂತ್ರವಾಗಿತ್ತು. ಹೋರಾಟದ ನಾಯಕತ್ವವನ್ನು ವಹಿಸಿದ್ದವರು ಮೇಲ್ವರ್ಗದ ಮತ್ತು ಮೇಲ್ಜಾತಿ ಜನರಾಗಿದ್ದರು. ಮೇಲ್ವರ್ಗದ ಮತ್ತು ಮೇಲ್ಜಾತಿ ಜನರಿಗೆ ಇತರ ಜನರನ್ನು ಪ್ರತಿನಿಧಿಸುವ ಹಕ್ಕೇನು ಇಲ್ಲವೆಂದಲ್ಲ. ಆದರೆ ಅವರು ಜನರನ್ನು ಪ್ರತಿನಿಧಿಸುವಾಗ ಇಡೀ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆಯೇ ಅಥವಾ ಕೇವಲ ಪಟ್ಟಭದ್ರ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿದ್ದಾರೆಯೇ ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ವಿವರಗಳು ಏನೇ ಇರಲಿ, ಅವರು ಎನ್.ಜಿ.ಓ ಮತ್ತು ಕಾರ್ಪೋರೇಟ್ ಸಂಸ್ಥೆಗಳಲ್ಲಿ ನಡೆಯುವ ಭ್ರಷ್ಟಾಚಾರವನ್ನು ತಮ್ಮ ಹೋರಾಟದ ಭಾಗವಾಗಿ ಏಕೆ ಪರಿಗಣಿಸಲಿಲ್ಲ ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಇಲ್ಲಿಯವರೆಗೆ ಬಹುರಾಷ್ಟ್ರೀಯ ಕಂಪನಿಗಳು ಉದ್ಯಮದ ಹೆಸರಿನಲ್ಲಿ ಲೂಟಿ ಮಾಡಿರುವ ಶೇಕಡ ಹತ್ತರಷ್ಟು ಅಂಶವನ್ನು ಸಹ ಜನಪ್ರತಿನಿಧಿಗಳು ಮತ್ತು ಸರ್ಕಾರಿ ನೌಕರರು ಲೂಟಿ ಮಾಡಿಲ್ಲ. ಹಾಗೆಂದು ಯಾವುದೇ ಲೂಟಿಯನ್ನು ಸಾಪೇಕ್ಷವಾಗಿ ಸಮರ್ಥಿಸಿಕೊಳ್ಳಲಾಗದು. ಆದರೆ ಇದರಿಂದೇನು ಅಣ್ಣಾ ಹಜಾರೆಯವರ ತಂಡದ ವರ್ಗ ಹಿತಾಸಕ್ತಿಯನ್ನು ಮರೆಮಾಚಲು ಸಾಧ್ಯವಿಲ್ಲ.

ಭಾರತದ ಪ್ರಜೆಯಾಗಿ ಪ್ರತಿ ಯೊಬ್ಬರಿಗೂ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವ ಎಲ್ಲಾ ಹಕ್ಕು ಇದೆ. ಆದರೆ ಅವರು ಅನುಸರಿಸಿದ ತಂತ್ರ ಮಾತ್ರ ಹೋರಾಟಕ್ಕಿಂತ ಹೆಚ್ಚಾಗಿ ಒತ್ತಡ ಹೇರುವ ಬ್ಲಾಕ್‌ಮೇಲ್ ತಂತ್ರವಾಗಿತ್ತು. ಹೋರಾಟದ ನಾಯಕತ್ವವನ್ನು ವಹಿಸಿದ್ದವರು ಮೇಲ್ವರ್ಗದ ಮತ್ತು ಮೇಲ್ಜಾತಿ ಜನರಾಗಿದ್ದರು. ಮೇಲ್ವರ್ಗದ ಮತ್ತು ಮೇಲ್ಜಾತಿ ಜನರಿಗೆ ಇತರ ಜನರನ್ನು ಪ್ರತಿನಿಧಿಸುವ ಹಕ್ಕೇನು ಇಲ್ಲವೆಂದಲ್ಲ. ಆದರೆ ಅವರು ಜನರನ್ನು ಪ್ರತಿನಿಧಿಸುವಾಗ ಇಡೀ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆಯೇ ಅಥವಾ ಕೇವಲ ಪಟ್ಟಭದ್ರ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿದ್ದಾರೆಯೇ ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ವಿವರಗಳು ಏನೇ ಇರಲಿ, ಅವರು ಎನ್.ಜಿ.ಓ ಮತ್ತು ಕಾರ್ಪೋರೇಟ್ ಸಂಸ್ಥೆಗಳಲ್ಲಿ ನಡೆಯುವ ಭ್ರಷ್ಟಾಚಾರವನ್ನು ತಮ್ಮ ಹೋರಾಟದ ಭಾಗವಾಗಿ ಏಕೆ ಪರಿಗಣಿಸಲಿಲ್ಲ ಎಂಬುದು ಬಹಳ ಮುಖ್ಯವಾದ ಪ್ರಶ್ನೆ.

ಫ್ಯಾಸಿಸಂ ಯಾವಾಗಲೂ ಪ್ರತಿಷ್ಠಿತ ವರ್ಗಗಳನ್ನೇ ಬೆಂಬಲಿಸುವ ವಾದವಾಗಿದೆ. ಹಾಗಾಗಿಯೇ ಇವರ ಹೋರಾಟಕ್ಕೆ ಆರಂಭದಲ್ಲಿಯೇ ಫ್ಯಾಸಿಸಂ ಗುಣ ಸೇರಿಕೊಂಡಿತ್ತು. ಎರಡನೆಯದಾಗಿ ಇತರ ಫ್ಯಾಸಿಸ್ಟರಂತೆ ಇವರೇನು ಮೇಲ್ನೋಟಕ್ಕೆ ಕ್ರೂರವಾಗಿ ಕಾಣಿಸುವ ಅಂಶಗಳನ್ನು ಅನುಸರಿಸಲಿಲ್ಲ. ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟದ ಮಾದರಿಯನ್ನು ಅನುಸರಿಸಿದರು. ಉಪವಾಸ ಮಾಡುವ ಪ್ರತಿಭಟನೆಯನ್ನು ಏಕೈಕ ಅಸ್ತ್ರವನ್ನಾಗಿ ಬಳಸಲಾಯಿತು. ಉಪವಾಸ ಮಾಡಿ ಆತ್ಮಾಹುತಿಗೆ ಒಳಗಾಗುತ್ತೇವೆ ಎಂಬ ಹೆದರಿಕೆಯನ್ನು ಹುಟ್ಟಿಸುವ ತಂತ್ರವನ್ನು ಮಾಡಲಾಯಿತು.

ಉಪವಾಸ ಎಂಬುದು ಭಾರತೀಯ ಜನಮಾನಸದಲ್ಲಿ ಈಗಾಗಲೇ ಹೋರಾಟದ ಅಸ್ತ್ರವಾಗಿರುವುದರಿಂದ ಅಣ್ಣಾ ಹಜಾರೆಯವರ ಫ್ಯಾಸಿಸ್ಟ್ ಅಜೆಂಡಾಗಳನ್ನು ಮರೆಮಾಚಲು ಈ ಬಗೆಯ ಹೋರಾಟವು ಅತ್ಯುತ್ತಮ ತಂತ್ರವಾಯಿತು. ಅವರ ಮರಮಾಚುವಿಕೆಯಿಂದಾಗಿ ಜನರಲ್ಲಿ ಇವರ ಹೋರಾಟದ ಬಗೆಗೆ ಅನುಕಂಪ ಮೂಡಿತು. ಇದರ ಫಲವಾಗಿ ಇವರ ಫ್ಯಾಸಿಸ್ಟ್ ಅಜೆಂಡಾವು ಮತ್ತಷ್ಟು ಸ್ನೇಹಮಯವಾಗಿ ಮತ್ತಷ್ಟು ಪ್ರಕಟಗೊಳ್ಳತೊಡಗಿತು. ಇವರು ಬಳಸಿದ ಸಂಕೇತಗಳು ಶಾಂತಿಯುತವಾಗಿದ್ದವು. ತ್ರಿವರ್ಣ ಧ್ವಜವು ದೇಶಪ್ರೇಮವನ್ನು ಬಿಂಬಿಸುವಂತಿತ್ತು. ಕೇವಲ ತ್ರಿವರ್ಣ ಧ್ವಜ ಮಾತ್ರವಲ್ಲ, ಬಳಿ ಬಟ್ಟೆಗಳು, ಗಾಂಧೀ ಟೋಪಿ ಮತ್ತು ಅಲ್ಲಲ್ಲಿ ನಡೆಸುತ್ತಿದ್ದ ಶಾಂತಿಯುತ ಪ್ರತಿಭಟನೆ ಮತ್ತು ಹೋರಾಟಗಳು ಜನರಲ್ಲಿ ಇವರ ಹೋರಾಟವನ್ನು ಬೆಂಬಲಿಸಲು ಸಾಕಷ್ಟು ಪ್ರಚೋದನೆಯನ್ನು ಉಂಟುಮಾಡಿದವು. ಜನರಿಗೆ ಈ ಬಗೆಯ ಹೋರಾಟದಿಂದ ಅಪಾಯವೂ ಇಲ್ಲ. ನಮ್ಮ ಸಮಾಜವು ಆರೋಗ್ಯಕರವಾಗಿರಲು ಸಾಧ್ಯ ಎಂಬ ಭಾವನೆ ಮೂಡುವಂತೆ ಮಾಡುವಲ್ಲಿ ಈ ತಂಡವು ಯಶಸ್ವಿಯಾಯಿತು. ಮೂರನೆಯದಾಗಿ, ಜನಲೋಕಪಾಲ ಮಸೂದೆಯ ಉದ್ದೇಶ ಅಡಗಿದ್ದುದ್ದೇ, ಪಾರ್ಲಿಮೆಂಟಿನ ಮತ್ತು ನಮ್ಮ ಸಂವಿಧಾನದ ಸಾರ್ವಭೌಮತ್ವವನ್ನು ಪ್ರಶ್ನಿಸುವುದರಲ್ಲಿ. ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರು, ಪ್ರಧಾನ ಮಂತ್ರಿಗಳು ಮತ್ತು ಜನಪ್ರತಿನಿಧಿಗಳು ಜನಲೋಕಪಾಲ ಮಸೂದೆಯ ವ್ಯಾಪ್ತಿಗೆ ಒಳಪಡಬೇಕೆಂಬುದು. ಹಾಗಾದರೆ ಭೌತಿಕವಾಗಿ ಅದನ್ನು ನಾಶಗೊಳಿಸಲು ಯತ್ನಿಸಿದ ಎನ್ನಲಾದ ಅಫ್ಜಲ್ ಗುರುವನ್ನು ಗಲ್ಲಿಗೇರಿಸಬಹುದಾದರೆ ಪಾರ್ಲಿಮೆಂಟಿನ ಮೂಲಭೂತ ನಿಯಮವನ್ನು ಸಾರ್ವಭೌಮತ್ವವನ್ನು ಬುಡಮೇಲು ಗೊಳಿಸಲು ಯತ್ನಿಸಿದ, ಒತ್ತಡ ತಂತ್ರವನ್ನು ಅನುಸರಿಸಿದ ಅಣ್ಣಾ ಹಜಾರೆ ಮತ್ತು ತಂಡವನ್ನು ನಾವು ಅಫ್ಜಲ್ ಗುರುವಿಗೆ ಸಮಾನವಾಗಿ ಏಕೆ ಕಾಣಬಾರದು? ಇದೊಂದು ಫ್ಯಾಸಿಸ್ಟ್ ಅಜೆಂಡಾ ಎಂದು ಏಕೆ ಹೇಳಬಾರದು. ಪಾರ್ಲಿಮೆಂಟಿನ ಸಾರ್ವಭೌಮತ್ವವನ್ನು ಪ್ರಶ್ನಿಸಿದ ಮೇಲೆ ಈಗಿರುವ ಭಾರತದ ಬಲಪಂಥೀಯವಾದ ಗುಂಪುಗಳೆಲ್ಲವೂ ಫ್ಯಾಸಿಸ್ಟ್ ಆದ ಕಾನೂನುಗಳನ್ನೇ ಬಹಳವಾಗಿ ಬೆಂಬಲಿಸುತ್ತವೆ. ಅಂತಹವುದರಲ್ಲಿ ಅಣ್ಣಾ ಹಜಾರೆ ಮತ್ತು ತಂಡದಿಂದ ಮಂಡಿಸಲ್ಪಟ್ಟ ಜನಲೋಕಪಾಲ ಮಸೂದೆಯೂ ಅಂತಹುದೇ ಫ್ಯಾಸೀಸ್ಟ್ ಕಾನೂನುಗಳ ಒಂದು ಮಾದರಿಯಾಗಿದೆ. ಒಟ್ಟು ಲೇಖನದ ಸಾರಾಂಶವೇನೆಂದರೆ ಈ ನವ ಫ್ಯಾಸಿಸ್ಟರು ಯಾವಾಗಲೂ ಕೂಡ ಹಳೆಯ ತಂತ್ರಗಳನ್ನು ಅನುಸರಿಸದೆ, ಅತ್ಯಂತ ಸ್ನೇಹಮಯವಾಗಿ ಭಾರತದ ಪ್ರಜಾಸತ್ತಾತ್ಮಕತೆಯ ನೇಯ್ಗೆಯೊಳಗೆ ತೂರಿಕೊಂಡು ಈ ಪ್ರಜಾಸತ್ತೆಯನ್ನು ಛಿದ್ರಗೊಳಿಸುತ್ತಿದ್ದಾರೆ. ಆದುದರಿಂದ ಫ್ಯಾಸಿಸ್ಟರು ಯಾವ ಯಾವ ವೇಷದಿಂದ ಬರುತ್ತಾರೆ ಎಂಬುದು ತಿಳಿದಿರಬೇಕು. ಸ್ನೇಹಿತನ ವೇಷದಲ್ಲಿ ಬರಬಹುದು, ಧರ್ಮದ ವೇಷದಲ್ಲಿ ಬರಬಹುದು, ಭ್ರಷ್ಟಾಚಾರದ ವೇಷದಲ್ಲಿ ಬರಬಹುದು, ಭ್ರಷ್ಟಾಚಾರವನ್ನು ನಿರ್ಮೂಲಗೊಳಿಸುವ ತಂತ್ರದ ವೇಷದಲ್ಲಿ ಬರಬಹುದು, ಅಥವಾ ಸ್ವಯಂ ಸೇವಾ ಸಂಸ್ಥೆಗಳ ವೇಷದಲ್ಲಿ ಬರಬಹುದು. ಫ್ಯಾಸಿಸ್ಟರು ಈ ಕಾಲಘಟ್ಟದಲ್ಲಿ ತುಳಿಯಬಹುದಾದ ಹಾದಿಯ ಬಗ್ಗೆ ಎಲ್ಲರೂ ಎಚ್ಚರವಾಗಿರಬೇಕು. □

ಅಣ್ಣಾ ಹೋರಾಟ–ವಿಭಿನ್ನ ಆಯಾಮ ಅಗತ್ಯ

ನಾ ದಿವಾಕರ

ಕೊನೆಗೂ ಅಣ್ಣಾ ಹಜಾರೆ ಗೆಲುವಿನ ನಗೆ ಬೀರಿದ್ದಾರೆ. 12 ದಿನಗಳ ಉಪವಾಸ ಮುಷ್ಕರ ಅಂತ್ಯಗೊಂಡಿದ್ದು ಅಣ್ಣಾ ತಮ್ಮ ಮುಂದಿನ ಸಮರದ ಸಿದ್ಧತೆ ನಡೆಸಲು ಮುಂದಾಗಿದ್ದಾರೆ. ಯಾವುದೇ ಕಾರಣಕ್ಕೂ ಅಣ್ಣಾ ತಂಡದ ಒತ್ತಡದ ತಂತ್ರಗಳಿಗೆ ಮಣಿಯುವುದಿಲ್ಲ ಎಂದು ಬೀಗುತ್ತಿದ್ದ ಕೇಂದ್ರ ಯುಪಿಎ ಸರ್ಕಾರ ಜನಾಭಿಪ್ರಾಯಕ್ಕೆ ತಲೆಬಾಗಿರುವುದು ಪ್ರಜಾತಂತ್ರದ ವಿಜಯವೇ ಆಗಿದೆ. ಇಲ್ಲಿ ಅಣ್ಣಾ ತಂಡದ ಷರತ್ತುಗಳಾಗಲಿ, ಸಂಸತ್‌ನಲ್ಲಿ ಅಂಗೀಕೃತವಾದ ನಿರ್ಣಯವಾಗಲೀ ಮುಖ್ಯವಲ್ಲ. ಸ್ವಾತಂತ್ರ್ಯ ದಿನಾಚರಣೆಯ ಮರುದಿನ ಅಣ್ಣಾ ತಂಡದವರಿಗೆ ಪ್ರತಿಭಟನೆ ನಡೆಸುವ ಅವಕಾಶವನ್ನೇ ನಿರಾಕರಿಸಿ ನಂತರ ನಿರ್ಬಂಧಗಳನ್ನೊಡ್ಡಿದ್ದ ಸರ್ಕಾರವೊಂದು, ಕೊನೆಗೆ ಹೋರಾಟದ ಜನಸಾಗರವನ್ನು ನೋಡಿ, ನಿಬ್ಬೆರಗಾಗಿ, ಅಣ್ಣಾರನ್ನು ಹಾಡಿ ಹೊಗಳಿ ಅವರ ಹೊಸ ಬೇಡಿಕೆಗಳಿಗೆ ಅಸ್ತು ಎಂದಿದ್ದು ಮುಖ್ಯವಾಗುತ್ತದೆ.

ಈ ರೀತಿ ಜನಾಂದೋಲನಗಳಿಗೆ ಮಣಿದು ಆಳುವ ಸರ್ಕಾರಗಳು ಮಹತ್ತರವಾದ ಜನಪರ ಶಾಸನಗಳನ್ನು ಜಾರಿಗೊಳಿಸಲು ಮುಂದಾಗುತ್ತಿರುವುದು ಇದೇ ಮೊದಲ ಸಲವೇನಲ್ಲ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಅನೇಕ ಸಂದರ್ಭಗಳಲ್ಲಿ ಜನತೆಯ ಆಕ್ರೋಶ ಆಗ್ರಹಗಳೇ ಆಳ್ವಿಕರನ್ನು ಪ್ರಜಾತಂತ್ರದ ಹಾದಿಯಲ್ಲಿ ಮುನ್ನಡೆಸಿವೆ. ವಸಾಹತು ಆಳ್ವಿಕೆಯಿಂದ ವಿಮೋಚನೆ ಪಡೆದ ನಂತರ ಸ್ವತಂತ್ರ ಭಾರತದ ನಿರ್ಮಾತೃಗಳ ಕನಸುಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಪರಿಧಿಯಲ್ಲೇ ರೂಪಿತಗೊಂಡಿತ್ತು. ಪ್ರಜೆಗಳ ಕೈಗೇ ಅಧಿಕಾರ ನೀಡುವ ವಿಕೇಂದ್ರೀರಣ ನೀತಿಗಳಿಗೆ ಸಾಂವಿಧಾನಿಕ ಮಾರ್ಗಗಳನ್ನೂ ಕಲ್ಪಿಸಲಾಗಿತ್ತು. ಆದರೂ ಭಾರತದ ಪ್ರಭುತ್ವ ಈ ಕನಸುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸ್ಪಷ್ಟ ಹಾದಿ ತುಳಿಯದೆ ಹೋದದ್ದು ಅಷ್ಟೇ ಸತ್ಯ. ಗ್ರಾಮೀಣ ಆರ್ಥಿಕತೆಯನ್ನಾಧರಿಸಿದ ಗ್ರಾಮ ಸ್ವರಾಜ್ಯ ಪರಿಕಲ್ಪನೆಯ ಆರ್ಥಿಕ ನೀತಿಯನ್ನು ಅನುಸರಿಸುವ ಬದಲು ಕೈಗಾರಿಕಾ ನೀತಿಯನ್ನೇ ಅಭಿವೃದ್ಧಿಯ ಮೂಲಮಂತ್ರವನ್ನಾಗಿ ಪರಿಗಣಿಸಿದ ಸರ್ಕಾರಗಳು ಜನರ ಕೈಗೆ ಅಧಿಕಾರ ನೀಡುವ ಮಾತುಗಳನ್ನಾಡುತ್ತಲೇ ಅಧಿಕಾರದ ಕೇಂದ್ರೀಕರಣದತ್ತ ಸಾಗಿದ್ದು ಸ್ಪಷ್ಟವಾಗಿತ್ತು. ಈ ಸಂದರ್ಭದಲ್ಲಿ 1970ರ ದಶಕದ ಬೆಳವಣಿಗೆಗಳು ದೇಶದ ರಾಜಕೀಯ ದಿಕ್ಕನ್ನೇ ಬದಲಾಯಿಸಿತ್ತು. ಇದರ ನೇರ ಪರಿಣಾಮವೇ, ಸ್ವತಂತ್ರ ಭಾರತದ ಇತಿಹಾಸದಲ್ಲಿ ಪ್ರಪ್ರಥಮ ಜನಾಂದೋಲನ ಪ್ರೇರಿತ ಮಸೂದೆ ಪಂಚಾಯತ್ ರಾಜ್ ಮಸೂದೆ ಜಾರಿಯಾಗಿತ್ತು.

ಪಂಚಾಯತ್ ರಾಜ್ ಮಸೂದೆ, ಮಾಹಿತಿ ಹಕ್ಕು ಕಾಯ್ದೆ, ಆಹಾರ ಮತ್ತು ಅರಣ್ಯ ಹಕ್ಕು ಕಾಯ್ದೆ, ಶಿಕ್ಷಣ ಹಕ್ಕು ಕಾಯ್ದೆ, ಉದ್ಯೋಗ ಖಾತರಿ ಯೋಜನೆ ಹೀಗೆ ಹತ್ತು ಹಲವಾರು ಶಾಸನಗಳನ್ನು ಸರ್ಕಾರಗಳು ಜಾರಿಗೊಳಿಸಿರುವುದು ಜನಾಂದೋಲನಗಳ ಫಲಶ್ರುತಿ ಎಂದೇ ಹೇಳಬಹುದು. ಆದರೆ ಈ ಎಲ್ಲಾ ಶಾಸನಗಳ ಅನುಷ್ಠಾನಕ್ಕೆ ದೊಡ್ಡ ಅಡಚಣೆಯಾಗಿದ್ದುದು ದೇಶದ ರಾಜಕೀಯ–ಸಾಮಾಜಿಕ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿರುವ ಭ್ರಷ್ಟಾಚಾರ ಎಂಬ ಪೆಡಂಭೂತ. ಆಡಳಿತದ ಅಡಿಯಿಂದ ಮುಡಿಯವರೆಗೆ ವ್ಯಾಪಿಸಿರುವ ಭ್ರಷ್ಟಾಚಾರ, ವ್ಯವಸ್ಥೆಯ ಆಂತರ್ಯವನ್ನು ಶಿಥಿಲಗೊಳಿಸುತ್ತಿದೆ. ಕಳೆದ ಒಂದು ವರ್ಷದಲ್ಲಿ ಕರ್ನಾಟಕವನ್ನೂ ಸೇರಿದಂತೆ ದೇಶಾದ್ಯಂತ ಬಯಲಾಗುತ್ತಿರುವ ರಾಜಕೀಯ ಭ್ರಷ್ಟಾಚಾರ ಹಗರಣಗಳೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿ.

ಲೋಕಪಾಲ್ ಇತಿಹಾಸ

ಪಂಚಾಯತ್ ರಾಜ್ ಮಸೂದೆಗೂ ಮುನ್ನವೇ ದೇಶದ ಆರ್ಥಿಕ ತಜ್ಞರನ್ನು ಕಾಡಿದ ಪ್ರಶ್ನೆ ರಾಜಕೀಯ ಭ್ರಷ್ಟಾಚಾರದ ನಿಯಂತ್ರಣ. 1960–70ರ ದಶಕದಲ್ಲಿ ಭ್ರಷ್ಟಾಚಾರ ಈಗಿನಂತೆ ಬೃಹದಾಕಾರ ಪಡೆದಿರಲಿಲ್ಲವಾದರೂ ಕೇಂದ್ರ ಸರ್ಕಾರ ನೇಮಿಸಿದ್ದ ಆಡಳಿತ ಸುಧಾರಣಾ ಸಮಿತಿ ಭ್ರಷ್ಟಾಚಾರ ನಿಯಂತ್ರಣಕ್ಕೆ ಶಾಸನಬದ್ಧ ಸಂಸ್ಥೆಯೊಂದನ್ನು ಸ್ಥಾಪಿಸಲು ಶಿಫಾರಸು ಮಾಡಿತ್ತು. ಆದರೆ 1968ರಲ್ಲಿ ರೂಪಿಸಿ ಪ್ರಥಮ ಬಾರಿಗೆ ಸಂಸತ್ತಿನಲ್ಲಿ ಮಂಡಿಸಲಾಗಿದ್ದ ಲೋಕಪಾಲ್ ಮಸೂದೆ ಕಳೆದ 42 ವರ್ಷಗಳಲ್ಲಿ ಎಂಟು ಬಾರಿ ಮಂಡಿಸಲಾದರೂ ರಾಜಕೀಯ ಪಕ್ಷಗಳು ಈ ಮಸೂದೆಯನ್ನು ಶಾಸನವನ್ನಾಗಿ ಮಾಡುವ ಪ್ರಯತ್ನವನ್ನೇ ಮಾಡಲಿಲ್ಲ. ಲೋಕಪಾಲ್ ಎಂಬ ಮಸೂದೆ ದೇಶದ ಸಂಸತ್ತಿನಲ್ಲಿ ಅಂಗೀಕೃತವಾಗದೆ ಕೊಳೆಯುತ್ತಿದೆ ಎಂದು ಬಹುತೇಕ ಪ್ರಜೆಗಳಿಗೆ ತಿಳಿದೇ ಇರಲಿಲ್ಲ. ಬಹುಶಃ ಸಿಬಿಐ, ಲೋಕಾಯುಕ್ತ ಮುಂತಾದ ಸಂಸ್ಥೆಗಳಂತೆ ಇದೂ ಒಂದು ಶಾಸನ ಇದ್ದಿರಬಹುದು ಎಂದು ಭಾವಿಸಲಾಗಿತ್ತು. 2009ರ ಲೋಕಸಭಾ ಚುನಾವಣೆಗಳಲ್ಲಿ

ಸ್ವತಂತ್ರ ಭಾರತದ ಇತಿಹಾಸದಲ್ಲಿ ಅನೇಕ ಸಂದರ್ಭಗಳಲ್ಲಿ ಜನತೆಯ ಆಕ್ರೋಶ ಆಗ್ರಹಗಳೇ ಆಳ್ವಿಕರನ್ನು ಪ್ರಜಾತಂತ್ರದ ಹಾದಿಯಲ್ಲಿ ಮುನ್ನಡೆಸಿವೆ. ವಸಾಹತು ಆಳ್ವಿಕೆಯಿಂದ ವಿಮೋಚನೆ ಪಡೆದ ನಂತರ ಸ್ವತಂತ್ರ ಭಾರತದ ನಿರ್ಮಾತೃಗಳ ಕನಸುಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಪರಿಧಿಯಲ್ಲೇ ರೂಪಿತಗೊಂಡಿತ್ತು. ಪ್ರಜೆಗಳ ಕೈಗೇ ಅಧಿಕಾರ ನೀಡುವ ವಿಕೇಂದ್ರೀರಣ ನೀತಿಗಳಿಗೆ ಸಾಂವಿಧಾನಿಕ ಮಾರ್ಗಗಳನ್ನೂ ಕಲ್ಪಿಸಲಾಗಿತ್ತು. ಆದರೂ ಭಾರತದ ಪ್ರಭುತ್ವ ಈ ಕನಸುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸ್ಪಷ್ಟ ಹಾದಿ ತುಳಿಯದೆ ಹೋದದ್ದು ಅಷ್ಟೇ ಸತ್ಯ.



ಭ್ರಷ್ಟಾಚಾರದ ವಿರುದ್ಧ ರಣಕಹಳೆ ಊದುತ್ತಲೇ ಸ್ಪರ್ಧಿಸಿದ್ದ ಕಾಂಗ್ರೆಸ್ ಪಕ್ಷಕ್ಕೆ ಲೋಕಪಾಲ್ ಮಸೂದೆ ನೆನಪಾದದ್ದು ರಾಜಕೀಯ ಉದ್ದೇಶದಿಂದಲೇ ಹೊರತು ಭ್ರಷ್ಟಾಚಾರ ನಿಯಂತ್ರಣದ ಉದ್ದೇಶದಿಂದಲ್ಲ. 2010ರಲ್ಲಿ ಯುಪಿಎ ಸರ್ಕಾರ ಸಿದ್ಧಪಡಿಸಿದ ಲೋಕಪಾಲ್ ಮಸೂದೆಯ ಕರಡು ಪ್ರತಿ ದುರ್ಬಲವಾಗಿದ್ದುದೇ ಅಲ್ಲದೆ ನಾಗರಿಕರ ಆಶಯಗಳನ್ನು ಪ್ರತಿಬಿಂಬಿಸುವಂತಿರಲಿಲ್ಲ.

ಈ ಸಂದರ್ಭದಲ್ಲಿ ಇತರ ಜನಪರ ಹೋರಾಟಗಳ ಫಲಶ್ರುತಿಯಾಗಿ ಕೇಂದ್ರ ಸರ್ಕಾರ ಜಾರಿಗೊಳಿಸಿದ್ದ ಮಾಹಿತಿ ಹಕ್ಕು ಕಾಯ್ದೆ ಮತ್ತು ಭ್ರಷ್ಟಾಚಾರ ನಿರ್ಮೂಲನ ಕಾಯ್ದೆಗಳ ಹಿನ್ನೆಲೆಯಲ್ಲಿ ಯುಪಿಎ ಸರ್ಕಾರದ 2010ರ ಲೋಕಪಾಲ್ ಮಸೂದೆ ದೇಶಾದ್ಯಂತ ಚರ್ಚೆಗೊಳಗಾಗಿತ್ತು. ಪ್ರಧಾನ ಮಂತ್ರಿಯನ್ನು ಲೋಕಪಾಲ್ ವ್ಯಾಪ್ತಿಗೊಳಪಡಿಸುವ ಪ್ರಸ್ತಾಪ ಈ ಮಸೂದೆಯಲ್ಲಿದ್ದರೂ ಕರಡು ಪ್ರತಿಯಲ್ಲಿ ಅನೇಕ ನ್ಯೂನತೆಗಳಿದ್ದವು. ಇದೇ ಸಂದರ್ಭದಲ್ಲಿ ಎನ್‌ಸಿಪಿಆರ್‌ಐ ತನ್ನದೇ ಆದ ಕರಡು ಪ್ರತಿಯೊಂದನ್ನು ಸಿದ್ಧಪಡಿಸಿತ್ತು. ಆಡಳಿತ ನಿರ್ವಹಣೆಯನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಸ್ಥಾಪಿತವಾಗಿರುವ ರಾಷ್ಟ್ರೀಯ ಸಲಹಾ ಸಮಿತಿ ಅರುಣಾ ರಾಯ್ ನೇತೃತ್ವದಲ್ಲಿ ನೇಮಿಸಿದ್ದ ಉಪಸಮಿತಿ ಸರ್ಕಾರದ ದೃಷ್ಟಿಕೋನವುಳ್ಳ ಕರಡು ಪ್ರತಿಯನ್ನು ಸಿದ್ಧಪಡಿಸಿತ್ತು. ಈ ಹಿನ್ನೆಲೆಯಲ್ಲಿ ರೂಪುಗೊಂಡಿದ್ದೇ ಅಣ್ಣಾ ಹಜಾರೆ ನೇತೃತ್ವದ ನಾಗರಿಕ ಸಮಾಜ ಸಮಿತಿ.

ಜನಲೋಕಪಾಲ್‌ಗಾಗಿ ಆಗ್ರಹ

ಏಪ್ರಿಲ್ 5 2011ರಂದು ಅಣ್ಣಾ ಹಜಾರೆ ನೇತೃತ್ವದ ನಾಗರಿಕ ಸಮಿತಿ ತನ್ನ ಜನಲೋಕಪಾಲ್ ಮಸೂದೆಯ ಕರಡು ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಿ, ಮಸೂದೆಯ ಜಾರಿಗೆ ಒತ್ತಾಯಿಸಿ ಜಂತರ್ ಮಂತರ್‌ನಲ್ಲಿ ಉಪವಾಸ ನಿರಶನ ಆರಂಭಿಸಿದಾಗ, ದೇಶದ ಬಹುಪಾಲು ಜನತೆಗೆ ಲೋಕಪಾಲ್ ಮಸೂದೆಯ ವ್ಯಾಪ್ತಿಯಾಗಲೀ, ಮಹತ್ವವಾಗಲೀ ತಿಳಿದಿರಲಿಲ್ಲ. ಆದರೆ ಹಜಾರೆ ಮತ್ತು ತಂಡದವರಿಗೆ ತಮ್ಮ ಧ್ಯೇಯ ಮತ್ತು ಉದ್ದೇಶಗಳ ಬಗ್ಗೆ ಸ್ಪಷ್ಟ ಅರಿವಿತ್ತು. 2010ರಲ್ಲಿ ಯುಪಿಎ ಸರ್ಕಾರ ರೂಪಿಸಿದ್ದ ಲೋಕಪಾಲ್ ಮಸೂದೆ ಪ್ರಸಕ್ತ ಅಧಿವೇಶನದಲ್ಲಿ ಜಾರಿಯಾದದ್ದೇ ಆದಲ್ಲಿ, ಭ್ರಷ್ಟಾಚಾರ ನಿರ್ಮೂಲನೆಗಿಂತಲೂ ಭ್ರಷ್ಟಾಚಾರ ರಕ್ಷಣೆಯೇ ಹೆಚ್ಚಾಗುತ್ತದೆ ಎಂಬ ಸತ್ಯವನ್ನು ಹಜಾರೆ ಅರಿತಿದ್ದರು. ಈಗಾಗಲೇ ಎರಡು ದಶಕಗಳಿಂದ ಜಾರಿಯಲ್ಲಿರುವ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ವ್ಯಾಪ್ತಿ ಮತ್ತು ಕಾರ್ಯ ವೈಖರಿಯನ್ನು ನೋಡಿದರೆ ನಮ್ಮ ಆಳುವ ವರ್ಗಗಳ ನಿಷ್ಕ್ರಿಯತೆ, ಬದ್ಧತೆ ಮತ್ತು ಸಂವಿಧಾನ ನಿಷ್ಠೆಯ ಪರಿಚಯವಾಗುತ್ತದೆ.

ಸರ್ಕಾರಗಳ ಈ ವರ್ತನೆಯಿಂದ ಬೇಸತ್ತು ತಮ್ಮ ಹೋರಾಟದ ಅನುಭವಾಮೃತವನ್ನು ಜನತೆಗೆ ಧಾರೆ ಎರೆಯಲು ನಿರ್ಧರಿಸಿದ ಅಣ್ಣಾ ಉಪವಾಸ ಸತ್ಯಾಗ್ರಹ ಆರಂಭಿಸಿದ್ದೇ ಸರ್ಕಾರದಲ್ಲಿ ನಡುಕ ಹುಟ್ಟಿಸಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹಿಂಸಾತ್ಮಕ ಶಸ್ತ್ರ ಸಜ್ಜಿತ ಹೋರಾಟಗಳು ಬೀರುವ ಪರಿಣಾಮವನ್ನೇ ಶಾಂತಿಯುತ, ಅಹಿಂಸಾತ್ಮಕ ಹೋರಾಟಗಳೂ ಬೀರುತ್ತವೆ. ಹಾಗಾಗಿಯೇ ಕೇಂದ್ರ ಯುಪಿಎ ಸರ್ಕಾರ ಉಪವಾಸನಿರತ ಹಜಾರೆಯವರನ್ನು ಕೂಡಲೇ ಮಾತುಕತೆಗೆ ಆಹ್ವಾನಿಸಿತು. ಜನಲೋಕಪಾಲ್ ಮಸೂದೆಯಲ್ಲಿನ ಅಂಶಗಳನ್ನೂ ಪರಿಗಣಿಸುವ ಕರಡು ಮಸೂದೆಯೊಂದನ್ನು ಸಿದ್ಧಪಡಿಸಲು ಜಂಟಿ ಸಮಿತಿಯನ್ನು ರಚಿಸಿದ ಯುಪಿಎ ಸರ್ಕಾರ ಐದು ಸಭೆಗಳನ್ನು ನಡೆಸಿದರೂ ಒಂದು ನಿರ್ದಿಷ್ಟ ಅಭಿಪ್ರಾಯ ತಾಳಲಾಗಲಿಲ್ಲ. ಕಾರಣ ನಾಗರಿಕ ಸಮಿತಿ ಮತ್ತು ಸರ್ಕಾರದ ವಕ್ತಾರರ ನಡುವಿನ ಭಿನ್ನಾಭಿಪ್ರಾಯಗಳು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಭುತ್ವ ಮತ್ತು ಪ್ರಜೆಗಳ ನಡುವೆ ಏರ್ಪಡುವ ಯಾವುದೇ ಸಂಘರ್ಷದ ಪರಿಹಾರ ಇರುವುದು ದೇಶದ ಸಾರ್ವಭೌಮ ಜನತೆಗೆ ಒಪ್ಪಿತವಾಗಿರುವ ಸಂವಿಧಾನದ ಚೌಕಟ್ಟಿನೊಳಗೆ ಮಾತ್ರ, ಭಾರತದ ಆರು ದಶಕಗಳ ಸ್ವತಂತ್ರ ಆಳ್ವಿಕೆಯಲ್ಲಿ ಆಳುವ ಸರ್ಕಾರಗಳು ಎಷ್ಟೇ ವೈಫಲ್ಯ ಎದುರಿಸಿದ್ದರೂ, ಈ ಅವಧಿಯಲ್ಲಿ ರೂಪುಗೊಂಡಿರುವ ಕಾಯ್ದೆ-ಕಾನೂನುಗಳು, ಶಾಸನಗಳು ಸಂವಿಧಾನಾತ್ಮಕ ಕ್ರಮಗಳ ಮೂಲಕವೇ ಜನ ಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸಿವೆ. ಭಾರತದ ಪ್ರಭುತ್ವ ಮತ್ತು ಚುನಾಯಿತ ಸರ್ಕಾರಗಳು ಸಾಂವಿಧಾನಿಕ ಮೌಲ್ಯ ಮತ್ತು ತತ್ವಗಳನ್ನು ಉಲ್ಲಂಘಿಸಿ ಜನವಿರೋಧಿ ನೀತಿಗಳನ್ನು ಅನುಸರಿಸಿದ ಪ್ರತಿಯೊಂದು ಸಂದರ್ಭದಲ್ಲೂ ಸಂವಿಧಾನದ ಪರಿಧಿಯಲ್ಲೇ, ನ್ಯಾಯಾಂಗದ ಮೂಲಕ, ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಲಾಗಿದೆ.ಈ ನಿಟ್ಟಿನಲ್ಲಿ 1967ರ ನಂತರದ ಪ್ರಕ್ಷುಬ್ಧ ಸನ್ನಿವೇಶ, ತುರ್ತು ಪರಿಸ್ಥಿತಿ ಮತ್ತು ಇತ್ತೀಚಿನ ಸಲ್ವಾಜುಡಂ ಪ್ರಕರಣಗಳು ಉಲ್ಲೇಖನಾರ್ಹ.

ಪ್ರಧಾನ ಮಂತ್ರಿಗಳನ್ನು, ನ್ಯಾಯಾಂಗದ ಉನ್ನತ ಅಧಿಕಾರಿಗಳನ್ನು, ಸಂಸತ್ತಿನಲ್ಲಿ ಸಂಸದರ ವರ್ತನೆಯನ್ನು ಲೋಕಪಾಲ್ ವ್ಯಾಪ್ತಿಗೊಳಪಡಿಸುವ ಜನಲೋಕಪಾಲ್‌ನ ಪ್ರಸ್ತಾವನೆಗಳನ್ನು ಸರ್ಕಾರ ಒಪ್ಪದೆ ಹೋದ ಕಾರಣ ಜೂನ್ 6ರಂದು ಅಣ್ಣಾ ಜಂಟಿ ಸಮಿತಿಯನ್ನು ಬಹಿಷ್ಕರಿಸಿ ಹೊರನಡೆದಿದ್ದರು. ಅಷ್ಟೇ ಅಲ್ಲ ಆಗಸ್ಟ್ ಹದಿನೈದರೊಳಗಾಗಿ ಜನಲೋಕಪಾಲ್ ಮಸೂದೆಯನ್ನು ಸದನದಲ್ಲಿ ಮಂಡಿಸದಿದ್ದಲ್ಲಿ ಆಮರಣಾಂತ ಉಪವಾಸ ಹೂಡುವುದಾಗಿಯೂ ಘೋಷಿಸಿದ್ದರು. ಈ ಅವಧಿಯಲ್ಲಿ ಸಾರ್ವಜನಿಕ ವಲಯದಲ್ಲಿ, ಮಾಧ್ಯಮಗಳಲ್ಲಿ ನಡೆದ ಗಂಭೀರ ಚರ್ಚೆಗಳು ಎರಡೂ ಮಸೂದೆಗಳ ಒಳಿತು ಕೆಡುಕುಗಳನ್ನು ಜನತೆಯ ಮುಂದೆ ಸ್ಪಷ್ಟವಾಗಿ ಪ್ರಸ್ತುತ ಪಡಿಸಿದ್ದವು. ಐತನ್ಮಧ್ಯೆ ಸರ್ಕಾರದ ವತಿಯಿಂದ ಅಣ್ಣಾ ಹಜಾರೆಯವರ ಆತ್ಮಸ್ಥೈರ್ಯವನ್ನು ಶಿಥಿಲಗೊಳಿಸುವ ಪ್ರಯತ್ನಗಳೂ ನಡೆದಿದ್ದವು. ಆಗಸ್ಟ್ 16ರಂದು ಉಪವಾಸ ನಿರತ ಅಣ್ಣಾರನ್ನು ತಿಹಾರ್ ಜೈಲಿಗಟ್ಟಿದಾಗ ಜೈಲಿನಲ್ಲೇ ಪ್ರತಿಭಟನೆ ನಡೆಸಿದ ಅಣ್ಣಾ ದೇಶದ ಯುವಜನತೆಯ ಮನಸೆಳೆದಿದ್ದರು. ವಾಸ್ತವ ಸಂಗತಿ ಎಂದರೆ, ಸಾರ್ವಜನಿಕ ವಲಯದಲ್ಲಿ ಅಣ್ಣಾ ಅಲೆ ಮೂಡಿದ್ದು, ಧೃವೀಕರಣಗೊಂಡಿದ್ದು ಈ ಬಂಧನದ ನಂತರವೇ.

ಆಳ್ವಿಕರ ವಿಭಜಕ ತಂತ್ರ

ಆಳುವ ವರ್ಗಗಳೆಂದರೆ ಚುನಾಯಿತ ಪ್ರತಿನಿಧಿಗಳು ಅಥವಾ ಸರ್ಕಾರಗಳೇ ಆಗಬೇಕೆಂದಿಲ್ಲ. ಜನಪರ ಹೋರಾಟಗಳನ್ನು ವಿಫಲಗೊಳಿಸುವ ತಂತ್ರಗಾರಿಕೆಯಲ್ಲಿ ಅನೇಕ ವ್ಯಕ್ತಿ ಸಂಘಟನೆಗಳೂ ಬಳಸಲ್ಪಡುತ್ತವೆ. ದೇಶದ ಜನತೆ ತಮ್ಮ ನೈಜ ಆಕ್ರೋಶವನ್ನು ಹೊರಹೊಮ್ಮಿಸಿ, ಜನಾಂದೋಲನಗಳನ್ನು ರೂಪಿಸುವಲ್ಲಿ ಯಾವುದೇ ನಾಯಕನನ್ನು ಹಿಂಬಾಲಿಸಿದರೂ ಅಂತಹ ನಾಯಕರ ಚಾರಿತ್ರ್ಯವಧೆ ಮಾಡಲು ಆಳುವ ವರ್ಗಗಳು ಮುಂದಾಗುತ್ತವೆ. ಕಾಂಗ್ರೆಸ್ ನಾಯಕರು ಅಣ್ಣಾ ಹಜಾರೆಯವರ ಬಗ್ಗೆ ಮಾಡಿದ ಆರೋಪಗಳನ್ನು ಈ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ. ಅಣ್ಣಾ ಅಡಿಯಿಂದ ಮುಡಿಯವರೆಗೂ ಭ್ರಷ್ಟ, ಮಾವೋವಾದಿ, ಸಿಐಎ ಏಜೆಂಟ್ ಇತ್ಯಾದಿ ಆರೋಪಗಳು ಮಾಧ್ಯಮ ಪ್ರಿಯರಿಗೆ ಮನರಂಜನೆ ನೀಡಿದವೇ ಹೊರತು, ಅಣ್ಣಾರ ವರ್ಚಸ್ಸನ್ನು ಕುಂದಿಸಲಿಲ್ಲ. ಕಾರಣ ಅವರಲ್ಲಿದ್ದ ನಿಷ್ಠೆ ಮತ್ತು ಜನಬದ್ಧತೆ.

ಮತ್ತೊಂದೆಡೆ ಅಣ್ಣಾರ ಹೋರಾಟ ದೇಶಾದ್ಯಂತ ಹರಡುವ ಸೂಚನೆಗಳನ್ನು ಕಂಡೊಡನೆಯೇ ಧುತ್ತೆಂದು ಪ್ರತ್ಯಕ್ಷವಾದ ಬಾಬಾರಾಂದೇವ್ ತಮ್ಮದೇ ಆದ ರಾಜಕೀಯ ಆರಂಭಿಸಿದ್ದು ಆಳ್ವಿಕರಿಗೆ ಅನುಕೂಲವೇ ಆಗಿತ್ತು. ಆದರೆ ಹಜಾರೆಗೂ ರಾಂದೇವ್‌ಗೂ ಇರುವ ವ್ಯತ್ಯಾಸವೆಂದರೆ ವ್ಯಕ್ತಿಗತ ವರ್ಚಸ್ಸು ಮತ್ತು ಜನಪರ ಕಾಳಜಿ. ತಮ್ಮ ಲಕ್ಷಾಂತರ ಅನುಯಾಯಿಗಳ ಹೊರತಾಗಿಯೂ ರಾಂದೇವ್ ತಮ್ಮ ಹೋರಾಟದಲ್ಲಿ ವಿಫಲರಾದರೆ, ಯಾವುದೇ ಸಂಘಟನಾತ್ಮಕ ಪ್ರಕ್ರಿಯೆಗೂ ಒಳಪಡದೆ ಅಣ್ಣಾ ಲಕ್ಷಾಂತರ ಜನರನ್ನು ಆಂದೋಲನಕ್ಕೆ ಸೆಳೆದಿದ್ದರು. ಈ ಹೋರಾಟವನ್ನು ಪರೋಕ್ಷವಾಗಿ, ಕುಳಿತಲ್ಲಿಂದಲೇ ಬೆಂಬಲಿಸಿದ ಸಂಖ್ಯೆಯನ್ನು ಪರಿಗಣಿಸಿದಾಗ ಹಜಾರೆಯವರ ಹೋರಾಟದ ವ್ಯಾಪ್ತಿಯನ್ನು ಗ್ರಹಿಸಬಹುದು. ಆದರೆ ಅವರನ್ನು ಬಂಧಿಸುವ ಮೂಲಕ ಪ್ರಜಾ ದನಿಯನ್ನೇ ಹತ್ತಿಕ್ಕಲು ಪ್ರಯತ್ನಿಸಿದ ಯುಪಿಎ ಸರ್ಕಾರ ಕೊನೆಗೆ ಜನದನಿಗೇ ಮಣಿಯಬೇಕಾಗಿ ಬಂದದ್ದು ಪ್ರಜಾತಂತ್ರದ ವಿಜಯವೇ ಅಲ್ಲವೇ?

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಭುತ್ವ ಮತ್ತು ಪ್ರಜೆಗಳ ನಡುವೆ ಏರ್ಪಡುವ ಯಾವುದೇ ಸಂಘರ್ಷದ ಪರಿಹಾರ ಇರುವುದು ದೇಶದ ಸಾರ್ವಭೌಮ ಜನತೆಗೆ ಒಪ್ಪಿತವಾಗಿರುವ ಸಂವಿಧಾನದ ಚೌಕಟ್ಟಿನೊಳಗೆ ಮಾತ್ರ. ಭಾರತದ ಆರು ದಶಕಗಳ ಸ್ವತಂತ್ರ ಆಳ್ವಿಕೆಯಲ್ಲಿ ಆಳುವ ಸರ್ಕಾರಗಳು ಎಷ್ಟೇ ವೈಫಲ್ಯ ಎದುರಿಸಿದ್ದರೂ, ಈ ಅವಧಿಯಲ್ಲಿ ರೂಪುಗೊಂಡಿರುವ ಕಾಯ್ದೆ-ಕಾನೂನುಗಳು, ಶಾಸನಗಳು ಸಂವಿಧಾನಾತ್ಮಕ ಕ್ರಮಗಳ ಮೂಲಕವೇ ಜನಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸಿವೆ. ಭಾರತದ ಪ್ರಭುತ್ವ ಮತ್ತು ಚುನಾಯಿತ ಸರ್ಕಾರಗಳು ಸಾಂವಿಧಾನಿಕ ಮೌಲ್ಯ ಮತ್ತು ತತ್ವಗಳನ್ನು ಉಲ್ಲಂಘಿಸಿ ಜನವಿರೋಧಿ ನೀತಿಗಳನ್ನು ಅನುಸರಿಸಿದ ಪ್ರತಿಯೊಂದು ಸಂದರ್ಭದಲ್ಲೂ ಸಂವಿಧಾನದ ಪರಿಧಿಯಲ್ಲೇ, ನ್ಯಾಯಾಂಗದ ಮೂಲಕ, ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ 1967ರ ನಂತರದ ಪ್ರಕ್ಷುಬ್ಧ ಸನ್ನಿ

ವೇಶ, ತುರ್ತುಪರಿಸ್ಥಿತಿ ಮತ್ತು ಇತ್ತೀಚಿನ ಸಲ್ವಾಜುಡಂ ಪ್ರಕರಣಗಳು ಉಲ್ಲೇಖನಾರ್ಹ.

ಅಣ್ಣಾ ಹಜಾರೆ ತಂಡದ ಜನಲೋಕಪಾಲ್ ಮಸೂದೆಯ ಸುತ್ತ ದೇಶಾದ್ಯಂತ ಹರಡಿರುವ ಜನಾಂದೋಲನದ ಮೂಲಭೂತ ನ್ಯೂನತೆಯನ್ನೂ ಈ ನಿಟ್ಟಿನಲ್ಲೇ ಗ್ರಹಿಸಬೇಕಾಗಿದೆ. ನವ ಉದಾರವಾದದ ಎಲ್ಲ ಫಲಾನುಫಲಗಳನ್ನೂ ಅನುಭವಿಸಿರುವ ದೇಶದ ಮಧ್ಯಮ ವರ್ಗದ ಜನತೆಗೆ ಭ್ರಷ್ಟಾಚಾರದ ಮುಕ್ತ ಆಳ್ವಿಕೆ ಅನಿವಾರ್ಯವಾಗುವುದು ತಮ್ಮ ನಗರೀಕೃತ ಜೀವನ ಶೈಲಿಗೆ ಕುತ್ತು ಬಂದಾಗ ಮಾತ್ರ. ತಮ್ಮ ಸಾಮಾಜಿಕ-ಆರ್ಥಿಕ ಮೇಲ್ ಚಲನೆಗೆ ಅಡ್ಡಿ ಆತಂಕ ಉಂಟುಮಾಡುವ ಎಲ್ಲ ವಿದ್ಯಮಾನಗಳನ್ನೂ ತೊಡೆದುಹಾಕುವ ಈ ವರ್ಗದ ಹಿತಾಸಕ್ತಿಗಳು ಸದಾ ಆಳ್ವಿಕರ ಹಿತಾಸಕ್ತಿಗಳೊಡನೆ ರಾಜಿ ಮಾಡಿಕೊಳ್ಳುತ್ತಲೇ ಸಾಗುತ್ತವೆ. ಹಾಗಾಗಿಯೇ ಈ ಮಧ್ಯಮ ವರ್ಗಗಳ ಆಕ್ರೋಶ, ಹತಾಶೆಗಳು ಬಹಿರಂಗವಾಗಿ ವ್ಯಕ್ತವಾದಾಗಲೆಲ್ಲಾ ದೇಶದಲ್ಲಿ ಆಂದೋಲನದ ಹುರುಪು ಕಾಣಿಸಿಕೊಳ್ಳುತ್ತದೆ. ಮಂಡಲ್ ವಿರೋಧಿ ಚಳವಳಿ ಈ ನಿಟ್ಟಿನಲ್ಲಿ ಉತ್ತಮ ನಿದರ್ಶನ.

ಸಮಾಜೋ-ಆರ್ಥಿಕ ಸಂದರ್ಭಗಳು

1970 ಮತ್ತು 1990ರಲ್ಲಿ ಸಂಭವಿಸಿದ ಘಟನೆಗಳೂ ಇಲ್ಲಿ ಉಲ್ಲೇಖನಾರ್ಹ. ನಿರುದ್ಯೋಗ, ಬೆಲೆ ಏರಿಕೆ, ಹಣದುಬ್ಬರ ಮತ್ತು ಆರ್ಥಿಕ ಅಸ್ಥಿರತೆಯನ್ನು ಎದುರಿಸಿದ ಭಾರತದ ದುಡಿಯುವ ವರ್ಗಗಳು 70ರ ದಶಕದಲ್ಲಿ ದೇಶಾದ್ಯಂತ ಕ್ರಾಂತಿಕಾರಿ ಹೋರಾಟಕ್ಕೆ ಸಜ್ಜಾದಾಗ ಪ್ರಭುತ್ವ ಕ್ರಮಿಸಿದ ದಾರಿ, ಸರ್ವಾಧಿಕಾರಿ ಧೋರಣೆಯದು. ಪರಿಣಾಮ ತುರ್ತುಪರಿಸ್ಥಿತಿ ಮತ್ತು ಜನಾಂದೋಲನಗಳ ದಮನ. ಪ್ರಭುತ್ವದ ಈ ಕ್ರಮಕ್ಕೆ ಪರ್ಯಾಯವಾಗಿ ರೂಪುಗೊಂಡಿದ್ದು ಜೆಪಿಯವರ ಸಂಪೂರ್ಣ ಕ್ರಾಂತಿ. ನಿಜ, ಸಂಪೂರ್ಣ ಕ್ರಾಂತಿಯ ಧ್ಯೇಯೋದ್ದೇಶಗಳು ಪ್ರಜಾತಾಂತ್ರಿಕವಾಗಿಯೇ ಇತ್ತು. ಆದರೆ ಕಾಂಗ್ರೆಸ್ ವಿರೋಧಿ ಅಲೆಯಲ್ಲಿ ಕೊಚ್ಚಿ ಹೋದ ಜನತೆಯ ಆಕ್ರೋಶ ಕೊನೆಗೊಂಡದ್ದು ಮತ್ತೊಂದು ರೀತಿಯ ದಮನಕಾರಿ ಆಳ್ವಿಕೆಯ ಅಧಿಕಾರ ಗ್ರಹಣದಲ್ಲಿ. ಇಲ್ಲಿಯೂ ಮೇಲುಗೈ ಸಾಧಿಸಿದ್ದು ಮಧ್ಯಮವರ್ಗಗಳ ಹಿತಾಸಕ್ತಿಯೇ ಹೊರತು, ಶ್ರಮಜೀವಿಗಳದ್ದಲ್ಲ. ಸಂವಿಧಾನದ ಆಡಳಿತಾತ್ಮಕ ನೀತಿಗಳನ್ನೇ ವೈಭವೀಕರಿಸುತ್ತಾ, ಅದರೊಳಗಿನ ಜನಪರ ಕಾಳಜಿಗಳನ್ನು ನಿರ್ಲಕ್ಷಿಸುತ್ತಾ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡ ಆಳುವ ವರ್ಗಕ್ಕೆ ಮತ್ತೆ ಸವಾಲು ಎದುರಾದದ್ದು 1990ರಲ್ಲಿ.

1980ರ ದಶಕದಲ್ಲಿ ಸಂಭವಿಸಿದ ರಾಜಕೀಯ ಪಲ್ಲಟಗಳು ದೇಶದ ರಾಜಕಾರಣದ ರೂಪುರೇಷೆಗಳನ್ನು ಬದಲಾಯಿಸಿತ್ತೇ ಹೊರತು ಮೂಲಭೂತ ಪರಿವರ್ತನೆಗೆ ಸಹಕಾರಿಯಾಗಲಿಲ್ಲ. ಹಿಂದುಳಿದ ವರ್ಗಗಳ ಹಕ್ಕೊತ್ತಾಯಗಳು ಹೆಚ್ಚಾಗುತ್ತಿರುವ ಸನ್ನಿವೇಶದಲ್ಲೇ, ಧಾರ್ಮಿಕ-ಮತೀಯ ಭಾವನೆಗಳನ್ನು ಬಡಿದೆಬ್ಬಿಸಿದ ಆಳುವ ವರ್ಗಗಳು ಮತ್ತೊಮ್ಮೆ ಮಧ್ಯಮ ವರ್ಗಗಳ ತುಷ್ಟೀಕರಣದಲ್ಲಿ ತೊಡಗಿದ್ದನ್ನು ಮಂಡಲ್ ವಿರೋಧಿ ಆಂದೋಲನ ಮತ್ತು ಜಾಗತೀಕರಣ ಪರವಾದ ಅಲೆಯಲ್ಲಿ ಕಾಣಬಹುದಾಗಿತ್ತು. ಭಾರತದ ಸಂವಿಧಾನದ ಮೂಲ ತತ್ವಗಳಿಗೆ ತದ್ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿದ್ದ ನವ ಉದಾರವಾದಿ ಆರ್ಥಿಕ ನೀತಿಗಳನ್ನು ಅನುಷ್ಠಾನಗೊಳಿಸಿದ ಸಂದರ್ಭದಲ್ಲೂ ಲೈಸೆನ್ಸ್ ಪರ್ಮಿಟ್ ಆಳ್ವಿಕೆಯ ವಿರುದ್ಧ ಹುಯಿಲೆಬ್ಬಿಸಿದ್ದು ಇದೇ ಮಧ್ಯಮ ವರ್ಗಗಳೇ. ಪರಿಣಾಮ, ಮಂಡಲ್ ಸಮರ್ಥಕರು, ರಾಮಮಂದಿರ ವಿರೋಧಿಗಳು ಮತ್ತು ಜಾಗತೀಕರಣ ವಿರೋಧಿಗಳು ದೇಶದ್ರೋಹಿಗಳಂತೆ ಕಾಣಲ್ಪಟ್ಟರು. ಈ ಸಂದರ್ಭದಲ್ಲೂ ಸಂವಿಧಾನದ ಆಡಳಿತಾತ್ಮಕ ನೀತಿಗಳೇ ವೈಭವೀಕರಿಸಲ್ಪಟ್ಟಿದ್ದನ್ನು ಸ್ಮರಿಸಬಹುದು.

ಈ ಎರಡೂ ಪ್ರಕರಣಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕಂಡುಬರುವ ಅಂಶವೆಂದರೆ ಮಧ್ಯಮವರ್ಗ ಪ್ರೇರಿತ ಜನಾಂದೋಲನಗಳು ಭಾರತದ ಸಂವಿಧಾನದಲ್ಲಿ ಅಂತರ್ಗತವಾಗಿರುವ ದೇಶದ ಬಹುಸಂಖ್ಯಾತ ಜನತೆಯ ಪರವಾದ ಕಾಳಜಿಗಳನ್ನು ವ್ಯವಸ್ಥಿತವಾಗಿ ಮರೆಮಾಚಿದ್ದು. ನವ ಉದಾರವಾದ ತನ್ನ ಕಬಂಧ ಬಾಹುಗಳಿಂದ ದೇಶದ ಎಲ್ಲ ಕ್ಷೇತ್ರಗಳನ್ನೂ ಆವರಿಸುತ್ತಾ , ತನ್ನದೇ ಆದ ಪ್ರಭುತ್ವವನ್ನು ಪೋಷಿಸುತ್ತಾ, ಕಾರ್ಪೋರೇಟ್ ಆಳ್ವಿಕೆಗೆ ಭದ್ರ ಬುನಾದಿ ಒದಗಿಸುತ್ತಿರುವ ಸಂದರ್ಭದಲ್ಲಿ ಜಾಗತೀಕರಣದ ಫಲಾನುಭವಿಗಳಾದ ಮಧ್ಯಮವರ್ಗಗಳಿಗೆ ಕಂಟಕವಾಗಿ ಪರಿಣಮಿಸಿದ್ದು ಕಾರ್ಯಾಂಗ ಮತ್ತು ರಾಜಕೀಯ ಕ್ಷೇತ್ರದಲ್ಲಿನ ಭ್ರಷ್ಟಾಚಾರ. ಮೇಲ್ ಮಧ್ಯಮ ವರ್ಗಗಳಿಗೆ ಜಾಗತೀಕರಣಕ್ಕೆ ಮುನ್ನ ತೊಡಕಿನಂತೆ ಕಾಣುತ್ತಿದ್ದ ಲೈಸೆನ್ಸ್ ಪರ್ಮಿಟ್ ಆಳ್ವಿಕೆಯಷ್ಟೇ ಅಪಾಯಕಾರಿಯಾಗಿ ಇಂದಿನ ರಾಜಕೀಯ ಭ್ರಷ್ಟಾಚಾರವೂ ಕಾಣುತ್ತಿರುವುದು ಸ್ಪಷ್ಟ. ಹಾಗಾಗಿಯೇ ಅಣ್ಣಾ ಹಜಾರೆಯ ಹೋರಾಟಕ್ಕೆ ತಂಡೋಪತಂಡವಾಗಿ ಜನಸಾಗರ ಹರಿದುಬಂದಿದ್ದೂ ಹೌದು.

ಸಾಮಾಜಿಕ ಪ್ರತಿಕ್ರಿಯೆ

ಆದರೆ ಭಾರತದ ಜನಸಂಖ್ಯೆಗನುಗುಣವಾಗಿ ನೋಡಿದಾಗ ಪ್ರಸ್ತುತ ಆಂದೋಲನದ ಹಿಂದಿರುವ ಜನಸಂಖ್ಯೆ ಗೌಣವೆಂದೇ ಹೇಳಬಹುದು. ಮಾಧ್ಯಮಗಳಲ್ಲಿ ಪದೇ ಪದೇ ಬಿತ್ತರಿಸಲಾಗುತ್ತಿರುವ ದೃಶ್ಯಗಳು ಪುನರಾವರ್ತನೆಯೆಂದು ಹೇಳಬೇಕಿಲ್ಲ. ದುರಂತವೆಂದರೆ ವಿದ್ಯುನ್ಮಾನ ಮಾಧ್ಯಮಗಳು ಇದಕ್ಕಿಂತಲೂ ಹೆಚ್ಚಿನ ಜನ ಧೃವೀಕರಣಗೊಂಡಿದ್ದ ಗ್ಯಾಟ್ ವಿರೋಧಿ ಅಂದೋಲನ, ಅಣ್ವಸ್ತ್ರ ವಿರೋಧಿ ಅಂದೋಲನ, ಜಾಗತೀಕರಣ ವಿರೋಧಿ ಅಂದೋಲನಗಳನ್ನು ತಮ್ಮ ರಂಜನೀಯ ಪರದೆಗಳ ಮೇಲೆ ಬಿಂಬಿಸಲೇ ಇಲ್ಲ. ಪೋಖ್ರಾನ್ ವಿರುದ್ಧ ನಡೆದ ಆಂದೋಲನದಲ್ಲಿ ಕಲ್ಕತ್ತಾದಲ್ಲೇ ನಾಲ್ಕು ಲಕ್ಷ ಜನ ಸೇರಿದ್ದರೂ ಮಾಧ್ಯಮಗಳಲ್ಲಿ ನಿರ್ಲಕ್ಷಿಸಲಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಈಗ ಮಾಧ್ಯಮಗಳಿಗೆ ಹಜಾರೆ ಹೋರಾಟವನ್ನು ವೈಭವೀಕರಿಸುವ ಅವಶ್ಯಕತೆ ಹೆಚ್ಚಾಗಿದೆ. ಕಾರಣ, ಪ್ರಸಕ್ತ ಆಂದೋಲನ ನವ ಉದಾರವಾದದ ಹಿತಾಸಕ್ತಿಗಳನ್ನು ಎಲ್ಲಿಯೂ ಪ್ರಶ್ನಿಸುತ್ತಿಲ್ಲ. ಅಥವಾ ದೇಶದ ಬಹುಸಂಖ್ಯಾತ ಶ್ರಮಜೀವಿ ವರ್ಗಗಳನ್ನು, ದಲಿತ ಸಮುದಾಯಗಳನ್ನು, ಆದಿವಾಸಿಗಳನ್ನು ಕಾಡುತ್ತಿರುವ ಸಮಸ್ಯೆಗಳನ್ನು ಬಿಂಬಿಸುತ್ತಿಲ್ಲ.

ನಿಜ, ಭ್ರಷ್ಟಾಚಾರ ದೇಶದ ಆಂತರಿಕ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತಿದೆ. ಆದರೆ ಇದು ಇಂದಿನ ವಿದ್ಯಮಾನವಲ್ಲ. ಸ್ವಾತಂತ್ರ್ಯ ಬಂದಾಗಿನಿಂದಲೂ ದೇಶದ ದುಡಿಯುವ ವರ್ಗಗಳು ಭ್ರಷ್ಟಾಚಾರದ ಪಾಪಕೃತ್ಯಗಳನ್ನು ಸಹಿಸಿಕೊಳ್ಳುತ್ತಲೇ ಬಂದಿದ್ದಾರೆ. ಆದಿವಾಸಿಗಳು, ದಲಿತ ಸಮುದಾಯಗಳು, ಅಲ್ಪಸಂಖ್ಯಾತರು, ಮಹಿಳೆಯರು ಈ ಎಲ್ಲಾ ಶ್ರಮಜೀವಿ ವರ್ಗಗಳು ಆಳ್ವಿಕರ ಭ್ರಷ್ಟ ಆಡಳಿತದಲ್ಲಿ ರೂಪುಗೊಂಡ ಆರ್ಥಿಕ ನೀತಿಗಳಿಂದ ಸಂಕಷ್ಟಗಳನ್ನು ಎದುರಿಸುತ್ತಲೇ ಇದ್ದಾರೆ. ಕಾರ್ಯಾಂಗದ ಅಧಿಕಾರಶಾಹಿಯಲ್ಲಿ ನಾಗರಿಕರಿಂದ ಪಡೆಯುವ ಲಂಚವನ್ನು ಮಾತ್ರ ಭ್ರಷ್ಟಾಚಾರ ಎಂದು ಪರಿಗಣಿಸುವ ಬದಲು, ಒಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ದೇಶದ ಉತ್ಪಾದಕೀಯ ಶಕ್ತಿಗಳ ಹಿತಾಸಕ್ತಿಗಳ ವಿರುದ್ಧ ರೂಪಿಸಲಾದ ಯಾವುದೇ ನೀತಿಯಾದರೂ ಭ್ರಷ್ಟ ಪರಂಪರೆಯ ಸಂಕೇತ ಎಂದು ಪರಿಗಣಿಸುವುದಾದರೆ, ಭ್ರಷ್ಟಾಚಾರ ಎಂಬ ಪಿಡುಗು ಸ್ವತಂತ್ರ ಭಾರತದ ಇತಿಹಾಸದುದ್ದಕ್ಕೂ ಹರಡಿರುವುದು ಸ್ಪಷ್ಟವಾಗುತ್ತದೆ. ಆದರೆ ಈ ದೇಶದ ಮಧ್ಯಮವರ್ಗಗಳಿಗೆ, ಶ್ರೀಮಂತರಿಗೆ ಈ ಸಾಂಸ್ಥಿಕ ಭ್ರಷ್ಟಾಚಾರದ ಗ್ರಹಿಕೆಯೇ ಇಲ್ಲವಾಗಿದೆ.

ದೇಶಾದ್ಯಂತ ನಿರಂತರವಾಗಿ ನಡೆಯುತ್ತಿರುವ ಪರಿಸರ ಹೋರಾಟಗಳು, ಕೃಷಿ ಬಿಕ್ಕಟ್ಟು, ಭೂಸ್ವಾಧೀನ, ಅರಣ್ಯ ಅತಿಕ್ರಮಣ, ಬೃಹತ್ ಅಣೆಕಟ್ಟು ಯೋಜನೆಗಳ ವಿರುದ್ಧದ ಆಂದೋಲನಗಳು ಮಧ್ಯಮವರ್ಗಗಳ ತಾತ್ವಿಕ ಬೆಂಬಲವನ್ನೂ ಗಳಿಸದಿರುವುದು ಇದಕ್ಕೆ ಸ್ಪಷ್ಟ ನಿದರ್ಶನ. ಪೋಸ್ಕೋ, ವೇದಾಂತಗಳ ವಿರುದ್ಧ, ಮಿತ್ತಲ್ ವಿರುದ್ಧ, ನರ್ಮದಾ ವಿರುದ್ಧ ಹೋರಾಡುವವರನ್ನು ಪ್ರಗತಿ ವಿರೋಧಿಗಳೆಂದೇ ಬಿಂಬಿಸುವ ಸಮಾಜದಲ್ಲಿ, ಪ್ರಸ್ತುತ ಅಣ್ಣಾ ಹಜಾರೆ ಹೋರಾಟ ವ್ಯಾಪಕ ಬೆಂಬಲಗಳಿಸಿರುವುದು ಭಾರತದ ಸಮಾಜ ಮಧ್ಯಮವರ್ಗ ಕೇಂದ್ರಿತವಾಗುತ್ತಿರುವುದರ ಸಂಕೇತವಾಗಿದೆ. ಅದ್ದರಿಂದಲೇ ಆರಂಭದಲ್ಲಿ ತಮ್ಮ ಜನಲೋಕಪಾಲ್ ಮಸೂದೆ ಜಾರಿಯಾಗುವವರೆಗೂ ಉಪವಾಸ ನಿಲ್ಲಿಸುವುದಿಲ್ಲ ಎಂಬ ಷರತ್ತು ಒಡ್ಡಿದ್ದ ಅಣ್ಣಾ ಈಗ ಮೂರು ಸಂಕೀರ್ಣ ಬೇಡಿಕೆಗಳನ್ನು ಮುಂದಿಟ್ಟು ತಮ್ಮ ನಿರಶನ ಅಂತ್ಯಗೊಳಿಸುವ ಪ್ರಸ್ತಾವನೆ ಮಂಡಿಸಿದ್ದಾರೆ. ಮಧ್ಯಮವರ್ಗಗಳ ಯಾವುದೇ ಚಳವಳಿ ರಾಜಿ-ಸಂಧಾನಗಳಲ್ಲಿ ಅಂತ್ಯಗೊಳ್ಳುವ ಚಾರಿತ್ರಿಕ ಪರಂಪರೆಯನ್ನು ಇಲ್ಲಿ ಸ್ಪಷ್ಟವಾಗಿ ಕಾಣಬಹುದು.

42 ವರ್ಷಗಳ ಕಾಲ ನೆನೆಗುದಿಗೆ ಬಿದ್ದಿದ್ದ ಮಸೂದೆ ಈಗ ಐದು ವಿಭಿನ್ನ ಆಯಾಮಗಳಿಂದ ಸರ್ಕಾರದ ಮುಂದಿದೆ. ಆಗಸ್ಟ್ 30ರ ಒಳಗಾಗಿ ಮಸೂದೆ ಜಾರಿಯಾಗಬೇಕೆಂದು ಪಟ್ಟು ಹಿಡಿದಿದ್ದ ಗಾಂಧಿವಾದಿ ಈಗ ಕೇವಲ ಸಂಸತ್ತಿನ ಮೂರು ನಿರ್ಣಯಗಳಿಗೆ ತಮ್ಮ ಷರತ್ತುಗಳನ್ನು ಸೀಮಿತಗೊಳಿಸಿರುವುದು, ಇಡೀ ಹೋರಾಟದ ವ್ಯಾಪ್ತಿ ಮತ್ತು ಸಮಗ್ರತೆಯಲ್ಲಿನ ಕೊರತೆಯ ಸಂಕೇತವಾಗಿದೆ. ರಾಜಕೀಯ ಪಕ್ಷಗಳು ಮುಂಬರುವ ಚುನಾವಣೆಯ ದೃಷ್ಟಿಯಿಂದ ತಮ್ಮ ನಿಲುವುಗಳನ್ನು ಬದಲಾಯಿಸಿದ್ದರೂ ಅಣ್ಣಾ ತಂಡದ ಬೇಡಿಕೆಗಳನ್ನು ಮಾನ್ಯ ಮಾಡಿದರೂ ಸಹ ಆಳುವ ವರ್ಗಗಳ ಮತ್ತು ಕಾರ್ಪೋರೇಟ್ ಆಳ್ವಿಕೆಯ ನವ ಉದಾರವಾದಿ ನೀತಿಗಳಿಗೆ ಯಾವುದೇ ಅಪಾಯವಿಲ್ಲದಿರುವುದನ್ನು ಸೂಕ್ಷ್ಮವಾಗಿ ಗಮನಿಸಿವೆ. ಹಾಗಾಗಿ ಮುಂಬರುವ ಅಧಿವೇಶನದಲ್ಲಿ ಸಂವಿಧಾನ ಬದ್ಧವಾದ ಒಂದು ಮಸೂದೆ ಜಾರಿಯಾದರೂ ಅಚ್ಚರಿಯೇನಿಲ್ಲ. ಆದರೆ ಭ್ರಷ್ಟಾಚಾರವನ್ನು ನಿಯಂತ್ರಿಸುವ ಒಂದು ಪ್ರತಿಬಂಧಕ ಕಾಯ್ದೆಯ ಇತಿಮಿತಿಗಳನ್ನು ಗಮನಿಸಿ ನೋಡಿದಾಗ, ಭಾರತದ ಆಡಳಿತ ವ್ಯವಸ್ಥೆ ಮತ್ತು ಸಾಮಾಜಿಕ ಚೌಕಟ್ಟಿನಲ್ಲಿ ಅಂತರ್ಗತವಾಗಿರುವ ಭ್ರಷ್ಟ ಪರಂಪರೆಯನ್ನು ಅಂತ್ಯಗೊಳಿಸಲು, ದೇಶದ ಬಹುಸಂಖ್ಯಾತ ಶ್ರಮಜೀವಿಗಳನ್ನು ಪ್ರತಿನಿಧಿಸುವ ಸಮಗ್ರ ಹೋರಾಟದ ಅವಶ್ಯಕತೆ ಎದ್ದುಕಾಣುತ್ತದೆ. ಅಣ್ಣಾ ಕ್ರಮಿಸಿದ ಹಾದಿಯಲ್ಲಿನ ಕೊರತೆ ಇರುವುದೇ ಇಲ್ಲಿ. □

ಭಾಗ್ಯಲಕ್ಷ್ಮಿ

ವನಿತೆಯರ ಪಾಲಿಗೆ ವರದಾನ

ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಕ್ಕೆ ಹೆಚ್ಚಿನ ಮನ್ನಣೆ ದೊರಕಿಸಿಕೊಡುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಕೈಗೊಂಡಿರುವ ಮಹತ್ವದ ಯೋಜನೆ–ಭಾಗ್ಯಲಕ್ಷ್ಮಿ. ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ 31ನೇ ಮಾರ್ಚ್ 2006ರ ನಂತರ ಜನಿಸಿದ ಇಬ್ಬರು ಹೆಣ್ಣು ಮಕ್ಕಳಿಗೆ, ಅವರು 18 ವರ್ಷ ವಯಸ್ಸು ತಲುಪಿದಾಗ ರೂ. ಒಂದು ಲಕ್ಷ ಮೊತ್ತವನ್ನು ನೀಡುವುದು ಈ ಯೋಜನೆಯ ಸಾರಾಂಶ.

ಯೋಜನೆಯ ಮುಖ್ಯಾಂಶಗಳು

* 2006–07ನೇ ಸಾಲಿನಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೆ ರೂ. 10.850/–ಠೇವಣಿ.
* 2007–08ನೇ ಸಾಲಿನಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೆ ರೂ. 20.000/–ಠೇವಣಿ. 2008–09ನೇ ಸಾಲಿಗೆ ಇದನ್ನು ಇಮ್ಮಡಿಗೊಳಿಸಲಾಗಿದೆ.
* 31ನೇ ಮಾರ್ಚ್ 2006ರ ನಂತರ ಬಿಪಿಎಲ್ ಕುಟುಂಬದಲ್ಲಿ ಜನಿಸಿದ ಇಬ್ಬರು ಹೆಣ್ಣು ಮಕ್ಕಳು ಈ ಯೋಜನೆಗೆ ಅರ್ಹರು. ಆ ಕುಟುಂಬ 3 ಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರಬಾರದು.
* ಒಂದನೇ ತರಗತಿಯಿಂದ ಹತ್ತನೆಯ ತರಗತಿಯವರೆಗೆ ರೂ. 300/– ರಿಂದ ರೂ. 1.000/– ವರೆಗಿನ ವಾರ್ಷಿಕ ವಿದ್ಯಾರ್ಥಿ ವೇತನ.
* 18 ವರ್ಷ ವಯಸ್ಸಿನವರೆಗೆ ರೂ.25.000/– ರಷ್ಟು ಆರೋಗ್ಯ ವಿಮೆ.
* ದುಡಿಯುತ್ತಿರುವ ತಂದೆ. ತಾಯಿ ಅಥವಾ ಪೋಷಕರ ಸಾವು ಸಂಭವಿಸಿದಲ್ಲಿ ರೂ. ಒಂದು ಲಕ್ಷದವರೆಗೆ ಕುಟುಂಬ ವಿಮೆ.

ಸ್ತ್ರೀ ಸಬಲೀಕರಣಕ್ಕೆ ವಿನೂತನ ಕ್ರಮ

ಕರ್ನಾಟಕ ವಾರ್ತೆ
Karnataka Information

ಪದವಿ ತರಗತಿಗಳಲ್ಲಿ ಕನ್ನಡ ಪಠ್ಯ: ಏನಾಗಿದೆ, ಏನಾಗಬೇಕು?

ಡಾ. ಎನ್. ಸುರೇಶ್ ನಾಗಲಮಡಿಕೆ

ಪದವಿ ತರಗತಿಗಳಲ್ಲಿ ಕನ್ನಡ ಪಠ್ಯಗಳು ಏನಾಗಿವೆ ಎನ್ನುವುದಕ್ಕಿಂತ ಅವು ಯಾವ ಸ್ವರೂಪದಲ್ಲಿದ್ದವು, ಈಗ ಯಾವ ಆಕೃತಿಯನ್ನು ಪಡೆದಿವೆ ಎಂಬುದನ್ನು ಚರ್ಚಿಸಬೇಕಾದ ಅಗತ್ಯವಿದೆ. ಪ್ರಾರಂಭದಲ್ಲಿ ಒಟ್ಟು ಶಿಕ್ಷಣವನ್ನು ಆಧಾರವಾಗಿಟ್ಟುಕೊಂಡೇ ಪಠ್ಯಗಳು ರೂಪುಗೊಳ್ಳುತ್ತಿದ್ದವು. ಭಾಷೆಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಿರಲಿಲ್ಲ. ಭಾರತವು ಹೆಚ್ಚು ಆಧುನಿಕ ವಾದದೆಂತೆಲ್ಲಾ ಪುಸ್ತುತ ಪಠ್ಯಕ್ಕಿಂತ 'ಪಠ್ಯಕ್ರಮ' (ಸಿಲಬಸ್)ಕ್ಕೆ ಹೆಚ್ಚು ಆಧ್ಯತೆ ನೀಡಲಾಗುತ್ತಿದೆ. ಇಂದು ಯಾವ ಪಠ್ಯಕ್ರಮವನ್ನು ಓದಿದರೆ ಉದ್ಯೋಗ ಅವಕಾಶಗಳು ಲಭಿಸುತ್ತವೆ ಎಂಬುದನ್ನು ಕೂಡ ಯೋಚಿಸಲಾಗುತ್ತಿದೆ. ಉದಾಹರಣೆಗೆ ಬಿಎಸ್ಸಿ ಪದವಿಯಲ್ಲಿ ಬಯೋಟೆಕ್ ಓದುವ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೂ ಕೇರಳ ವಿಶ್ವವಿದ್ಯಾಲಯಗಳು ಸಿದ್ಧಪಡಿಸಿರುವ ಪಠ್ಯಕ್ರಮಕ್ಕೂ ವ್ಯತ್ಯಾಸಗಳಿವೆ.

ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆಯಾದ ಬಯೋಕಾನ್ ಸಂಸ್ಥೆಯಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗಿಂತ ಕೇರಳದ ವಿದ್ಯಾರ್ಥಿಗಳೇ ಹೆಚ್ಚು ಇರುವುದನ್ನು ಕೆಲವು ಮೂಲಗಳು ತಿಳಿಸಿವೆ. ಇದು ವಿಜ್ಞಾನದ ಒಂದು ಪಠ್ಯದ ವಿಷಯ ಅಷ್ಟೇ. ಆದರೆ ಇದು ವಿಜ್ಞಾನದ ವಲಯದಲ್ಲೇ ಬಂದಿದ್ದು. ಆದರೆ ಪ್ರಶ್ನೆಗಳು ಇರುವುದು ಸಂಶೋಧನೆಯ ಹಿನ್ನಲೆಯಲ್ಲಿ ರೂಪಿಸುವ ಪಠ್ಯಗಳು ಬೇರೆಯಾಗಿರಬೇಕು? ಉದ್ಯೋಗ ದೃಷ್ಟಿಯಿಂದ ಸೃಷ್ಟಿಯಾಗುವ ಪಠ್ಯಗಳೇ ಬೇರೆಯೇ? ಎಂಬುದು. ಆದರೆ ಕಲಾ ವಿಭಾಗದಲ್ಲಿ ಅದರಲ್ಲೂ ಭಾಷಾ ಪಠ್ಯಗಳಲ್ಲಿ ಹಾಗೆ ಹೇಳುವುದಕ್ಕೆ ಬರುವುದಿಲ್ಲ. ಭಾಷೆಗಳನ್ನು ವಿವಿಧ ವಿಭಾಗಗಳಲ್ಲಿ ಯಾಕೆ ಸೇರ್ಪಡೆಗೊಳಿಸಬೇಕು? ಎಂಬುದು ಹಳೆಯ ಚರ್ಚೆ. ಇಂದು ಭಾಷಿಕ ಪಠ್ಯಗಳು ಬೇರೆ ಬೇರೆ ಕೋರ್ಸುಗಳಿಗೆ ಭಿನ್ನ ರೀತಿಯ ಪಠ್ಯಕ್ರಮಗಳು ರೂಪುಗೊಳ್ಳುತ್ತಿವೆ. ಭಾಷೆಯನ್ನು ಅಂಗನವಾಡಿಯಿಂದ ಹಿಡಿದು ಪದವಿ ತರಗತಿಗಳ ತನಕ ಹೇಗೆ ಕಲಿಸಲಾಗುತ್ತಿದೆ ಎಂಬುದು ದೊಡ್ಡ ವಿಚಾರ. ಕಲಿಕೆಯ ವಿಧಾನಗಳನ್ನು ಕುರಿತು ಸಾಕಷ್ಟು ಚರ್ಚೆಗಳು ಆಗಿವೆ. ಆದರೂ ಈ ವಿಚಾರದಲ್ಲಿ ಅಪರಿಪೂರ್ಣ ಪರಿಹಾರಗಳ ಹಾದಿಯಲ್ಲೇ ಇದ್ದೇವೆಂಬ ಸಂಶಯವೂ ಹುಟ್ಟುತ್ತದೆ.

ಅಂಗನವಾಡಿಗಳಲ್ಲಿ ಪಠ್ಯರಹಿತ ಭಾಷೆಯನ್ನು ಕಲಿಸಲಾಗುತ್ತದೆ. ಅಂದಿನ ಅಂಗನವಾಡಿಗಳೇ ಇಂದು 'ಪ್ಲೇ ಹೊಂ'ಗಳಾಗಿ ಮಾರ್ಪಾಡಾಗಿವೆ. ಮತ್ತು ವಾಣಿಜ್ಯೀಕರಣಗೊಂಡಿವೆ. ಹಳ್ಳಿಯ ಅಂಗನವಾಡಿ ಮಕ್ಕಳಿಗೆ ಊಟವೇ ಒಂದು ರೀತಿಯಲ್ಲಿ ಪಠ್ಯವಾಗುತ್ತದೆ. ಅವರಿಗೆ ಅಧಿಕೃತವಾಗಿ ಒಂದನೇ ತರಗತಿಯಿಂದ 'ಪಠ್ಯ ಪ್ರಾರಂಭವಾಗುತ್ತದೆ. ಕನ್ನಡ ಭಾಷೆಯನ್ನು ಒಂದನೇ ತರಗತಿಯಿಂದ ಕಲಿಸುವ ವಿಧಾನಗಳ ಬಗ್ಗೆ ಕೆಲವು ಮಾನದಂಡಗಳನ್ನು ನಮ್ಮ ಶಿಕ್ಷಣ ಇಲಾಖೆ ರೂಪಿಸಿದೆ. ನೀಲಿ ನಕ್ಷೆಗಳನ್ನು ತಯಾರಿಸಿ ಕೊಡಬೇಕೆಂದು ಸೂಚಿಸುತ್ತದೆ. ಒಂದನೇ ತರಗತಿಯಿಂದ ಪದವಿಯ ತನಕ ಸಾಹಿತ್ಯವೇ ಭಾಷಿಕ ಪಠ್ಯವಾಗಿ ರೂಪುಗೊಂಡಿರುವುದನ್ನು ಕಾಣಬಹುದು. ಆದರೆ ನಾವು ಎಡವುತ್ತಿರುವುದು ಯಾವ ಕಾಲಕ್ಕೆ ಎಂತಹ ಪಠ್ಯಕ್ರಮವನ್ನು ರೂಪಿಸಬೇಕು? ಎಂಬುದು. ಎಪ್ಪತ್ತರ ದಶಕದಲ್ಲಿ ಇದ್ದ ಪದವಿ ತರಗತಿ ಪಠ್ಯಕ್ರಮವನ್ನು 2011ರಲ್ಲಿ ಮುಂದುವರೆಸಿದರೆ ನಮ್ಮ ಕಾಲದ ವಿದ್ಯಾರ್ಥಿಗಳಿಗೆ ಅದು ಅಪ್ರಸ್ತುತವೆನಿಸಬಹುದು. ಯಾಕಾಗಿ ಓದಬೇಕು ಎಂಬ ಪ್ರಶ್ನೆಯೂ ಮೂಡಬಹುದು. ಇಂದಿಗೂ ಬಿ.ಬಿ.ಎಂ., ಬಿ.ಸಿ.ಎ ತರಗತಿಗಳ ಅನೇಕ ವಿದ್ಯಾರ್ಥಿಗಳನ್ನು ಈ ಪ್ರಶ್ನೆ ಕಾಡುತ್ತಿದೆ.

ಈ ನಿಟ್ಟಿನಲ್ಲಿ ಡಾ. ಕೆ.ವಿ. ನಾರಾಯಣ ಅವರು ಅಭಿಪ್ರಾಯಪಡುವಂತೆ "ಪದವಿ ತರಗತಿಗಳಲ್ಲಿ ಭಾಷಾ ಪಠ್ಯ ಕ್ರಮದ ಉದ್ದೇಶ ಭಾಷಾ ಕೌಶಲ್ಯಗಳ ಅಭಿವೃದ್ಧಿಯೋ? ಅಥವಾ ಸಾಹಿತ್ಯ ಸಂಸ್ಕೃತಿಗೆ ಪ್ರವೇಶ ಪಡೆಯುವುದೋ? ಇವೆರಡೂ ಉದ್ದೇಶಗಳನ್ನು ಮನಬಂದಂತೆ ಬಳಸುತ್ತಿರುವುದನ್ನು ನಾವು ನೋಡುತ್ತೇವೆ." (ಪುಟ-131. ಮತ್ತೆ ಭಾಷೆಯ ಸುತ್ತ-ಮುತ್ತ) ಕಾನೂನುಗಳು ಇಂದಿಗೂ ನಿಜವಾಗುತ್ತಿವೆ. ಭಾಷಾ ಕೌಶಲಗಳನ್ನು ಮತ್ತು ಸಾಹಿತ್ಯ ಸಂಸ್ಕೃತಿಯನ್ನು 'ಯಾವ' ಪದವಿ ವಿದ್ಯಾರ್ಥಿಗಳಿಗೆ 'ಹೇಗೆ' ಕಲಿಸಬೇಕು ಎಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ.

ಒಂದನೇ ತರಗತಿಯಿಂದ ಪದವಿ ತರಗತಿಗಳ ತನಕ ಭಾಷಿಕ ಪಠ್ಯವನ್ನು ಯಾವ ವಿಧಾನದಲ್ಲಿ ಕಲಿಸಬೇಕು ಎಂಬುದೇ ದೊಡ್ಡ ಸವಾಲು. ಹಾಗೆಯೇ ಈ ತರಗತಿಗಳಲ್ಲಿ ಪಠ್ಯಗಳು ಹೇಗೆ ರೂಪುಗೊಳ್ಳಬೇಕೆಂಬುದೂ ಅಷ್ಟೇ ಮುಖ್ಯವಾದದ್ದು. ಈ ಬಗ್ಗೆ ಜಗತ್ತಿನಾದ್ಯಂತ ಹಲವು ಭಾಷಾ ತಜ್ಞರು ತಮ್ಮದೇ ಆದ ಸಿದ್ಧಾಂತಗಳನ್ನು ಮಂಡಿಸಿದ್ದಾರೆ.

ಪ್ರಾರಂಭದಲ್ಲಿ ಮಗುವಿಗೆ ಕನ್ನಡ ಪಠ್ಯವೇ ಮುಖ್ಯವಾಗುತ್ತದೆ. (ಒಂದನೇ ತರಗತಿ ಮಟ್ಟ ಆ ಸಂದರ್ಭಕ್ಕೆ ಮಗುವಿಗೆ 'ಅರ್ಥ'ಕ್ಕಿಂತ 'ಕಲಿಕೆ'ಗೆ ಹೆಚ್ಚು ಪ್ರಾಧಾನ್ಯತೆ ನೀಡಲಾಗುತ್ತದೆ. ಅಂದರೆ ಮಗು ಭಾಷೆ (ಲಿಪಿ)ಯನ್ನು ಬರೆಯುವುದನ್ನು ಮಾತನಾಡುವುದನ್ನು ಕಲಿತರೆ ಸಾಕು ಎಂಬ ತೀರ್ಮಾನಕ್ಕೆ ಬರುತ್ತಾರೆ. ಒಂದು ವೇಳೆ ಅರ್ಥದ ಕಡೆಗೆ

ಅಂಗನವಾಡಿಗಳಲ್ಲಿ ಪಠ್ಯರಹಿತ ಭಾಷೆಯನ್ನು ಕಲಿಸಲಾಗುತ್ತದೆ. ಅಂದಿನ ಅಂಗನವಾಡಿಗಳೇ ಇಂದು 'ಪ್ಲೇ ಹೊಂ'ಗಳಾಗಿ ಮಾರ್ಪಾಡಾಗಿವೆ. ಮತ್ತು ವಾಣಿಜ್ಯೀಕರಣಗೊಂಡಿವೆ. ಹಳ್ಳಿಯ ಅಂಗನವಾಡಿ ಮಕ್ಕಳಿಗೆ ಊಟವೇ ಒಂದು ರೀತಿಯಲ್ಲಿ ಪಠ್ಯವಾಗುತ್ತದೆ. ಅವರಿಗೆ ಅಧಿಕೃತವಾಗಿ ಒಂದನೇ ತರಗತಿಯಿಂದ 'ಪಠ್ಯ ಪ್ರಾರಂಭವಾಗುತ್ತದೆ. ಕನ್ನಡ ಭಾಷೆಯನ್ನು ಒಂದನೇ ತರಗತಿಯಿಂದ ಕಲಿಸುವ ವಿಧಾನಗಳ ಬಗ್ಗೆ ಕೆಲವು ಮಾನದಂಡಗಳನ್ನು ನಮ್ಮ ಶಿಕ್ಷಣ ಇಲಾಖೆ ರೂಪಿಸಿದ ನೀಲಿ ನಕ್ಷೆಗಳನ್ನು ತಯಾರಿಸಿ ಕೊಡಬೇಕೆಂದು ಸೂಚಿಸುತ್ತದೆ. ಒಂದನೇ ತರಗತಿಯಿಂದ ಪದವಿಯ ತನಕ ಸಾಹಿತ್ಯವೇ ಭಾಷಿಕ ಪಠ್ಯವಾಗಿ ರೂಪುಗೊಂಡಿರುವುದನ್ನು ಕಾಣಬಹುದು.

ವಾಲಿದರೂ ಮಗುಮಾತ್ರ ಬರೆಯುವುದರ ಕಡೆಗೆ ಹೆಚ್ಚು ಗಮನ ನೀಡುತ್ತದೆ. ಬರುಬರುತ್ತಾ ಪ್ರೌಢಶಾಲೆಯ ಮಟ್ಟಕ್ಕೆ ಬಂದ ಮೇಲೆ ಮಗು ಕಲಿಕೆಯನ್ನು ರೂಢಿಸಿ ಕೊಂಡು ಅರ್ಥದ ಕಡೆಗೆ ಗಮನ ಹರಿಸುವುದನ್ನು ಕಾಣ ಬಹುದು. ತರಗತಿಗಳಲ್ಲಿ ಕೂಡ ಅರ್ಥ ಮುಖ್ಯವಾಗುತ್ತದೆ. ಪ್ರಾಯಶಃ ಇಲ್ಲಿಂದಲೇ ತರಗತಿಗಳಲ್ಲಿ ಪಠ್ಯ ಹೇಗಿರಬೇಕು ಎಂಬ ನಿಜವಾದ ಪ್ರಶ್ನೆ ಉದ್ಭವವಾಗುತ್ತದೆ. ಪ್ರೌಢ ತರಗತಿಗಳ ಮಾನಸಿಕ ಮಟ್ಟಗಳನ್ನು ಮೊದಲು ಅರ್ಥಮಾಡಿ ಕೊಳ್ಳಬೇಕು. ಅವರ ಬೌದ್ಧಿಕ ಮಟ್ಟಕ್ಕೆ ಬಾಷಾ ಪಠ್ಯಗಳು ಸಿದ್ಧವಾಗಬೇಕು. ಆದರೆ ಇಂದು ಆಗುತ್ತಿರುವುದು ಹಾಗಲ್ಲ. ಹತ್ತನೆ ತರಗತಿಗೆ ಇಡುವ ಪಠ್ಯಗಳು ಪದವಿಗೆ ಪಲ್ಲಟಗೊಳ್ಳುತ್ತಿವೆ. ಒಂಭತ್ತನೇ ತರಗತಿಯ ವಿದ್ಯಾರ್ಥಿ ನವೋತ್ತರ ಘಟ್ಟದ ಮುಖ್ಯ ಕವಿಯಾದ ಮೂಡ್ನಾಕೂಡು ಚಿನ್ನಸ್ವಾಮಿ ಮತ್ತು ಕತೆಗಾರ ಅಮರೇಶ ನುಗಡೋಣಿಯವರನ್ನು ಕುರಿತು ತಿಳಿದುಕೊಂಡಿದ್ದರೆ. ಪದವಿಯ ವಿದ್ಯಾರ್ಥಿ ಇಂದಿಗೂ ಆ ಹೆಸರುಗಳನ್ನು ಕೇಳಿಸಿಕೊಂಡೇ ಇಲ್ಲ.

ಇದು ಒಂದು ಉದಾಹರಣೆಯಷ್ಟೇ. ಕೊನೆಗೂ ಭಾಷಿಕ ಪಠ್ಯ ತರಗತಿಯ ಒಳಗೆ/ಹೊರಗೆ ಹೇಗೆ ಕೆಲಸ ಮಾಡುತ್ತದೆ ಎಂಬುದೇ ಮುಖ್ಯವಾಗುತ್ತದೆ. 70–80ರ ದಶಕಗಳಲ್ಲಿ ಭಾಷಿಕ ಪಠ್ಯಕ್ಕೆ ಇದ್ದ ಮಾನ್ಯತೆ ಇಂದು ಕಡಿಮೆಯಾಗುತ್ತಿದೆ. ಎಂಬುದು ಯಾರಿಗಾದರೂ ಅನಿಸದೇ ಇರದು. ಇದಕ್ಕೆ ಆಧುನಿಕತೆಯ ಹಲವು ಕಾರಣಗಳನ್ನು ಅನೇಕರು ನೀಡುತ್ತಾರೆ. ಆದರೂ 70–80ರ ದಶಕದಲ್ಲಿ ಇಲ್ಲದ ಕೋರ್ಸುಗಳು ಈಗ ಪ್ರವೇಶಗೊಂಡಿವೆ. ಅವುಗಳಿಗೂ ಕನ್ನಡ ಕಡ್ಡಾಯ ಮಾಡಿದ್ದಾರೆ. ಕಾಲಕ್ಕೆ ತಕ್ಕಂತೆ ಕೋರ್ಸುಗಳು ಬಂದಿವೆ ವಿನಃ ಕಾಲಕ್ಕೆ ತಕ್ಕಂತೆ ಪಠ್ಯಕ್ರಮಗಳೂ ಬಂದಿಲ್ಲ ಎಂಬ ಕೂರಗು ಇದೆ. ಇವೆಲ್ಲದರ ನಡುವೆ ಗೊಂದಲದಲ್ಲಿ ಮುಳುಗಿರುವುದು ಮಾತ್ರ ವಿದ್ಯಾರ್ಥಿಗಳು.

ಒಂದನೇ ತರಗತಿಯಿಂದ ಪದವಿಯ ತನಕ ಕನ್ನಡ ಪಠ್ಯವನ್ನು ಅಧ್ಯಾಪಕ ಮತ್ತು ವಿದ್ಯಾರ್ಥಿ ಹೇಗೆ ಸ್ವೀಕರಿಸುತ್ತಾ ಬಂದಿದ್ದಾನೆ ಎಂಬುದೇ ದೊಡ್ಡ ವಿಚಾರ. ಅಲ್ಲಿಂದ ಅವನು ಕನ್ನಡ ಪಠ್ಯದಿಂದ ಏನು ಕಲಿತಿದ್ದಾನೆ ಎಂಬ ಪ್ರಶ್ನೆಯನ್ನು ಪದವಿಗೆ ಬಂದ ಮೇಲೆ ಕೇಳಿದರೆ ಅವನು ಉತ್ತರಕ್ಕಾಗಿ ತಡಕಾಡುತ್ತಾನೆ. ನಮಗೆ ಸವಾಲುಗಳಿರುವುದು ಪದವಿಗೆ ಬಂದ ಕನ್ನಡ ಭಾಷಿಕ ವಿದ್ಯಾರ್ಥಿಯನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ಹೇಗೆ ಬೆಳೆಸಬೇಕೆಂಬುದು ಮತ್ತು ಯಾವ ಪಠ್ಯಕ್ರಮ ಅವನನ್ನು ಆ ಮಟ್ಟಕ್ಕೆ ಕರೆದೊಯ್ಯತ್ತದೆ ಎಂಬುದು. ನಮ್ಮ ಅಧ್ಯಾಪಕರು ಪದವಿ ತರಗತಿಗಳಲ್ಲಿ ಕನ್ನಡ ಭಾಷಿಕ ಪಠ್ಯವನ್ನು ಭಿನ್ನ ಆಯಾಮಗಳಲ್ಲಿ ಪರಿಚಯಿಸಬೇಕಾದ ಅಗತ್ಯತೆ ಇದೆ. ಅದುವರೆಗೆ ಅವರು ಅರಗಿಸಿಕೊಂಡ ಕನ್ನಡ ಪಠ್ಯಗಳಿಗೂ ಪದವಿ ಪಠ್ಯಗಳಿಗೂ ಕೆಲವು ವ್ಯತ್ಯಾಸಗಳನ್ನು ಗುರುತಿಸಬೇಕಾಗುತ್ತದೆ. ಮತ್ತು 'ಹೇಗೆ' ಅರ್ಥ ಮಾಡಿಕೊಳ್ಳಬೇಕು ಎಂಬುದನ್ನು ಹೇಳಬೇಕು. ಇಲ್ಲದಿದ್ದರೆ ಕೌಶಲ ಮತ್ತು ಭಾಷಿಕ ಪಠ್ಯಗಳು ಏಕತಾನತೆಯನ್ನು ಪಡೆದುಕೊಳ್ಳುವ ಅಪಾಯವೂ ಇದೆ.

ಪದವಿ ತರಗತಿಗಳಲ್ಲಿ ಬೋಧಿಸುವ ಕ್ರಮಗಳನ್ನು ನಾವು ಈಗ ವಿಸ್ತರಿಸಿಕೊಳ್ಳಬೇಕಾಗಿದೆ. ತರಗತಿಯಲ್ಲಿ ಪಠ್ಯವನ್ನು ಭಿನ್ನ ದೃಷ್ಟಿಕೋನಗಳಿಗೆ ಚಾಚಿಕೊಳ್ಳುವಂತೆ ಮಾಡಬೇಕು. ಅದನ್ನು ಜಡಸ್ಥಿತಿಯಿಂದ ತಪ್ಪಿಸಿ ವರ್ತಮಾನದ ಸಂಗತಿಗಳಿಗೆ ಸ್ಪಂದಿಸುವಂತೆ ಮಾಡಬೇಕು. ಇಂದಿಗೂ ಪದವಿ ತರಗತಿಯಲ್ಲಿ ಕನ್ನಡ ಪಠ್ಯ ಸಂಖ್ಯೆಯಲ್ಲಿ ಒಂದು

ಇವತ್ತಿಗೂ ಕನ್ನಡ ಭಾಷಿಕ ಪಠ್ಯವನ್ನು ಪರೀಕ್ಷೆಗಳ ಹಿನ್ನಲೆಯಲ್ಲಿಯೇ ಬೋಧಿಸುವ ಪರಿಚಾರ ಸಾಗುತ್ತಲೇ ಇದೆ ವಿನಃ ಬೋಧಿಸುವ ಅಧ್ಯಾಪಕರಿಗೂ ಕೇಳಿಸಿಕೊಳ್ಳುವ ವಿದ್ಯಾರ್ಥಿಗಳ ನಡುವೆ ಪಠ್ಯ ಪುಸ್ತಕಗಳು ಒಂದು ರೀತಿಯ ಸಾಂಸ್ಕೃತಿಕ ಸಂವಾದಗಳಿಗೆ ಸೇತುವೆಯಾಗುತ್ತಿಲ್ಲ. ತರಗತಿಯಲ್ಲಿ 'ಕಾಲ'ವನ್ನ ನೂಕುವುದಷ್ಟೇ ಉದ್ದೇಶವಾಗಿರುತ್ತದೆ. ವಿನಃ ಆ ವಿಷಯದಲ್ಲಿ ಕಲಿತ ವಿಚಾರಗಳೆಷ್ಟು ಎಂಬುದನ್ನು ವಿದ್ಯಾರ್ಥಿ ಹೆಚ್ಚಾಗಿ ಚಿಂತಿಸುತ್ತಿಲ್ಲ.

ವಿಷಯವಾಗಿಯೇ ಇದೆ ಎಂಬ ಅನುಮಾನ ಮೂಡುತ್ತದೆ ವಿನಃ ಅದು ಗಂಭೀರತೆಯನ್ನು ಪಡೆದುಕೊಂಡಿದೆ ಎಂದು ಅನಿಸುವುದಿಲ್ಲ. ಐಚ್ಛಿಕ ಪಠ್ಯ ವಿಷಯವಾಗಿ ಮಾತ್ರ ಅದು ಗಂಭೀರತೆಯನ್ನು ಪಡೆದುಕೊಂಡಿದೆ. ಹಿಂದೆ ಹೇಳಿದಂತೆ ನಾವು ಕಾಲವನ್ನು ಅರ್ಥಮಾಡಿಕೊಂಡು ಬೋಧಿಸಬೇಕಾಗಿದೆ ಮತ್ತು ಪಠ್ಯಕ್ರಮವನ್ನು ರೂಪಿಸಬೇಕಾಗಿದೆ. ಇಲ್ಲದಿದ್ದರೆ "ಬದಲಾಗುತ್ತಿರುವ ಮಾರುಕಟ್ಟೆಯ ಸಂಬಂಧಗಳು, ತಂತ್ರಜ್ಞಾನದ ಕನ್ನಡ ಭಾಷಿಕವಾಗಿ ಮೈಲಿಗೆಯ ನೆಲೆಯಲ್ಲಿಯೇ ಉಳಿಯುವಂತಾಯಿತು ಎಂಬುದನ್ನು ಗ್ರಹಿಸಬೇಕಾಗಿದೆ. (ಪುಟ–131 ಪಠ್ಯ ಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ, ಆರ್. ಚಲಪತಿ) ಚಲಪತಿಯವರ ಈ ಮಾತುಗಳು ಆತಂಕದ ಹಿನ್ನಲೆಯಲ್ಲಿವೆ ಎಂದೆನಿಸುತ್ತದೆ. ತರಗತಿಯಲ್ಲಿ ಕನ್ನಡ ಪಠ್ಯವನ್ನು ಮೇಲಿನ ವಿಚಾರಗಳಿಗೆ ಹಿಗ್ಗಿಸಿಕೊಳ್ಳುವುದಕ್ಕೆ ಅವಕಾಶಗಳಿವೆ. ಆದರೆ ಅಧ್ಯಾಪಕ ಸ್ವತಃ ತಾನೇ ಜಗತ್ತಿನ ವರ್ತಮಾನಕ್ಕೆ ಸ್ಪಂದಿಸಿರುವುದಿಲ್ಲ.

ಕನ್ನಡ ಪಠ್ಯದಲ್ಲಿ ಏನೆಲ್ಲಾ ಬೋಧಿಸಬಹುದು ಎಂಬುದನ್ನು ಆತ ಅರಿತುಕೊಳ್ಳಬೇಕಾಗಿದೆ. ಇವತ್ತಿಗೂ ಕನ್ನಡ ಭಾಷಿಕ ಪಠ್ಯವನ್ನು ಪರೀಕ್ಷೆಗಳ ಹಿನ್ನಲೆಯಲ್ಲಿಯೇ ಬೋಧಿಸುವ ಪರಿಚಾರ ಸಾಗುತ್ತಲೇ ಇದೆ ವಿನಃ ಬೋಧಿಸುವ ಅಧ್ಯಾಪಕರಿಗೂ ಕೇಳಿಸಿಕೊಳ್ಳುವ ವಿದ್ಯಾರ್ಥಿಗಳ ನಡುವೆ ಪಠ್ಯ ಪುಸ್ತಕಗಳು ಒಂದು ರೀತಿಯ ಸಾಂಸ್ಕೃತಿಕ ಸಂವಾದಗಳಿಗೆ ಸೇತುವೆಯಾಗುತ್ತಿಲ್ಲ. ತರಗತಿಯಲ್ಲಿ 'ಕಾಲ'ವನ್ನ ನೂಕುವುದಷ್ಟೇ ಉದ್ದೇಶವಾಗಿರುತ್ತದೆ ವಿನಃ ಆ ವಿಷಯದಲ್ಲಿ ಕಲಿತ ವಿಚಾರಗಳೆಷ್ಟು ಎಂಬುದನ್ನು ವಿದ್ಯಾರ್ಥಿ ಹೆಚ್ಚಾಗಿ ಚಿಂತಿಸುತ್ತಿಲ್ಲ. ಅವರನ್ನು ಜಾತ್ಯತೀತಗೊಳಿಸುವ ಸಾಂಸ್ಕೃತಿಕವಾಗಿ ಬೆಳೆಸುವ ಪಠ್ಯಗಳು ರೂಪುಗೊಳ್ಳಬೇಕು. 'ಪಠ್ಯ' ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿರುವುದಕ್ಕೂ ಮತ್ತು ಅಧ್ಯಾಪಕನ ಹಿಡಿತ ಸಡಿಲಗೊಂಡಿರುವುದಕ್ಕೂ ಬಹುದೊಡ್ಡ ಕಾರಣ 'ಗೈಡ್'ನ ದಾಳಿ. ಆಶ್ಚರ್ಯವೆಂದರೆ ಗೈಡನ್ನು ತಯಾರು ಮಾಡುವವರೂ ಅಧ್ಯಾಪಕರೇ ಆಗಿರುತ್ತಾರೆ.

ಇವು ಇಂದು ತರಗತಿಯ ಪಠ್ಯವು ವಿಸ್ತಾರದ ನೆಲೆಯನ್ನು ಪಡೆದುಕೊಂಡಿರುವುದಕ್ಕೆ ಬಿಡುತ್ತಿಲ್ಲ. ಬದಲಾಗಿ ಪಠ್ಯಗಳನ್ನು ಸಂಕುಚಿತಗೊಳಿಸುವ ಕೆಲಸವನ್ನು ಮಾಡುತ್ತಿವೆ. ಈ ಸಮಸ್ಯೆ ಕೇವಲ ಕನ್ನಡ ವಿಷಯಕ್ಕೆ ಮಾತ್ರ ಬಂದಿಲ್ಲ. ಉಳಿದ ವಾಣಿಜ್ಯ, ವಿಜ್ಞಾನದ ಪಠ್ಯಗಳಿಗೂ ಬಂದಿದೆ. ಅವುಗಳ ಸ್ಥಾನದಲ್ಲಿ 'ಸ್ಕ್ಯಾನರ್'ಗಳು ದೊಡ್ಡದಂಥೆಯನ್ನೇ ಮಾಡುತ್ತಿವೆ. ಪ್ರಸ್ತುತ ಸಂದರ್ಭದಲ್ಲಿ ಗೈಡ್‌ನ ಉತ್ತರವೇ ಪರೀಕ್ಷೆಯ ಉತ್ತರ ಪತ್ರಿಕೆಗಳಲ್ಲಿ ಮುಖ್ಯವಾಗುತ್ತದೆ. ಇದನ್ನು ತಪ್ಪಿಸಬೇಕೆಂದು ಬೆಂಗಳೂರು ವಿಶ್ವವಿದ್ಯಾಲಯ ರಾಜ್ಯದ ಮುಖ್ಯ ವಿದ್ವಾಂಸರ ಜತೆಗೆ ಚರ್ಚಿಸಿ ಹೊಸ ರೀತಿಯ ಪಠ್ಯಕ್ರಮವನ್ನು ಜಾರಿಗೆ ತಂದಿತು. ಇದು ಹೊಸ ರೀತಿಯ ಪ್ರಯೋಗಗಳಿಗೆ ತೆರೆದುಕೊಂಡ ಪಠ್ಯಕ್ರಮವಾಗಿತ್ತು. ಪ್ರಸ್ತುತ ಜಾಗತಿಕ ಸವಾಲುಗಳು ಮತ್ತು ವೈಯಕ್ತಿಕವಾಗಿ ಎದುರಿಸುವ ಸಮಸ್ಯೆಗಳ ಹಿನ್ನಲೆಯಲ್ಲಿ ಮತ್ತು ಶೀರ್ಷಿಕೆಗಳ (ಥೀಮ್) ಹಿನ್ನಲೆಯಲ್ಲಿ ಪಠ್ಯಕ್ರಮ ತಯಾರಾಯಿತು. ಈ ಸಂದರ್ಭದಲ್ಲಿ ಪಠ್ಯಕ್ಕೆ ಪೂರಕ ಪಠ್ಯ, ಪೂರ್ವ ಪಠ್ಯ ಎಂಬ ಉಪ ಪಠ್ಯಗಳನ್ನು ಸೇರಿಸಲಾಯಿತು. ಈ ನಿಟ್ಟಿನಲ್ಲಿ ಈ ಪಠ್ಯಗಳನ್ನು ಯಾವ ಬಗೆಯಲ್ಲಿ ಬೋಧಿಸಬೇಕು ಎಂದು ಹಲವುಕಡೆ ವಿಚಾರ ಕಮ್ಮಟಗಳನ್ನು ಮಾಡಲಾಯಿತು. ಈ ಪಠ್ಯಕ್ರಮವನ್ನು ಉದಯೋನ್ಮುಖ ಬರಹಗಾರರು, ಹೊಸತನವನ್ನು ಇಷ್ಟಪಡುವವರು ಸ್ವೀಕರಿಸಿದರೆ, ಸಂಪ್ರದಾಯಕ ಅಧ್ಯಾಪಕರು ವಿರೋಧಿಸಿದರು.

ಆದರೆ ತರಗತಿಯಲ್ಲಿ ಈ ಪಠ್ಯಗಳು ಹೆಚ್ಚು ವಿದ್ಯಾರ್ಥಿಗಳೊಂದಿಗೆ ಮುಖಾಮುಖಿಯಾಗುವಂತೆ ಮಾಡುತ್ತಿತ್ತು. ಮತ್ತು ಅಧ್ಯಾಪಕರನ್ನು ಜಡತ್ವದಿಂದ, ಏಕತಾನತೆಯಿಂದ ಬಿಡಿಸುವುದಕ್ಕೆ ಪ್ರಯತ್ನ ಪಟ್ಟಿತು. ಪರಂಪರೆಯಿಂದ ನಾವು ಕನ್ನಡ ಪಠ್ಯವೆಂದರೆ ಕೇವಲ ವ್ಯಾಕರಣ, ಗದ್ಯ ಭಾಗ, ನಾಟಕ, ಪದ್ಯಭಾಗ ಎಂಬ ವರ್ಗೀಕರಣವನ್ನು ಇದು ಒಡೆಯಿತು. ಹಾಗೂ ಕನ್ನಡ ಪಾಠವೆಂದರೆ ಬರೀ ಪದಗಳನ್ನು ಬಿಡಿಸುವುದು, ಅವುಗಳಿಗೆ ಅರ್ಥ ಕಟ್ಟುವುದು ಈ ರೀತಿಯ ಕೆಲವು ನಂಬಿಕೆಗಳನ್ನು ಮರೆಯುವಂತೆ ಮಾಡಿತು. ಬದಲಾಗಿ ತರಗತಿಗಳಲ್ಲಿ ಪಠ್ಯವೆಂದರೆ ವಿದ್ಯಾರ್ಥಿಯ ವೈಯಕ್ತಿಕತೆಯ ಹಿನ್ನಲೆಯಲ್ಲಿ ಇಂದಿನ ಜಗತ್ತಿನೊಂದಿಗೆ ಮುಖಾಮುಖಿಯಾಗುವುದನ್ನು ಈ ಪಠ್ಯಗಳು ಕಲಿಸತೊಡಗಿದವು.

ಆದರೆ ಮತ್ತೆ ಅದೇ ವಿಶ್ವವಿದ್ಯಾಲಯ ಹಳೆಯ ಮಾದರಿಗಳಿಗೆ ಮುಖಮಾಡಿ ದೊಡ್ಡ ತಪ್ಪು ಮಾಡಿದೆ. ಇತ್ತೀಚಿನ ಪಠ್ಯಗಳು ಮತ್ತೆ ಕಾವ್ಯ, ಪ್ರಬಂಧ, ವಿಚಾರ ಸಾಹಿತ್ಯ, ಕಾದಂಬರಿ ಮುಂತಾದ ಪ್ರಕಾರಗಳ ಹಿನ್ನಲೆಯಲ್ಲಿ ಬೋಧಿಸಲಾಗುತ್ತಿದೆ. ಆ ರೀತಿಯ ವರ್ಗೀಕರಣ ಮತ್ತೆ ಅಗತ್ಯವಿರಲಿಲ್ಲವೇನೋ. ಈ ಪ್ರಕಾರಗಳನ್ನು ಪ್ರಸ್ತುತ ಸಂದರ್ಭದಲ್ಲಿ ತರಗತಿಯಲ್ಲಿ ಹೇಗೆ ಬೋಧಿಸಬೇಕು ಯಾವ ಹಿನ್ನಲೆಯಲ್ಲಿ ಬೋಧಿಸಬೇಕು ಎಂಬ ಪ್ರಶ್ನೆಗಳನ್ನು ಕೇಳಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಹಿಂದೆ ಇದ್ದ ಪಠ್ಯಕ್ರಮವನ್ನು ಪರಿಷ್ಕೃತಗೊಳಿಸಿ ವಿಚಾರ ಸಾಹಿತ್ಯವನ್ನು ಎಲ್ಲಿ ಸೇರಿಸಬೇಕು, ಕಾವ್ಯವನ್ನು ಎಲ್ಲಿ ಜೋಡಿಸಬೇಕು ಎಂಬ ಚಿಂತನೆಯನ್ನು ಮಾಡುವ ಅವಶ್ಯಕತೆ ಇತ್ತು.

ಮುಖ್ಯವಾಗಿ ಎಲ್ಲ ವಿಶ್ವವಿದ್ಯಾಲಯಗಳ ಸಮಸ್ಯೆ ಎಂದರೆ ಯಾವ ಕೋರ್ಸಿಗೆ ಎಂತಹ ಕಾವ್ಯವನ್ನು ಬೋಧಿಸಬೇಕು, ಎಂತಹ ನಾಟಕಗಳನ್ನು ಪಠ್ಯವಾಗಿಡಬೇಕೆಂಬುದು. ಸ್ವಲ್ಪ ಆಳವಾಗಿ ಯೋಚಿಸಿ ಕನ್ನಡ ಸಾಹಿತ್ಯವನ್ನು ತಡಕಾಡಿದರೆ ಇದು ಸಮಸ್ಯೆ ಎನಿಸುವುದಿಲ್ಲ. ಕೆಲವೊಮ್ಮೆ ವಿಮರ್ಶೆ/ವಿಚಾರಸಾಹಿತ್ಯ ಎರಡೂ ಒಂದೇ ಎಂಬ ವಿಷಯಕ್ಕೂ ಬಂದು ತಲುಪುತ್ತಿದ್ದೇವೆ. ಬಿ.ಬಿ.ಎಂ/ಬಿ.ಸಿ.ಎ ವಿದ್ಯಾರ್ಥಿಗಳಿಗೆ ಯಾವ ರೀತಿಯ ಕನ್ನಡ ಭಾಷಿಕ ಪಠ್ಯ ರೂಪಿಸಬೇಕೆಂಬುದರಲ್ಲೇ ನಾವಿಂದು

(39ನೇ ಪುಟಕ್ಕೆ)

ಡಾ. ವಿಠೋಬ ಬಿ
ಡಾ. ಶ್ರೀಕಾಂತ

ಪ್ರಸ್ತಾವನೆ:

ಒಂದು ಪ್ರಬಲ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಜಾಗತೀಕರಣ ಅಭಿವೃದ್ಧಿ ಸಂಕೇತವಾಗಿ ಹೊರ ಹೊಮ್ಮುತ್ತದೆ ಎಂಬ ಆಶಾವಾದಗಳು ತಲೆಕೆಳಗಾಗಿರುವುದು ಆಶ್ಚರ್ಯಕರ ಸಂಗತಿಯಾಗಿದೆ. ಜಗತ್ತಿನ ಪ್ರಬಲ ರಾಷ್ಟ್ರಗಳ ಜೊತೆಗೆ ನಿಲ್ಲಬೇಕಾದ ನಮ್ಮ ರಾಷ್ಟ್ರ ಇವತ್ತು ಹಲವಾರು ಸಮಸ್ಯೆಗಳಿಂದ ನರಳುತ್ತಿರುವುದು ಶೋಚನಿಯ ಎನಿಸುತ್ತದೆ. ಅಭಿವೃದ್ಧಿಯ ಕಲ್ಪನೆ ಅರಿಯದ ಎಷ್ಟೋ ಜನ ರಾಜಕಾರಣಿಗಳು ಮುಗ್ಧ ಜನರ ಮನಸ್ಸನ್ನು ಹಾಳು ಮಾಡುತ್ತಿದ್ದಾರೆ. ದೇಶದ ಅಭಿವೃದ್ಧಿಯ ಹೆಸರಿನಲ್ಲಿ ಹಗಲು ದರೋಡೆ ನಡೆಯುತ್ತಿರುವುದನ್ನು ಕಂಡು ಪ್ರತಿಯೊಬ್ಬ ಭಾರತೀಯನು ಮೂಕನಾಗಿ ಕೈಕಟ್ಟಿ ಕುಳಿತುಕೊಂಡಿದ್ದಾನೆ. ಬೆಳಗಾದರೆ ಕೊಲೆ, ಅಪಘಾತ, ದರೋಡೆ ಹಲವಾರು ಯೋಜನೆಗಳಲ್ಲಿ ಭ್ರಷ್ಟಾಚಾರ, ವರದಕ್ಷಿಣೆ ಸಾವು, ಮಹಿಳಾ ಲೈಂಗಿಕ ಕಿರುಕುಳಗಳು, ಮಹಿಳಾ ದೌರ್ಜನ್ಯಗಳು ಒಂದಲ್ಲಾ ಒಂದು ಪ್ರಕರಣಗಳು ಹೊರ ಬರುತ್ತಲೆ ಇವೆ.

ಇವನ್ನೆಲ್ಲಾ ಸರಿಪಡಿಸದ ನಮ್ಮನ್ನಾಳುವ ನಾಯಕರು ದೇಶವನ್ನು ಅಭಿವೃದ್ಧಿ ಮಾಡುತ್ತಾರೆಯೆ? ಆರ್ಥಿಕ ಸುಸ್ಥಿರತೆಯೊಂದೇ ಅಭಿವೃದ್ಧಿಯಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ಇವತ್ತು ಅಭಿವೃದ್ಧಿ ಪರ ಯೋಜನೆಗಳು ಏನಾಗುತ್ತಿವೆಯೆಂಬುದನ್ನು ಯೋಚಿಸಿದಾಗ, ಲೈಂಗಿಕ ಸಂಘರ್ಷಕ್ಕೆ ಸಿಮಿತವಾಗುತ್ತಿವೆ ಎಂಬುದನ್ನು ಕರ್ನಾಟಕ ಸರ್ಕಾರ ಈಗಾಗಲೇ ತೋರಿಸಿ ಕೊಟ್ಟಿದೆ. ಅದು ಕೇವಲ ಆಕರ್ಷಣಿ ಆಗುತ್ತದೆಯೇ ಹೊರತು ಅಭಿವೃದ್ಧಿ ಆಗುವುದಿಲ್ಲ ಎಂದು ಹಲವಾರು ಅರ್ಥಶಾಸ್ತ್ರಜ್ಞರು ಟೀಕಿಸಿದ್ದಾರೆ. ಇದರ ಜೊತೆಗೆ ಸಂವಿಧಾನದ ಆದಿಯಾಗಿ ಹಿಡಿದು ಪ್ರಸ್ತುತ ಜಾಗತೀಕರಣದ ವರೆಗೆ ಕೇಂದ್ರ ಸರ್ಕಾರ ಮಹಿಳಾ ಸಬಲೀಕರಣಕ್ಕಾಗಿ ಹಲವಾರು ಪ್ರಯತ್ನಗಳನ್ನು ಮಾಡುತ್ತಿದೆ. ಆದರೂ ಮಹಿಳಾ ಶೋಷಣೆಗಳು ಮತ್ತು ದೌರ್ಜನ್ಯಗಳು ನಡೆಯುತ್ತಲೆ ಇರುತ್ತವೆ ಎಂಬುದರ ಮೇಲೆ ಬೆಳಕು ಚೆಲ್ಲುವುದು ಈ ಲೇಖನದ ಪ್ರಮುಖ ಉದ್ದೇಶವಾಗಿದೆ.

ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ. 48.58ರಷ್ಟು ಇರುವ ಮಹಿಳೆಯರು ಶೇ.50ಕ್ಕಿಂತ ಹೆಚ್ಚಿಗೆ ಅಸಂಘಟಿತ ವಲಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಶೈಕ್ಷಣಿಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. 2001ರ ಜನಗಣತಿಯ ಪ್ರಕಾರ ಒಟ್ಟು ಮಹಿಳಾ ಕಾರ್ಮಿಕರಲ್ಲಿ ಶೇ.41.51ರಷ್ಟು ವ್ಯವಸಾಯಗಾರರು, ಶೇ.50.35ರಷ್ಟು ಕೃಷಿ ಕಾರ್ಮಿಕರು ಮತ್ತು ಶೇ.8.14ರಷ್ಟು ಕೈಗಾರಿಕೆ ಮತ್ತು ಸೇವಾವಲಯದಲ್ಲಿರುವುದು ಕಂಡುಬಂದಿದೆ. ಗ್ರಾಮೀಣ ಪ್ರದೇಶದಲ್ಲಿ ಸ್ವಸಹಾಯ ಗುಂಪುಗಳ ಮುಖಾಂತರ ಸಶಕ್ತರಾಗುತ್ತಿದ್ದಾರೆ. ಎಲ್ಲಾ ರಂಗಗಳಲ್ಲಿ ಮಹಿಳೆ ಗುರುತಿಸಿಕೊಂಡಿರುವುದು ಜಾಗತೀಕರಣದ ಪರಿಣಾಮವೆಂದೇ ಹೇಳಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಪುರುಷರಿಗಿಂತ ಕಡಿಮೆಯೇನು ಇಲ್ಲ ಎಂಬಷ್ಟರ ಮಟ್ಟಿಗೆ ತೋರಿಸಿಕೊಂಡಿದ್ದರೂ ಸಹ ಹಲವಾರು ದೌರ್ಜನ್ಯಗಳು ಮಹಿಳೆಯರನ್ನು ಕಾಡುತ್ತಿವೆ.

ಸಂವಿಧಾನದ 15(3)ನೇ ವಿಧಿಯು ಮಹಿಳೆಯರಿಗೆ ವಿಶೇಷ ಆದ್ಯತೆಯನ್ನು ಕಲ್ಪಿಸಿಕೊಡುತ್ತದೆ. ಈ ವಿಧಿಯನ್ವಯವೇ ವರದಕ್ಷಿಣೆ ತಡೆ ಕಾಯ್ದೆ 2005 ಮತ್ತು 2008ರ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ತಡೆಯುವಲ್ಲಿ ಕಾಯ್ದೆಯನ್ನು ರೂಪಿಸಲಾಗಿದೆ. 23ನೇಯ ವಿಧಿಯ ಅಡಿಯಲ್ಲಿ ಮಹಿಳೆಯರ ಮೇಲೆ ಶೋಷಣೆ

ಜಾಗತೀಕರಣ ಮತ್ತು ಮಹಿಳಾ ಶೋಷಣೆ

ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ. ೪೮.೫೮ರಷ್ಟು ಇರುವ ಮಹಿಳೆಯರು ಶೇ. ೫೦ಕ್ಕಿಂತ ಹೆಚ್ಚಿಗೆ ಅಸಂಘಟಿತ ವಲಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಶೈಕ್ಷಣಿಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ೨೦೦೧ರ ಜನಗಣತಿಯ ಪ್ರಕಾರ ಒಟ್ಟು ಮಹಿಳಾ ಕಾರ್ಮಿಕರಲ್ಲಿ ಶೇ.೪೧.೫೧ರಷ್ಟು ವ್ಯವಸಾಯಗಾರರು, ಶೇ. ೫೦.೩೫ರಷ್ಟು ಕೃಷಿ ಕಾರ್ಮಿಕರು ಮತ್ತು ಶೇ.೮.೧೪ರಷ್ಟು ಕೈಗಾರಿಕೆ ಮತ್ತು ಸೇವಾ ವಲಯದಲ್ಲಿರುವುದು ಕಂಡು ಬಂದಿದೆ. ಗ್ರಾಮೀಣ ಪ್ರದೇಶದಲ್ಲಿ ಸ್ವಸಹಾಯ ಗುಂಪುಗಳ ಮುಖಾಂತರ ಸಶಕ್ತರಾಗುತ್ತಿದ್ದಾರೆ. ಎಲ್ಲಾ ರಂಗಗಳಲ್ಲಿ ಮಹಿಳೆ ಗುರುತಿಸಿಕೊಂಡಿರುವುದು ಜಾಗತೀಕರಣದ ಪರಿಣಾಮವೆಂದೇ ಹೇಳಬಹುದಾಗಿದೆ.

ಹಾಗೂ ಲೈಂಗಿಕ ದೌರ್ಜನ್ಯ ನಡೆಸುವುದನ್ನು ತಡೆಯಲಾಗಿದೆ ಎಂಬ ಕಾನೂನುಗಳು ಕೇವಲ ದಾಖಲೆ ಪುಸ್ತಕಗಳಲ್ಲಿವೆಯೇ ಹೊರತು ಕಾರ್ಯಾಚರಣೆಗೆ ಬಂದಿಲ್ಲ, ವಾಸ್ತವದಲ್ಲಿ ಕಾನೂನುಗಳು ಅರ್ಥಪೂರ್ಣವಾಗಿ ಬಳಕೆಯಲ್ಲಿ ಇಲ್ಲದೆ ಇರುವುದರಿಂದ ರುಚಿಕ ಮತ್ತು ಜೆಸ್ಸಿಕಾ ಕೊಲೆ ಪ್ರಕರಣದ ಅಪರಾಧಿಗಳಿಗೆ ನ್ಯಾಯಸಮ್ಮತ ಶಿಕ್ಷೆಯಾಗಿಲ್ಲ.

ಅವರ ಪ್ರಕರಣಗಳಲ್ಲಿ ಭಾಗಿಯಾದವರಿಗೆ ನಮ್ಮ ಸರ್ಕಾರಗಳು ಮುಂಬಡ್ತಿ ಕೊಡುತ್ತಿವೆಯಾದರೆ ಕಾನೂನುಗಳು ರೂಪಿಸಿಯಾದರು ಫಲವೇನು ಎಂಬ ಪ್ರಶ್ನೆ ಉಂಟಾಗುತ್ತದೆ. ನಮ್ಮ ದೇಶದಲ್ಲಿ ಕಾಯ್ದೆ ಕಾನೂನುಗಳು ಅಪರಾಧಿಗಳನ್ನು ರಕ್ಷಿಸಿ ನಿರಪರಾಧಿಗಳನ್ನು ಶಿಕ್ಷಿಸುವ ಸಲುವಾಗಿ ಸಬಲರು ಮಾಡಿಕೊಂಡಂತಹ ನಿಯಮಗಳು ಆಗಿವೆ ಎಂದರೂ ತಪ್ಪಾಗಲಿಕ್ಕಿಲ್ಲ. ಇದರಿಂದಾಗಿ ಮಹಿಳೆ ದಿನಬೆಳಗಾದರೆ ಒಂದಿಲ್ಲಾ ಒಂದು ಶೋಷಣೆಗೆ ಒಳಗಾಗುತ್ತಿದ್ದಾಳೆ.

ಜಾಗತೀಕರಣದ ಪ್ರಾರಂಭದ ಹಾದಿಯಲ್ಲಿಯೇ ಮಹಿಳೆಯರ ಸ್ಥಾನಮಾನದಲ್ಲಿ ಸಾಕಷ್ಟು ಬದಲಾವಣೆಗಳೂ ಕಂಡು ಬಂದವು. ಪುರುಷನಿಗೆ ಸಮಾನವಾಗಿ ನಿಲ್ಲಬಲ್ಲ ಶಕ್ತಿ ಮಹಿಳೆಯರು ಪಡೆದುಕೊಳ್ಳುವ ಹಂತ ತಲುಪಿದ್ದಾರೆ. ಸುನಿತಾ ವಿಲಿಯಮ್ಸ್ ತರಹದ ಮಹಿಳೆಯರು ಪುರುಷರನ್ನೆ ಮೀರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೂ ಸಹ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆಗಳೂ ಮುಂದುವರೆಯುತ್ತಲೆ ಇವೆ. ಪುರಾತನ ಕಾಲದಲ್ಲಿ ಒಂದು ಬಗೆಯ ಶೋಷಣೆ ಅನುಭವಿಸಿದರೆ, ಜಾಗತೀಕರಣದಲ್ಲಿ ಹಲವು ಬಗೆಯ ಶೋಷಣೆಯನ್ನು ಅನುಭವಿಸುತ್ತಿದ್ದಾಳೆ.

ಶೋಷಣೆಯ ಪರಿಕಲ್ಪನೆ:

ಶೋಷಣೆ ಎಂಬ ಪದವು ಎಲ್ಲ ನೆಲೆಯಲ್ಲಿಯೂ ಜೀವಂತವಾಗಿದೆ. ಇಲ್ಲಿ ಶೋಷಣೆ ಎಂದರೆ ಒಬ್ಬ ವ್ಯಕ್ತಿ ಅಥವಾ ಗುಂಪು ಇನ್ನೊಬ್ಬ ವ್ಯಕ್ತಿ ಅಥವಾ ಗುಂಪನ್ನು ದುರ್ಬಲಗೊಳಿಸುವದಾಗಿದೆ. ಇದು ಗಂಡು ಹೆಣ್ಣನ್ನು ದುರ್ಬಲಗೊಳಿಸುವ ಕಾರ್ಯಕ್ಕೂ ಅನ್ವಯವಾಗುತ್ತದೆ. ಪ್ರಪಂಚದಲ್ಲಿ ಪುರುಷ ಮಾತ್ರ ಮಹಿಳೆಯನ್ನು ಶೋಷಣೆ ಮಾಡುತ್ತಿಲ್ಲ. ವಿದ್ಯಾವಂತ ಮಹಿಳೆಯರಿಂದ ಅವಿದ್ಯಾವಂತ ಮಹಿಳೆಯರ ಮೇಲೆ, ಶ್ರೀಮಂತ ಮಹಿಳೆಯರಿಂದ ಬಡ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆ ಹೊಸತೇನಲ್ಲ. ಶಿಕ್ಷಣದಲ್ಲಿ, ಉದ್ಯೋಗದಲ್ಲಿ, ರಾಜಕೀಯದಲ್ಲಿ ಮತ್ತು ಸಮಾಜದಲ್ಲಿರುವ ಅವಕಾಶಗಳನ್ನು ನಿರಾಕರಿಸುವದೇ ಮಹಿಳಾ ಶೋಷಣೆ ಆಗಿದೆ. ಇವುಗಳಲ್ಲದೇ ಮಹಿಳೆ ಲೈಂಗಿಕವಾಗಿಯೂ ಪುರುಷರಿಂದ ಶೋಷಣೆ ಅನುಭವಿಸುತ್ತಿದ್ದಾಳೆ.

ಭಾರತದಲ್ಲಿ ಜಾಗತೀಕರಣದ ನಂತರ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಅವಕಾಶಗಳು ಹೆಚ್ಚಾಗಿವೆ ಎಂಬುದು ಒಂದು ಸಂತೋಷದ ಸಂಗತಿಯಾಗಿದೆ. ಆದರೆ ದಿನ ಬೆಳಗಾದರೆ ಅಡುಗೆ ಮನೆಯಿಂದ ಪ್ರಾರಂಭವಾದ ಶೋಷಣೆ ಉನ್ನತ ಸ್ಥಾನದವರೆಗೆ ನಡೆಯುತ್ತಲೆ ಇದೆ. ಅತ್ಯಾಚಾರ, ಅಪಹರಣಗಳು, ವರದಕ್ಷಿಣೆ ಕಿರುಕುಳಗಳು, ಚಿತ್ರ ಹಿಂಸೆಗಳು ಮೇಲಾಧಿಕಾರಿಗಳಿಂದ ಕಿರುಕುಳಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಜಾಗತೀಕರಣದ ನಂತರ ಭಾರತದಲ್ಲಿ ಸ್ತ್ರೀ ಮೇಲಿನ ಕೆಲವು ಶೋಷಣೆಗಳ ಪ್ರಕರಣ ದಾಖಲಾತಿಗಳನ್ನು ಈ ಕೆಳಗಿನ ಕೋಷ್ಟಕದಿಂದ ತಿಳಿದುಕೊಳ್ಳಬಹುದು.

ಕೋಷ್ಟಕ–1

ಕಾರ್ಯನಿರತ ಮಹಿಳೆಯರ ಮೇಲಿನ ಪ್ರತಿಶತ ಶೋಷಣೆ ಪ್ರಕರಣಗಳು

ಕ್ರ. ಸಂ.	ಪ್ರಕರಣಗಳು	1998	1999	2000
01	ಅತ್ಯಾಚಾರಗಳು	12.74	12.56	12.86
02	ಅಪಹರಣಗಳು	13.75	12.96	11.71
03	ವರದಕ್ಷಿಣೆ ಸಾವುಗಳು	05.87	05.44	05.45
04	ಚಿತ್ರ ಹಿಂಸೆಗಳು	34.81	35.60	35.70
05	ಕಾಡಿಸುವುದು,ಪೀಡಿಸುವುದು	26.04	26.24	25.68
06	ಲೈಂಗಿಕ ಕಿರುಕುಳಗಳು	66.79	07.20	08.60

ಮೂಲ: ಕ್ರೈಮ್ ರಿಕಾರ್ಡ್ಸ್ ಬ್ಯೂರೋ, 'ಮಿನಿಸ್ಟ್ರಿ ಆಫ್' ಹೋಮ್ ಅಫೇರ್ಸ್, ದೆಹಲಿ.

ಜಾಗತೀಕರಣ ಸಂದರ್ಭದಲ್ಲಿ ಅವಕಾಶಗಳು ಹೆಚ್ಚಿದಂತೆಲ್ಲಾ ಮಹಿಳೆಯರ ಮೇಲಾಗುವ ಶೋಷಣೆಗಳ ಸಂಖ್ಯೆಯೂ ಹೆಚ್ಚಾಗುತ್ತಲಿವೆ ಎಂಬುದಕ್ಕೆ ಈ ಮೇಲಿನ ಕೋಷ್ಟಕವೇ ಸಾಕ್ಷಿಯಾಗಿದೆ. ಚಿತ್ರ ಹಿಂಸೆಗಳು, ಕಾಡಿಸುವದು ಪೀಡಿಸುವುದು, ಅಪಹರಣಗಳು ಮತ್ತು ಅತ್ಯಾಚಾರ ಪ್ರಕರಣಗಳ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿವೆ. ಇದರಿಂದ ಮಹಿಳೆಯರು ಮಾನಸಿಕವಾಗಿ ಮತ್ತು ದೈಹಿಕವಾಗಿ ದುರ್ಬಲವಾಗುತ್ತಿದ್ದಾರೆ.

ಮಹಿಳಾ ಶೋಷಣೆ ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿರದೆ ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲಿ ಪ್ರಖ್ಯಾತಿ ಪಡೆದಿದೆ. ಆದರೆ ಅಭಿವೃದ್ಧಿ ಹೊಂದದೆ ಇರುವ ರಾಷ್ಟ್ರಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತಿವೆ. ಭಾರತಕ್ಕೆ ಸ್ವಾತಂತ್ರ್ಯ ಬಂದು 60 ವರ್ಷಗಳು ಕಳೆದರೂ ಮಹಿಳಾ ಶೋಷಣೆಗಳಿಗೆ ಕಾರಣಗಳನ್ನು ಕಂಡು ಹಿಡಿದು, ಸೂಕ್ತ ಕ್ರಮ ಕೈಗೊಳ್ಳುವಲ್ಲಿ ನಾವು ವಿಫಲವಾಗುತ್ತಿದ್ದವೆ. ಶೋಷಣೆ ಕಡಿಮೆ ಮಾಡಲು ವಿಚಾರ ಸಂಕಿರಣಗಳು ನಡೆಸಿದರೆ ಕಡಿಮೆಯಾಗುತ್ತದೆಯೇ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡು ಹಿಡಿಯುವಲ್ಲಿಯೇ 60 ವರ್ಷಗಳು ಕಳೆದು ಹೋಗಿವೆ. ದಿನ ಬೆಳಗಾದಂತೆ ದೇಶದ ಎಲ್ಲಾ ರಾಜ್ಯಗಳಲ್ಲಿ ಮಹಿಳೆಯರ ಮೇಲಿನ ಶೋಷಣೆಗಳ ಸಂಖ್ಯೆ ಹೆಚ್ಚಾಗುತ್ತಿವೆ. ಕೆಲವು ಪ್ರಕರಣಗಳ ದಾಖಲಾತಿ ಸಂಖ್ಯೆಗಳನ್ನು ವೀಕ್ಷಿಸಿದರೆ ಆಶ್ಚರ್ಯವೆನಿಸಬಹುದು. ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಮಹಿಳೆಯರ ಮೇಲಾಗುವ ಶೋಷಣೆಯ ಪ್ರಕರಣಗಳನ್ನು ಕೆಳಗಿನ ಕೋಷ್ಟಕದ ಸಹಾಯದಿಂದ ನೋಡಬಹುದು.

ಕೋಷ್ಟಕ–2

ಭಾರತದ ವಿವಿಧ ರಾಜ್ಯಗಳಲ್ಲಿ ಮಹಿಳೆಯರ ಮೇಲಿನ ಶೋಷಣೆ ಪ್ರಕರಣಗಳ ಸಂಖ್ಯೆ (2006)

ರಾಜ್ಯಗಳು	ಅತ್ಯಾಚಾರಗಳು	ಅಪಹರಣಗಳು	ವರದಕ್ಷಿಣೆ ಸಾವುಗಳು	ಪಿಡಿಸುವುದು ಕಾಡಿಸುವುದು	ಲೈಂಗಿಕ ಕಿರುಕುಳಗಳು
ಆಂಧ್ರ ಪ್ರದೇಶ	944	716	442	3531	2280
ಅಸ್ಸಾಂ	765	1101	50	773	18
ಬಿಹಾರ	1570	700	1085	456	122
ಗುಜರಾತ್	330	868	93	944	119
ಹರಿಯಾಣ	421	299	263	605	423
ಕರ್ನಾಟಕ	281	323	217	1568	75
ಕೇರಳ	552	89	25	1695	69
ಮಧ್ಯಪ್ರದೇಶ	3737	869	685	8576	840
ಮಹಾರಾಷ್ಟ್ರ	1310	662	371	2805	930
ಒರಿಸ್ಸಾ	747	359	276	1685	135
ರಾಜಸ್ಥಾನ	1242	2550	429	3092	50
ತಮಿಳುನಾಡು	538	805	191	1948	2167
ಉತ್ತರಪ್ರದೇಶ	1865	2755	2222	2607	3169

ಮೂಲ: ಕ್ರೈಮ್ ಇನ್ ಇಂಡಿಯಾ, 2000. ನ್ಯಾಷನಲ್ ಕ್ರೈಮ್ ರಿಕಾರ್ಡ್ಸ್ ಬ್ಯೂರೋ, ಮಿನಿಸ್ಟ್ರಿ ಆಫ್ ಹೋಮ್ ಅಫೇರ್ಸ್

ಮಹಿಳೆಯರ ಮೇಲಿನ ಶೋಷಣೆಯ ಅಂಕಿ ಅಂಶಗಳನ್ನು ನೋಡಿದಾಗ ದಾಖಲಾತಿ ಪ್ರಕರಣಗಳ ಸಂಖ್ಯೆ ರಾಜ್ಯಗಳಲ್ಲಿ ವಿಭಿನ್ನವಾಗಿರುವುದು ಕಂಡು ಬರುತ್ತದೆ. ಸಾಮಾನ್ಯವಾಗಿ ಉತ್ತರ ಪ್ರದೇಶ, ತಮಿಳುನಾಡು, ಮಧ್ಯಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಪ್ರಕರಣಗಳ ದಾಖಲಾತಿ ಸಂಖ್ಯೆ ಹೆಚ್ಚಾಗಿದೆ. ಆದರೆ ಶಿಕ್ಷೆ ಎಷ್ಟರ ಮಟ್ಟಿಗೆ ಪರಿಣಾಮ ಬೀರುತ್ತದೆ ಎಂಬುದು ಪ್ರಮುಖವಾಗಿದೆ. ಎಷ್ಟೋ ಜನ ಹಣಕಾಸಿನ ಪ್ರಭಾವ ಮತ್ತು ರಾಜಕೀಯ ಪ್ರಭಾವದಿಂದ ಶಿಕ್ಷೆ ಅನುಭವಿಸದೇ ಶಿಕ್ಷೆಯಿಂದ ತಪ್ಪಿಸಿಕೊಂಡವರಿದ್ದಾರೆ. ಇದು ಮತ್ತೆ ಶೋಷಣೆಗೆ ಪ್ರಚೋದನೆ ನೀಡಿದಂತಾಗುತ್ತದೆ. ಮಹಿಳಾ ಶೋಷಣೆಯ ನಿರಂತರತೆಯ ಬಗ್ಗೆ ಕಾರ್ಲ್‌ಮಾರ್ಕ್ಸ್ ಮತ್ತು ಏಂಗೆಲ್ಸ್‌ರ ಸಿದ್ಧಾಂತಗಳಲ್ಲಿನ ಅಭಿಪ್ರಾಯಗಳನ್ನು ಈ ಕೆಳಗಿನಂತೆ ತಿಳಿದುಕೊಳ್ಳಬಹುದು.

"ಏಣಿ ಶ್ರೇಣಿಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯಲ್ಲಿ ಲಿಂಗಾಧಾರಿತ ಅಸಮಾನತೆ ಇರುವುದು ನಮಗೆಲ್ಲಾ ತಿಳಿದ ವಿಷಯ. ಈ ವಿಷಯದ ಕುರಿತು ತಿಳುವಳಿಕೆ, ಅರಿವು ಮತ್ತು ಪ್ರಜ್ಞೆಯನ್ನು ಮೂಡಿಸುವುದರೊಂದಿಗೆ ಸಮಾಜದಲ್ಲಿ, ವಿವಿಧ ಸಂಸ್ಥೆಗಳಲ್ಲಿ ಮತ್ತು ಕೈಗಾರಿಕಾ ವ್ಯವಸ್ಥೆಯಲ್ಲಿ ಮಹಿಳೆಯರು ಎದುರಿಸುತ್ತಿರುವ ಲಿಂಗಾಧಾರಿತ ತಾರತಮ್ಯ, ಕೂಲಿಯ ವ್ಯತ್ಯಾಸಗಳು, ಲೈಂಗಿಕ ಕಿರುಕುಳ, ದೌರ್ಜನ್ಯ, ದಬ್ಬಾಳಿಕೆ ಮತ್ತು ಮೇಲು ಕೀಳೆಂಬ ಭಾವನೆ ಹಾಗೂ ಶೋಷಣೆಗಳನ್ನು ದಮನಗೊಳಿಸುವ ಸಲುವಾಗಿ ನಡೆಸುವಂತಹ ಎಲ್ಲಾ ಉದ್ದೇಶಿತ ಪ್ರಾಮಾಣಿಕ ಕಾರ್ಯಗಳು, ಪ್ರಯತ್ನಗಳು ಮಹಿಳಾವಾದದ ಅಥವಾ ಸ್ತ್ರೀ ವಾದದ ಭದ್ರ ಬುನಾದಿಗಳಾಗಿವೆ".

ವರ್ಗ ಅಸಮಾನತೆಯಿಂದ ಕೂಡಿದ ನಮ್ಮ ಸಾಮಾಜಿಕ ಸ್ತರ ವಿನ್ಯಾಸದಲ್ಲಿ, ಮಹಿಳಾ ಶೋಷಣೆಗಳು ಯಾವುದೇ ಒಬ್ಬ ವ್ಯಕ್ತಿಯ ಉದ್ದೇಶಿತ ಕ್ರಿಯೆಯಾಗಿರದೆ ಬಂಡವಾಳಶಾಹಿ ವ್ಯವಸ್ಥೆಯ ದ್ಯೋತಕಗಳಾದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ರಚನೆಗಳಿಂದ ಸೃಷ್ಟಿಯಾದಂತಹ ಒಂದು ವ್ಯವಸ್ಥೆ ಎಂಬುದು ಕಾರ್ಲ್‌ಮಾರ್ಕ್ಸ್‌ರವರ ವಿಚಾರವಾಗಿದೆ. ಕಾರ್ಲ್‌ಮಾರ್ಕ್ಸ್‌ರವರ ಸ್ತ್ರೀವಾದಕ್ಕೆ ಸಂಬಂಧಪಟ್ಟಂತೆ ಒಂದು ಪ್ರಬುದ್ಧವಾದ ಸೈದ್ಧಾಂತಿಕ ಹಿನ್ನೆಲೆಯನ್ನು ಒದಗಿಸಿದ ಪ್ರಮುಖ ಗ್ರಂಥವೆಂದರೆ (ಕಾರ್ಲ್ ಮಾರ್ಕ್ಸ್‌ನ ಮರಣಾನಂತರ) ಫೆಡ್ರಿಕ್ ಏಂಗೆಲ್ಸ್‌ರವರು 1845ರಲ್ಲಿ ರಚಿಸಿದ "The origin of family private property and the state". ಈ ಗ್ರಂಥದ ಪ್ರಮುಖವಾದ ಸರಣಿಯನ್ನು ಹಿಡಿದು ವಿಶ್ಲೇಷಿಸುವುದಾದರೆ ಮಹಿಳಾ ಶೋಷಣೆಯು ಆರಂಭವಾಗಲು ಪ್ರಮುಖ ಕಾರಣ ಖಾಸಗಿ ಸಂಪತ್ತಿನ ಗಳಿಕೆಯಾಗಿದೆ ಎಂಬುದು ತಿಳಿದುಬರುತ್ತದೆ.

ಮಹಿಳೆ, ಸಮಾಜ ಮತ್ತು ಶೋಷಣೆಗಳು:

ಜಾಗತಿಕ ಸಾಮಾಜಿಕ ಸ್ಥಿತಿಗತಿಗಳಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಅವಲೋಕಿಸಿದಾಗ ಅನೇಕ ಸಾಮಾಜಿಕ ಏರು ಪೇರುಗಳನ್ನು ನಾವು ಗುರುತಿಸಬಹುದು, ದೇಶದುದ್ದಕ್ಕೂ ನೆಲೆಗೊಂಡಿರುವ ವಿಭಿನ್ನ ಸಾಂಸ್ಕೃತಿಕ ಪರಿಸರಗಳು ಕೂಡಾ ಮಹಿಳೆಯನ್ನು ಬೌದ್ಧಿಕವಾಗಿ ಹಾಗೂ ದೈಹಿಕವಾಗಿ ಅಶಕ್ತಳೆಂಬ ಭಾವನೆಯನ್ನು ಸ್ಥಿರಗೊಳಿಸಿವೆ. ಈ ಹಿನ್ನೆಲೆಯಲ್ಲಿ ಮಹಿಳೆ ಕೈಗೊಳ್ಳುವ ಪ್ರತಿಯೊಂದು ಕಾರ್ಯಚಟುವಟಿಕೆಗಳು ಕುಟುಂಬದ ಬಳಕೆಗಾಗಿಯೇ ಹೊರತು ಅವಳ ವೈಯಕ್ತಿಕ ಸಾಧನೆ ಸಮಾಧಾನಕ್ಕಲ್ಲ, ಕುಟುಂಬದಲ್ಲಿ ಇದ್ದು ಇಲ್ಲದಂತೆ ಇರುವುದು, ಯಾವುದೇ ಕೌಟುಂಬಿಕ ನಿರ್ಧಾರ ತೆಗೆದುಕೊಳ್ಳುವುದರಿಂದ ದೂರ ಇಟ್ಟಿದ್ದು, ದಬ್ಬಾಳಿಕೆ, ಶೋಷಣೆ, ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯಗಳಂತಹ ಸಾಮಾಜಿಕ ಅನಿಷ್ಟಗಳಿಗೆ ಒಳಗಾಗಿ ನಾಲ್ಕು ಗೋಡೆಗಳ ಮಧ್ಯ ಬಂಧಿಯಾಗಿದ್ದಾಳೆ. ಪುರುಷ ಪ್ರಧಾನ ಸಮಾಜದ ವಿರುದ್ಧ ಧ್ವನಿ ಎತ್ತುವ ಶಕ್ತಿಯನ್ನು ಕಳೆದುಕೊಂಡಿದ್ದಾಳೆ. ಅಂತರರಾಷ್ಟ್ರೀಯ ಮಹಿಳಾ ವರ್ಷ, ಮಹಿಳಾ ದಶಕ ಮತ್ತು ತಾಯಂದಿರ ದಿನವನ್ನಾಗಿ ಗುರುತಿಸಿರುವುದು ಮಹಿಳೆಯರ ಪಾಲಿಗೆ ಕೇವಲ ಕಣ್ಣೊರೆಸುವ ಕೆಲಸವಾಗಿದೆ ಎಂದು ಹಲವಾರು ಮಹಿಳಾಪರ ಸಂಘಟನೆಗಳ ಕೂಗಾಗಿದೆ. ಮಹಿಳಾ ಶೋಷಣೆಗಳು, ದೌರ್ಜನ್ಯಗಳು ಕೇವಲ ಒಂದೇ ಕ್ಷೇತ್ರಕ್ಕೆ ಸಿಮಿತವಾಗಿಲ್ಲ. ಕುಟುಂಬದಿಂದ ಹಿಡಿದು, ಹೊಲ-ಗದ್ದೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಸರ್ಕಾರಿ ಮತ್ತು ಸರ್ಕಾರೇತರ ಕಚೇರಿಗಳಲ್ಲಿ ಕಂಡು ಬರುತ್ತವೆ, ಕುಟುಂಬದಲ್ಲಿ ಗಂಡ, ಮಾವ, ಮೈದುನ, ಅತ್ತೆ ಮತ್ತು ನಾದಿನಿಯರಿಂದ ಸೊಸೆಯ ಮೇಲೆ ದೌರ್ಜನ್ಯ, ಜಮೀನ್ದಾರಿ ಗಂಡಸರಿಂದ ಕೆಲಸದ ಮಹಿಳಾ ಕೂಲಿ ಕಾರ್ಮಿಕರ ಮೇಲೆ ದೌರ್ಜನ್ಯ, ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ರೇಲ್ವೆ ನಿಲ್ದಾಣ, ಸಂತೆಗಳಲ್ಲಿ ಅಪರಿಚಿತರಿಂದ ಲೈಂಗಿಕ ಕಿರುಕುಳ, ಕಚೇರಿಗಳಲ್ಲಿ ಮ್ಯಾನೇಜರ್ ಮತ್ತು ಸಹ ಕೆಲಸಗಾರರಿಂದ ಲೈಂಗಿಕ ಶೋಷಣೆಗಳು ನಡೆಯುತ್ತವೆ. ಕೆಲವು ಮಹಿಳೆಯರು ಇವುಗಳ ವಿರುದ್ಧ ಪ್ರತಿಭಟಿಸಿದರೆ, ಕೆಲವು ಮಹಿಳೆಯರು ಮರ್ಯಾದೆಗೆ ಅಂಜಿ ಸಹಿಸಿಕೊಳ್ಳುತ್ತಿದ್ದಾರೆ.

ಜಾಗತಿಕ ಸಾಮಾಜಿಕ ಸ್ಥಿತಿಗತಿಗಳಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಅವಲೋಕಿಸಿದಾಗ ಅನೇಕ ಸಾಮಾಜಿಕ ಏರು ಪೇರುಗಳನ್ನು ನಾವು ಗುರುತಿಸಬಹುದು, ದೇಶದುದ್ದಕ್ಕೂ ನೆಲೆಗೊಂಡಿರುವ ವಿಭಿನ್ನ ಸಾಂಸ್ಕೃತಿಕ ಪರಿಸರಗಳು ಕೂಡಾ ಮಹಿಳೆಯನ್ನು ಬೌದ್ಧಿಕವಾಗಿ ಹಾಗೂ ದೈಹಿಕವಾಗಿ ಅಶಕ್ತಳೆಂಬ ಭಾವನೆಯನ್ನು ಸ್ಥಿರಗೊಳಿಸಿವೆ. ಈ ಹಿನ್ನೆಲೆಯಲ್ಲಿ ಮಹಿಳೆ ಕೈಗೊಳ್ಳುವ ಪ್ರತಿಯೊಂದು ಕಾರ್ಯಚಟುವಟಿಕೆಗಳು ಕುಟುಂಬದ ಬಳಕೆಗಾಗಿಯೇ ಹೊರತು ಅವಳ ವೈಯಕ್ತಿಕ ಸಾಧನೆ ಸಮಾಧಾನಕ್ಕಲ್ಲ. ಕುಟುಂಬದಲ್ಲಿ ಇದ್ದು ಇಲ್ಲದಂತೆ ಇರುವುದು, ಯಾವುದೇ ಕೌಟುಂಬಿಕ ನಿರ್ಧಾರ ತೆಗೆದುಕೊಳ್ಳುವುದರಿಂದ ದೂರ ಇಟ್ಟಿದ್ದು, ದಬ್ಬಾಳಿಕೆ, ಶೋಷಣೆ, ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯಗಳಂತಹ ಸಾಮಾಜಿಕ ಅನಿಷ್ಟಗಳಿಗೆ ಒಳಗಾಗಿ ನಾಲ್ಕು ಗೋಡೆಗಳ ಮಧ್ಯ ಬಂಧಿಯಾಗಿದ್ದಾಳೆ.

ಇಂದಿನ ದಿನಗಳಲ್ಲಿ ಭಾರತದಲ್ಲಿ ಲೈಂಗಿಕ ಅನುಪಾತ ಕಡಿಮೆಯಾಗುತ್ತಿದೆ (1000 ಪುರುಷರಿಗೆ 933 ಮಹಿಳೆಯರು), ಇದಕ್ಕೆ ಪುರುಷರೆ ಪ್ರಧಾನ ಸಮಾಜ ಕಾರಣರಾಗಿರುವುದು ತಿಳಿದು ಬಂದಿದೆ. ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶುಗಳ ಹತ್ಯೆಯಿಂದಲೆ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಾರಂಭವಾಯಿತೆನ್ನಬಹುದು. ಆದರೆ ಕಾನೂನಿನಲ್ಲಿ ರೂ.10 ಸಾವಿರ ದಂಡ ಮತ್ತು 3 ವರ್ಷ ಸೆರೆವಾಸವಿದ್ದರೂ ಇವುಗಳ ಸಂಖ್ಯೆ ಕಡಿಮೆಯಾಗುತ್ತಿಲ್ಲ.

ವರದಕ್ಷಿಣೆ ಹಿಂಸೆ:

ಇತ್ತೀಚಿನ ದಿನಗಳಲ್ಲಿ ವರದಕ್ಷಿಣೆ ಹಿಂಸೆಗಳು ಎಲ್ಲಾ ಸಮುದಾಯ ಮತ್ತು ಎಲ್ಲಾ ಪ್ರದೇಶಗಳಲ್ಲಿ ಕಂಡು ಬರುತ್ತಿವೆ. ಹಿಂದಿನ ಕಾಲದಲ್ಲಿ ಮದುವೆಯ ಸಂದರ್ಭದಲ್ಲಿ ಅಥವಾ ನಂತರ ಪ್ರೀತಿಯಿಂದ ಕೊಡುತ್ತಿದ್ದ ಉಡುಗೊರೆಗಳು ಇಂದು ವರದಕ್ಷಿಣೆಯಾಗಿ ಮಾರ್ಪಾಟಾಗಿ 'ವಸೂಲಿ' ಮಾಡುವಲ್ಲಿ ಸಂಬಂದಗಳನ್ನು ಲೆಕ್ಕಿಸದೇ ನಿರ್ದಾಕ್ಷಿಣ್ಯ ದಾರಿ ತುಳಿಯುತ್ತಿವೆ. ಮದುವೆಗೆ ಮುಂಚಿತವಾಗಿ ಪ್ರಾರಂಭವಾದ ಕಾಟ ಸಂಸಾರ ನಡೆಸಿ ಹತ್ತಾರು ವರ್ಷಗಳಾದರೂ ಮುಂದುವರೆಯುತ್ತಿವೆ. ವರದಕ್ಷಿಣೆಯ ವ್ಯಾಪ್ತಿಗೆ ಕೇವಲ ಹಣವೊಂದೇ ಸೇರದೆ, ಒಡವೆ, ಜಮೀನು, ಮನೆ, ವಾಹನ, ಗೃಹಪಯೋಗಿ ವಸ್ತುಗಳು, ಸರ್ಕಾರಿ ಕೆಲಸ, ಬೆಲೆ ಬಾಳುವ ಬಟ್ಟೆಗಳು ಮತ್ತು ಹುಟ್ಟುವ ಮಕ್ಕಳಿಗೆ ಬಟ್ಟೆಗಳು ಇತ್ಯಾದಿ ಸೇರಿಕೊಳ್ಳುತ್ತವೆ.

ಇವುಗಳನ್ನು ಪೂರೈಸಲು ಹೆಣ್ಣು ಹೆತ್ತ ತಂದೆ ತಾಯಿಗಳು ತಮ್ಮ ಮನೆ, ಜಮೀನುಗಳನ್ನು ಮಾರಾಟ ಮಾಡುವ ಪರಿಸ್ಥಿತಿ ಬಂದಿದೆ. ಇದರಿಂದಾಗಿಯೇ ಮಧ್ಯಮ ಮತ್ತು ಬಡ ಕುಟುಂಬಗಳು ಹೆಣ್ಣು ಹುಟ್ಟುವ ಮುಂಚೆಯೇ ಅಥವಾ ನಂತರ ಶಿಶುಗಳನ್ನು ಹತ್ಯೆ ಮಾಡುತ್ತಿರುವುದು ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಿರುವುದಕ್ಕೆ ಕಾರಣವಿರಬಹುದೆಂದು ಊಹಿಸಲಾಗಿದೆ. ಆದರೆ ಬಿ.ಜೆ.ಪಿ ಮಹಿಳಾ ಮೋರ್ಚಾದ ಅಧ್ಯಕ್ಷರಾಗಿದ್ದ ಮೃದುಲಾ ಸಿನ್ಹಾರ ಮಾತುಗಳನ್ನು ಕೇಳಿದಾಗ 'ವರದಕ್ಷಿಣೆ ತಪ್ಪು ಆದರೆ ಏನು ಮಾಡುವುದು ಅಳಿಯನಿಗೆ ಕೊಟ್ಟಿದ್ದೇನೆ ಮತ್ತು ಮಗನಿಗೆ ತೆಗೆದುಕೊಂಡಿದ್ದೇನೆ' ಎನ್ನುವ ಮಾತು ಎಷ್ಟು ಸೂಕ್ತವೆನಿಸುತ್ತದೆ. ಅದಕ್ಕಾಗಿ ಮದುವೆ ಇತ್ಯಾದಿ ವಿಷಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವದನ್ನು ಕುಟುಂಬಕ್ಕೆ ಬಿಡಬೇಕು. ಪ್ರೀತಿಸಿ ಅಂತರ್ ಜಾತಿ ವಿವಾಹವಾದರೆ ವರದಕ್ಷಿಣೆ ಸಮಸ್ಯೆ ಬರುವದಿಲ್ಲವೆಂಬುದು ಹಲವರ ಅಭಿಪ್ರಾಯವಾಗಿದೆ. ಆದರೆ ಇತ್ತೀಚೀನ ದಿನಗಳಲ್ಲಿ ಅಂತಹ ಮದುವೆಗಳಿಗೂ ಸಹ ವರದಕ್ಷಿಣೆ ಭೂತ ಕಾಡ ಹತ್ತಿದೆ. ಹುಡುಗನಿಗೆ ಬೇಕಾಗಿರಲಿಕ್ಕಿಲ್ಲಾ, ಆದರೆ ಹುಡುಗನ ತಂದೆ ತಾಯಿಯರು ಸುಮ್ಮನಿರುತ್ತಾರೆಯೇ ಇದಕ್ಕೆ ಸಂಬಂದಿಸಿದ ಕೆಲವು ನಿದರ್ಶನಗಳನ್ನು ನೊಡಬಹುದು.

2003ರಲ್ಲಿ ಕೋಲಾರ ಜಿಲ್ಲೆಯ ಬಂಗಾರಪೇಟೆಯ ಯುವತಿಯೊಬ್ಬಳ ಮದುವೆ ಒಂದು ಎಂ.ಎನ್.ಸಿಯಲ್ಲಿ ಕೆಲಸ ಮಾಡುವ ಯುವಕನ ಜೊತೆಗೆ ನಿಶ್ಚಿತಾರ್ಥ ಆಗಿತ್ತು. ಒಂದು ಕಡೆ ಪ್ರೀತಿ ಕೂಡಾ ಮಾಡಿದ್ದರು. ಮದುವೆ ಛತ್ರ ಕೂಡಾ ನಿಗದಿ ಮಾಡಲಾಗಿತ್ತು. ಮದುವೆಗೆ ಎರಡು ತಿಂಗಳು ಉಳಿದಿದೆ, ಹುಡುಗ-ಹುಡುಗಿ ಒಂದೆ ಬೈಕ್ ಮೇಲೆ ತಿರುಗಾಡಿದ್ದು ಆಗಿದೆ, ಪಿಕ್‌ನಿಕ್ ಪಾರ್ಕುಗಳು ಮುಗಿದಿವೆ. ಒಂದು ದಿವಸ ಹುಡುಗನ ಕಡೆಯಿಂದ ಹುಡುಗಿಯ ಮನೆಯವರಿಗೆ ಬೇಡಿಕೆ ಪಟ್ಟಿ ಬಂದೆ ಬಿಟ್ಟಿತು. ಅದರಲ್ಲಿ 2 ಲಕ್ಷ ನಗದು ಹಣ, ಅದ್ದೂರಿ ಮದುವೆ ಇತರೆ ಬೇಡಿಕೆಗಳು ಇಡಲಾಗಿತ್ತು. ಇವನ್ನು ಪೂರೈಸಿದರೆ ಮಾತ್ರ ಮದುವೆ

ಯೆಂದು ಹುಡುಗಿಯ ಮುಂದೆ ಧಮುಕಿ ಹಾಕಿದಾಗ, ನಿನ್ನ ಜೊತೆ ಮದುವೆಯೇ ಬೇಡವೆಂದು ಯುವತಿ ಮರು ನುಡಿದಳು. ಅದಕ್ಕೆ ಆತನ ಪ್ರತ್ಯುತ್ತರ ಅಷ್ಟು ಸಲೀಸಾಗಿ ಭಾವಿಸಬೇಡ, ನಿನಗೆ ಆಸಿಡ್ ಹಾಕಿ ನಿನ್ನ ಜೀವನ ಹಾಳು ಮಾಡುತ್ತೇನೆ, ನಿಮ್ಮಪ್ಪ ಅಮ್ಮನಿಗೆ ಹೇಳಿ ವ್ಯವಸ್ಥೆ ಮಾಡು ಎಂದಾಗ, ಯುವತಿಯು ಮದುವೆಗಿಂತ ಮುಂಚೆ ವಿಚ್ಛೇಧನವನ್ನು ಬಯಸಿ ಮಹಿಳಾ ಸಂಘಟನೆಗಳ ಬಾಗಿಲು ತಟ್ಟಿರುವುದು ಆಶ್ಚರ್ಯಕರ ಸಂಗತಿಯೆನಿಸಬಹುದಾಗಿದೆ. ಇದು ಮದುವೆ ಮುಂಚಿನ ಸಂಗತಿಯಾದರೆ ಸವಿತಾಳದು ಮದುವೆ ನಂತರದ ಸಂಗತಿಯಾಗಿದೆ.

ದೊಡ್ಡಬಳ್ಳಾಪುರ ತಾಲೂಕಿನ 18 ವಯಸ್ಸಿನ ಸವಿತಾ ಮಧ್ಯಮ ವರ್ಗದ ಬಡ ರೈತ ಕುಟುಂಬದ ಹುಡುಗಿಯನ್ನು ಆಸೆ ಪಟ್ಟು ಮದುವೆಯಾದ. ಬಡವರೆಂದೂ ಗೊತ್ತಿದ್ದು ಮದುವೆ ಆಗಿ ನಂತರ ತನ್ನ ಅವತಾರಗಳನ್ನು ತೋರಿಸತೊಡಗಿದ. ಹೊಡೆಯುವುದು, ಕೀಳು ಭಾಷೆಯಲ್ಲಿ ನಿಂದಿಸುವುದು, ನಿಂತದಕ್ಕೆ ಕುಂತದ್ದಕ್ಕೆ ತಪ್ಪು ಹುಡುಕುವುದು, ತವರು ಮನೆಗೆ ಕಳುಹಿಸಲು ನಿರಾಕರಿಸುವುದು ಯಾತಕ್ಕಾಗಿ ಎಂಬುದು ಆಕೆಗೆ ಗೊತ್ತಾಗಲಿಲ್ಲ. ಮುಂದುವರೆದು ತೌರಿನಿಂದ ಹಣ ತೆಗೆದುಕೊಂಡು ಬರುವಂತೆ ಒತ್ತಾಯಿಸಿ ಒಂದು ದಿನ ತೌರಿಗೆ ಕಳಿಸಿದ ಮರು ದಿನವೇ ಬರಬೇಕೆಂದು ಗಡುವು ನೀಡಿದ. ಆಕೆ ತೌರಿಗೆ ಬಂದು ವಿಷಯ ತಿಳಿಸಿ ಗಂಡನ ಮನೆಗೆ ಹೋಗಲು ತಡವಾಯಿತು. ಆಕೆ ಗಂಡನ ಮನೆ ತಲುಪಿದ ಮಾರನೆಯ ದಿನವೇ ಆಕೆ ಮೃತಪಟ್ಟ ಸುದ್ದಿ ತಿಳಿದು ಮನೆಯವರೆಲ್ಲಾ ದು:ಖದಲ್ಲಿ ತೊಡಗಿದರು. ಆದರೆ ಈ ಪ್ರಕರಣವನ್ನು ಮುಚ್ಚಿಹಾಕುವಲ್ಲಿ ಅಧಿಕಾರಿಗಳು ಯಶಸ್ವಿಯಾದರು. ಇಂತಹ ನೂರಾರು ಪ್ರಕರಣಗಳಿಗೆ ಯಾವುದೇ ಶಿಕ್ಷೆಯಾಗುವುದಿಲ್ಲವಾದ್ದರಿಂದ ಆಗಾಗ ಮರುಕಳಿಸುತ್ತವೆ. ಮದುವೆಯಾಗಿರುವ 100 ಮಹಿಳೆಯರ ಪೈಕಿ ಶೇ 80ರಷ್ಟು ಮಹಿಳೆಯರು ಪ್ರತಿನಿತ್ಯ ಗಂಡಂದಿರಿಂದ ಕುಟುಂಬದವರಿಂದ ದೈಹಿಕ ಹಲ್ಲೆಗೆ ಗುರಿಯಾಗುತ್ತಿದ್ದಾರೆ. ವರದಿಯಾಗುವ ಪ್ರಸಂಗಗಳು ಕೇವಲ ಪ್ರತಿಶತ 10 ರಿಂದ 20ರಷ್ಟು ಮಾತ್ರ ಆದರೆ ಮುಚ್ಚಿ ಹೊಗುತ್ತಿರುವ ಪ್ರಕರಣಗಳಿಗೆ ಲೆಕ್ಕವಿಲ್ಲ.

ಮಾಧ್ಯಮದಲ್ಲಿ ಮಹಿಳೆಯರ ಚಿತ್ರಣ:

ಮಾಧ್ಯಮಗಳು ಮಹಿಳೆಯನ್ನು ವಸ್ತುರೂಪಿಯಾಗಿಸಿಕೊಂಡು ಬೃಹತ್ ಪ್ರಮಾಣದಲ್ಲಿ ಶೋಷಣೆ ನಡೆಯುತ್ತಿರುವುದು ಒಂದುಕಡೆಯಾದರೆ, ಇನ್ನೊಂದುಕಡೆ ಮಾಧ್ಯಮದಲ್ಲಿ ದುಡಿಯುತ್ತಿರುವ ಮಹಿಳೆಯರ ಮೇಲೆಯು ಶೋಷಣೆ ನಡೆಯುತ್ತಿರುವ ಸಂಗತಿ ತಿಳಿದದ್ದೆ ಇದೆ. ಮಾಧ್ಯಮಗಳಲ್ಲಿ ಬಹುತೇಕ ಮಹಿಳೆಯರನ್ನು ಸಂವೇದನಾ ರಹಿತ, ಸ್ವ-ಹಿತಾಸಕ್ತಿಯ ಒಳಿತನ್ನು ಬಯಸದ ವ್ಯಕ್ತಿಯನ್ನಾಗಿ ಚಿತ್ರಸಲಾಗುತ್ತಿದೆ. ಪುರುಷ ಪ್ರಧಾನ ವ್ಯವಸ್ಥೆಯನ್ನು ವೈಭವಿಕರಿಸುವ ಮಹಿಳೆಯನ್ನು ಹೆಂಡತಿ, ತಾಯಿ ಹಾಗೂ ಆಶ್ರಿತಳಂತೆ ಚಿತ್ರೀಕರಿಸುವುದನ್ನು ಕಂಡಂತೆ ಅವಳನ್ನು ಸಾಮಾಜಿಕ ವ್ಯವಸ್ಥೆಯ ಬಹು ಮುಖ್ಯ ಅಂಗವೆಂಬ ಚಿತ್ರಣ ಇಲ್ಲವೇ ಇಲ್ಲ ಎನ್ನಬಹುದು.

ಹಾಗೆಯೇ ಮಹಿಳೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ, ದಬ್ಬಾಳಿಕೆ ವಿರುದ್ಧ ಸಿಡಿದೇಳುವ, ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಹಾಗೂ ನ್ಯಾಯೋಚಿತ ತಿರ್ಮಾನಗಳನ್ನು ತೆಗೆದುಕೊಳ್ಳುವ ದಿಟ್ಟ ಹೆಣ್ಣನ್ನಾಗಿ ಚಿತ್ರಿಸುವುದು ಅತ್ಯಂತ ವಿರಳ. ಮಹಿಳೆಯನ್ನು ಕೇವಲ ಕಾಮದ ಗೊಂಬೆಯನ್ನಾಗಿ ಚಿತ್ರಿಸುವ ಜಾಹೀರಾತು ಮಾಧ್ಯಮಗಳಂತೂ ನೇರವಾಗಿ ಮಹಿಳಾ ವಿರೋಧಿ ಎನ್ನಬಹುದು.

ಇಂತಹ ಒಂದು ಋಣಾತ್ಮಕ ಚಿತ್ರಣವನ್ನು ತೊಡೆದು ಹಾಕಲು ಹಾಗೂ ಶೋಷಣೆಯ ವಿಷ ವರ್ತುಲವನ್ನು ಒಡೆದು ಹಾಕಲು ಸಮೂಹ ಸಂವಹನ ಮಾಧ್ಯಮಗಳಲ್ಲಿ ವಸ್ತು ವಿಷಯಗಳ ಸಂಪೂರ್ಣ ಪರಾಮರ್ಶೆ ಅತ್ಯಗತ್ಯ. ಇದು ಸುಲಭ ಸಾಧ್ಯವಿಲ್ಲದಿದ್ದರೂ ಸರಿಯಾಗಿ ಆಯೋಜಿಸಲ್ಪಟ್ಟ ಮಹಿಳಾ ವಿಷಯಗಳ ಮೇಲಿನ ರಾಷ್ಟ್ರೀಯ ಸಂವಹನ ಧೋರಣೆಯೊಂದನ್ನು ಅನುಷ್ಠಾನಕ್ಕೆ ತರುವ ಮೂಲಕ ಸಾಧ್ಯವಾಗಿಸಬಹುದು. ಮಾಧ್ಯಮಗಳಿಂದಲೂ ಮಹಿಳಾ ಸಬಲೀಕರಣದ ತಂತ್ರಗಳನ್ನು ಬಳಸಿಕೊಳ್ಳಬಹುದು.

ಲೈಂಗಿಕ ಕಿರುಕುಳದ ಪ್ರಮುಖ ನಿದರ್ಶನಗಳು:

ನಮ್ಮ ದೇಶದಲ್ಲಿ ಜನಸಂಖ್ಯೆ ಹೆಚ್ಚಾದಂತೆಲ್ಲಾ ಅನ್ಯಾಯ, ಅತ್ಯಾಚಾರ, ಅಪಹರಣ, ಹಿಂಸೆ, ವರದಕ್ಷಿಣೆ ಸಾವು ಮತ್ತು ಲೈಂಗಿಕ ಕಿರುಕುಳಗಳು ಹೀಗೆ ಇನ್ನಿತರ ಅಪರಾಧಗಳು ಹೆಚ್ಚಾಗುತ್ತಿವೆ. ಇವುಗಳು ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಅಡುಗೆ ಮನೆಯಿಂದ ಹಿಡಿದು ಅಧಿಕಾರ ವರ್ಗದ ಎಲ್ಲ ಕ್ಷೇತ್ರಗಳಿಗೂ ಇದರ ಛಾಪು ಆವರಿಸಿಕೊಂಡಿದೆ. ಆಡು ಮುಟ್ಟದ ಸೊಪ್ಪಿಲ್ಲ ಮಹಿಳೆಗೆ ಲೈಂಗಿಕ ಕಿರುಕುಳ ಕೊಡದ ಕ್ಷೇತ್ರವಿಲ್ಲ ಎನ್ನುವಂತಾಗಿದೆ. ಕೆಲವು ಲೈಂಗಿಕ ಕಿರುಕುಳದ ನಿದರ್ಶನಗಳನ್ನು ಈ ಕೆಳಗಿನಂತೆ ನೋಡಬಹುದು.

1980ರಲ್ಲಿ 20 ವರ್ಷದ ಮಾಯಾತ್ಯಾಗಿ ಎಂಬ ವಿವಾಹಿತ ಮಹಿಳೆಯನ್ನು ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಪೇದೆಯೊಬ್ಬ ಅತ್ಯಾಚಾರ ಮಾಡುವಾಗ ತಡೆಯಲು ಬಂದ ಪತಿಯನ್ನು ಗುಂಡಿಟ್ಟು ಕೊಂದು, ಆಕೆಯು ಡಕಾಯಿತ ಗುಂಪಿಗೆ ಸೇರಿದವಳೆಂದು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಯಿತು. ಈ ಪ್ರಕರಣ ಸುಪ್ರಿಮ್ ಕೋರ್ಟಿನಲ್ಲಿರುವುದನ್ನು ಮಾತ್ರ ಇಲ್ಲಿ ಸ್ಮರಿಸಬಹುದು. ಬಿಹಾರದ ಸಸಾರಂ ಜೈಲಿನಲ್ಲಿ 35 ವಯಸ್ಸಿನ ಜಜ್ಮಾಖತೂನ ಎಂಬ ಮಹಿಳಾ ವಿಚಾರಣಾಧಿನ ಕೈದಿಯ ಮೇಲೆ ಜೈಲಿನ ಸಿಬ್ಬಂದಿಯವರೇ ಅತ್ಯಾಚಾರವೆಸಗಿದ್ದಾರೆ. ಗರ್ಭಿಣಿಯಾಗಿ ಅವಳು ಪಾಟ್ನಾ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಗಂಡು ಮಗುವಿಗೆ ಜನ್ಮ ನೀಡಿದಳು. ಅದೇ ಜೈಲಿನ ಪುರುಷರ ವಾರ್ಡಿನಲ್ಲಿದ್ದ ಅವಳ ಪತಿ ಆ ಮಗುವಿನ ತಂದೆ ನಾನಲ್ಲ, ಏಕೆಂದರೆ ನಾನು ನನ್ನ ಪತ್ನಿಯೊಂದಿಗೆ ಹಲವಾರು ವರುಷಗಳಿಂದ ಲೈಂಗಿಕ ಸಂಪರ್ಕ ಹೊಂದಿಲ್ಲವೆಂದು ಹೇಳುತ್ತಾನೆ. ಇದಕ್ಕೆ ಇನ್ನೂ ಉತ್ತರ ದೊರೆತಿಲ್ಲ.

ಜನರನ್ನು ರಕ್ಷಿಸಬೇಕಾದ ಪೊಲೀಸರು ಭಕ್ಷಕರಾದಾಗ ಹೇಗಿರುತ್ತದೆ ಎಂಬ ನಿದರ್ಶನ ಇಲ್ಲಿದೆ. 1970 ರಲ್ಲಿ 16 ವರ್ಷದ ಮದುರ ಎಂಬ ಯುವತಿ ಪೊಲೀಸರ ಅತ್ಯಾಚಾರಕ್ಕೆ ಒಳಗಾಗಿದ್ದಳು. ಕೋರ್ಟಿನಲ್ಲಿ ಅಪರಾಧಿಯನ್ನು ಬಿಡುಗಡೆ ಮಾಡಲಾಯಿತು. ಈ ಪ್ರಕರಣದಿಂದಾಗಿ ಅತ್ಯಾಚಾರಕ್ಕೆ ಸಂಬಂದಿಸಿದ ಕಾನೂನಿಗೆ ತಿದ್ದುಪಡಿ ಮಾಡಲಾಯಿತು (ಎನ್.ಗಾಯಿತ್ರಿ, 1996).

1980ರಲ್ಲಿ 20 ವರ್ಷದ ಮಾಯಾತ್ಯಾಗಿ ಎಂಬ ವಿವಾಹಿತ ಮಹಿಳೆಯನ್ನು ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಪೇದೆಯೊಬ್ಬ ಅತ್ಯಾಚಾರ ಮಾಡುವಾಗ ತಡೆಯಲು ಬಂದ ಪತಿಯನ್ನು ಗುಂಡಿಟ್ಟು ಕೊಂದು, ಆಕೆಯು ಡಕಾಯಿತ ಗುಂಪಿಗೆ ಸೇರಿದವಳೆಂದು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಯಿತು. ಈ ಪ್ರಕರಣ ಸುಪ್ರಿಮ್ ಕೋರ್ಟಿನಲ್ಲಿರುವುದನ್ನು ಮಾತ್ರ ಇಲ್ಲಿ ಸ್ಮರಿಸಬಹುದು.

ಬಿಹಾರದ ಸಸಾರಂ ಜೈಲಿನಲ್ಲಿ 35 ವಯಸ್ಸಿನ ಜಜ್ಮಾಖತೂನ ಎಂಬ ಮಹಿಳಾ ವಿಚಾರಣಾಧಿನ ಕೈದಿಯ ಮೇಲೆ ಜೈಲಿನ ಸಿಬ್ಬಂದಿಯವರೇ ಅತ್ಯಾಚಾರವೆಸಗಿದ್ದಾರೆ. ಗರ್ಭಿಣಿಯಾಗಿ ಅವಳು ಪಾಟ್ನಾ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಗಂಡು ಮಗುವಿಗೆ ಜನ್ಮ ನೀಡಿದಳು. ಅದೇ ಜೈಲಿನ ಪುರುಷರ ವಾರ್ಡಿನಲ್ಲಿದ್ದ ಅವಳ ಪತಿ ಆ ಮಗುವಿನ ತಂದೆ ನಾನಲ್ಲ, ಏಕೆಂದರೆ ನಾನು ನನ್ನ ಪತ್ನಿಯೊಂದಿಗೆ ಹಲವಾರು ವರುಷಗಳಿಂದ ಲೈಂಗಿಕ ಸಂಪರ್ಕ ಹೊಂದಿಲ್ಲವೆಂದು ಹೇಳುತ್ತಾನೆ. ಇದಕ್ಕೆ ಇನ್ನೂ ಉತ್ತರ ದೊರೆತಿಲ್ಲ.

2000ರಲ್ಲಿ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಸುರಪೂರ ತಾಲೂಕಿನ ಹಳ್ಳಿಯೊಂದರ 16ರ ಹರೆಯದ ಸುಜಾತ ಎಂಬ ದಲಿತ ಬಡ ವಿಧ್ಯಾರ್ಥಿನಿ ಅನಾರೋಗ್ಯದ ನಿಮಿತ್ತ ರಕ್ತ ಪರೀಕ್ಷೆಗೆಂದು ಹೋದಾಗ ರಕ್ತ ಪರೀಕ್ಷಿಸುವನಿಂದಲೇ ಅತ್ಯಾಚಾರಕ್ಕೆ ಒಳಗಾದಳು. ನ್ಯಾಯವನ್ನು ಕೋರಿ ಕೋರ್ಟಿನ ಮೆಟ್ಟಿಲು ಹತ್ತಿದಳು. ನ್ಯಾಯ ದೊರಕದೆ ಆಕೆ ಇದುವರೆಗೂ ಅವಿವಾಹಿತಳಾಗಿಯೇ ಜೀವನ ಕಳೆಯುತ್ತಿದ್ದಾಳೆ.

ಕೊಪ್ಪಳ ಜಿಲ್ಲೆಯ ಕುದುರೆ ಮೊತಿ ಎಂಬ ಗ್ರಾಮದಲ್ಲಿ ಒಬ್ಬ ಸ್ವಾಮಿ ಆ ಗ್ರಾಮದ ಶಾಲಾ ಶಿಕ್ಷಕರ ಪತ್ನಿ ತನಗೆ ದೊರೆಯಲ್ಲಿಲ್ಲವೆಂದು ಆಕೆಯನ್ನು ನಗ್ನಳನ್ನಾಗಿ ಊರಲ್ಲಿ ಮೆರವಣಿಗೆ ಮಾಡಿಸಿದನು. ರಾಜಕೀಯ ಪ್ರಭಾವದಿಂದಾಗಿ ಸ್ವಾಮಿಯು ಶಿಕ್ಷೆಯಿಲ್ಲದೆ ಮೆರೆದನು. ಹಾಗೆಯೇ ತಿರುವನಂತಪುರದ ಭೀಮಪಲ್ಲಿಯಲ್ಲಿ ನಡೆದ ಸುಲೋಶಿ ಬೀವಿಯ ಪ್ರಕರಣ ಧರ್ಮದ ಹೆಸರಿನಲ್ಲಾದ ಅತ್ಯಾಚಾರಕ್ಕೆ ಇನ್ನೊಂದು ಉದಾಹರಣೆಯಾಗಿದೆ.

ಕರ್ನಾಟಕದ ಸುರಪುರ ತಾಲೂಕಿನ ತಾಂಡಾವೊಂದರಲ್ಲಿ 13 ವರ್ಷದ 7ನೇ ತರಗತಿಯಲ್ಲಿ ಓದುತ್ತಿದ್ದ ಬಾಲಕಿಗೆ ಅದೇ ತಾಂಡದ 29ರ ಹರೆಯದ ವಿವಾಹಿತ ಶಿಕ್ಷಕನೊಬ್ಬ ಆ ಯುವತಿಯ ಸೌಂದರ್ಯಕ್ಕೆ ಮರುಳಾಗಿ ಆಕೆಯನ್ನು ಮದುವೆಯಾಗುವುದಾಗಿ ನಂಬಿಸಿ ಲೈಂಗಿಕ ತೃಪ್ತಿ ಪಡೆದಿದ್ದನು. ಇದಕ್ಕೂ ಮುನ್ನ ಅವಳ ತಂದೆ-ತಾಯಿಯರ ಪರವಾನಗಿಯನ್ನು ಪಡೆದು (ಹೆರಿಗೆಗಾಗಿ ಹೆಂಡತಿ ತವರಿಗೆ ಹೋಗಿ ಬರುವುದರೊಳಗಾಗಿ) ಆಕೆಯನ್ನು ಕರೆದುಕೊಂಡು ಪ್ರವಾಸ ಕೈಗೊಂಡು ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ತಂದೆ ತಾಯಿಗಳು ಬಹಳ ದಿನಗಳವರೆಗೆ

ಮಹಿಳೆಗೆ ಸಂಬಂಧಿಸಿದಂತೆ ಕುಟುಂಬ, ಜನಾಂಗ ಹಾಗೂ ಸಮಾಜದ ಆಲೋಚನಾ ಲಹರಿಯೇ ಬದಲಾಗಬೇಕು ಅಂದಾಗ ಮಾತ್ರ ಸಂಸಾರದಲ್ಲಿ ಹೆಣ್ಣಿಗೆ ಶಾಂತಿ ಹಾಗೂ ಗೌರವದಿಂದ ಬಾಳುವುದು ಸಾಧ್ಯವಾಗುತ್ತದೆ. ಮಹಿಳೆಯರಿಗಾದ ಅನ್ಯಾಯಗಳನ್ನು ಹಂತ ಹಂತವಾಗಿ ತಡೆಯಬೇಕಾದರೆ ವೈಚಾರಿಕ ನೆಲೆ, ಸಂಸಾರಿಕ ಹಿನ್ನೆಲೆ, ಕಾನೂನಿನ ಚೌಕಟ್ಟಿನಲ್ಲಿ ಸಮತೋಲನದೊಡನೆ ಪ್ರಯತ್ನಿಸಬೇಕು. ಮಹಿಳಾ ಹಕ್ಕಿನ ಅರಿವನ್ನು ಹೆಚ್ಚಾಗಿ ಜನರಿಗೆ ಮುಟ್ಟಿಸುವ ಕಾರ್ಯವಾಗಬೇಕು. ಗಂಡನಾದವನು ಹೆಂಡತಿಯ ಮೇಲೆ ಮಾಡುವ ಹಿಂಸೆ, ಅನಾವಶ್ಯಕ ದಬ್ಬಾಳಿಕೆ ಮುಂತಾದ ಕಾರಣಗಳಿಂದಾಗಿ ವಿಚ್ಛೇದನದ ಕಾನೂನನ್ನು ಸುಲಭವಾಗಿಸಬೇಕು. ಕಾನೂನಿನ ಪ್ರಕಾರ ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು ಅಪರಾಧ 'ಕ್ರಿಮಿನಲ್ ಪ್ರಿಸ್ ಆಫ್ ಟ್ರಸ್ಟ್' ಕಾಯ್ದೆಯ ಪ್ರಕಾರ ಮದುವೆಯಾದ 7 ವರ್ಷದೊಳಗೆ ಹೆಂಡತಿ ಅಸ್ವಾಭಾವಿಕ ಸಾವನಪ್ಪಿದರೆ ಅದು ವರದಕ್ಷಿಣೆಯ ಹಿಂಸೆ ಸಾವೆಂದೇ ಪರಿಗಣಿಸಲಾಗುತ್ತದೆ.

ಮಗಳು ಮನೆಗೆ ಬಾರದಿದ್ದಾಗ ವಿಚಾರಿಸಿ, ಪಕ್ಕದ ಹುಣಸಗಿ ಪೊಲೀಸ್ ಠಾಣೆಯಲ್ಲಿ ಬಾಲಕಿಯ ಅಪಹರಣದ ಕುರಿತು ಪ್ರಕರಣ ದಾಖಲು ಮಾಡಿದರು, ಆದರೆ ಅದರಿಂದ ಯಾವುದೇ ಪ್ರಯೋಜನವಾಗಲಿಲ್ಲ. ಅಪರಾಧಿ ಹೊರಗಡೆ ಇರುವುದು ಅಷ್ಟೇ ಸತ್ಯ. ಇಂತಹ ಪ್ರಕರಣಗಳು ಕೇವಲ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಷ್ಟೆ ಅಲ್ಲದೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಇವರ ವಿರಾಟ ರೂಪದಲ್ಲಿಯೂ ಕೂಡ ಕಂಡುಬರುತ್ತವೆ.

1999ರಲ್ಲಿ ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಿಂದ ವಿದ್ಯಾರ್ಥಿನಿಯ ಮೇಲೆ ಲೈಂಗಿಕ ಕಿರುಕುಳ ನಡೆದಿದ್ದು, ಮೇಧಾ ಕೋತ್ವಾಲ್ ಮತ್ತು ಇತರ ಸಮಾಜ ಕಾರ್ಯಕರ್ತರು ಸೇರಿ ಸುಪ್ರಿಂ ಕೋರ್ಟ್‌ಗೆ ಮೊರೆ ಹೋಗಿದ್ದರು. ಈ ಪ್ರಕರಣದಿಂದಾಗಿ ಕೋರ್ಟಿನ ಆದೇಶವನ್ನು ಭಾರತದ ಎಲ್ಲಾ ಕಡೆಗೂ ಜಾರಿಗೆ ತರಬೇಕೆಂದು ತೀರ್ಮಾನಿಸಲಾಯಿತು.

2007ರಲ್ಲಿ ಕರ್ನಾಟಕದ ಗುಲಬರ್ಗಾದಲ್ಲಿ ಶಿಕ್ಷಕಿಯೊಂದಿಗೆ ಅನುಚಿತವಾಗಿ ವರ್ತಿಸಿದ ಇಬ್ಬರು ಪೊಲೀಸ್ ಪೇದೆಗಳನ್ನು ಅಮಾನತುಗೊಳಿಸಿ ಜಿಲ್ಲಾ ಪೊಲೀಸ್ ಮಹಾ ನಿರ್ದೇಶಕರಾದ ಮನೀಷ್ ಖರ್ಬಿಕರ ಅವರು ಆದೇಶ ಹೊರಡಿಸಿದ್ದಾರೆ. ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತ ಕುಳಿತಿದ್ದ ಶಿಕ್ಷಕಿಯೊರ್ವಳಿಗೆ ಅಶೋಕ ನಗರ ಪೊಲೀಸ್ ಠಾಣೆಯ ಪೇದೆಗಳು ಅವಾಚ್ಯ ಶಬ್ದಗಳಿಂದ ನಿಂದಿಸಿ ಮಾನಸಿಕ ಹಿಂಸೆ ನೀಡಿ ಕರ್ತವ್ಯಚ್ಯುತಿ ಎಸಗಿರುವ ಪ್ರಕರಣ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ (ಸಂಯುಕ್ತ ಕರ್ನಾಟಕ 2007. ಪುಟ, 2). ಇದು ಕೇವಲ ಪ್ರಕರಣವಾಗಿಯೇ ಉಳಿದಿದೆ. ಇಂತಹ ಪ್ರಕರಣಗಳು ಕೇವಲ ಸಾಮಾನ್ಯ ಜನರಿಂದಾಗದೆ ರಾಜಕಾರಣಿಗಳಿಂದಲೂ ಆಗುತ್ತಿರುವುದಕ್ಕೆ ಶಾಸಕ ಎಂ. ಪಿ. ರೇಣುಕಾಚಾರ್ಯ ಅವರ ಲೈಂಗಿಕ ಪ್ರಕರಣ ಸಾಕ್ಷಿಯಾಗುತ್ತದೆ (ಪ್ರಜಾವಾಣಿ 2007, ಪುಟ-5).

ಕರ್ನಾಟಕದ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ವೆಂಕಟಾಪುರದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕಿಗೆ ಅದೇ ಶಾಲೆಯ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ನೀಡುತ್ತಿರುವ ಕಿರುಕುಳ ತಾಳಲಾರದೇ ದಿನಾಂಕ 4.4.2007ರಂದು ಆತನ ಮನೆ ಎದುರಿಗೆ ಸೀಮೆ ಎಣ್ಣೆ ಹಾಕಿಕೊಂಡು ಬೆಂಕಿ ಹಚ್ಚಿಕೊಂಡು ನಾಲ್ಕಾರು ದಿನಗಳ ನಂತರ ಮರಣ ಹೊಂದಿದಳು. ಇದರಿಂದ ಆತನ ಮೇಲೆ ಯಾವುದೇ ಶಿಕ್ಷೆ ಆಗಲಿಲ್ಲ (ಸಂಯುಕ್ತ ಕರ್ನಾಟಕ 2007. ಪುಟ 1-7).

'ಅಮರ ಅಸ್ಸಾಂ' ದಿನ ಪತ್ರಿಕೆಯ ಉಪಸಂಪಾದಕಿ ಸಬಿತಾ ಲಹ್ಕರ್ ಅದೇ ಪತ್ರಿಕೆಯ ಸಂಪಾದಕ ಹೋಮನ್ ಬೋಗೋ ಹೇನ್ ಅವರು ತಮ್ಮ ಅಧಿಕಾರದ ದುರುಪಯೋಗದಿಂದ ತಮ್ಮೊಂದಿಗೆ ಲೈಂಗಿಕ ಸಂಬಂಧ ಬೆಳೆಸಲು ಎರಡು ವರ್ಷಗಳ ಅವಧಿಯಲ್ಲಿ ಹಲವು ಭಾರಿ ಒತ್ತಾಯಿಸಿದ್ದಾರೆ. ಈ ಅನೈತಿಕ ಸಂಬಂದಕ್ಕೆ ಪ್ರತಿಯಾಗಿ ಸಂಬಳ ಹೆಚ್ಚಿಸುವ ಹಾಗೂ ಬಡ್ತಿ ನೀಡುವ ಆಮೀಷಗಳನ್ನು ಒಡ್ಡಿದರೆನ್ನಲಾಗಿದೆ. ಅವನ ಕಿರುಕುಳವನ್ನು ಸಹಿಸಿಕೊಂಡಿದ್ದ ಆ ಮಹಿಳೆಯ ಸಹನೆ ಮಿತಿಮೀರಿದಾಗ ಹುದ್ದೆಗೆ ರಾಜೀನಾಮೆ ನೀಡಿದಳು (ದಿಕ್ಸೂಚಿ, ನವೆಂಬರ್. 2003). ಶಕುಂತಲಾ ಸುಪ್ರಿಯಾ ಎಂಬ ಮಹಿಳೆ 1984-88ರವರೆಗೆ 'ಜೈ ರಾಜಸ್ಥಾನ' ಎಂಬ ಹಿಂದಿ ಪತ್ರಿಕೆಯಲ್ಲಿ ಜೈಪುರದಲ್ಲಿ ಕೆಲಸ ಮಾಡುತ್ತಿದ್ದು, ಸಂಪಾದಕನಿಂದ ಲೈಂಗಿಕ ಕಿರುಕುಳಕ್ಕೆ ಒಳಗಾದರೆ, ವರ್ಷಾ ಪಾಟೀಲ್ ಎಂಬ ಯುವತಿ ನಾಗಪುರದ 'ಲೋಕಮತ್' ಎಂಬ ಮರಾಠಿ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದಳು. ಅವಳು ಸಹೊದ್ಯೋಗಿಯಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗಿದ್ದಳು.

ಚರ್ಮಗಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ 17 ವರ್ಷದ ರಮ್ಯ 2004ರಲ್ಲಿ ಆ ಕಾರ್ಯಗಾರದ ಮಾಲೀಕನಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗಿ ಹತ್ಯೆಯಾದಳು. ರಾಷ್ಟ್ರಿಯ ಮಹಿಳಾ ಆಯೋಗವು ಈ ಪ್ರಕರಣವನ್ನು ಪೊಲೀಸರಿಗೆ ವರ್ಗಾಯಿಸಿತು. ಆದರೆ ಆ ಪೊಲೀಸರು ಈ ಪ್ರಕರಣದಲ್ಲಿ ಬೇರೊಬ್ಬರನ್ನು ಅಪರಾಧಿಯೆಂದು ಪರಿಗಣಿಸಿ ಶಿಕ್ಷೆ ನೀಡಲಾಯಿತು. ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ಕೇಂದ್ರದಲ್ಲಿ ಮಹಿಳಾ ಆಯೋಗ ಮತ್ತು ರಾಜ್ಯಗಳಲ್ಲಿ ರಾಜ್ಯ ಮಹಿಳಾ ಆಯೋಗಗಳು ಕಾರ್ಯನಿರ್ವಹಿಸುತ್ತಿದ್ದರೂ ಮಹಿಳೆಯರ ಮೇಲೆ ಹಲವಾರು ರೀತಿಯಲ್ಲಿ ಅತ್ಯಾಚಾರದಂತಹ ಪ್ರಕರಣಗಳು ನಡೆಯುತ್ತಲೆ ಇವೆ ಎಂಬುದಕ್ಕೆ ಈ ಮೇಲಿನ ನಿದರ್ಶನಗಳೆಲ್ಲಾ ಸಾಕ್ಷಿಯಾಗುತ್ತವೆ.

ಈ ಮೇಲಿನ ಎಲ್ಲಾ ಘಟನೆಗಳು ಭಾರತದಲ್ಲಿ ಮಹಿಳೆಯ ವಿರುದ್ಧ ನಡೆದ ಲೈಂಗಿಕ ಕಿರುಕುಳಗಳಿಗೆ ಮೂಕ ಸಾಕ್ಷಿಗಳಾಗಿವೆ. ಲೈಂಗಿಕ ಕಿರುಕುಳವನ್ನು ತಡೆಯಲು ಯಾವುದೇ ಅಸ್ತ್ರವನ್ನು ಜಾರಿಗೆ ತಂದರೂ ಅದನ್ನು ತಡೆಯಲು ಸಾಧ್ಯವಾಗುತ್ತಿಲ್ಲ.

ಲೈಂಗಿಕ ಕಿರುಕುಳ ಸಮೀಕ್ಷೆಗಳು:

ಭಾರತದಲ್ಲಿ ಪ್ರತಿ 54 ನಿಮಿಷಕ್ಕೆ ಒಬ್ಬ ಮಹಿಳೆ ಅತ್ಯಾಚಾರಕ್ಕೊಳಗಾಗುತ್ತಿದ್ದಾಳೆ ಎಂದು ವಿಶ್ವ ಸಂಸ್ಥೆಯು ಸಮೀಕ್ಷೆಯು ತಿಳಿಸುತ್ತದೆ. ಸುಮಾರು 10 ಸಾವಿರ ಮಹಿಳೆಯರನ್ನು ಸಮೀಕ್ಷಿಸಲಾಗಿ ಪ್ರತಿಶತ 50 ರಷ್ಟು ಮಹಿಳೆಯರು ಮದುವೆಯ ಬದುಕಿನಲ್ಲಿ ಒಂದಲ್ಲ ಒಂದು ರೀತಿಯ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಶೇ. 42.5ರಷ್ಟು ಮಹಿಳೆಯರು ಪ್ರತಿನಿತ್ಯ ಮಾನಸಿಕ ನೆಮ್ಮದಿಯನ್ನು ಕೆಡಿಸಿಕೊಳ್ಳುವ ಯಾವುದಾದರೂ ಬೈಗುಳಕ್ಕೆ ಒಳಗಾಗುತಿದ್ದಾರೆ. ಶೇ. 40.3 ರಷ್ಟು ಮಹಿಳೆಯರು ನಾನಾ ಬಗೆಯ ದೈಹಿಕ ಹಿಂಸೆಗೆ (ಹೊಡೆತ-ಬಡಿತ) ಬಲಿಯಾಗುತ್ತಿದ್ದಾರೆ ಎಂಬುದು ತಿಳಿದುಬರುತ್ತದೆ (ದಿಕ್ಸೂಚಿ, ಜುಲೈ 2003).

2000ರಲ್ಲಿ ಅಂತಾರಾಷ್ಟ್ರೀಯ ಕ್ಲಿನಿಕಲ್ ಎಪಿಡೆಮೊಲಾಜಿಸ್ಟ್ ನೆಟ್‌ವರ್ಕ್ ನಡೆಸಿದ ಸಮೀಕ್ಷೆಯ ಪ್ರಕಾರ ಶೇ. 42.5ರಷ್ಟು ಮಹಿಳೆಯರು ತಮ್ಮ ವೈವಾಹಿಕ ಜೀವನದಲ್ಲಿ ಪ್ರತಿದಿನ ಗಂಡನಿಂದ ಹಿಂಸಾಚಾರಕ್ಕೆ ಒಳಗಾಗುತ್ತಿದ್ದಾರೆ. ಶೇ. 68ರಷ್ಟು ಲೈಂಗಿಕ ಕಿರುಕುಳಗಳ ಪ್ರಕರಣಗಳು ಪೊಲೀಸ್ ಠಾಣೆಯವರೆಗೆ ಹೋಗುವುದಿಲ್ಲ ಎಂದು ತಿಳಿಸಿದೆ. ಇತ್ತೀಚೆಗೆ ಶಕ್ತಿಯಿಲ್ಲದ ಕಾನೂನು ವ್ಯವಸ್ಥೆಯಿಂದಾಗಿ ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳಾ ಶೋಷಣೆಗಳ ಸಂಖ್ಯೆ ಹೆಚ್ಚಾಗುತ್ತಲೆ ಇವೆ. ಇವುಗಳಿಗೆ ಕೊನೆಯೇ ಇಲ್ಲವೇ ಎಂದು ಮಹಿಳಾ ಸಮುದಾಯ ಕೇಳುತ್ತಿದೆ.

1990ರಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ಬಗ್ಗೆ ನ್ಯಾಯಾಧೀಶರ ಧೋರಣೆಗಳನ್ನು ನೋಡಿದಾಗ ಮಹಿಳೆಯರ ಮೇಲಿನ ದೌರ್ಜನ್ಯಗಳು ಸಾಮಾನ್ಯವೆನಿಸುತ್ತವೆ, ಅವುಗಳು ಇಂತಿವೆ;

ಶೇ. 48ರಷ್ಟು ನ್ಯಾಯಾಧೀಶರು ಗಂಡ ಹೆಂಡತಿಯ ಕೆನ್ನೆಗೆ ಹೊಡೆಯುವುದು ಸರಿ ಎಂದಿದ್ದಾರೆ.

ಶೇ. 74ರಷ್ಟು ನ್ಯಾಯಾಧೀಶರು ಮಹಿಳೆ ಹಿಂಸಾಚಾರ ಎದುರಿಸುವುದರ ಜೊತೆಗೆ ಕುಟುಂಬದಲ್ಲಿನ ಸಂಬಂಧವನ್ನು ಹದಗೆಡದಂತೆ ಉಳಿಸಿಕೊಳ್ಳಲು ಸಹಕರಿಸಬೇಕೆಂದು ಹೇಳಿದ್ದಾರೆ.

ಶೇ. 50ರಷ್ಟು ನ್ಯಾಯಾಧೀಶರು ಮಕ್ಕಳ ಮೇಲೆ ಲೈಂಗಿಕ ಅತ್ಯಾಚಾರ ಅಪರೂಪವೆಂದು ಅಭಿಪ್ರಾಯಪಟ್ಟಿದ್ದಾರೆ.

ಶೇ .68ರಷ್ಟು ನ್ಯಾಯಾಧೀಶರು ಹರೆಯದ ಯುವತಿಯರು ಪ್ರಚೋದನಕಾರಿ ಬಟ್ಟೆಗಳು ಹಾಕಿಕೊಳ್ಳುವುದರಿಂದ ತಮ್ಮನ್ನು ತಾವೇ ಲೈಂಗಿಕ ಹಿಂಸಾಚಾರ ಆಹ್ವಾನಿಸಿಕೊಂಡಂತೆ ಎಂದು ಹೇಳಿದ್ದಾರೆ.

ಸಮಾಜದಲ್ಲಿ ವರದಕ್ಷಿಣೆ ಪದ್ಧತಿ ಜನರ ಸಾಮಾಜಿಕ ಅಂತಸ್ತನ್ನು ನಿರ್ಧರಿಸುತ್ತದೆ ಅದಕ್ಕಾಗಿ ವರದಕ್ಷಿಣೆ ಸಾಂಸ್ಕೃತಿಕ ಮೌಲ್ಯವನ್ನು ಹೊಂದಿದೆ. ಆದ್ದರಿಂದ ವರದಕ್ಷಿಣೆ ಶೋಷಣೆ ಸಾಮಾನ್ಯವಾದುದ್ದು ಎಂದು ಶೇ. 34ರಷ್ಟು ನ್ಯಾಯಾಧೀಶರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಹಿಳೆಯ ನೈತಿಕ ಚಾರಿತ್ರ್ಯ ಲೈಂಗಿಕ ಅತ್ಯಾಚಾರದ ಪ್ರಕರಣಗಳಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕು ಎಂದು ಶೇ.55ರಷ್ಟು ನ್ಯಾಯಾಧೀಶರು ಹೇಳಿದ್ದಾರೆ.

ಕಾನೂನು ಮತ್ತು ಮಹಿಳೆ:

ಭಾರತ ದಂಡ ಸಂಹಿತೆಯು ಮಹಿಳೆಯರ ವಿರುದ್ಧದ ಅಪರಾಧಗಳಿಗೆ ಸಂಬಂಧಿಸಿದಂತೆ 312 ರಿಂದ

318ರವರೆಗೆ ಹಾಗೂ 354, 361, 366, 366ಎ-ಬಿ, 367, 372, 373, 375, 376ಬಿ.ಸಿ.ಡಿ, 377, 493ರಿಂದ 498 ಮತ್ತು 498ಎ ಪ್ರಕರಣಗಳನ್ನು ಪಟ್ಟಿ ಮಾಡಿ ಘೋಷಿಸಿದರೂ (ಪ್ರಭಾ ಎನ್, 2003) ಮಹಿಳೆಯರ ಮೇಲೆ ನಡೆಯುವ ಶೋಷಣೆಗಳು ಕಡಿಮೆಯಾಗುತ್ತಿಲ್ಲ. ಇವುಗಳಲ್ಲದೆ ಸಂವಿಧಾನದ 44ನೇ ಪರಿಚ್ಛೇದವು ಸಮಾನ ನಾಗರೀಕ ಹಕ್ಕನ್ನು ಎತ್ತಿ ಹಿಡಿದಿದೆ. ಕೌಟುಂಬಿಕ ದೌರ್ಜನ್ಯಗಳ ವಿರುದ್ಧವಲ್ಲದೆ ಎಲ್ಲ ರೀತಿಯ ಕ್ರೌರ್ಯದ ವಿರುದ್ಧವಾಗಿವೆ. ಸಂವಿಧಾನ ಮತ್ತು ಮಹಿಳಾ ಆಯೋಗಗಳ ರಕ್ಷಣೆ ಇದ್ದರು, ಮಹಿಳೆಯರಿಗಾಗಿಯೇ ಕಾನೂನುಗಳು ರಚನೆಗೊಂಡಿದ್ದರು, ಹೊಸ ಹೊಸ ಕಾನೂನುಗಳು ಪರಿಚಯಗೊಳ್ಳುತ್ತಿದ್ದರು, ಮಹಿಳೆಯರ ಮೇಲೆ ಹಲವಾರು ರೀತಿಯ ದೌರ್ಜನ್ಯಗಳು ಏಕೆ ನಡೆಯುತ್ತಿವೆ ಎಂಬುದರ ಬಗ್ಗೆಯೇ ಚಿಂತನೆಯಲ್ಲಿ ತೊಡಗಿಕೊಂಡಿದ್ದಾರೆಯೇ ಹೊರತು ಅವುಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ನಮ್ಮ ಸರ್ಕಾರಗಳು ವಿಫಲವಾಗಿವೆ.

ಕಿರುಕುಳ ನಿವಾರಣೋಪಾಯಗಳು:

ಹಲವಾರು ಕ್ಷೇತ್ರಗಳಲ್ಲಿ ಲೈಂಗಿಕ ಕಿರುಕುಳಗಳಿಗೆ ಬಲಿಯಾದ ಮಹಿಳೆಯರು ಲೈಂಗಿಕ ಕಿರುಕುಳಗಳಿಗೆ ಕೊನೆ ಇದೆಯೇ ಎಂದು ನಿರುತ್ಸಾಹದಾಯಕವಾಗಿ ಕೇಳುವಂತಾಗಿದೆ. ಈ ಕೆಳಗಿನ ಅಂಶಗಳನ್ನು ಅಳವಡಿಸಿಕೊಂಡಲ್ಲಿ ಮಹಿಳೆಯರ ಮೇಲಾಗುವ ಲೈಂಗಿಕ ಕಿರುಕುಳಗಳನ್ನು ಸ್ವಲ್ಪ ಮಟ್ಟಿಗಾದರೂ ನಿಯಂತ್ರಿಸಬಹುದು.

ಮಹಿಳೆಗೆ ಸಂಬಂಧಿಸಿದಂತೆ ಕುಟುಂಬ, ಜನಾಂಗ ಹಾಗೂ ಸಮಾಜದ ಆಲೋಚನಾ ಲಹರಿಯೇ ಬದಲಾಗಬೇಕು ಅಂದಾಗ ಮಾತ್ರ ಸಂಸಾರದಲ್ಲಿ ಹೆಣ್ಣಿಗೆ ಶಾಂತಿ ಹಾಗೂ ಗೌರವದಿಂದ ಬಾಳುವುದು ಸಾಧ್ಯವಾಗುತ್ತದೆ.

ಮಹಿಳೆಯರಿಗಾದ ಅನ್ಯಾಯಗಳನ್ನು ಹಂತ ಹಂತವಾಗಿ ತಡೆಯಬೇಕಾದರೆ ವೈಚಾರಿಕ ನೆಲೆ, ಸಂಸಾರಿಕ ಹಿನ್ನೆಲೆ, ಕಾನೂನಿನ ಚೌಕಟ್ಟಿನಲ್ಲಿ ಸಮತೋಲನದೊಡನೆ ಪ್ರಯತ್ನಿಸಬೇಕು. ಮಹಿಳಾ ಹಕ್ಕಿನ ಅರಿವನ್ನು ಹೆಚ್ಚಾಗಿ ಜನರಿಗೆ ಮುಟ್ಟಿಸುವ ಕಾರ್ಯವಾಗಬೇಕು.

ಗಂಡನಾದವನು ಹೆಂಡತಿಯ ಮೇಲೆ ಮಾಡುವ ಹಿಂಸೆ, ಅನಾವಶ್ಯಕ ದಬ್ಬಾಳಿಕೆ ಮುಂತಾದ ಕಾರಣಗಳಿಂದಾಗಿ ವಿಚ್ಛೇದನದ ಕಾನೂನನ್ನು ಸುಲಭವಾಗಿಸಬೇಕು. ಕಾನೂನಿನ ಪ್ರಕಾರ ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು ಅಪರಾಧ 'ಕ್ರಿಮಿನಲ್ ಬ್ರೀಚ್ ಆಫ್ ಟ್ರಸ್ಟ್' ಕಾಯ್ದೆಯ ಪ್ರಕಾರ ಮದುವೆಯಾದ 7 ವರ್ಷದೊಳಗೆ ಹೆಂಡತಿ ಅಸ್ವಾಭಾವಿಕ ಸಾವನಪ್ಪಿದರೆ ಅದು ವರದಕ್ಷಿಣೆಯ ಹಿಂಸೆ ಸಾವೆಂದೇ ಪರಿಗಣಿಸಲಾಗುತ್ತದೆ. ಇಷ್ಟಿದ್ದಾಗ್ಯೂ ನಮ್ಮ ಭಾರತದಲ್ಲಿ ಹಲವಾರು ಮಹಿಳೆಯರು ವರದಕ್ಷಿಣೆ ಕಿರುಕುಳದಿಂದಾಗಿ ಸಾವನ್ನಪ್ಪಿದ ಸಾಕಷ್ಟು ನಿದರ್ಶನಗಳಿವೆ. ಕಾರಣ ವರದಕ್ಷಿಣೆಗೆ ತಡೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಯಲ್ಲಿ ತರಬೇಕು. ವಿಚ್ಛೇದನ ಪಡೆದ ಮಹಿಳೆಗೆ ಆಸ್ತಿ ಹಕ್ಕುದಾರಿಕೆಯನ್ನು ಆಯಾ ಧರ್ಮಗಳಿಗನುಸಾರವಾಗಿಯೇ ವಿಂಗಡಿಸಬೇಕು.

18 ವರ್ಷಕ್ಕಿಂತ ಕಡಿಮೆಯಿರುವ ಹೆಣ್ಣನ್ನು ಮದುವೆಯಾದರೆ, ಅದು ಬಾಲ್ಯವಿವಾಹ ಕಾಯ್ದೆಯಡಿಯಲ್ಲಿ ಅಪರಾಧವಾಗುತ್ತದೆ ಎಂಬುದನ್ನು ತಿಳಿದಿದ್ದರೂ ಹಲವಾರು ಸಾಮೂಹಿಕ ಮದುವೆಗಳಲ್ಲಿ ರಾಜಕಾರಣಿಗಳು. ಮಠಾಧೀಶರು ಮತ್ತು ಸಮಾಜದ ಹಿರಿಯ ಗಣ್ಯರೆದುರಿನಲ್ಲಿಯೇ ಬಾಲ್ಯ ವಿವಾಹಗಳು ನಡೆಯುತ್ತಿವೆ. ಇದನ್ನು ತಪ್ಪಿಸಲು ಬಾಲ್ಯ ವಿವಾಹ ತಡೆಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಇಲ್ಲದಿದ್ದಲ್ಲಿ ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಸಾರ್ವಜನಿಕ ಸ್ಥಳಗಳಲ್ಲಿ, ಕೆಲಸ ಮಾಡುವ ಇಲಾಖೆ, ಸಂಸ್ಥೆಗಳಲ್ಲಿ ಹೆಣ್ಣು ಕಿರುಕುಳಕ್ಕೊಳಗಾದದ್ದು ಸಾಬೀತಾದರೆ, ಕಿರುಕುಳ ನೀಡಿದ ವ್ಯಕ್ತಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಅಂದರೆ ಕೆಲವೊಂದು ಸಲ ನುಸುಳಿ-ಪಾರಾಗಿ ಹೋಗುವ ದುರ್ಬಲ ಕಾನೂನುಗಳನ್ನು ಬಿಗಿಗೊಳಿಸಬೇಕು. ಲೈಂಗಿಕ ಕಿರುಕುಳ ತಡೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು.

ಉಪಸಂಹಾರ:

ಮಹಿಳೆಯರ ಮೇಲಿನ ಅತ್ಯಾಚಾರ, ಅಪಹರಣ, ಹಿಂಸೆ, ಲೈಂಗಿಕ ಕಿರುಕುಳಗಳು ಅತ್ಯಂತ ನಾಚಿಕೆಗೇಡಿನ ಸಂಗತಿಯೆಂದು ಸಮಾಜಕ್ಕೆ ತಿಳಿದಿದ್ದರೂ, ಅದೇ ಸಮಾಜದಲ್ಲಿ ದಿನಗಳು ಉರುಳಿದಂತೆಲ್ಲಾ ಲೈಂಗಿಕ ಕಿರುಕುಳಗಳ ಸಂಖ್ಯೆ ಹೆಚ್ಚಾಗುತ್ತಲಿವೆ. ಮಹಿಳೆಯರ ಮೇಲೆ ನಡೆಯುವ ಇಂತಹ ದೌರ್ಜನ್ಯಗಳಿಗೆ ಭೌಗೋಳಿಕ, ಸಾಂಸ್ಕೃತಿಕ, ಧಾರ್ಮಿಕ, ಬಡವ ಶ್ರೀಮಂತರೆಂಬ ಚೌಕಟ್ಟುಗಳಿಲ್ಲ. ಇದು ಎಲ್ಲಿಯವರೆಗೆ ಮುಂದುವರೆಯುತ್ತದೆಯೋ ಅಲ್ಲಿಯವರೆಗೆ ನಿಜವಾದ ಪ್ರಗತಿ ಸಾಧ್ಯವಿಲ್ಲ. ಅಭಿವೃದ್ಧಿ, ಶಾಂತಿ ಮತ್ತು ಸಮಾನತೆ ಸ್ಥಾಪಿಸಲು ಸಾಧ್ಯವಿಲ್ಲ.

ಮಹಿಳೆಯರ ಮೇಲೆ ಆಗುತ್ತಿರುವ ಲೈಂಗಿಕ ಕಿರುಕುಳಗಳನ್ನು ತಡೆಯಲು ಅನೇಕ ಕಾಯ್ದೆಗಳು ಇದ್ದರೂ ಸಹಿತ ದಿನಬೆಳಗಾದಂತೆ ಮಹಿಳೆಯರು ಹಿಂಸೆ, ಅತ್ಯಾಚಾರ ಅಥವಾ ಇನ್ನಾವುದೋ ರೀತಿಯ ಕಿರುಕುಳಕ್ಕೆ ಒಳಗಾದ ತಕ್ಷಣ ದೂರು ಕೊಡದೆ ಇರುವದರಿಂದ ಅಪರಾಧಿಗಳು ಸುಲಭವಾಗಿ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಆದ್ದರಿಂದ ಮಹಿಳೆಯರು ಮಹಿಳಾ ಸಂಘ, ಉಚಿತ ಕಾನೂನು ಸಲಹೆ ಸಂಸ್ಥೆಗಳನ್ನು ಸಂಪರ್ಕಿಸಬೇಕು. ಅವರು ಯಾವುದೇ ರೀತಿಯ ಆರ್ಥಿಕ ಒತ್ತಡಗಳನ್ನು ನೀಡದೆ ಉಚಿತವಾಗಿ ವಕೀಲರನ್ನು ನೇಮಿಸಿ ಅವರ ಮೂಲಕ ಕಾನೂನಿನ ರೀತಿಯಲ್ಲಿ ಕ್ರಮ ಕೈಗೊಂಡು ಅಪರಾಧಿಗಳನ್ನು ಶಿಕ್ಷೆಗೊಳಪಡಿಸಬೇಕು. ಆದರೆ ಹಲವಾರು ಪ್ರಕರಣಗಳು ನ್ಯಾಯಾಲಯದಲ್ಲಿಯೇ ದೂಳು ಹಿಡಿಯುತ್ತಿವೆ, ಬೇಲಿಯೇ ಎದ್ದು ಹೊಲ ಮೇಯ್ದಾಗ ಯಾರು ಏನೂ ಮಾಡಲು ಸಾಧ್ಯವಿಲ್ಲ ಎಂಬಂತಾಗಿದೆ ಈಗಿನ ಸಮಾಜ ಮತ್ತು ಕಾನೂನು.

ಆಧಾರ ಗ್ರಂಥಗಳು:

1. ಎನ್ ಗಾಯತ್ರಿ (1996), "ಮಹಿಳೆ ಬಿಡುಗಡೆಯ ಹಾದಿಯಲ್ಲಿ" ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿಮಿಟೆಡ್, ಬೆಂಗಳೂರು.
2. ಸಂಯುಕ್ತ ಕರ್ನಾಟಕ ದಿನಪತ್ರಿಕೆ (ಗುಲಬರ್ಗಾ ಪ್ರಕಟಿತ) 20.07.2007, ಪು. 5.
3. ಪ್ರಜಾವಾಣಿ ದಿನಪತ್ರಿಕೆ, 21.04.2007, ಪು. 5.
4. ಸಂಯುಕ್ತ ಕರ್ನಾಟಕ ದಿನಪತ್ರಿಕೆ (2007) ಪು. 5.
5. ದಿಕ್ಸೂಚಿ ಮಾಸ ಪತ್ರಿಕೆ, ಜುಲೈ 2003.
6. ಪ್ರಭಾ ಎನ್ (2003), "ಕೌಟುಂಬಿಕ ಹಿಂಸಾಚಾರ ಮತ್ತು ಕಾನೂನುಗಳು". ಐಕ್ಯರಂಗ, ಸಂಪುಟ. 25, ಸಂಚಿಕೆ. 11, ಪು. 17, ಮಾರ್ಚ್.
7. ಶೃತಿ ಜಿ. ಎಂ. (2006), "ಮಹಿಳಾ ಶೋಷಣೆ", ಸಂಪಾದಕರು, ಡಾ॥ ಶಿವಚಿತ್ತಪ್ಪ ಕೆ. "ಮಹಿಳಾ ಸಬಲೀಕರಣದ ವಿಭಿನ್ನ ನೆಲೆಗಳು", ಲಕ್ಷ್ಮೀ ಪ್ರಿಂಟಿಂಗ್ ಆ್ಯಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.
8. ಭಾರತದ ಜನಗಣತಿ, 1991 ಮತ್ತು 2001, ನವದೆಹಲಿ.

(ಈ ಲೇಖನವು ಹಿರಿಯೂರಿನಲ್ಲಿ ನಡೆದ 2010ರ ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರೊ, ಮಲ್ಲಿಕಾ ಘಂಟಿ ಅವರ ಅಧ್ಯಕ್ಷೀಯ ಭಾಷಣವನ್ನು ಆಧರಿಸಿದೆ.) □

ಪದವಿ ತರಗತಿಗಳಲ್ಲಿ ಕನ್ನಡ ಪಠ್ಯ

ಏನಾಗಿದೆ, ಏನಾಗಬೇಕು?

(33ನೇ ಪುಟದಿಂದ)

ಗೊಂದಲದಲ್ಲಿದ್ದೇವೆ. ಬಿ.ಬಿ.ಎಂ ವಿಭಾಗದಲ್ಲಿ ಈಚೆಗೆ ಕನ್ನಡೇತರ ವಿದ್ಯಾರ್ಥಿಗಳು ಹೆಚ್ಚಾಗುತ್ತಾ ಇದ್ದಾರೆ. ಅವರಿಗೆ ಕನ್ನಡದ ಮೂಲಕ ಇಂದಿನ ವ್ಯಾಪಾರ ಜಗತ್ತು ಮಾರುಕಟ್ಟೆ ಜಾಗತಿಕ ಅಂಶಗಳಂತಹ, ವಿಚಾರಗಳನ್ನು ಬೋಧಿಸುವುದಕ್ಕೆ ಅವಕಾಶಗಳಿವೆ. ಅಂತಹ ಪಠ್ಯಗಳು ದಿನಪತ್ರಿಕೆಗಳಲ್ಲೇ ಕೆಲವೊಮ್ಮೆ ಲಭ್ಯವಾಗುತ್ತವೆ. ಸಾಹಿತ್ಯದ ಜತೆಗೆ ಇದು ಸಾಧ್ಯವಾಗಬೇಕು.

ಬಿ.ಎಸ್ಸಿ, ಬಿ.ಸಿ.ಎ ಯಂತಹ ಕೋರ್ಸುಗಳಿಗೆ ಕನ್ನಡ 'ಪಠ್ಯ'ವು ತಮ್ಮ ಮೂಲ ವೇಷವನ್ನು ಕಳೆದುಕೊಂಡು ಸಾಹಿತ್ಯದ ಜತೆಗೆ ವೈಜ್ಞಾನಿಕ ಸಂಶೋಧನೆಗಳು, ಪರಿಸರ ಚಿಂತನೆ, ಜೀವ ಜಾಲಗಳ ಜತೆಗೆ ಅನುಸಂಧಾನ ಮಾಡಬೇಕಾಗಿದೆ. ಕರ್ನಾಟಕದಲ್ಲಿ ಉಲ್ಲಾಸ ಕಾರಂತ, ಮುರಾರಿ ಬಲ್ಲಾಳ, ಯು.ಆರ್. ರಾವ್, ಕೃಪಾಕರ-ಸೇನಾನಿ, ಬಿ.ಜಿ.ಎಲ್. ಸ್ವಾಮಿ ಮುಂತಾದವದರ ಚಿಂತನೆಗಳನ್ನು ನಮ್ಮ ಕನ್ನಡ ಭಾಷಿಕ ಪಠ್ಯಗಳು ಮತ್ತಷ್ಟು ಒಳಗು ಮಾಡಿ ಕೊಳ್ಳಬೇಕಾಗಿದೆ. ಆದರೆ ಪಠ್ಯಕ್ರಮ ಸಮಿತಿಗಳು, ಅಧ್ಯಯನ ಕೇಂದ್ರಗಳು ಇದನ್ನ ಯೋಚನೆ ಮಾಡುತ್ತಿಲ್ಲ. ಈ ನಿಟ್ಟಿನಲ್ಲಿ ಕೆ.ವಿ.ಎನ್ ಅವರ ಆತಂಕದ ಮಾತುಗಳು ನೆನ ಪಾಗಿ ಕಾಡುತ್ತವೆ. ಹಾಗೂ ಭಯವನ್ನು ಉಂಟು ಮಾಡುತ್ತವೆ. "ಮೊದಲು ಕನ್ನಡ ಅಧ್ಯಾಪಕರು ಹೊಸದಾಗಿ ಆಲೋಚನೆ ಮಾಡಲು ಸಿದ್ಧರಾಗಬೇಕಾಗಿದೆ. ಇದರಿಂದ ಕನ್ನಡ ಕಲಿಕೆ, ಬೋಧನೆಗಳ ಜಸ್ಟಿಫಿಕೇಶನ್ ಸಹ ಜೋರಾಗುತ್ತದೆ. ಎಂದು ಹೇಳುವ ಕೆ.ವಿ.ಎನ್. ಬದಲಾಗುತ್ತಿರುವ ಸಂದರ್ಭಕ್ಕೆ ಅನುಗುಣವಾಗಿ ಹೀಗೆ ಭಾಷೆಯ ಕಲಿಕೆಯನ್ನು ಮರು ಹೊಂದಾಣಿಕೆ ಮಾಡದೇ ಹೋದರೆ ಕೆಲವೇ ವರ್ಷಗಳಲ್ಲಿ ಕನ್ನಡ ಪದವಿ ತರಗತಿಗಳಿಂದ ಹೊರನೂಕಲ್ಪಡುತ್ತದೆ ಎನ್ನುತ್ತಾರೆ."

(ಪುಟ-152 ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ, ಚಲಪತಿ) ಈ ಮಾತುಗಳನ್ನು ಗಂಭೀರವಾಗಿ ಸ್ವೀಕರಿಸಿದಾಗ ಯಾಕೆ ಹೀಗೆ ಇದಕ್ಕೆ ಪರಿಹಾರಗಳು ಇಲ್ಲವೆ? ಅಧ್ಯಾಪಕ ವೃಂದ ಎಚ್ಚೆತ್ತುಕೊಳ್ಳುತ್ತಿಲ್ಲವೋ? ಎಂಬ ಪ್ರಶ್ನೆಗಳು ನಮ್ಮ ಮುಂದೆ ಬರುತ್ತಿವೆ. ಕೆ.ವಿ.ಎನ್ ಅವರ ಈ ಮಾತುಗಳ ಹಿನ್ನಲೆಯಲ್ಲಿ ಪ್ರಸಿದ್ಧ ಭಾಷಾ ವಿಜ್ಞಾನಿ ಕಾಂಗಾಸ್ ಅವರು ಹೇಳುವ ಒಂದು ಸಮುದಾಯವನ್ನು ನಾಶ ಮಾಡಿಸಬೇಕಾದರೆ ಆ ಸಮುದಾಯದ ಭಾಷೆಯನ್ನ ನಾಶ ಮಾಡಿದರೆ ಸಾಕು ಎಂಬ ಮಾತು ನೆನಪಾಗುತ್ತದೆ. ಈ ನಿಟ್ಟಿನಲ್ಲಿ ಕನ್ನಡ ಭಾಷೆಯ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಪ್ರಾಯೋಗಿಕವಾಗಿ ಚಿಂತಿಸುತ್ತಿರುವ, ಪಿ.ಎನ್. ಶಂಕರಭವ್ಯ, ಕೆ.ವಿ ನಾರಾಯಣ, ಕೆ.ವಿ ತಿರುಮಲೇಶ್ ಮುಂತಾದವರ ಚಿಂತನೆಗಳನ್ನು ಗಂಭೀರವಾಗಿ ಸ್ವೀಕರಿಸಬೇಕಾಗಿದೆ.

ಪದವಿಮಟ್ಟದ ತರಗತಿಗಳಲ್ಲಿ ಕನ್ನಡ ಭಾಷೆ ಉಳಿಯಬೇಕಾದರೆ ಅದು ಅಧ್ಯಾಪಕರ ಬುದ್ಧಿವಂತಿಕೆಯ ಮೇಲೆ ನಿಂತಿದೆ ಎನ್ನಬಹುದು. ತುರ್ತಾಗಿ ಆಗಬೇಕಾದ ಕೆಲಸವೆಂದರೆ ತರಗತಿಯಲ್ಲಿನ ಬೋಧನಾಕ್ರಮ, ವಿವರಣಾತ್ಮಕತೆ ವಿಶ್ಲೇಷಣೆಯ ಕಡೆಗೆ ಪಠ್ಯಗಳು ತಿರುಗಬೇಕಾಗಿದೆ. ಇಲ್ಲದಿದ್ದರೆ ಪಠ್ಯಗಳಿಗೆ ಜೀವಂತಿಕೆಯನ್ನು ತುಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಪದವಿಗಳಲ್ಲಿ ಕನ್ನಡ ಪಠ್ಯ ಬೋಧಿಸುವುದೆಂದರೆ ವಿದ್ಯಾರ್ಥಿಗಳಿಗೆ ಕನ್ನಡ ಅಧ್ಯಾಪಕ ಆ ಸಮುದಾಯದ ಸಂಸ್ಕೃತಿಯೊಂದಿಗಿನ ಸಂಬಂಧವನ್ನು ಸ್ಥಾಪಿಸುವುದೆಂದೇ ಅರ್ಥ. □

ಉರಿಲಿಂಗದ ಪಾದಾರವಿಂದಗಳಲ್ಲಿ



ಲಿಂಗವೇ ಕೇಳು ಕೇಳು:
ಅರಿಕೆಯೋ
ಅರಕೆಯೋ
ಹರಕೆಯೋ
ಕೊರಗೋ ಏನೋ ಒಂದಾಗಿ
ಬಸವಣ್ಣ ಬಂದು ಕರೆಯುತ್ತಾರೆಂದರೆ
ಅವರ ಬಾಯಿ ಮರಗಟ್ಟಿದೆ
ಕೈ ಹಿಡಿದು ನಡೆಸುತ್ತಾರೆಂದರೆ
ಅವರ ಕೈ ತಿರುಚಿಬಿಟ್ಟಿದೆ
ನಡೆವ ಕಾಲೇ ಕುಂಟುತ್ತಿದೆ
ನೀನೇ ಬರುವೆ ಎಂದು ಕಾದರೆ
ನಿನ್ನೆರಡು ಕಣ್ಣೇ ಹೋಗಿವೆ
ಯಾರೋ ನಿನ್ನನ್ನು ಬಂಡೆಯಂತೆ ಕಡೆದು
ದುಂಡಿಯನ್ನೇ ಎತ್ತಿ ತಲೆ ಒಡೆದಿದ್ದಾರೆ
ಲಿಂಗವೇ ಕೇಳು ಕೇಳು:
ಕಳ್ಳಿ ಹಾಲನ್ನೆರೆದು
ಮುಳ್ಳು ಬೇಲಿಯ ಕರೆದು
ಎಳ್ಳು ನೀರಿಗೆ ಬರೆದು
ವಿಳಾಸ ಹುಡುಕುವವರ ನಡುವೆ
ಒಂದು ಮಲ್ಲಿಗೆ ದಂಡೆ ತಂದು
ಅಂಗದ ಮೇಲೊಂದು ಪತ್ರೆಯನಿಟ್ಟು
ಧರೆಗೆ ದೊಡ್ಡವರ ಕಾವಲಲ್ಲಿ
ಭಸ್ಮ ಲೇಪಿತನಾಗಿ
ನಿನ್ನ ಕರೆದರೆ
ಓ ಎಂದೆಯಾ ಶಿವನೆ
ಬಾ ಎಂದೆಯಾ ಶಿವನೆ
ಲಿಂಗವೇ ಕೇಳು ಕೇಳು:
ಆಕಾಶ ನೆಕ್ಕುವ ಕಳಶ
ಹೊಳೆವ ಬಂಗಾರದ ಕುಸರಿ ಕೆಲಸ
ಸುತ್ತ ಪೌಳಿಯ ಸುತ್ತು
ಅಮೃತ ಶಿಲೆಯ ಕಲಾಬತ್ತು



ಹೋಮಾಗ್ನಿಯ ಹೊಗೆ
ಹವನಾಗ್ನಿಯ ಧಗೆ
ಗರ್ಭಸ್ಥಾನದಿಂದೇಕಾಕಿ ಕೂಗಿದೆ
ನಿಬಿಡಾರಣ್ಯ, ಕಗ್ಗಾನು ಕಾಡು
ಎಲೆ ಎಲೆಯ ಹೆಣೆದು
ಮಣೆ ಹಾಸಿದ ಕಗ್ಗತ್ತಲು
ಕಣೆ ತಾಗಿ ಸುರಿವ ಗೋಳಿನ ರಕ್ತ
ತರಿದು ಬಿದ್ದ ರುಂಡ ಮುಂಡಗಳಲ್ಲಿ
ನಾನೂ ಬಿದ್ದು ಏಕಾಕಿ ಕೂಗಿದೆ
ಲಿಂಗವೇ ಕೇಳು ಕೇಳು:
ಚಕ್ಕಡಿಯಿಂದಿಳಿಸಿ, ಕಾಲುದಾರಿ ತಪ್ಪಿಸಿ
ಕಿರು ಹಳ್ಳಗಳ ತೊರೆಸಿ
ರೈಲಲ್ಲಿ, ವಿಮಾನದಲ್ಲಿ ಕೂಡಿಸಿ
ರಾಕೆಟ್ ವೇಗದಲ್ಲಿ, ಅಣು ಪ್ರವಾಹದಲ್ಲಿ ತೇಲಿಸಿ
ಒಂದು ಲ್ಯಾಪ್ ಟ್ಯಾಪಲ್ಲಿ ಗಿಡಿದು
"ಎನ್ನ ಕರಸ್ಥಲಕೆ ಬಂದು ಚುಳುಕಾದಿರಯ್ಯಾ"
ಎಂದು ಹಾಡುತ್ತ ಹಾಡುತ್ತ
ಎಲ್ಲಿಗೊ ಕೊಂಡೊಯ್ದರಲ್ಲಾ
ಆಗ ಹಸಿವಿನ ಮಗ ಅತ್ತನಲ್ಲಾ
ಕಸುವಿನ ಕಂದ ಸತ್ತನಲ್ಲಾ
ಬೆಸುಗೆಯ ಬಿಟ್ಟವರು ಸರಿದರಲ್ಲಾ
ಕರುಳಿನುದ್ದದ ಹಾದಿ ಕಡಿದರಲ್ಲಾ...
ಎಂದು ಕೂಗಿದ ನನ್ನ ಕೂಗಿನ ಸದ್ದು
ಶಿಖರಗಳಿಗೆ ಗುದ್ದಿ ವಾಪಾಸಾಗಿ
ನನ್ನ ಬಳಿಗೇ ಬಂದು ನನ್ನನ್ನೆ ಗುದ್ದಿತಲ್ಲಾ
ಸದ್ದಡಗಿದ ಮೇಲೆ
ಲಿಂಗವೇ ಕೇಳು ಕೇಳು
ರೌರವ ಏಕಾಂತ, ರೌರವ ನಿಶ್ಶಬ್ದ
ರೌರವ ಅಸ್ತಿತ್ವ
ಕಂತು ಕಂತಿನಲ್ಲಿ ಕಂತಿ ಹೋಗುವ ಹೊತ್ತು
ಕಂತಿನಲ್ಲಿ ಹಿಂಸೆಯ ಚೂರುಗಳ ಹಂಚುತ್ತಿದೆ
ಹಗಲಿನ ಕಣ್ಣುಗಳ ಕುರುಡಾಗಿಸುತ್ತಿದೆ
ಬುದ್ಧ ಗುರುವಿನ ಮೆದು ಮಾಂಸವ ತಿನ್ನುತ್ತಾ ತಿನ್ನುತ್ತ
ಲಿಂಗವೇ ಕೇಳು ಕೇಳು
ಉರಿಲಿಂಗವೇ ಕೇಳು ಕೇಳು.

○ ಚಂದ್ರಶೇಖರ ತಾಳ್ಯ



ಸೃಜನಾತ್ಮಕ ಹಾಗೂ ವೈಚಾರಿಕ
ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ದಂಡೆ ಕಾದಂಬರಿಯ ಮಹಿಳಾ ಕಥಾನಕ ಮತ್ತು
ಸಂವೇದನೆಯ ನೆಲೆಗಳು...

ತನ್ನ ಒಡಲೊಳಗಿನ ವರ್ಣನೆಗಳಲ್ಲಿ ರಮ್ಯ ಭಾವಗೀತೆಯ ಸ್ವಭಾವವನ್ನೂ, ಅದು ಮಂಡಿಸಬಯಸುವ ವಿವರಗಳಲ್ಲಿ ವಿಷಾದ ಗೀತೆಯ ಸ್ವರೂಪವನ್ನೂ, ನುಡಿಸುತ್ತಿರುವ ಆಶಯಗಳಲ್ಲಿ ಪರಿವರ್ತನಾಶೀಲ ದರ್ಶನವನ್ನೂ ಪಡೆದುಕೊಂಡಂತಿರುವ ಕಾ.ತ. ಚಿಕ್ಕಣ್ಣನವರ 'ದಂಡೆ' ಕಾದಂಬರಿ ಒಂದು ಉತ್ತಮ ಸಾಹಿತ್ಯ ಕೃತಿಯಾಗಿದ್ದು ಅನೇಕ ನೆಲೆಗಳಿಂದ ಚರ್ಚಿಸಬಹುದಾದ ಅಂಶಗಳನ್ನೊಳಗೊಂಡಿದೆ.

ಕಳೆದ ಎರಡು ದಶಕಗಳಲ್ಲಿ ಬಂದಿರುವ ಬಹುಪಾಲು ಉತ್ತಮ ಕಾದಂಬರಿಗಳು ಸ್ತ್ರೀಪಾತ್ರಕೇಂದ್ರಿತವಾಗಿ ಚಿತ್ರಣಗೊಂಡಿವೆ. ಆ ಸಾಲಿಗೆ 'ದಂಡೆ' ಕೂಡ ಸೇರುತ್ತದೆ. ದಂಡೆಯಲ್ಲಿ ಮೂರು ತಲೆಮಾರಿನ ಸ್ತ್ರೀಪಾತ್ರಗಳಿವೆ. ಮೂರು ತಲೆಮಾರಿನ ವ್ಯಕ್ತಿಗಳಲ್ಲೂ ಸಮಾನವಾದ ಅಂಶಗಳಿವೆ. ವಿದ್ಯಾಭ್ಯಾಸ, ಕೌಟುಂಬಿಕ ಹಿನ್ನೆಲೆ ಹಾಗೂ ಕ್ರಿಯಾಶೀಲತೆಯ ನೆಲೆಗಟ್ಟು ಇವುಗಳು ಬೇರೆ ಬೇರೆ ತೆರನಾಗಿದ್ದರೂ ವ್ಯಕ್ತಿಗತ ನೆಲೆಯಲ್ಲಿ ಸಾಗಿಸುವ ಛಲದ ಬದುಕು ಹಾಗೂ ಸಂಘರ್ಷದ ನಡಿಗೆಯಲ್ಲಿ ಸಮಾನಾಂಶಗಳಿವೆ. ಸಮಾನಾಂಶವಾಗಿರುವ ಈ ಸಂಕಟ ಹಾಗೂ ಸಂಘರ್ಷಾತ್ಮಕ ನೆಲೆಗಳು ಮಹಿಳಾ ಸಮುದಾಯದ ಬದುಕಿನ ವಾಸ್ತವತೆಯನ್ನು ಬಿಂಬಿಸುತ್ತಿವೆ.

ಅವ್ವಯ್ಯ ಎಂಬ ಪಾತ್ರದ ನೆನಪಿನಲ್ಲಿ ಹಾಗೂ ವರ್ತಮಾನದಲ್ಲಿ 'ದಂಡೆ' ಕಾದಂಬರಿಯ ಕಥಾನಕ ಬಿಚ್ಚಿಕೊಳ್ಳುತ್ತದೆ. ಒಮ್ಮೆ ಅದು ಅವ್ವಯ್ಯನ ಬಾಲ್ಯದ ನೆನಪುಗಳ ದಂಡೆಗೆ ಹಾಯುತ್ತದೆ, ಮತ್ತೊಮ್ಮೆ ತನ್ನ ದಾಂಪತ್ಯ ಜೀವನದ ಘಟನಾವಳಿಗಳನ್ನು ಎಟುಕಿಸಿಕೊಳ್ಳುತ್ತದೆ, ಮತ್ತೊಮ್ಮೆ ತನ್ನ ಮಗನ ಬರುವಿಕೆಯ ನಿರೀಕ್ಷೆಗೆ ಹಾಯುತ್ತದೆ. ಈ ನೆನಪು, ಹಂಬಲಗಳ ದಂಡೆಗಳ ನಡುವೆ ಅವ್ವಯ್ಯ ಎಂಬ ಜೀವನದಿಯ ಕಥಾನಕದ ನೀರು ಹರಿಯುತ್ತದೆ.

ಕಾದಂಬರಿ ತನ್ನ ವಿನ್ಯಾಸದಲ್ಲಿ ಕಲಾತ್ಮಕ ವರ್ಣನೆಗಳಿಂದ, ಅಂತರಾಳ ಶೋಧನೆಯ ಒಳನೋಟಗಳಿಂದ, ಜೀವನಾನುಭವ ನಿಷ್ಠ ವಾಸ್ತವಿಕ ವಿವರಗಳಿಂದ ಹಾಗೂ ಕಥಾನಕವು ಒಟ್ಟಾರೆಯಾಗಿ ಅಭಿವ್ಯಕ್ತಿಸುತ್ತಿರುವ ಸಂದೇಶಾತ್ಮಕ ಧ್ವನಿಯಿಂದ ಪರಿಪುಷ್ಟವಾಗಿದೆ. ಕಾದಂಬರಿಯ ಪಾತ್ರಲೋಕ ಕೂಡ ಗ್ರಾಮೀಣ ಜನಜೀವನದ ನಡುವೆಯಿಂದ ಜೀವಂತವಾಗಿ ನಡೆದುಬಂದಂತಿದೆ.

ಜೋರು ಹೆಂಗಸು ಎಂದು ಕರೆಯಬಹುದಾದ ಬೇಲೂರಿ ಅಥವಾ ಆಕೆಯ 'ಬಹಾದ್ದೂರ್' ಮಗ ಮಾಲಿಂಗು, ಹಾಗೆಯೇ ಬೀರಪ್ಪ-ಮಂಟೇಸಿದ್ಧಯ್ಯ ಮುಂತಾದ ಪಾತ್ರಗಳು, ಅವುಗಳ ರೀತಿ ರಿವಾಜುಗಳು ಅತ್ಯಂತ ಸಹಜವಾಗಿ ಮನದಲ್ಲುಳಿಯುತ್ತವೆ. ಹಾಗೆ ನೋಡಿದರೆ ಕೇಂದ್ರಪಾತ್ರವಾದ ಅವ್ವಯ್ಯನೇ ಕತೆಯ ನಡಿಗೆಯಲ್ಲಿ ಸ್ವಲ್ಪಮಟ್ಟಿಗೆ 'ಉದಾತ್ತೀಕರಣ' ಪ್ರಕ್ರಿಯೆಗೆ ಈಡಾದಂತಿದೆ.

ಬರೀ ಹೆಣ್ಣುಗಳೇ ಹುಟ್ಟಿರುವ ಕುಟುಂಬದ ಕೊನೆಯ ಮಗಳಾದ ಅವ್ವಯ್ಯ ತನ್ನ ತಾಯಿ ದೊಡ್ಡೆಯ ಆಕಾಂಕ್ಷೆಯನುಸಾರ ಕೂಲಿಮಠಕ್ಕೆ ಸೇರಿ ಅಕ್ಷರಸ್ಥೆಯಾಗಲು ಆಶಿಸುತ್ತಾಳೆ. ಕೂಲಿಮಠದ 'ಐನೋರ' ಅಕಾಲಿಕ ದುರ್ಮರಣದಿಂದಾಗಿ ಹೆಣ್ಣುಮಕ್ಕಳನ್ನು 'ಕೂಲಿಮಠ'ದಲ್ಲಿ ಸೇರಿಸಿಕೊಂಡರೆ ದೋಷ ಸಂಭವಿಸುತ್ತದೆ ಎಂಬ ಮೂಢನಂಬಿಕೆಯ ಕೈ ಮೇಲಾಗಿ, ವಿದ್ಯಾಭ್ಯಾಸ ಮೊಟಕುಗೊಳಿಸಿಕೊಳ್ಳಬೇಕಾದ ಪರಿಸ್ಥಿತಿಗೆ ಗುರಿಯಾಗುತ್ತಾಳೆ.

ಸ್ವಾತಂತ್ರ್ಯ ಬರಲಿರುವ ಸಂದರ್ಭಕ್ಕೆ ಒಂದು ದಶಕ ಪೂರ್ವದಲ್ಲಿ ಮಹಿಳೆಯರ ವಿದ್ಯಾಭ್ಯಾಸಕ್ಕೆ ಇದ್ದ ಸಾಮಾಜಿಕ ತೊಡಕುಗಳನ್ನು, ಕೌಟುಂಬಿಕ ಹಿನ್ನೆಲೆಯ ಅಡೆತಡೆಗಳನ್ನು ಸೂಕ್ಷ್ಮವಾಗಿ ಈ ಘಟನಾವಳಿಗಳು ಬಿಂಬಿಸುತ್ತಿವೆ. ಹೆಣ್ಣನ್ನೇ ಗಂಡು ಮಗ ಎಂದು ತಿಳಿದು ನಡೆಸಿಕೊಳ್ಳಬಲ್ಲ ಹೃದಯವಂತ ಅಪ್ಪ ಮಗಳು ಕೂಲಿಮಠ ಸೇರುವ ವಿಷಯಕ್ಕೆ ಮಾತ್ರ ಸುಮುಖನಾಗಿಲ್ಲದಿರುವ ರೀತಿ ಕೂಡ ಆ ಕಾಲಘಟ್ಟದ ರೈತಾಪಿ ಧೋರಣೆಗಳ ಯಥಾರ್ಥ ಚಿತ್ರಣವಾಗಿದೆ.

ಸನ್ನಿವೇಶ ಬಯಸಿದಾಗಲೆಲ್ಲ ಸಂಸಾರದ ನೊಗವನ್ನು ಹೆಗಲಿಗೇರಿಸಿಕೊಂಡು ತಾನೇ ಮುಂದಾಗಿ ನೀಗಿಸುವ, ಕುಟುಂಬದ ಆಗುಹೋಗುಗಳನ್ನು, ವ್ಯವಸಾಯದ ಜವಾಬ್ದಾರಿಗಳನ್ನು ನಿರ್ವಹಿಸುವ ಪಾತ್ರಗಳ ಸಂಖ್ಯೆ ಗ್ರಾಮಸೀಮೆಯಲ್ಲಿ ಹೇರಳವಾಗಿವೆ. ಅವ್ವಯ್ಯನ ತಾಯಿ ದೊಡ್ಡೆ ಕೂಡ ಅಂತಹುದೇ ಗಟ್ಟಿಗಿತ್ತಿ ಹೆಂಗಸು.

ಗಂಡನ ಸಹಕಾರವನ್ನು ಬೆನ್ನಿಗಿರಿಸಿಕೊಂಡು ತಾನೇ ಮುಂದೆ ಬಿದ್ದು 'ಗೋಕುರ್ತಿ'ಯನ್ನು ನಿಭಾಯಿಸಿದ ದೊಡ್ಡೆ ಅದಕ್ಕಾಗಿಯೇ ವಿಶಿಷ್ಟಳಾಗಿದ್ದರೂ, ತನ್ನ ಮಗಳು ಕೂಲಿಮಠ ಸೇರಿ ನಾಲ್ಕಕ್ಷರ ಕಲಿಯಲಿ ಎಂಬ ಹಂಬಲ ಹೊತ್ತ ತಾಯಾಗಿ ಆ ಕಾಲಕ್ಕೆ ವಿಶಿಷ್ಟಳು. ಸ್ವಾತಂತ್ರ್ಯ ಬರುವ ಒಂದೆರಡು ದಶಕಗಳ ಪೂರ್ವದಲ್ಲಿ ನಿಧಾನವಾಗಿ ಬರತೊಡಗಿದ್ದ ಸಾಮಾಜಿಕ ಜಾಗೃತಿ, ವಿದ್ಯಾಭ್ಯಾಸದ ಬಗ್ಗೆ ಏರ್ಪಡತೊಡಗಿದ್ದ ಆರಂಭಿಕ ಪ್ರೀತಿ, ಮಹಿಳೆಯರಿಗೂ ವಿದ್ಯಾಭ್ಯಾಸ ಅಗತ್ಯ ಎಂಬುದನ್ನು ಮಹಿಳಾ ಸಂವೇದನೆಯ ನೆಲೆಗಳಿಂದಲೇ ಗ್ರಹಿಸಿಕೊಳ್ಳತೊಡಗಿದ್ದ ವ್ಯಕ್ತಿಗಳು ಮುಂತಾದ ವಿದ್ಯಮಾನಗಳಿಗೆ ಸಂಕೇತವಾಗಿರುವ ಅವ್ವಯ್ಯನ ಅವ್ವ ದೊಡ್ಡೆ ಆ ಕಾರಣದಿಂದಾಗಿ ಮನಸ್ಸಿನಲ್ಲುಳಿಯುವ ಪಾತ್ರವಾಗಿದ್ದಾಳೆ.

'ದಂಡೆ' ಕಾದಂಬರಿ ಅತ್ಯಂತ ವಾಸ್ತವವಾಗಿ ದೊಡ್ಡೆಯ ಪರಿಶ್ರಮವನ್ನು ಕುಟುಂಬದ ಏಳಿಗೆ ಹಾಗೂ ಹೆತ್ತ ಮಕ್ಕಳ ಯೋಗಕ್ಷೇಮ ಎಂಬ ಕಕ್ಷೆಗೆ ಸೀಮಿತವಾಗಿರುವಂತೆ ಚಿತ್ರಿಸಿದೆ. ಅದನ್ನು ಮೀರಿದ ಕ್ರಿಯಾಶೀಲತೆಯನ್ನು ಎಷ್ಟೇ ಛಾತಿಯುಳ್ಳ ವ್ಯಕ್ತಿಯಾಗಿದ್ದರೂ ದೊಡ್ಡೆಯಿಂದ ಆ ಸನ್ನಿವೇಶದ ಹಿನ್ನೆಲೆಯಲ್ಲಿ ನಿರೀಕ್ಷಿಸುವುದು ಕಷ್ಟ. ಜಾತಿ ಮತ್ತು ಕೌಟುಂಬಿಕ ಹಿನ್ನೆಲೆ ಮತ್ತು ಸಂದರ್ಭದ ನೆಲೆಗಟ್ಟಿನಿಂದಾಗಿ ದೊಡ್ಡೆ ಆಕೆಯ ಬದುಕಿನ ಮಹಾಭಾರತದಲ್ಲಿ 'ಕುಂತಿ'ಯಂತಹ ಪಾತ್ರ. ತನ್ನ ಸಂತಾನದ ಏಳುಬೀಳುಗಳನ್ನು ತಾನೇ ತೂಗಿಸುವವಳು. ಗಂಡನೇನಿದ್ದರೂ ಸಹಕಾರಿ ಮಾತ್ರ.

'ದಂಡೆ' ಕಾದಂಬರಿಯ ಕಥಾನಕದಲ್ಲಿ ಹಾಗೆ 'ದ್ರೌಪದಿ'ಯಂತಹ ಸತ್ವ ಮತ್ತು ಸಾಧ್ಯತೆ ಹೊಂದಿರುವ ಪಾತ್ರ ಅವ್ವಯ್ಯನದು. ತನ್ನ ಅವ್ವ ದೊಡ್ಡೆಯದೇ ಛಲ, ಸಾಮರ್ಥ್ಯ ಪಡೆದು ಹುಟ್ಟಿರುವ ಅವ್ವಯ್ಯ ತನ್ನ ಗಂಡನ ಕಾಲಘಟ್ಟದಲ್ಲಿ ಕೇವಲ ಕುಟುಂಬ ನಿರ್ವಹಣೆಯಲ್ಲೇ ತನ್ನ ವ್ಯಕ್ತಿತ್ವದ ತ್ರಾಣವನ್ನು ಮೀಸಲಿಡಬೇಕಾಗಿ ಬಂದವಳಾದರೂ, ತನ್ನ ಮಗ ಗುರುರಾಜನ ಕಾಲದ ಸೊತ್ತಿಗೆ ಆ ಗ್ರಾಮದ ಸಾಮಾಜಿಕ ವಿದ್ಯಮಾನಗಳಲ್ಲೂ ತನ್ನ ಛಾಪು ಮೂಡಿಸ

ಅವ್ವಯ್ಯ ಎಂಬ ಪಾತ್ರದ ನೆನಪಿನಲ್ಲಿ ಹಾಗೂ ವರ್ತಮಾನದಲ್ಲಿ 'ದಂಡೆ' ಕಾದಂಬರಿಯ ಕಥಾನಕ ಬಿಚ್ಚಿಕೊಳ್ಳುತ್ತದೆ. ಒಮ್ಮೆ ಅದು ಅವ್ವಯ್ಯನ ಬಾಲ್ಯದ ನೆನಪುಗಳ ದಂಡೆಗೆ ಹಾಯುತ್ತದೆ, ಮತ್ತೊಮ್ಮೆ ತನ್ನ ದಾಂಪತ್ಯ ಜೀವನದ ಘಟನಾವಳಿಗಳನ್ನು ಎಟುಕಿಸಿಕೊಳ್ಳುತ್ತದೆ, ಮತ್ತೊಮ್ಮೆ ತನ್ನ ಮಗನ ಬರುವಿಕೆಯ ನಿರೀಕ್ಷೆಗೆ ಹಾಯುತ್ತದೆ. ಈ ನೆನಪು, ಹಂಬಲಗಳ ದಂಡೆಗಳ ನಡುವೆ ಅವ್ವಯ್ಯ ಎಂಬ ಜೀವನದಿಯ ಕಥಾನಕದ ನೀರು ಹರಿಯುತ್ತದೆ. ಕಾದಂಬರಿ ತನ್ನ ವಿನ್ಯಾಸದಲ್ಲಿ ಕಲಾತ್ಮಕ ವರ್ಣನೆಗಳಿಂದ, ಅಂತರಾಳ ಶೋಧನೆಯ ಒಳನೋಟಗಳಿಂದ, ಜೀವನಾನುಭವ ನಿಷ್ಠ ವಾಸ್ತವಿಕ ವಿವರಗಳಿಂದ ಹಾಗೂ ಕಥಾನಕವು ಒಟ್ಟಾರೆಯಾಗಿ ಅಭಿವ್ಯಕ್ತಿಸುತ್ತಿರುವ ಸಂದೇಶಾತ್ಮಕ ಧ್ವನಿಯಿಂದ ಪರಿಪುಷ್ಟವಾಗಿದೆ.

ಬಲ್ಲ ವ್ಯಾಪ್ತಿಯನ್ನು ಗಳಿಸಿಕೊಳ್ಳುತ್ತಾಳೆ.

ಸ್ವಾತಂತ್ರ್ಯ ಹೋರಾಟಗ್ಗಾರನ ಮಡದಿಯಾಗಿರುವ ಅವ್ವಯ್ಯ, ತನ್ನ ಗಂಡನಿಗಿದ್ದ ದೇಶಪ್ರೇಮದ ಆವೇಶ ಹಾಗೂ ಓಡಾಟದಲ್ಲಿ ಪಡೆದುಕೊಂಡ ಸಾಂಸಾರಿಕ ಸುಖ ಬಹಳ ಸೀಮಿತವಾದದ್ದು. ಆಕೆಯ ಗಂಡನಿಗಿದ್ದ ಹೋರಾಟದ ವ್ಯಾಮೋಹವನ್ನು ಆಕೆ ಸಕಾರಾತ್ಮಕವಾಗಿ ಸ್ವೀಕರಿಸಿದಂತೆ ಕೂಡ ಕಾಣುವುದಿಲ್ಲ. ಹೆಂಡತಿಯಾಗಿ ಮಾಡಿಕೊಂಡು ತನ್ನ ಕುಟುಂಬದ ವಹಿವಾಟು ತೂಗಿಸಲು ತನ್ನನ್ನು ತೊಡಗಿಸಿ, ತನಗೆ ಹೇಳದೆ ಕೇಳದೆ ಹೋರಾಟಕ್ಕಾಗಿ ಕಣ್ಮರೆಯಾಗಿಬಿಡುವ ಗಂಡನ ಬಗ್ಗೆ ಅವ್ವಯ್ಯನಿಗೆ ಸಿಟ್ಟಿದೆ. ಮಾತು ಹಾಗೂ ಮುದ್ದುಗಳಲ್ಲಿ ಮರುಳು ಮಾಡಿ ತನ್ನನ್ನು ಏಕಾಂಗಿಯಾಗಿ ಸಂಸಾರದ ನೊಗಕ್ಕೆ ಕಟ್ಟಿದವನು ಎಂಬಂತಹ ಕಟು ವಿಮರ್ಶೆಯೂ ಆಕೆಯಲ್ಲಿದೆ.

ಅವ್ವಯ್ಯನ ಮಗ ಗುರುರಾಜನಿಗೆ ತನ್ನ ತಂದೆಯಾದ ರಾಯಣ್ಣನ ಬಗ್ಗೆ ಗೌರವ, ಅಭಿಮಾನ. ಕೌಟುಂಬಿಕ ಜಗತ್ತಿನ ಎಲ್ಲೆ ಮೀರಿ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಪ್ರಾಣ ತ್ಯಾಗ ಮಾಡಿದವನೆಂಬ ಹೆಮ್ಮೆ. ಆದರೆ ಹೆಂಡತಿಯ ನೆಲೆಯಲ್ಲಿ ನಿಂತು ಯೋಚಿಸುವ ಅವ್ವಯ್ಯನಿಗೆ ತನ್ನ ಗಂಡನ ಜೀವನಕ್ರಮ ಪ್ರಶ್ನಾರ್ಹ.

ರಾಯಣ್ಣನ ಪಾತ್ರದ ಬಗ್ಗೆ 'ದಂಡೆ' ಸೂಚಿಸುವ ಎರಡು ಭಿನ್ನ ಪ್ರಕ್ರಿಯೆಗಳು ಧ್ವನಿಪೂರ್ಣವಾಗಿವೆ. ತನ್ನ ಅಪ್ಪ ದೇಶಕ್ಕಾಗಿ ಮಾಡಿದ ತ್ಯಾಗವನ್ನು ಮೆಚ್ಚುವ ಮಗ, ತನ್ನ ಗಂಡ ತನ್ನನ್ನು ಏಕಾಂಗಿಯಾಗಿಸಿ ಕುಟುಂಬದ ಜವಾಬ್ದಾರಿ ಹೊರಲು ನೇಮಿಸಿದನೆಂಬ ಹೆಂಡತಿಯ ಸಿಟ್ಟು ಒಂದು ವ್ಯಕ್ತಿತ್ವವು ಸಂಬಂಧಗಳ ಭಿನ್ನ ನೆಲೆಯಲ್ಲಿ ಎದುರಿಸಬೇಕಾಗಿ ಬರುವ 'ಬೆಲೆಗಟ್ಟುವ' ಕ್ರಮಗಳನ್ನು ಬಿಂಬಿಸುತ್ತಿದೆ.

ಕಾದಂಬರಿಯ ಕೇಂದ್ರಪಾತ್ರವಾದ ಅವ್ವಯ್ಯ ಒಂದು ಹೆಣ್ಣಾಗಿ ತಾನು ಪಡೆಯಬೇಕಾಗಿದ್ದ ಸಾಂಸಾರಿಕ ನೆಮ್ಮದಿಯಿಂದ ವಂಚಿತಳಾದವಳು. ರಾಯಣ್ಣನನ್ನು ಸಂದರ್ಭವಶಾತ್ ಮದುವೆಯಾದವಳು ಎಂಬ ಕಾರಣದಿಂದಾಗಿಯೇ, ದೊಡ್ಡ ಆಸ್ತಿಯ ವಹಿವಾಟು ನಿರ್ವಹಣೆ, ದಾಯಾದಿ ಕುಟುಂಬಗಳ ಮಾತ್ಸರ್ಯ ಮತ್ತು ಆಗ್ರಹಕ್ಕೆ ಗುರಿಯಾಗಿ ಬದುಕಿದವಳು.

ಗಂಡನನ್ನು ಕಾಯುವುದರಲ್ಲೇ ಕಾಲ ಹಾಕಿದ ಅವ್ವಯ್ಯ ಕಡೆಗೆ ಮಗನಾದರೂ ಆಸರೆಯಾಗಿ ನಿಲ್ಲಬಹುದೆಂದು ಭಾವಿಸಿದರೆ ಮಗನೂ ಕೂಡ ಅಪ್ಪನಂತೆಯೇ. ರಾಯಣ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಿದರೆ, ಮಗ ಸ್ವಾತಂತ್ರ್ಯಾನಂತರದ ಸಮಾಜದಲ್ಲಿ ಉದ್ಭವಿಸಿರುವ ಪಟ್ಟಭದ್ರಹಿತಾಸಕ್ತಿಗಳ ವಿರುದ್ಧ ಹೋರಾಟ ಆರಂಭಿಸಿದ್ದಾನೆ.

ಅವ್ವಯ್ಯ ತನ್ನ ಮಗನ ಹೋರಾಟದ ಸಂದರ್ಭದಲ್ಲಿ, ತನ್ನ ಗಂಡನ ಹೋರಾಟದ ಗುರಿಗೆ ನೀಡಿದ ಪ್ರತಿಕ್ರಿಯೆಗಿಂತ ಭಿನ್ನವಾದ ನೆಲೆಯಲ್ಲಿ ಸ್ಪಂದಿಸುತ್ತಿದ್ದಾಳೆ ಎಂಬ ಸಕಾರಾತ್ಮಕ ಸೂಚನೆಯನ್ನು ಕಾದಂಬರಿ ಒಳಗೊಂಡಿದೆ. ಗುರುರಾಜ ಕಟ್ಟುವ ಸಹಕಾರ ಸಂಘದ ಬಗ್ಗೆ, ಬೇರೆ ಬೇರೆ ಜಾತಿಯವರು ಸಮಾನಸ್ಕಂದರಾಗಿ ಸಾಮಾಜಿಕ ಚಟುವಟಿಕೆಗಳನ್ನು ನಿರ್ವಹಿಸುವ ಧೋರಣೆಯ ಬಗ್ಗೆ ಅವ್ವಯ್ಯ ಬೆಂಬಲಸೂಚಕ ಮನೋಭಾವ ತಳೆಯುತ್ತಾಳೆ.

ಗುರುರಾಜನ ಆಪ್ತ ಸಂಗಡಿಗರಾದ ಪ್ರಭುಸ್ವಾಮಿ ಮತ್ತು ಗಿರಿಜೆಯರ ನಡುವೆ ಮೊಳೆಯುವ ಅಂತರ್ಜಾತಿ

ಅವ್ವಯ್ಯ ತನ್ನ ಇತರೆ ಹಲವಾರು ಚಹರೆ ಮತ್ತು ದಿನಚರ್ಯೆಗಳಲ್ಲಿ ಯೋಗಿಣಿಯ ಸ್ವಭಾವದ ಹೋಲಿಕೆ ಪಡೆದಿದ್ದಾಳೆ. ಆದರೆ ಕಾದಂಬರಿಕಾರರು ಆ ಬಗೆಯ ಸ್ವಭಾವ ಚಿತ್ರಣವನ್ನು ಆಕೆಯ ಒಳ ಮನಸ್ಸಿಗೆ ತೊಡಿಸಿಲ್ಲ. ಹಾಗೆ ತೊಡಿಸಲು ಪ್ರಯತ್ನಿಸಿದ್ದಿದ್ದರೆ ಅವ್ವಯ್ಯನ ಪಾತ್ರ ಕೇವಲ ಕಲ್ಪನೆಯ ಮೂಸೆಯಲ್ಲಿ ಮೂಡಿಬಂದಂತಾಗುತ್ತಿತ್ತು. ಮುಖ್ಯವಾಗಿ ಅವ್ವಯ್ಯ ತನ್ನ ಯೌವ್ವನಕಾಲದ ಹಂಬಲಗಳಲ್ಲಿ ಹೆಣ್ತನಕ್ಕೆ ಸಹಜವಾದ ನೆಲೆಯಲ್ಲೇ ಭಾವಿಸಿದವಳು, ಚಿಂತಿಸಿದವಳು, ವರ್ತಿಸಿದವಳು ಆಗಿರುವುದು ಆ ಪಾತ್ರಕ್ಕೆ ಸಹಜತೆಯ ಸತ್ವ ಒದಗಿಸಿದೆ. ಹೀಗಾಗಿಯೇ ಅವ್ವಯ್ಯ ಕೇವಲ ಧೀರೋದಾತ್ತ ಹೆಣ್ಣುಪಾತ್ರವಾಗಿ ಚಿತ್ರಣ ವಾಗುವುದು ತಪ್ಪಿದೆ.

ಪ್ರೇಮ ಹಾಗೂ ದಾಂಪತ್ಯಕ್ಕೆ ಮನಃಪೂರ್ವಕ ಬೆಂಬಲ ಸೂಚಿಸುತ್ತಾಳೆ. ಗಿರಿಜೆ ಹಾಗೂ ಪ್ರಭುಸ್ವಾಮಿಯ ನಡುವಿನ ಪ್ರೇಮಕ್ಕೆ, ಅದರಂತೆಯೇ ತನ್ನ ಮಗ ಗುರುರಾಜ ಮತ್ತು ಅನ್ಯ ಜಾತಿಯ ಸೀತೆಯ ನಡುವೆ ಬೆಳೆದಿರುವ ಪ್ರೇಮಕ್ಕೆ ಅವ್ವಯ್ಯಮ್ಮ ಸ್ಪಂದಿಸುವುದು ತನ್ನ ಸಹಜ ಸ್ತ್ರೀ ಸಂವೇದನೆಯಿಂದ. 'ದಂಡೆ'ಯಲ್ಲಿ ಇದು ಅತ್ಯಂತ ಧ್ವನಿಪೂರ್ಣವಾಗಿ ಚಿತ್ರಿತವಾಗಿದೆ.

ಪ್ರಭು-ಗಿರಿಜೆಯರ ಪ್ರೇಮದ ಬಗ್ಗೆ ಅಥವಾ ಗುರುರಾಜ-ಸೀತೆಯರ ಪ್ರೇಮದ ಬಗ್ಗೆ ಅವ್ವಯ್ಯ ಆಧುನಿಕ ವಿಚಾರ ಸರಣಿಯಿಂದ ಯೋಚಿಸುವುದಕ್ಕಿಂತ ಹೆಚ್ಚಾಗಿ ತನ್ನ ಯೌವ್ವನದ ಕನಸುಗಳ ಸ್ಮೃತಿಯ ಮುಖಾಂತರ ಸ್ಪಂದಿಸುತ್ತಾಳೆ. ವಿಜಾತೀಯನಾದ ಚಲುವರಾಜು ಬಗ್ಗೆ ತನ್ನ ಯೌವನದಲ್ಲಿ ಅವ್ವಯ್ಯನಿಗೆ ಬೆಳೆದಿದ್ದ ಪ್ರೀತಿ ಹಾಗೂ ಮೆಚ್ಚುಗೆ, ಆ ಬಗೆಯ ಮದುವೆ ವಿಚಾರ ವಾಸ್ತವದಲ್ಲಿ ಅಸಾಧ್ಯ ಎಂದು ಗೆಳತಿ ಹೇಳಿದ ಮೇಲೂ ಇವಳೊಳಗೆ ಉಳಿದುಕೊಂಡೇ ಬರುವ ಪ್ರೇಮಾರಾಧನೆ, ಆ ಪ್ರೇಮಾರಾಧನೆ ಏಕಮುಖವಾಗಿದ್ದು, ಎಂದೂ ತನ್ನ ವಾಸ್ತವದ ಕ್ರಿಯೆಯಲ್ಲಿ ನಿಜವಾಗದೇ ಹೋದ ಬಗೆ ಇವೆಲ್ಲವೂ ಅವ್ವಯ್ಯನನ್ನು ನಿರ್ದೇಶಿಸುತ್ತವೆ.

ಅಷ್ಟು ವಿದ್ಯಾವಂತಳಲ್ಲದ, ಹಳೆಯಕಾಲಕ್ಕೆ ಸೇರಿದ ತನ್ನಂತಹವಳೊಳಗೆ ಒಬ್ಬ ಚಲುವರಾಜು ಪ್ರೀತಿಯ ಸೆಲೆಯಾಗಿ, ಪ್ರೇಮದ ರೂಪಕವಾಗಿ ನಿಲ್ಲಬಹುದಾಗಿದ್ದರೆ, ಪ್ರಭು-ಗಿರಿಜೆಯರ ನಡುವಿನ ಪ್ರೇಮ ಅನ್ಯೆಸರ್ಗಿಕವಾದುದಲ್ಲ ಎಂಬ ಸ್ತ್ರೀಸಹಜ ಸಂವೇದನೆಯಿಂದಲೇ ಅವ್ವಯ್ಯ ಅವರಿಬ್ಬರ ಪ್ರೀತಿಗೆ ಬೆಂಬಲವಾಗಿ ನಿಲ್ಲುತ್ತಾಳೆ. ಕಾ.ತ. ಚಿಕ್ಕಣ್ಣನವರ ಬರವಣಿಗೆಯ ಹದ ಇಂತಹ ಪಾತ್ರವೊಂದರ ನಿರ್ವಹಣೆಯಲ್ಲಿ ಎದ್ದು ಕಾಣುತ್ತದೆ.

ಅವ್ವಯ್ಯ ಸ್ವಾತಂತ್ರ್ಯ ಹೋರಾಟದ ಹುತಾತ್ಮನ ಹೆಂಡತಿ ಎಂಬುದನ್ನಾಗಲೀ, ಅಷ್ಟು ಹೊತ್ತಿಗೆ ಗ್ರಾಮಗಳಲ್ಲೂ ಪ್ರವೇಶಿಸಿದ್ದ ಗಾಂಧಿ ವಿಚಾರಧಾರೆಯ ಸುಧಾರಣಾ ನಿಲುವುಗಳ ಪ್ರಸ್ತಾಪವನ್ನಾಗಲೀ, ಪ್ರೇರಣೆಯನ್ನಾಗಲೀ ತರದೆ ಕಾ.ತ. ಚಿಕ್ಕಣ್ಣ ಅವ್ವಯ್ಯನ ನಿಲುವಿಗೆ ಅವಳ ಪ್ರೇಮಾರಾಧನೆಯ ಅನುಭವದ ನೆಲೆಯನ್ನು ಒದಗಿಸಿದ್ದಾರೆ. ಆದ್ದರಿಂದಲೇ ಆಕೆಯ ಪಾತ್ರಕ್ಕೆ ಸಹಜತೆಯ ಸತ್ವ ಕೂಡಿಕೊಂಡಿದೆ. ಕಾ.ತ. ಚಿಕ್ಕಣ್ಣನವರಿಗೆ ಅಂತರ್ಜಾತಿ ಪ್ರೇಮ, ಸಾಮಾಜಿಕ ನ್ಯಾಯ ಮುಂತಾದವುಗಳ ಬಗ್ಗೆ ಒಲವಿದೆ. ಆ ಬಗ್ಗೆ ಬರೆಯಬಲ್ಲರು, ಮಾತಾಡಬಲ್ಲರು. ಆದರೆ ಕಾದಂಬರಿಯಲ್ಲಿ ಆ ಪ್ರಸಂಗವನ್ನು ನಿರ್ವಹಿಸುವಾಗ ಕಾದಂಬರಿಕಾರನ ಪ್ರಜ್ಞೆಯ ನೆಲೆಯಿಂದ ಅದನ್ನು ರೂಪಿಸದೇ ಅಂತರ್ಜಾತೀಯ ವಿವಾಹಕ್ಕೆ ಬೇಕಾದ ಬೆಂಬಲವನ್ನು ಅವ್ವಯ್ಯ ಕೊಟ್ಟಿದ್ದರ ಹಿಂದೆ ಅವಳ ಜೀವನಾನುಭವ ಮತ್ತು ಸ್ತ್ರೀ ಸಂವೇದನೆಯ ಪ್ರೇರಣೆ ಇರುವಂತೆ ಚಿತ್ರಿಸಿರುವುದು ಸಹಜ ಕಲಾತ್ಮಕ ಮಾದರಿಯಲ್ಲಿದೆ.

ಅವ್ವಯ್ಯ ತನ್ನ ಇತರೆ ಹಲವಾರು ಚಹರೆ ಮತ್ತು ದಿನಚರ್ಯೆಗಳಲ್ಲಿ ಯೋಗಿಣಿಯ ಸ್ವಭಾವದ ಹೋಲಿಕೆ ಪಡೆದಿದ್ದಾಳೆ. ಆದರೆ ಕಾದಂಬರಿಕಾರರು ಆ ಬಗೆಯ ಸ್ವಭಾವ ಚಿತ್ರಣವನ್ನು ಆಕೆಯ ಒಳ ಮನಸ್ಸಿಗೆ ತೊಡಿಸಿಲ್ಲ. ಹಾಗೆ ತೊಡಿಸಲು ಪ್ರಯತ್ನಿಸಿದ್ದಿದ್ದರೆ ಅವ್ವಯ್ಯನ ಪಾತ್ರ ಕೇವಲ ಕಲ್ಪನೆಯ ಮೂಸೆಯಲ್ಲಿ ಮೂಡಿಬಂದಂತಾಗುತ್ತಿತ್ತು. ಮುಖ್ಯವಾಗಿ ಅವ್ವಯ್ಯ ತನ್ನ ಯೌವ್ವನಕಾಲದ ಹಂಬಲಗಳಲ್ಲಿ ಹೆಣ್ತನಕ್ಕೆ ಸಹಜವಾದ ನೆಲೆಯಲ್ಲೇ ಭಾವಿಸಿದವಳು, ಚಿಂತಿಸಿದವಳು, ವರ್ತಿಸಿದವಳು ಆಗಿರುವುದು ಆ ಪಾತ್ರಕ್ಕೆ ಸಹಜತೆಯ ಸತ್ವ ಒದಗಿಸಿದೆ. ಹೀಗಾಗಿಯೇ ಅವ್ವಯ್ಯ ಕೇವಲ ಧೀರೋದಾತ್ತ ಹೆಣ್ಣುಪಾತ್ರವಾಗಿ ಚಿತ್ರಣವಾಗುವುದು ತಪ್ಪಿದೆ. ಮನಸ್ಸಿನ ಬೆಳವಣಿಗೆ, ವ್ಯಕ್ತಿತ್ವದ ಪಕ್ವತೆ, ಧೋರಣೆಗಳ ಮಾಗುವಿಕೆ ಮುಂತಾದವುಗಳೆಲ್ಲ ಅವ್ವಯ್ಯನ ಪಾತ್ರದಲ್ಲಿ ಒಂದು ಸಹಜ ಕ್ರಮದಲ್ಲಿ ನಡೆಯುವುದನ್ನು ಕಾದಂಬರಿಕಾರರು ಚಿತ್ರಿಸಿದ್ದಾರೆ.

ಅವ್ವಯ್ಯ ಗಡಸುಗಾರ್ತಿಯಾದ ಮಹಿಳೆ ಮಾತ್ರವಾಗಿದ್ದಿದ್ದರೆ ಅದು ಕೃತಕಗೊಂಡುಬಿಡುವ ಅಪಾಯಕ್ಕೀಡಾಗುತ್ತಿತ್ತು. ಆಗಿನ ಸನ್ನಿವೇಶದ ಹೆಣ್ತನದ ಮಾರ್ದವತೆ, ಸಮಾಜ ಒಡ್ಡುವ ಸವಾಲಿನೆದುರು ಗಟ್ಟಿಯಾಗುವ ದಿಟ್ಟತೆ ಇವೆರಡರ ಸಂಯೋಜನೆಯಲ್ಲಿ ಅವ್ವಯ್ಯ ಕಾಣಿಸಿಕೊಳ್ಳುತ್ತಾಳೆ. ಹೋರಾಟದ ಹಂಬಲದ ಗಂಡನ ಬಗ್ಗೆ ಮುನಿಸು, ಅದೇ ಸಮಯದಲ್ಲಿ ದಾಯಾದಿಗಳ ಉಪಟಳಕ್ಕೆ ಅತ್ಯಂತ ಧೈರ್ಯದ ಪ್ರತಿಕ್ರಿಯೆ ಇಂತಹವುಗಳ ಮೊತ್ತವಾಗಿ ಕಂಡುಬರುವ ತಾರುಣ್ಯದ ಅವ್ವಯ್ಯ, ಮಗ ಗುರುರಾಜನ ಯೌವ್ವನದ ಹೊತ್ತಿಗೆ ನ್ಯಾಯಾನ್ಯಾಯ ಪ್ರಜ್ಞೆಯುಳ್ಳ ಸಮಚಿತ್ತದ ಮಹಿಳೆಯಾಗಿದ್ದಾಳೆ. ಜೀವನಾನುಭವದ ಝಳ, ಮಾಗಿದ ವಯಸ್ಸಿನ ವಿವೇಕ ಇವೆಲ್ಲ ಸೇರಿ ಅವ್ವಯ್ಯನಂತಹ ಒಂದು ಗ್ರಾಮೀಣ ಸ್ತ್ರೀಯನ್ನು ನಿರ್ಮಾಣಮಾಡಿವೆ.

ಅವ್ವಯ್ಯನ ಬಾಲ್ಯ ಹಾಗೂ ಬೆಳವಣಿಗೆಯ ವಿವರಗಳನ್ನು ಕಾ.ತ. ಚಿಕಣ್ಣನವರು ಕಟ್ಟಿಕೊಟ್ಟಿರುವ ರೀತಿ ಅನನ್ಯವಾದುದಾಗಿದೆ. ಗ್ರಾಮೀಣ ಪರಿಸರದಲ್ಲಿ ಹೆಣ್ಣಾಗಿ ಬೆಳೆಯುವ ಅವ್ವಯ್ಯನ ಅನುಭವಲೋಕ, ಆ ಬಗೆಯ ಹುಡುಗಿಯರ ಬಾಲ್ಯವನ್ನು ಗಮನಿಸಲು ಒಂದು ಮಾದರಿಯಂತಿದೆ. ದನ ಕಾಯಲು ಹೋದಾಗ ಹುಡುಗರ ಜೊತೆ ಸ್ಪರ್ಧೆಗಿಳಿಯುವುದು ಅಂತಹದರಲ್ಲೊಂದು. ನಿಸರ್ಗದತ್ತವಾಗಿ ಹೆಣ್ಣು-ಗಂಡಿನ ದೇಹ ರಚನೆಯಲ್ಲಿರುವ

ವ್ಯತ್ಯಾಸವನ್ನೂ ಅರಿತಿರದ ಮುಗ್ಧ ವಯಸ್ಸಿನ ಬಾಲಕಿ ಹುಡುಗರ ಜೊತೆ ದೂರಕ್ಕೆ ಉಚ್ಚೆ ಹಾರಿಸುವ ಪಂಥಕಟ್ಟಿ ಸೋಲುವುದು, ಅವಳ ತೊಡೆ ಭಾಗದಲ್ಲಿರುವ ಬಿಳಿ ಮತ್ತಿಯನ್ನು ಇಂತಹದೇ ಚೇಷ್ಟೆ ಪಂಥವೊಂದರಲ್ಲಿ ಪೋಲಿ ಹುಡುಗನಾದ ಘನಲಿಂಗು ನೋಡುವುದು. ತೊಡೆಯ ಮೇಲಿರುವ ಬಿಳಿ ಮತ್ತಿಯನ್ನು ಯಾರೂ ಕಾಣಬಾರದು, ಇದರಿಂದ ಮದುವೆ ಸಂಬಂಧ ಕುದುರಲು ಅಡ್ಡಿಯಾಗುತ್ತದೆ ಎಂಬ ಮೂಢನಂಬಿಕೆಯಲ್ಲಿರುವ ತಾಯಿ ಹಾಗೂ ತಂದೆ ಕಳವಳಪಡುವುದು ಮುಂತಾದವುಗಳೆಲ್ಲ ಗ್ರಾಮೀಣ ಜೀವನಾನುಭವದ ಸತ್ಯಗಳನ್ನು ಕಟ್ಟಿಕೊಡುತ್ತವೆ. ಜನಪದರ ನಂಬಿಕೆಗಳು, ನಡವಳಿಕೆಗಳು, ಅವುಗಳ ಆವರಣದಲ್ಲಿ ಹುಡುಗಿಯಾಗಿ ಹುಟ್ಟಿದ ತಪ್ಪಿಗೆ ನವೆಯುವ ಬಾಲ್ಯದ ಚೈತನ್ಯಗಳು ಈ ಕಾದಂಬರಿಯಲ್ಲಿ ಬಂದಿರುವ ರೀತಿ ಪರಿಣಾಮಕಾರಿಯಾಗಿದೆ.

ಬಾಲ್ಯದಿಂದ ಹದಿವಯಸ್ಸಿಗೆ ಕಾಲಿಡುವ ಅವ್ವಯ್ಯ ಅನುಭವಿಸುವ ಕೋಟಲೆ ಗ್ರಾಮೀಣ ಸಮಾಜದ ಹದಿವಯಸ್ಸಿನ ಹುಡುಗಿಯರು ಎದುರಿಸುವ ಅನುಭವದ ಕರಾಳತೆಯನ್ನು ಬಿಂಬಿಸುತ್ತದೆ. ಮರ ಹತ್ತಲು ನೆರವಾಗುವುದಾಗಿ ಹೇಳಿ ಮೈಕೈ ಮುಟ್ಟಿ ಕಿರುಕುಳ ಕೊಡುವ ಧಾಂಡಿಗನೊಬ್ಬ, ಹೊಲದಲ್ಲಿ ಕಣ ನಡೆಯುತ್ತಿರುವಾಗ ಬಿರುಗಾಳಿ ಏಳುವ ಸಂದರ್ಭ ಕಾದು, ಹುಲ್ಲು ಮೆದೆಯೊಳಕ್ಕೆ ಎಳೆದುಕೊಂಡು ಎದೆ, ತೊಡೆ ಸವರಿ ಘಾಸಿ ಮಾಡುವ ದುರುಳನೊಬ್ಬ, ತಂದೆ ಮನೆಯಲ್ಲಿಲ್ಲದ ಸಮಯ ಕಾದು ರಾತ್ರಿ ಸಂಗಡಿಗರೊಂದಿಗೆ ಮನೆಗೆ ನುಗ್ಗಿ ಕದ್ದೊಯ್ದು ಕೆಡಿಸಲು ನೋಡುವ ಪುಂಡರು, ಒಳತೊಡೆಯ ಮತ್ತಿಯನ್ನು ನಾನು ನೋಡಿದ್ದೇನೆ ಎಂದು ಪೋಲಿ ಪ್ರಚಾರ ನಡೆಸುವ ಅಪಾಪೋಲಿ ಘನಲಿಂಗು ಮುಂತಾದ ಕೋಟಲೆಗಳ ವರ್ಣನೆಗಳು ಹದಿವಯಸ್ಸಿನ ಹುಡುಗಿಯೊಬ್ಬಳು ಅನುಭವಿಸಬಹುದಾದ ಕಿರುಕುಳಗಳ ಯಥಾರ್ಥ ಚಿತ್ರಣವಾಗಿದೆ.

'ದಂಡೆ' ಮಹಿಳಾ ಭೂಮಿಕೆಯಿಂದ ಬದುಕನ್ನು ಅರ್ಥೈಸುತ್ತಾ ಹೋಗುವುದು. ಅವ್ವಯ್ಯ ಇಡೀ ಕಥಾನಕದ ಕೇಂದ್ರಪಾತ್ರವಾಗಿ ತನ್ನ ನೆನಪುಗಳು ಹಾಗೂ ಅನಿಸಿಕೆಗಳ ಮೂಲಕ ವಿದ್ಯಮಾನದ ಚಿತ್ರಣ ಕೊಡುವುದು ಕಾದಂಬರಿಗೆ ಒಂದು ವಿಶೇಷ ಧ್ವನಿ ಸಾಧ್ಯತೆಯನ್ನು ಕೊಟ್ಟಿದೆ.

ಹೆಣ್ಣಿನ ಮನಸಿನ ಮರ್ಮ ಅರಿಯಲು ಸಾಧ್ಯವಿಲ್ಲ ಎಂಬ ಮಾತಿಗೆ ವಿರುದ್ಧವಾಗಿ ಇಲ್ಲಿ ಅವ್ವಯ್ಯನ ಒಳಮನಸ್ಸಿನ ಹೊಯ್ದಾಟಗಳು ಅನಾವರಣಗೊಂಡಿವೆ. ಬಾಲ್ಯದಲ್ಲೇ ಅವಳ ಮನಸ್ಸಿಗೆ ಮುದ ಕೊಡುವ ಸಂಗಾತಿಯಾಗಿದ್ದ ಚಂದ್ರು ಹಾಗೂ ಅವನ ಬಾಲಸಹಜ ಆಟಗಳು ಅವಳಿಗೆ ಖುಷಿಯ ನೆನಪುಗಳಾಗಿವೆ.

"ಆ ನೇರಳೆ ತೋಪಿನಂಡಿ ಸ್ಲೇಟು ಪುಸ್ತಕಗೊಳ ಕಳ್ಳಿ ಚೀಲಗೊಳನ್ನೆಲ್ಲ ಒಗೆದು, ಎರೆಡು ಗುಂಪುಗೊಳು ಚಿಣ್ಣಿ-ದಾಂಡು ಆಡುತ್ತಿದ್ದರೆ ಆ ಚಂದ್ರುವೇ ಗೆಲ್ಲಬೇಕೆಂಬ ಆಸೆ, ಅವನು ಕತೆ ಹೇಳುತ್ತಾ ಹೊಳೆ ದಂಡೆ ಬಾಜು ಹಾದೀಲಿ ನಡೆದರೆ ಅವನಗುಂಟೇ ಹೆಜ್ಜೆ ಹಾಕಬೇಕು ಅನ್ನೋ ಬಯಕೆ... ಒಂದು ದಿವಸವೇನಾದರೂ ಅವನು ತಪ್ಪಿಸಿಕೊಂಡರೆ ಆ ಮಠ, ತೋಪು, ಹೊಳೆ ದಂಡೆ ಎಲ್ಲವೂ ಒಣಗಿದಂತೆ! ಅವನ ನುಣುಪು ಕೆನ್ನೆಯ ಗುಳಿ, ಮಿಂಚೋ ಕಣ್ಣುಗಳನ್ನು ಹೊಂಚು ಹಾಕಿ ನೋಡದಿದ್ದರೆ ಏನನ್ನೋ ಕಳಕೊಂಡಂಗೆ".



ಕಾ.ತ ಚಿಕ್ಕಣ್ಣ

ಈ ಪಂಕ್ತಿಯ ಕಡೆಯ ಸಾಲುಗಳು ಪೂರ್ಣವಾಗಿ ಅತ್ತ ಬಾಲ್ಯವೂ ಅಲ್ಲದ, ಹದಿವಯಸ್ಸೂ ಅಲ್ಲದ ಬಾಲಕಿಯ ಚಿತ್ತದೊಳಗಿನ ತರಂಗಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಹೇಳುತ್ತಿವೆ. ಇಲ್ಲಿರುವುದು ಕಾಮವಲ್ಲ, ಹಾಗಂತ ಗಂಡು ಹುಡುಗನನ್ನು ಕೇವಲ ಆಟಪಾಠದ ಸಹಪಾಠಿ ಎಂದು ಭಾವಿಸುವುದನ್ನು ಮೀರಿರುವ ಮೆಚ್ಚುಗೆ ಇದರಲ್ಲಿಲ್ಲ ಎಂದು ಹೇಳಲೂ ಬರುವುದಿಲ್ಲ. ಅಂತಹದೊಂದು ವಯಸ್ಸಿನಲ್ಲಿ ಅವ್ವಯ್ಯನ ಮನದಲ್ಲಿ ಮೊಳೆತ ಆರಾಧನೆ ಅದು.

ರಾಯಣ್ಣ ಗಂಡನಾದರೂ ಕೇವಲ ಅತಿಥಿ, ಅದೂ ಹೇಳದೇ ಕೇಳದೆ ಹೊರಟುಹೋಗುವ, ತನ್ನನ್ನು ನಿರೀಕ್ಷೆಗಳಲ್ಲೇ ಕಾಲ ಕಳೆಯುವಂತೆ ಮಾಡುವ ಸಂಗಾತಿ ಎನಿಸಿದಾಗ ಮತ್ತೆ ಮತ್ತೆ ಚಲುವರಾಜು ನೆನಪಿಗೆ ಬರುವುದು ಅತ್ಯಂತ ಹೃದಯ ಸ್ಪರ್ಶಿಯಾಗಿದೆ. ಕೈಗೆಟುಕದ, ಕೇವಲ ಮನೋರಂಗದಲ್ಲಿ ಮಾತ್ರ ಜೀವಂತವಾಗಿರುವ ಚಲುವರಾಜು ಆಕೆಯ 'ಚನ್ನಮಲ್ಲಿಕಾರ್ಜುನ'. ಗಂಡನ ಸಾಮೀಪ್ಯ ದಕ್ಕದೆ ಹತಾಶಳಾದ ಗಳಿಗೆಯಲ್ಲಿ ಅವಳು ತನ್ನ ಮನೆಯಲ್ಲೇ ಕೆಲಸಕ್ಕಿರುವ, ಆದರೆ ಮನೆ ಮಗನಂತಹ ನಿಷ್ಠೆ ಹೊಂದಿದ ಬೀರಪ್ಪನನ್ನು ಕೂಡಿದರೆ ಸರಿ ಹೋಗಬಹುದೇ ಎಂಬ ಆಲೋಚನೆಯನ್ನು ಮಾಡುತ್ತಾಳೆ. ಈ ಆಲೋಚನೆಯಲ್ಲೊಂದು ಬಂಡೇಳುವ ಪ್ರವೃತ್ತಿಯೂ ಇದೆ.

ನಂತರದ ಘಟ್ಟ ಸ್ಪಷ್ಟವಾಗಿ ಹರೆಯಕ್ಕೆ ಸಂಬಂಧಪಟ್ಟದ್ದು. ಅವಳನ್ನು ಕಾಡಿಸುವ, ಪೀಡಿಸುವ ಅಪಾಪೋಲಿಗಳು ಅವಳ ಮನಸ್ಸಿಗೆ ಇಳಿಯಲಿಲ್ಲ. ವಿಜಾತೀಯನಾದ ಆದರೆ ಗುಣದಿಂದ, ರೂಪದಿಂದ ಮನ ಸೆಳೆಯುವ, ತನ್ನ ಮೇಲೆ ಪ್ರೀತಿಯಿದೆ ಅಥವಾ ಇಲ್ಲ ಎಂಬುದನ್ನೂ ಹೇಳದ ಚಲುವರಾಜು ಅವ್ವಯ್ಯನ ತಾರುಣ್ಯದ ಅಭಿಮಾನಕ್ಕೆ ಪಾತ್ರನಾಗುತ್ತಾನೆ. ತನ್ನ ಒಳತೊಡೆಯಲ್ಲಿರುವ ಬಿಳಿಮತ್ತಿಯ ಕಾರಣದಿಂದಲೇ ಮದುವೆ ಸಂಬಂಧಗಳು ಕೂಡಿಬರುತ್ತಿಲ್ಲ ಎಂದು ತಾಯಿ-ತಂದೆ ಚಿಂತಿತರಾಗಿರುವಾಗ, ಆ ಚಲುವರಾಜುವನ್ನೇ ಮದುವೆಯಾದರೆ ಹೇಗೆ ಎಂದು ಅವ್ವಯ್ಯ ಯೋಚಿಸುತ್ತಾಳೆ. ಅವಳ ಸಖಿಯೊಬ್ಬಳು ಈ ಆಲೋಚನೆಯನ್ನು ಗಟ್ಟಿಯಾಗಿ ವಿರೋಧಿಸಿರದಿದ್ದರೆ, ತನ್ನ ತಾಯ್ತಂದೆಯರು ಎದೆಯೊಡೆದು ಸತ್ತುಬಿಡಬಹುದೆಂಬ ಭಯ ಅವಳನ್ನು ಕಾಡಿಲ್ಲದಿದ್ದರೆ ಈ ಪ್ರಸ್ತಾಪವನ್ನು ಅವಳು ತಾಯಿಯ ಜೊತೆಗೆ ಹಂಚಿಕೊಳ್ಳಲು ಸಿದ್ಧಳಿದ್ದಳು. ಆದರೆ ಜಾತಿ ಕಟ್ಟಳೆ ಅದನ್ನು ಹತ್ತಿಕ್ಕಿಬಿಟ್ಟು ಚಲುವರಾಜು ಕೇವಲ ಅವಳ ಮನಸ್ಸಿನೊಳಗೆ ಎಂದೂ ಸ್ಪರ್ಶಕ್ಕೆ ದಕ್ಕದ ಆಕಾಶದ ಚಂದ್ರಮನಾಗಿಯೇ ಉಳಿದುಬಿಡುತ್ತಾನೆ.

ರಾಯಣ್ಣನಂತಹ ಸುಂದರ, ಸರಸಿ ಗಂಡನನ್ನು ಮದುವೆಯಾಗಿ ಆ ಆಕಾಶದ ಚಂದ್ರ ಇವನ ಮೂಲಕ ಕೈಗೆ ಸಿಕ್ಕಿದ ಎಂದುಕೊಳ್ಳುವಷ್ಟರಲ್ಲಿ ರಾಯಣ್ಣ ಗಂಡನಾದರೂ ಕೇವಲ ಅತಿಥಿ, ಅದೂ ಹೇಳದೇ ಕೇಳದೆ ಹೊರಟುಹೋಗುವ, ತನ್ನನ್ನು ನಿರೀಕ್ಷೆಗಳಲ್ಲೇ ಕಾಲ ಕಳೆಯುವಂತೆ ಮಾಡುವ ಸಂಗಾತಿ ಎನಿಸಿದಾಗ ಮತ್ತೆ ಮತ್ತೆ ಚಲುವರಾಜು ನೆನಪಿಗೆ ಬರುವುದು ಅತ್ಯಂತ ಹೃದಯ ಸ್ಪರ್ಶಿಯಾಗಿದೆ.

ಕೈಗೆಟುಕದ, ಕೇವಲ ಮನೋರಂಗದಲ್ಲಿ ಮಾತ್ರ ಜೀವಂತವಾಗಿರುವ ಚಲುವರಾಜು ಆಕೆಯ 'ಚನ್ನಮಲ್ಲಿಕಾರ್ಜುನ'. ಗಂಡನ ಸಾಮೀಪ್ಯ ದಕ್ಕದೆ ಹತಾಶಳಾದ ಗಳಿಗೆಯಲ್ಲಿ ಅವಳು ತನ್ನ ಮನೆಯಲ್ಲೇ ಕೆಲಸಕ್ಕಿರುವ, ಆದರೆ ಮನೆ ಮಗನಂತಹ ನಿಷ್ಠೆ ಹೊಂದಿದ ಬೀರಪ್ಪನನ್ನು ಕೂಡಿದರೆ ಸರಿ ಹೋಗಬಹುದೇ ಎಂಬ ಆಲೋಚನೆಯನ್ನು ಮಾಡುತ್ತಾಳೆ. ಈ ಆಲೋಚನೆಯಲ್ಲೊಂದು ಬಂಡೇಳುವ ಪ್ರವೃತ್ತಿಯೂ ಇದೆ.

"ತಲೆದಿಂಬು ಎದೆಗವಚಿಕೊಂಡು, ತೊಡೆ ಸಂಧಿಗೆ ಕೈ ತೂರಿಸಿ, ಆಚೆ ಕೋಣೇಲಿ ನಡೆದ ಅತ್ತೆಯ ನಲ್ಲಾಟಕ್ಕೆ ಕಿಚ್ಚುಹಚ್ಚೋವಂಗೆ, ಇವರ ಒಕ್ಕಲುತನದ ಐಭೋಗಕ್ಕೆ ಸಿಡಿಲು ಹೊಡೆಯೋಹಂಗೆ ಬೇರೊಬ್ಬನ ಕೂಡಿ ಇವರ ವಂಚನೆಗೆ ಪ್ರತೀಕಾರ ತೀರಿಸಿಬಿಡೋ ಸಿಟ್ಟು, ಸೆಡವು. ದೇಹದ ಕಾವು ಅದೇಟು ಇರುಳುಗೊಳ ಕತ್ತಲೇಲಿ ಉಕ್ಕುಕ್ಕಿ ಹೊರಚೆಲ್ಲಿ ಹೋಗಿಲ್ಲ".

ಆದರೆ ಬೀರಪ್ಪನಿಗೆ ಈಕೆಯ ಬಗ್ಗೆ ದೇವಿಯೆಂಬಂತೆ ಗೌರವ. ಅವ್ವಯ್ಯನಿಗೂ, ಬೀರಪ್ಪನ ಬಗ್ಗೆ ಮಮಕಾರ ಮೆಚ್ಚುಗೆ. ಆದರೆ ತನ್ನ ಗಡಿ ಮೀರಲು ಎಂದೂ ಮುಂದಾಗದ ಸಂಯಮ. ಅವ್ವಯ್ಯನ ಪಾತ್ರವನ್ನು ಕಾ.ತ. ಚಿಕ್ಕಣ್ಣ ಅತ್ಯಂತ ಕಲಾತ್ಮಕ ವಾಸ್ತವವಾದದ ವಿಧಾನದಲ್ಲಿ ಕಟ್ಟಿಕೊಟ್ಟಿದ್ದಾರೆ. ಇದು ಪ್ರಯತ್ನಪೂರ್ವಕ ನಿರ್ಮಾಣವೇ ಆಗಿರಬಹುದೆಂದು ನಾವು ವಾದ ಹೂಡಬೇಕಾಗಿಯೂ ಇಲ್ಲ. ಕಥನಕಾರ ತನ್ನ ಕಥಾನಕದ ಪಾತ್ರಗಳ ಬಗ್ಗೆ ಆರೋಗ್ಯಕರ ಅಂತರವನ್ನು ಉಳಿಸಿಕೊಂಡು ಕಥಾ ನಿರ್ಮಾಣದಲ್ಲಿ ತೊಡಗಬಲ್ಲನಾದರೆ ಪಾತ್ರಗಳು ಹೀಗೆ ಸಹಜತೆಯ ನೆಲೆಯಲ್ಲಿ ಅರಳಿಕೊಳ್ಳುವುದು

ಅಸಂಭವವೇನೂ ಅಲ್ಲ. ಇನ್ನೂ ಮದುವೆಯಾಗದ ತಾರುಣ್ಯದಲ್ಲಿ ಅವ್ವಯ್ಯ ಚಲುವರಾಜುವನ್ನು ಮನದಲ್ಲೇ ಮೆಚ್ಚಿ ಪ್ರೇಮಿಸಿದ ವಿದ್ಯಮಾನದಲ್ಲಿ ಹೆಚ್ಚು ಮಹತ್ವ ವಿರಲಾರದು. ಹೆಚ್ಚೆಂದರೆ ವಿಜಾತೀಯನೊಬ್ಬನನ್ನು ಮೆಚ್ಚಿ ಮದುವೆಯಾಗುವ ಹಂಬಲ ವ್ಯಕ್ತಗೊಳಿಸುವಷ್ಟು ನಿಸರ್ಗ ಸಹಜ ತತ್ವದವಳು ಮತ್ತು ಉದಾರ ಚಿಂತನೆಯವಳು ಎಂಬುದಕ್ಕೆ ಒಂದು ಸುಳಿವಾಗಿ ಅದು ಕೆಲಸ ನಿರ್ವಹಿಸ ಬಹುದು. ಆದರೆ ಅವ್ವಯ್ಯ ಮದುವೆಯಾದ ಮೇಲೆ ಗಂಡ ರಾಯಣ್ಣನ ಅನುಪಸ್ಥಿತಿಯಲ್ಲಿ ಚಲುವರಾಜುವನ್ನು ಕನಸುವುದು ಹಾಗೂ ಬೀರಪ್ಪನನ್ನು ದೈಹಿಕ ಕಾಮನೆಗಾಗಿ ಕೂಡಿದ್ದಿದ್ದರೆ ಏನು ತಪ್ಪಿತ್ತು ಎಂದು ಆಲೋಚಿಸುವುದು ಮಾತ್ರ ಮನೋಸತ್ಯಗಳ ಬಗ್ಗೆ ಕಾದಂಬರಿಕಾರರಿಗಿರುವ ನಿರ್ಮಮಕಾರವಾದ ಅವಲೋಕನವನ್ನು ಬಿಂಬಿಸುತ್ತದೆ. ಇಂತಹ ಸಂದರ್ಭದಲ್ಲಿಯೇ ಕಾದಂಬರಿ ತನ್ನ ಜೀವನಿಷ್ಠ ನಿಲುಮೆಯನ್ನು ವ್ಯಕ್ತಪಡಿಸುತ್ತದೆ.

ಈ ಅಂಶದ ಬಗ್ಗೆ ಹೇಳುವಾಗ ಒಂದು ವಿಮರ್ಶೆಯ ಪ್ರಶ್ನೆ ಕೂಡ ಹುಟ್ಟುವುದಕ್ಕೆ ಅವಕಾಶವಿದೆ ಎಂಬುದನ್ನು ಮರೆಯಬಾರದು. ಅವ್ವಯ್ಯ ತನ್ನ ವಿವಾಹ ಪೂರ್ವ ಪ್ರೇಮದಲ್ಲಾಗಲೀ, ವಿವಾಹಾನಂತರದ ಸುದೀರ್ಘ ಜೀವನದಲ್ಲಿ–ಮೊದಲಲ್ಲಿ ಗಂಡನ ಸತತ ಗೈರುಹಾಜರಿ, ನಂತರದಲ್ಲಿ ವಿಧವೆಯಾಗಿ ಬಾಳು ನೂಕುವ ಪರಿಸ್ಥಿತಿ–ಇವುಗಳಲ್ಲಿ ಆಕೆಗೆ ಕಾಮನೆಯ ಚಿಂತನೆಗಳು ಬಂದುಹೋಗುವುದು ನಿಜವಾದರೂ ಅದೆಲ್ಲೂ ನಿಜದ ದೇಹ ಸಂಬಂಧವಾಗಿ ಸಂಭವಿಸುವುದಿಲ್ಲ. ಚಿಂತನೆಯ ಮಟ್ಟಿಗೆ ಆಕೆಯೊಳಗಿದ್ದ ನೈಸರ್ಗಿಕ ಕ್ರಾಂತಿಕಾರತ್ವ ದೇಹ ಸಂಬಂಧದ ಕ್ರಿಯೆಯಾಗಿ ಸಂಭವಿಸುವ ಸಂದರ್ಭ ಏರ್ಪಡಲಿಲ್ಲ ಅಥವಾ ಆ ಬಗೆಯ ಯೋಚನೆಗಳೆಲ್ಲ ಸುಳಿದುಹೋದ ತಲ್ಲಣಗಳೇ ಹೊರತು ಸ್ಥಾಯಿ ಆಲೋಚನೆಗಳಲ್ಲ ಎಂದು ಬಗೆಯಲು ಸಾಧ್ಯವಿದೆ. ಆದರೆ ವಾಸ್ತವದಲ್ಲಿ ಅವ್ವಯ್ಯನಿಗೆ ವಿವಾಹೇತರವಾದ ಲೈಂಗಿಕ ಸಂಬಂಧವೊಂದು ಏರ್ಪಟ್ಟುಬಿಟ್ಟಿದ್ದರೆ, ಅದು ಆ ಪಾತ್ರದ ಪಾವಿತ್ರ್ಯಕ್ಕೆ, ಘನತೆಗೆ ಚ್ಯುತಿಯುಂಟುಮಾಡಬಹುದೆಂಬ ಕೃತಿಕಾರನ ಎಚ್ಚರವೂ ಇಲ್ಲಿ ಕೆಲಸ ಮಾಡಿರಬಹುದೇ ಎಂಬ ಆಲೋಚನೆ ಹುಟ್ಟುತ್ತದೆ. ದೈಹಿಕ ಸಂಬಂಧಗಳಲ್ಲಿ ಒಮ್ಮೆ ಗಡಿದಾಟಿ ವರ್ತಿಸಿದ್ದೇ ಆದಲ್ಲಿ ಅಂತಹ ಹೆಣ್ಣು ಪಾತ್ರಗಳು ಅವ್ವಯ್ಯನಂತಹ ಪಾತ್ರವಾಗಿ ಸ್ವೀಕೃತಿಗೊಳ್ಳುವುದು ಓದುಗ ವಲಯಕ್ಕೆ ರುಚಿಸದಿರಬಹುದು ಎಂಬುದೇನಾದರೂ ಇದರ ಹಿನ್ನೆಲೆಯಲ್ಲಿ ಸುಪ್ತವಾಗಿ ಕ್ರಿಯಾಶೀಲವಾಗಿರಬಹುದೇ ಎಂಬುದನ್ನು ಮತ್ತಷ್ಟು ಚರ್ಚೆಗೊಳಪಡಿಸಬೇಕಾಗಿದೆ.

ದಂಡೆ ಕಾದಂಬರಿಯಲ್ಲಿ ಬರುವ ಗಿರಿಜೆ ಮತ್ತು ಪ್ರಭುಸ್ವಾಮಿ ಇವರ ಪ್ರೇಮ ಪ್ರಸಂಗದಲ್ಲೂ ಈ ಬಗೆಯದೊಂದು ಊಹಾತ್ಮಕ ಜಿಜ್ಞಾಸೆ ನಡೆಸಲು ಸಾಧ್ಯವಿದೆ. ಗಿರಿಜೆ ಬೇಡರ ಜಾತಿಯವಳು. ಪ್ರಭುಸ್ವಾಮಿ ಬ್ರಾಹ್ಮಣರ ಜಾತಿಗೆ ಸೇರಿದ ಹುಡುಗ. ಬ್ರಾಹ್ಮಣ ಹುಡುಗರು ಕೆಳ ಜಾತಿಯ ಹುಡುಗಿಯರನ್ನು ಮದುವೆಯಾಗುವುದು ಅಪರೂಪಕ್ಕೆ ನಮ್ಮ ಸಮಾಜದಲ್ಲಿ ಸಂಭವಿಸುವ ಘಟನೆ. ಸಾಮಾನ್ಯವಾಗಿ ಚಿಕ್ಕ ಹಳ್ಳಿಗಳಲ್ಲಿ ಅದು ಇನ್ನೂ ಕಮ್ಮಿ. ಕಾದಂಬರಿಕಾರರು ಪ್ರಭುಸ್ವಾಮಿಯನ್ನು ಹಾರವರ ಜಾತಿಗೆ ಸೇರಿದಂತೆ ಚಿತ್ರಿಸಿರುವುದು ಉದ್ದೇಶಪೂರ್ವಕವೋ, ಅಲ್ಲವೋ ಗೊತ್ತಿಲ್ಲ. ಬ್ರಾಹ್ಮಣ ಜಾತಿಯವರೂ ಸೇರಿದಂತೆ ಈ ಬದಲಾವಣೆಯ ಪ್ರಕ್ರಿಯೆಯಲ್ಲಿ ಎಲ್ಲರೂ ಪಾಲ್ಗೊಳ್ಳು

ಕಾದಂಬರಿಯೊಳಗೆ ಒಂದು ರಾಜಕೀಯ ಪ್ರಜ್ಞೆ ಇದೆ. ಆದರೆ ಅದು ಅವ್ವಯ್ಯ ಮತ್ತು ಆಕೆಯ ಹಿಂದಲ ಮುಂದಣ ತಲೆಮಾರಿನವರ ಖಾಸಗಿ ಜೀವನ ಕತೆಯನ್ನು ಹೇಳುವುದಕ್ಕೆ ಅಡ್ಡಿಯುಂಟುಮಾಡಿದೆ ಎನ್ನುವಂತಿಲ್ಲ. ಮಹಿಳೆಯರ ಜಾಗೃತಿಯಲ್ಲಿ ಬಂದ ಕ್ರಮಾನುಗತ ಮುನ್ನಡೆಯ ಹಾದಿಯನ್ನು ಈ ಕಾದಂಬರಿ ಚಿತ್ರಿಸುತ್ತಿದೆ. ಅವ್ವಯ್ಯನ ಅವ್ವ ದೊಡ್ಡೆ ರಾಜಕೀಯ ಪ್ರಜ್ಞೆಯಿಂದ ಅಥವಾ ಸಾಮಾಜಿಕ ಸಮಾನತೆಯ ಪ್ರಜ್ಞೆಯಿಂದ ಬದುಕಿನ ಸಂಘರ್ಷವನ್ನು ನಡೆಸುವುದಿಲ್ಲ. ಹೆಣ್ಣು ಮಗುವನ್ನೇ ಗಂಡು ಎಂದು ತಿಳಿದು ಬೆಳೆಸಿದರಾಯಿತು ಎಂಬ ನಿಲುವು, ತನ್ನ ಕೊನೆ ಮಗಳು ನಾಲ್ಕಕ್ಷರ ಕಲಿಯಲಿ ಎಂಬ ನಿರ್ಧಾರಗಳು ಆಕೆಯೊಳಗೆ ಕ್ರಿಯಾಶೀಲವಾಗುತ್ತಿರುವ ಸುಧಾರಣಾವಾದಿ ಪ್ರಜ್ಞೆಗೆ ಸಂಕೇತವಾಗಿವೆ.

ತ್ತಿರುವ ಸನ್ನಿವೇಶ ರೂಪಿಸಬೇಕೆಂಬುದು ಅವರ ಆಶಯವಾಗಿದೆಯೋ ಅಥವಾ ಹುಡುಗನನ್ನು ಲಿಂಗಾಯತ ಅಥವಾ ಒಕ್ಕಲಿಗ ಅಥವಾ ಇನ್ನಾವುದೋ ಇತರೆ ಮೇಲ್ಜಾತಿಗಳಿಗೆ ಸೇರಿದವನೆಂಬಂತೆ ಚಿತ್ರಿಸಿದರೆ ಕಾದಂಬರಿಯ ವಸ್ತು ಬೇರೊಂದು ತಿರುವಿನೆಡೆಗೆ ಹರಿಯುವಂತಾಗುತ್ತದೆ ಎಂಬ ಮುಂಜಾಗರೂಕತೆಯೋ ಗೊತ್ತಿಲ್ಲ.

ಯಾಕೆಂದರೆ ಕಾದಂಬರಿಯಲ್ಲಿ ಗಿರಿಜೆಯನ್ನು ಪ್ರಭುಸ್ವಾಮಿ ಮದುವೆಯಾಗುವುದು ಊರಿನ ಪಟ್ಟಭದ್ರರಿಗೆ ಇಷ್ಟವಿಲ್ಲ. ಅಕಸ್ಮಾತ್ ಪ್ರಭುಸ್ವಾಮಿ ತೋಳ್ಬಲವುಳ್ಳ ಮೇಲ್ಜಾತಿಗೆ ಸೇರಿದವನೆಂಬಂತೆ ಚಿತ್ರಣಗೊಂಡಿದ್ದರೆ ಆಗ ಜಾತಿ ಹೊಡೆದಾಟದ ಚಿತ್ರಣವನ್ನು ತರಬೇಕಾಗುತ್ತದೆ. ಆಗ ಸಂಘರ್ಷದ ಚಿತ್ರ ಆ ಊರಿನ ವ್ಯಾಪ್ತಿಗೇ ಸೀಮಿತಗೊಳ್ಳುವ ಒತ್ತಡಕ್ಕೆ ಸಿಲುಕಬೇಕಾಗುತ್ತದೆ. ಈ ಬಗೆಯ ಪೇಚುಗಳೇ ಬೇಡ ಎಂಬ ಕಾರಣಕ್ಕೆ ಬ್ರಾಹ್ಮಣ ಹುಡುಗ–ಬೇಡರ ಹುಡುಗಿ ಎಂಬ ಜಾತಿ ಸಮೀಕರಣಕ್ಕೆ ಮುಂದಾಗಿರಬಹುದೇ ಎನಿಸುವುದು ಕೂಡ ಸಾಧ್ಯವಿದೆ.

ಕೆಲವು ಘಟನಾವಳಿಗಳ ಸಂದರ್ಭದಲ್ಲಿ ಕಾದಂಬರಿಯ ನಡಿಗೆ ರಮ್ಯಾತ್ಮಕವಾಗಿದೆ ಎಂದುಕೊಂಡರೂ ಕೂಡ 'ದಂಡೆ' ಕಾದಂಬರಿಯು ಒಟ್ಟಾರೆಯಾಗಿ ಒಂದು ಕಾಲಖಂಡದ ಚಿತ್ರಣವನ್ನು ಯಶಸ್ವಿಯಾಗಿ ಮಂಡಿಸಿದೆ. ಸ್ವಾತಂತ್ರ್ಯ ಬರುವುದರಲ್ಲಿದ್ದ ಕಾಲಘಟ್ಟ ಹಾಗೂ ಸ್ವಾತಂತ್ರ್ಯ ಬಂದ ಮೇಲೆ ಉಂಟಾಗಿರುವ ಪರಿಸ್ಥಿತಿಗಳ ಗ್ರಹಿಕೆ ಒಟ್ಟಾರೆಯಾಗಿ ಎಡಪಂಥೀಯ ಚಿಂತನೆಯ ನೆಲೆಯನ್ನು ಆಧರಿಸಿದೆ. ಸ್ವಾತಂತ್ರ್ಯ ಸಮರದಲ್ಲಿ ಕೇವಲ ಗಾಂಧಿವಾದಿಗಳು ಮಾತ್ರ ಇರಲಿಲ್ಲ ಎಂಬುದನ್ನು ಸೂಚಿಸಲು, ಧೀರೋದಾತ್ತವಾದ ತ್ಯಾಗ ಮಾಡಿದವರು ಚರಿತ್ರೆಯಲ್ಲಿ ಬಹುಮುಖ್ಯರೆಂಬುದಾಗಿ ಕೀರ್ತಿತರಾಗಲಿಲ್ಲ ಎಂಬ ಸೂಚನೆಯನ್ನು ರಾಯಣ್ಣನ ಪಾತ್ರದ ಮೂಲಕ ಕೊಡುವುದು ಕಾ.ತ. ಚಿಕ್ಕಣ್ಣನವರ ಉದ್ದೇಶವಿದ್ದಂತಿದೆ.

ಸ್ವಾತಂತ್ರ್ಯಾ ನಂತರದಲ್ಲಿ ಗ್ರಾಮೀಣ ಜನತೆ ತಮ್ಮ ಅಭಿವೃದ್ಧಿಯ ಕನಸನ್ನು ಈಡೇರಿಸಿಕೊಳ್ಳುವ ಪ್ರಯತ್ನದಲ್ಲಿ ಪುಢಾರಿಗಳ, ಜಾತಿ ರಾಜಕಾರಣಿಗಳ ಮುಷ್ಠಿಯಲ್ಲಿ ಸಿಲುಕಿರುವುದನ್ನು ಕೂಡ ಕಾದಂಬರಿಯಲ್ಲಿರುವ ರಾಜಕೀಯ ಪ್ರಜ್ಞೆ ಸೂಚಿಸುತ್ತಿದೆ. ಸ್ವಾತಂತ್ರ್ಯಾ ನಂತರದ ಸಾಮಾಜಿಕ ಅವಾಂತರಗಳ ವಿರುದ್ಧ ರಾಯಣ್ಣನ ಮಗನಾದ ಗುರುರಾಜ ಮತ್ತವನ ಹೊರ ಊರಿನ ಸ್ನೇಹಿತರು ನಡೆಸುತ್ತಿರುವ ಚಟುವಟಿಕೆಗಳು ತೀವ್ರಗಾಮಿ ಸಿದ್ಧಾಂತದ ನೆಲೆ ಹೊಂದಿವೆಯೇ ಎಂಬ ಊಹೆಗಳು ಹುಟ್ಟುವುದಕ್ಕೆ ಅವಕಾಶವಾಗುವಂತೆ ಸನ್ನಿವೇಶ ಚಿತ್ರಣವಿದೆ.

ಗುರುರಾಜ ಮೆಚ್ಚಿಕೊಂಡಿದ್ದ ಸೀತೆ ಪ್ರಿಂಟಿಂಗ್ ಪ್ರೆಸ್ ನಡೆಸುತ್ತಿರುವುದು, ಗುರುರಾಜ ದೂರದೂರದ ಊರುಗಳಿಗೆ ಪ್ರಯಾಣ ಮಾಡಿ ಹೋರಾಟ ಸಂಘಟಿಸುವುದು, ಕಡೆಯಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಕೊಲೆಯಾಗುವುದು, ಈ ಸಾವಿನ ಬಗ್ಗೆ ಪೊಲೀಸರು ಕೂಡ ತೇಲಿಕೆಯ ಕ್ರಮಗಳನ್ನು ಕೈಗೊಂಡಿರುವುದು ಇತ್ಯಾದಿ ವಿವರಗಳು ಇಂತಹ ಊಹೆಗೆ ಕಾರಣವಾಗುತ್ತವೆ. ಕಾದಂಬರಿ ಈ ಊಹೆಗಳನ್ನು ಖಚಿತಪಡಿಸುವಂತಹ ಸುಳಿವುಗಳನ್ನು ಕೊಟ್ಟಿಲ್ಲ. ಅಧಿಕಾರಶಾಹಿಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಸೇರಿ ಗುರುರಾಜನನ್ನು ಕೊಲೆ ಮಾಡಿಸಲು ಕುತಂತ್ರ ಹೆಣೆದಿರಬಹುದು ಎಂಬ ಸೂಚನೆಯನ್ನು ಮುಂದುಮಾಡಲು ಕಾದಂಬರಿ ಪ್ರಯತ್ನಿಸುತ್ತದೆ.

ಗುರುರಾಜನ ದೇಹ ಕೂಡ ಮೂರು ದಿನದ ನಂತರ ಪತ್ತೆಯಾಗಿರುವುದು, ಆ ದೇಹದ ಜೊತೆ ತನ್ನ ದೇಹದ ಅಂಗಾಂಗಗಳನ್ನು ಅಗತ್ಯವಾದವರಿಗೆ ಎಳಸಿಕೊಳ್ಳಬಹುದೆಂದು ಬರೆದಿಟ್ಟಿರುವ ಮರಣ ಪತ್ರ ದೊರೆತಿದ್ದು ಮುಂತಾದ ಭಾಗಗಳನ್ನೂ ಕೂಡ ಕಾದಂಬರಿಕಾರರು ಸಾಕಷ್ಟು ಚಿಂತನೆ ಮಾಡಿ ಬರೆದಿದ್ದಾರೆನಿಸುತ್ತದೆ. ಈ ಭಾಗದಲ್ಲಿ ಕಾದಂಬರಿಕಾರರ ಯೋಜನೆಗನುಗುಣವಾಗಿ ವಿದ್ಯಮಾನಗಳು ಚಿತ್ರಿತವಾಗಿರುವಂತೆ ಭಾಸವಾಗುತ್ತದೆ.

ಕಾದಂಬರಿಯೊಳಗೆ ಒಂದು ರಾಜಕೀಯ ಪ್ರಜ್ಞೆ ಇದೆ. ಆದರೆ ಅದು ಅವ್ವಯ್ಯ ಮತ್ತು ಆಕೆಯ ಹಿಂದಲ ಮುಂದಣ ತಲೆಮಾರಿನವರ ಖಾಸಗಿ ಜೀವನ ಕತೆಯನ್ನು ಹೇಳುವುದಕ್ಕೆ ಅಡ್ಡಿಯುಂಟುಮಾಡಿದೆ ಎನ್ನುವಂತಿಲ್ಲ. ಮಹಿಳೆಯರ ಜಾಗೃತಿಯಲ್ಲಿ ಬಂದ ಕ್ರಮಾನುಗತ ಮುನ್ನಡೆಯ ಹಾದಿಯನ್ನು ಈ ಕಾದಂಬರಿ ಚಿತ್ರಿಸುತ್ತಿದೆ. ಅವ್ವಯ್ಯನ ಅವ್ವ ದೊಡ್ಡೆ ರಾಜಕೀಯ ಪ್ರಜ್ಞೆಯಿಂದ ಅಥವಾ ಸಾಮಾಜಿಕ ಸಮಾನತೆಯ ಪ್ರಜ್ಞೆಯಿಂದ ಬದುಕಿನ ಸಂಘರ್ಷವನ್ನು ನಡೆಸುವುದಿಲ್ಲ. ಹೆಣ್ಣು ಮಗುವನ್ನೇ ಗಂಡು ಎಂದು ತಿಳಿದು ಬೆಳೆಸಿದರಾಯಿತು ಎಂಬ ನಿಲುವು, ತನ್ನ ಕೊನೆ ಮಗಳು ನಾಲ್ಕಕ್ಷರ ಕಲಿಯಲಿ ಎಂಬ ನಿರ್ಧಾರಗಳು ಆಕೆಯೊಳಗೆ ಕ್ರಿಯಾಶೀಲವಾಗುತ್ತಿರುವ ಸುಧಾರಣಾವಾದಿ ಪ್ರಜ್ಞೆಗೆ ಸಂಕೇತವಾಗಿವೆ. ಹಾಗಿದ್ದರೂ ಅದು ಇನ್ನೂ ಬಲಿತಿರದ ಆಶಯ ಮಾತ್ರ. ಹಾಗಾಗಿ ತನ್ನ ಮಗಳು ಅವ್ವಯ್ಯನ ಶಿಕ್ಷಣ ಮೂಢನಂಬಿಕೆಯ ದಾಳಿಗೆ ಈಡಾಗಿ ನಿಂತುಬಿಟ್ಟಾಗ ಏನೂ ಮಾಡಲಾಗದ ಅಸಹಾಯಕ ಸ್ಥಿತಿ ಅನುಭವಿಸುತ್ತಾಳೆ ಆಕೆ. ಅವಳ ಧೈರ್ಯ

(51ನೇ ಪುಟಕ್ಕೆ)

ಅಸಮಾನತೆ ಕಳಚಿ ಬೀಳುತ್ತಿದೆ!

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ಜಾತಿ ಪದ್ಧತಿ ಹೇಗೆ ಕೆಲಸಮಾಡುತ್ತದೆ ಎಂಬ ವಿಚಾರದ ಮೇಲೆ ಹೆಚ್ಚು ತಿಳುವಳಿಕೆಯಾಗಲಿ ಅಥವಾ ಚರ್ಚೆಯಾಗಲಿ ನಡೆದಿಲ್ಲ. ಜಾತಿ ಸಾಮಾಜಿಕ, ಆಧ್ಯಾತ್ಮಿಕ ಮತ್ತು ಆರ್ಥಿಕ, ಅಂತಸ್ತುಗಳ ಬಗ್ಗೆ ಮಾತ್ರವಲ್ಲ. ಜಾತಿ ವಿಧಿಸಿದ ಕ್ರಮಾಗತ ವ್ಯವಸ್ಥೆ ಜೀವನದ ಇತರ ಮುಖಗಳನ್ನೂ ಆವರಿಸಿಕೊಂಡಿರುತ್ತದೆ. ಕೊನೆಯಲ್ಲಿ, ಜಾತಿ ಸಂಬಂಧಿತ, ಅದರಲ್ಲೂ ಮುಖ್ಯವಾಗಿ ದಲಿತ ಸಂಬಂಧಿತ ಬೌದ್ಧಿಕ ಚರ್ಚೆಗಳಲ್ಲಿ ಯಾವುದನ್ನು ನಾವು ಹೊರಗಿಡುತ್ತೇವೊ ಆ ಕ್ರಮಾಗತ ವ್ಯವಸ್ಥೆಯನ್ನು ಆಧರಿಸಿ ಜಾತಿ ಪದ್ಧತಿ ಬದುಕುತ್ತದೆ ಮತ್ತು ವಿಜೃಂಭಿಸುತ್ತದೆ.

ಮಾರ್ಕ್ಸಿಸ್ಟರ ನಿಂಘಂಟಿನಲ್ಲಿ ಅಸಮಾನತೆ ಎಂದರೆ ಮೂಲಭೂತವಾಗಿ ಆದಾಯ ಮತ್ತು ವೆಚ್ಚದ ನಡುವಿನ ಅಂತರ. ಆ ದೃಷ್ಟಿಯಲ್ಲಿ ವಿಶ್ವಬ್ಯಾಂಕ್ ಮತ್ತು ಮಾರ್ಕ್ಸಿಸ್ಟರು ಸಹೋದರರು. ಭಾರತದ ಯೋಜನಾ ಆಯೋಗ ಸಹ ಜನರ ನೆಮ್ಮದಿಯನ್ನು ಅಳೆಯಲು ಅದೇ ಅಳತೆಗೋಲನ್ನು ಅನುಸರಿಸುತ್ತದೆ. ಆದ್ದರಿಂದ ಅದನ್ನು ಚಿಕ್ಕಪ್ಪನ ಮಗನೆಂದು ಕರೆಯಬಹುದು.

ಭಾರತ ಈಗಲೂ ಸಹ ಒಂದು ಜಾತಿ ಸಮಾಜ. ಆದುದರಿಂದ ಸಾಮಾಜಿಕ ವರ್ಗಗಳಿಗೆ ಸಂಬಂಧಿಸಿದ ಸಿದ್ಧಾಂತಗಳು ಜಾತಿ ಸಮಾಜದ ಅಂಶಗಳನ್ನು ಅಳೆಯಲು ಸಾಲುವುದಿಲ್ಲ. ಜಾತಿ ಒಡೆಯುತ್ತಿದೆ. ಅನುಮಾನವಿಲ್ಲ. ಡಾ॥ ಅಂಬೇಡ್ಕರವರು ತಮ್ಮ ಕೃತಿ 'ಜಾತಿಗಳ ನಾಶ'ದಲ್ಲಿ ಇಂದಿನ ಎಡಪಂಥೀಯ ಅಥವಾ ವಿಶ್ವಬ್ಯಾಂಕ್ ಬುದ್ಧಿಜೀವಿಗಳು ಓದಲು ಕಷ್ಟವಾಗಬಹುದಾದ ಹಲವು ಅಸಮಾನತೆಯ ಘಟನೆಗಳನ್ನು ಉದಾಹರಿಸುತ್ತಾರೆ.

ಗುಜರಾತ್‌ನ ಅಹಮದಾಬಾದ್‌ನ ಜಾನು ಎಂದು ಕರೆಯಲ್ಪಡುವ ಒಂದು ಹಳ್ಳಿ ನವೆಂಬರ್ 1935ರಲ್ಲಿ ಒಂದು ಘಟನೆಗೆ ಸಾಕ್ಷಿಯಾಯಿತು. ಆರ್ಥಿಕವಾಗಿ ಶಕ್ತಿಯುತರಾದ ಹಳ್ಳಿಯ ಕೆಲ ದಲಿತ ಮಹಿಳೆಯರು ಲೋಹದ ಪಾತ್ರೆಗಳಲ್ಲಿ ನೀರು ತರುವುದನ್ನು ಕೆಲವರು ನೋಡಿದರು. ಮೇಲ್ಜಾತಿಯ ಹಿಂದೂಗಳು ಅದನ್ನು ಒಂದು ಅಪಚಾರವನ್ನಾಗಿ ಪರಿಗಣಿಸಿದರು. ಮತ್ತು ಆ ದಲಿತ ಮಹಿಳೆಯರ ಸೊಕ್ಕನ್ನಡಗಿಸಲು ಅವರ ಮೇಲೆ ಹಲ್ಲೆ ಮಾಡಿದರು.

1936ರ ಏಪ್ರಿಲ್ 1ರ ಸುತ್ತ ಮುತ್ತ ಅದೇ ರೀತಿಯ ಘಟನೆ ರಾಜಸ್ಥಾನದ ಜೈಪುರ ಜಿಲ್ಲೆಯ ಚಕ್ವಾರ ಹಳ್ಳಿಯಲ್ಲಿ ನಡೆಯಿತು. ಆರ್ಥಿಕವಾಗಿ ಸಶಕ್ತನಾಗಿದ್ದ ದಲಿತನೊಬ್ಬ ತೀರ್ಥಯಾತ್ರೆಗೆ ಹೋಗಿ ಬಂದಿದ್ದ. ಉತ್ತರ ಭಾರತದ ಸಂಸ್ಕೃತಿಯಂತೆ ಆದರ್ಶ ಹಿಂದೂ ಗಂಡುಮಗ ತನ್ನ ವಯಸ್ಸಾದ ತಂದೆ ತಾಯಿಗಳನ್ನು ಚಾರೋಧಾಮ ಅಂದರೆ ನಾಲ್ಕು ಪುಣ್ಯಸ್ಥಳಗಳಾದ ಬದರಿನಾಥ್, ದ್ವಾರಕ, ಪುರಿಯ ಜಗನ್ನಾಥ ಮತ್ತು ರಾಮೇಶ್ವರಗಳಿಗೆ ತೀರ್ಥಯಾತ್ರೆಗೆ ಕರೆದೊಯ್ಯಬೇಕು. ತೀರ್ಥಯಾತ್ರೆ ಎಂದರೆ ಒಬ್ಬ ಆದರ್ಶ ಮಗ ತನ್ನ ವಯಸ್ಸಾದ ತಂದೆ ತಾಯಿಗಳನ್ನು ಮೇಲಿನ ನಾಲ್ಕು ಪುಣ್ಯಸ್ಥಳಗಳಿಗೆ ಅಥವಾ ಹಿಂದೂಗಳು ಪವಿತ್ರವೆಂದು ಪರಿಗಣಿಸುವ ಯಾವುದಾದರೂ ಧಾರ್ಮಿಕ ಸ್ಥಳಕ್ಕೆ ಕರೆದುಕೊಂಡು ಹೋಗುವುದು. ಇದನ್ನು ಡಾ॥ ಅಂಬೇಡ್ಕರ್‌ರವರು ಬಹುಶಃ ಮಾಹಿತಿಯ ಕೊರತೆಯಿಂದ ಹೇಳಿರುವುದಿಲ್ಲ. ಏನೇ ಆಗಲಿ ಈ ದಲಿತ ಮಗ ತನ್ನ ತಂದೆ ತಾಯಿಗಳನ್ನು ನಾಲ್ಕು ಪುಣ್ಯ ಸ್ಥಳಗಳಿಗೆ ಕೊಂಡೊಯ್ದನೊ ಅಥವಾ ಕೇವಲ ಒಂದು ಪುಣ್ಯ ಸ್ಥಳಕ್ಕೆ ಕೊಂಡೊಯ್ದನೊ ಎಂಬುದು ಅಷ್ಟು ಮುಖ್ಯವಾದ ಪ್ರಶ್ನೆಯಲ್ಲ. ಸಾಂಪ್ರದಾಯದಂತೆ ದಲಿತ ಮಗ ತನ್ನ ತಂದೆ ತಾಯಿಗಳನ್ನು ತೀರ್ಥಯಾತ್ರೆಗೆ ಕೊಂಡೊಯ್ದ ಮತ್ತು ಅದೇ ಸಾಂಪ್ರದಾಯದಂತೆ ಅವನು ತನ್ನ ಬಂಧುಗಳು ಮತ್ತು ತನ್ನ ಹಳ್ಳಿಯ ದಲಿತರಿಗೆ ಒಂದು ಬೋಜನ ಕೂಟವನ್ನು ಏರ್ಪಡಿಸಿದ.

ಎಲ್ಲಾ ಉತ್ತಮ ಹಿಂದೂ ಮಕ್ಕಳು ಇಂತಹ ಭೋಜನ ಕೂಟಗಳನ್ನು ತಾವು ತೀರ್ಥಯಾತ್ರೆಯಿಂದ ಹಿಂತಿರುಗಿದ ನಂತರ ತಮ್ಮ ಬಂಧುಗಳಿಗೆ ಮತ್ತು ತಮ್ಮ ಜಾತಿಯ ಇತರ ಕುಟುಂಬ ವರ್ಗದವರಿಗೆ ಏರ್ಪಡಿಸುತ್ತಾರೆ. ಮೇಲ್ಜಾತಿಯವರು ತಮ್ಮ ಹಳ್ಳಿಯ ಎಲ್ಲರನ್ನೂ ಈ ಸಾಮೂಹಿಕ ಭೋಜನಕ್ಕೆ ಆಹ್ವಾನಿಸುತ್ತಾರೆ.

ಆದರೆ ಚಕ್ವಾರದ ದಲಿತರ ಈ ಭೋಜನ ಕೂಟ ಸಮೂಹ ಮಾಧ್ಯಮಗಳಿಗೆ ಗ್ರಾಸವಾದದ್ದು ಹೇಗೆ? ಎಲ್ಲ ಒಳ್ಳೆಯ ಅತಿಥೇಯರಂತೆ ಈ ದಲಿತ ಕುಟುಂಬ ಸಹ ಭೋಜನ ಕೂಟದಲ್ಲಿ ತುಪ್ಪ ನೀಡಲು ನಿರ್ಧರಿಸಿತು. ಭೋಜನದಲ್ಲಿ ತುಪ್ಪ ಬಡಿಸುವುದು ಮೇಲ್ಜಾತಿಯವರ ಉಟೋಪಚಾರದ ಸಾಮಾಜಿಕ ಚಿಹ್ನೆ.

ಅಂಬೇಡ್ಕರರು ಬರೆಯುತ್ತಾರೆ, "ಈ ಭೋಜನವನ್ನು ಅಸ್ಪೃಶ್ಯರ ಗುಂಪು ಸವಿಯುತ್ತಿದ್ದಾಗ ನೂರಾರು ಹಿಂದೂಗಳು ಲಾಠಿ ಹಿಡಿದು ಸ್ಥಳಕ್ಕೆ ಧಾವಿಸಿದರು ಮತ್ತು ಆ ಊಟವನ್ನೆಲ್ಲಾ ಚಿಲ್ಲಾಪಿಲ್ಲಿ ಮಾಡಿ ಅಲ್ಲಿದ್ದ ಅಸ್ಪೃಶ್ಯರ ಮೇಲೆ ಹಲ್ಲೆ ನಡೆಸಿದರು. ಅಸ್ಪೃಶ್ಯರು ಆ ಭೋಜನವನ್ನು ಅಲ್ಲೆ ತೊರೆದು ತಮ್ಮ ಜೀವ ಉಳಿಸಿಕೊಳ್ಳುವುದಕ್ಕೋಸ್ಕರ ಅಲ್ಲಿಂದ ದಿಕ್ಕಾಪಾಲಾಗಿ ಓಡಿಹೋದರು".

ಆದರೆ "ತುಪ್ಪ ತಿನ್ನುವುದನ್ನು ಉನ್ನತ ಸಾಮಾಜಿಕ ಅಂತಸ್ತಿನ ಸೂಚಕ ಎಂದು ಯಾರೂ ತಿಳಿಯಲಾರರು.... ಎಂದು ಚಕ್ವಾರದ ಅಸ್ಪೃಶ್ಯರು ನೆನೆಸಿದರು" ಎಂದು ಅಂಬೇಡ್ಕರ್ ಬರೆಯುತ್ತಾರೆ.

ಮೇಲಿನ ಎರಡು ನಿದರ್ಶನಗಳು ಸುಮಾರು 75 ವರ್ಷ ಹಳೆಯವು. ದಲಿತ ವರ್ಗದವರು ಕುದುರೆ ಮೇಲೆ ಸವಾರಿ ಬಂದರು ಎಂಬ ಸಲುವಾಗಿ ಅವರ ಮೇಲೆ ಕಲ್ಲು ಎಸೆಯುವ ನಿದರ್ಶನಗಳು ಪಶ್ಚಿಮ ಉತ್ತರ ಪ್ರದೇಶ, ಹರಿಯಾಣ ಮತ್ತು ಉತ್ತರ ರಾಜಸ್ಥಾನದ ಕೆಟ್ಟ ಭೂಮಿಯಲ್ಲಿ ಅಪರೂಪವೇನಲ್ಲ. ಹಾಗೆಯೇ ತಮಿಳುನಾಡು ಮತ್ತು ಆಂಧ್ರಪ್ರದೇಶದ ತೆಲಂಗಾಣ ಪ್ರದೇಶದಲ್ಲಿನ ಹಳ್ಳಿಗಳ ಚಹ ಅಂಗಡಿಗಳಲ್ಲಿ ಮೂರು ಲೋಟ ಪದ್ಧತಿಯೂ ಸಹ.

ಮೇಲಿನ ಉದಾಹರಣೆಗಳು ಹೇಗೆ ಆರ್ಥಿಕ ಸೂಚ್ಯಂಕಗಳು ಅಸಮಾನತೆಯನ್ನು ಅಳೆಯಲು ಸಾಲುವುದಿಲ್ಲ ಎಂಬುದನ್ನು ಸ್ಥಾಪಿಸುತ್ತವೆ. ಅದಕ್ಕಿಂತ ಮುಖ್ಯವಾಗಿ ಆರ್ಥಿಕ ಅಸಮಾನತೆ ವರ್ಗಗಳ ವಿಂಗಡನೆಯನ್ನು ಉಂಟುಮಾಡುತ್ತದೆ. ಅದು ಜೀವನದಲ್ಲಿ ಉತ್ತಮ ವಸ್ತುಗಳನ್ನು ಪಡೆದುಕೊಳ್ಳುವ ಶಕ್ತಿ ಮತ್ತು ಆ ಶಕ್ತಿಯಿಂದ ವಂಚಿತರಾಗುವುದಕ್ಕೆ ಸಂಬಂಧಿಸಿದೆ. ಸಾಮಾಜಿಕ ಅಸಮಾನತೆ ಅಸಮಾನರ ನಡುವೆ ಅಪಮಾನದ ಹೊರೆ ಹೊರಿಸುವುದಕ್ಕೆ ಕಾರಣವಾಗುತ್ತದೆ. ಜಾನು ಮತ್ತು ಚಕ್ವಾರದ ಘಟನೆಗಳು ವರ್ಗ ವಿಂಗಡನೆಗೆ ಸಂಬಂಧಿಸಿದವಲ್ಲ, ಅವು ಜಾತಿ ವಿಂಗಡಣೆಗೆ ಸಂಬಂಧಿಸಿದವು ಮತ್ತು ಎರಡು ಹಳ್ಳಿಗಳ ದಲಿತರ ಮೇಲೆ ಬಲವಂತವಾಗಿ ಹೊರಿಸಿದ ಅಪಮಾನಗಳು.

ದುಃಖಕರವೆಂದರೆ ಬಹಳಷ್ಟು ಪಂಡಿತರು ಜಾತಿ ಪದ್ಧತಿಯನ್ನು ತೀರ ಸಾಮಾನ್ಯವೆಂಬಂತೆ ಪವಿತ್ರ–ಅಪವಿತ್ರ, ಮೇಲು–ಕೀಳು, ಜಾತಿ ಹೊರಗಿರುವವ ಮುಂತಾದ ಸ್ಥಿತಿಗಳನ್ನಾಗಿ ನೋಡುತ್ತಾರೆ. ಇವೆಲ್ಲವೂ ಜಾತಿ ಪದ್ಧತಿಯ ಸೈದ್ಧಾಂತಿಕ ಮತ್ತು ವ್ಯವಸ್ಥೆ ಆಧಾರಿತ ವಿಚಾರಗಳು.

ಜಾತಿ ಪದ್ಧತಿ ಹೇಗೆ ಕೆಲಸಮಾಡುತ್ತದೆ ಎಂಬ ವಿಚಾರದ ಮೇಲೆ ಹೆಚ್ಚು ತಿಳುವಳಿಕೆಯಾಗಲಿ ಅಥವಾ ಚರ್ಚೆಯಾಗಲಿ ನಡೆದಿಲ್ಲ.'

ಜಾತಿ ಸಾಮಾಜಿಕ, ಆಧ್ಯಾತ್ಮಿಕ ಮತ್ತು ಆರ್ಥಿಕ, ಅಂತಸ್ತುಗಳ ಬಗ್ಗೆ ಮಾತ್ರವಲ್ಲ. ಜಾತಿ ವಿಧಿಸಿದ ಕ್ರಮಾಗತ ವ್ಯವಸ್ಥೆ ಜೀವನದ ಇತರ ಮುಖಗಳನ್ನೂ ಆವರಿಸಿಕೊಂಡಿರುತ್ತದೆ. ಕೊನೆಯಲ್ಲಿ, ಜಾತಿ ಸಂಬಂಧಿತ, ಅದರಲ್ಲೂ ಮುಖ್ಯವಾಗಿ ದಲಿತ ಸಂಬಂಧಿತ ಬೌದ್ಧಿಕ ಚರ್ಚೆಗಳಲ್ಲಿ ಯಾವುದನ್ನು ನಾವು ಹೊರಗಿಡುತ್ತೇವೊ ಆ ಕ್ರಮಾಗತ ವ್ಯವಸ್ಥೆಯನ್ನು ಆಧರಿಸಿ ಜಾತಿ ಪದ್ಧತಿ ಬದುಕುತ್ತದೆ ಮತ್ತು ವಿಜೃಂಭಿಸುತ್ತದೆ. ಆದುದರಿಂದ ಜಾತಿ ಪದ್ಧತಿ ವಿಧಿತ ಕ್ರಮಾಗತ

ಕಳಚುತ್ತಿದೆ ಕಸುಬಿನ ಕ್ರಮಾಗತ ವ್ಯವಸ್ಥೆ?

ಭೋಜನ ವ್ಯವಸ್ಥೆ, ಕ್ರಮಾಗತ ಉಡುಪಿನ ವ್ಯವಸ್ಥೆ, ಕ್ರಮಾಗತ ವ್ಯವಸ್ಥೆ ಆಧಾರಿತ ಭಾಷೆ, ಅದರಲ್ಲೂ ಅತ್ಯಂತ ಮೂಲಭೂತವಾಗಿ ಕ್ರಮಾಗತ ವ್ಯವಸ್ಥೆ ಆಧಾರಿತ ಕಸುಬುಗಳನ್ನು ನಾವು ಹೊಂದಿದ್ದೇವೆ.

ನಾನು ನನ್ನ ಪೂರ್ವಿಕರ ಹಳ್ಳಿಯಲ್ಲಿ ಕೆಲದಿನಗಳನ್ನು ಕಳೆಯಬೇಕಾಯಿತು. ಆಗ ನಾನು ಕ್ರಮಾಗತ ಆಹಾರ ವ್ಯವಸ್ಥೆ ಸಂಪೂರ್ಣ ಬಿದ್ದುಹೋಗಿರುವುದನ್ನು ನೋಡಿದೆ.

ಈ ಬರಹದ ಇತಿಮಿತಿಯನ್ನು ಪರಿಗಣಿಸಿ ಈ ವಿಚಾರವನ್ನು ಸಂಕ್ಷಿಪ್ತವಾಗಿ ಹೇಳಲು ನಾನು ಎರಡು ಉದಾರಣೆಗಳನ್ನು ನೀಡಲು ಇಚ್ಛಿಸುತ್ತೇನೆ. ಮೊದಲನೆಯದಾಗಿ ನನ್ನ ಹಳ್ಳಿಯಲ್ಲಿ ಮತ್ತು ಸುತ್ತಮುತ್ತ ಯಾರೂ ಈಗ ನವಣೆ, ಸಜ್ಜೆ ಮೊದಲಾದ ಧಾನ್ಯಗಳನ್ನು ಬೆಳೆಯುತ್ತಿಲ್ಲ. ಅದರರ್ಥ ಯಾವುದೇ ಜಾತಿಯ ಜನರಾಗಲಿ ಅವರು ಗೋಧಿ, ಅಕ್ಕಿ, ದ್ವಿದಳ ಧಾನ್ಯಗಳು ಮತ್ತು ತರಕಾರಿಗಳನ್ನು ಉಪಯೋಗಿಸುತ್ತಾರೆ. ಕೆಲವರು ಮೇಲ್ಜಾತಿಯ ಜನ ಉತ್ತಮವಾದ ಗೋಧಿ, ಅಕ್ಕಿ, ತರಕಾರಿಗಳು ಮತ್ತು ದ್ವಿದಳ ಧಾನ್ಯಗಳನ್ನು ಬಳಸುತ್ತಾರೆ ಎಂದು ಕೆಲವರು ವಾದಿಸಬಹುದು.

ನನ್ನ ವಿಚಾರಣೆಯಿಂದ ತಿಳಿದುಬಂದಿದ್ದೇನೆಂದರೆ ಹೆಚ್ಚು ರೈತರು ಉತ್ತಮ ಇಳುವರಿ ನೀಡುವ ಬೆಳೆಗಳನ್ನು ಬೆಳೆಯುತ್ತಾರೆ. ಕೆಲವು ವೇಳೆ ಹೆಚ್ಚು ಭೂಮಿಯಿರುವ ರೈತರು ಕಡಿಮೆ ಇಳುವರಿ ನೀಡುವ ಮತ್ತು ಹೆಚ್ಚು ರುಚಿಕರ ಬೆಳೆಗಳನ್ನು ತಮ್ಮ ಮತ್ತು ತಮ್ಮ ಸಂಬಂಧಿಕರ ಉಪಯೋಗಕ್ಕಾಗಿ ಅಥವಾ ಕುಟುಂಬದ ಮದುವೆ ಸಂದರ್ಭದಲ್ಲಿ ಉಪಯೋಗಿಸುವುದಕ್ಕಾಗಿ ಬೆಳೆಯುತ್ತಾರೆ. ಇಳುವರಿ ಏನೇ ಇರಲಿ ಅಕ್ಕಿ, ಗೋಧಿ ಮತ್ತು ದ್ವಿದಳ ಧಾನ್ಯಗಳು ದಲಿತರ ಅಂತಸ್ತಿನ ಸೂಚಕಗಳಾಗಿರುವುದಿಲ್ಲ. ಹಿಂದೆ ನವಣೆ, ಸಜ್ಜೆ ಮುಂತಾದ ಧಾನ್ಯಗಳು ದಲಿತರಷ್ಟೇ ಉಪಯೋಗಿಸುವ ಧಾನ್ಯಗಳಾಗಿದ್ದವು. ಎರಡನೆಯದಾಗಿ ಈಗ ಹಂದಿ ಮಾಂಸ ಮಾತ್ರ ದಲಿತರ ಆಹಾರವಾಗಿರುವುದಿಲ್ಲ. ನಾನು ಸಂದರ್ಶಿಸಿದ ಹಂದಿ ಮಾಂಸದ ಮಾರಾಟಗಾರನ ಶೇ.50ಕ್ಕಿಂತ ಹೆಚ್ಚು ಗಿರಾಕಿಗಳು ದಲಿತೇತರರೇ ಆಗಿರುತ್ತಾರೆ.

1990ರ ನಂತರದ ಉದಾರೀಕರಣದ ಎರಡು ದಶಕಗಳಲ್ಲಿ ಆಹಾರದ ಕ್ರಮಾಗತ ವ್ಯವಸ್ಥೆ ನನ್ನ ಹಳ್ಳಿ ಮತ್ತು ಸುತ್ತಮುತ್ತ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಎಲ್ಲ ಅಸಮಾನತೆಗಳ ತಂದೆ, ಆಹಾರದ ಕ್ರಮಾಗತ ವ್ಯವಸ್ಥೆ, ಈಗ ಇತಿಹಾಸ ಸೇರಿದೆ.

ಈ ಆಹಾರದ ಅಸಮಾನತೆ ಇದಕ್ಕಿಂತ ಮೊದಲು ಏಕೆ ಕೊನೆಗೊಳ್ಳಲಿಲ್ಲ? ಎಂಬ ಪ್ರಶ್ನೆ ಏಳಬಹುದು. 1990ರ ನಂತರದ ಭಾರಿ ಕೈಗಾರಿಕರಣ ಮತ್ತು ನಗರಗಳ ವಿಸ್ತರಣೆ, ವಿದ್ಯೆಯಿಲ್ಲದ, ಶಾಲೆಗಳನ್ನು ಅರ್ಧದಲ್ಲಿಯೆ ಬಿಟ್ಟ ದಲಿತ ಯುವಕರನ್ನು ಕೈಗಾರಿಕೆಗಳ ಕೆಲಸಗಾರರಾಗಿ, ಟ್ರಕ್ ಡ್ರೈವರ್‌ಗಳಾಗಿ ಆಕರ್ಷಿಸಿತು. ಅವರು ಹಳ್ಳಿಯ ತಮ್ಮ ಮನೆಗಳಿಗೆ ಹಣವನ್ನು ತರುವುದು ಮಾತ್ರವಲ್ಲ ಪಟ್ಟಣದ ಜೀವನ ಶೈಲಿಯನ್ನು ತಂದರು. ಆಹಾರದ ಮೂಲಗಳಿಗೆ ಸಂಬಂಧಿಸಿದಂತೆ ಪಟ್ಟಣಗಳ ಜೀವನ ಶೈಲಿ ಸಮಾನತಾ ಪ್ರತಿಪಾದಕವಾದುದು. ನನ್ನ ಹಳ್ಳಿ ಮತ್ತು ಸುತ್ತಮುತ್ತ ಹಿಂದೆ ದಲಿತರು ತಿನ್ನುತ್ತಿದ್ದ ಆಹಾರ ಈಗ ದನಗಳ ಆಹಾರವಾಗಿದೆ. ಇಂತಹ ಬಹಳ ಮಹತ್ವದ ಸಾಮಾಜಿಕ ಕ್ರಾಂತಿಯನ್ನು ನಾನು ನನ್ನ ಹಳ್ಳಿಯಲ್ಲಿ ಕಾಣುತ್ತಿದ್ದೇನೆ.

> **ರಾಮ್‌ಘರ್‌ನಲ್ಲಿ ಒಬ್ಬ ಭೂಮಿಹಾರನು ದಲಿತನೊಬ್ಬನೊಡನೆ ಹಂದಿ ಮಾಂಸದ ಮಾರಾಟದ ಪಾಲುದಾರಿಕೆ ಮಾಡುತ್ತಿದ್ದ. ಈ ಭೂಮಿಹಾರ ಯುವಕ ವಾರದ ಸಂತೆಯಲ್ಲಿ ಹಂದಿಗಳನ್ನು ಕೊಂದು ಅವುಗಳ ಮಾಂಸ ಮಾರಾಟ ಮಾಡುವುದರಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ. ಹಂದಿ ಮಾಂಸವನ್ನು ಆಹಾರವಾಗಿ ಉಪಯೋಗಿಸಬಾರದೆಂಬ ಒಂದು ನಂಬಿಕೆಯಿದೆ. ಅದು ದಲಿತರ ಆಹಾರ ಮಾತ್ರವಾಗಿತ್ತು. ನನ್ನ ಬಾಲ್ಯದಲ್ಲಿ ಹಂದಿ ಮಾಂಸವನ್ನು ನಾವು ಕದ್ದು ತಿನ್ನುತ್ತಿದ್ದೆವು. ಹಂದಿ ಮಾಂಸದ ಮಾರಾಟಗಾರ ಕತ್ತಲೆಯಾದ ನಂತರ ನಮಗೆ ಅದನ್ನು ತಲುಪಿಸುತ್ತಿದ್ದ. ಇದು ನನ್ನ ಬಾಲ್ಯದ ಸತ್ಯ. ನನ್ನ ಜೀವನ ಸಮಯದಲ್ಲಿ ಒಬ್ಬ ಮೇಲ್ಜಾತಿಯ ಮನುಷ್ಯ ಹಂದಿಗಳನ್ನು ಕತ್ತರಿಸುವುದನ್ನು ನಾನು ನೋಡುತ್ತೇನೆ ಎಂಬುದನ್ನು ನಾನೆಂದೂ ಯೋಚಿಸಿರಲಿಲ್ಲ.**

* * * * * *

ಕಸುಬಿನ ಕ್ರಮಾಗತ ವ್ಯವಸ್ಥೆ ಕಳಚಿ ಬೀಳುತ್ತಿದೆ

ಜುಲೈ ಮಧ್ಯದಲ್ಲಿ ದುಃಖಕರವಾದ ದೊಡ್ಡದೊಂದು ಘಟನೆ ನಮ್ಮ ಕುಟುಂಬದಲ್ಲಿ ನಡೆಯಿತು. ನನ್ನ ಸೋದರಳಿಯನ ಹೆಂಡತಿ ಭಾಗೇಶ್ವರಿ ಲಕ್ನೊ ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಪಿ.ಹೆಚ್.ಡಿ ವಿದ್ಯಾರ್ಥಿನಿಯಾಗಿದ್ದ ಅವರು ಆರು ವರ್ಷಗಳ ಕಾಲ ಕ್ಯಾನ್ಸರ್‌ನೊಡನೆ ಎದೆಗುಂದದೆ ಹೋರಾಡಿದರು. ಎಂ.ಎಸ್ಸಿ ಮುಗಿಸಿ ಕುಟುಂಬದಲ್ಲೇ ಅಚ್ಚು ಮೆಚ್ಚಿನವಳಾಗಿದ್ದ ಭಾಗೇಶ್ವರಿ ಒಬ್ಬ ಉತ್ತಮ ವಿದ್ವಾಂಸಳಾಗುತ್ತಿದ್ದಳು. ಅವಳ ಗಂಡ ಡಾ॥ ಕೆ.ಕೆ. ಚಂದ್ರ ಕಾಲೇಜೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ.

ನನ್ನ ಕುಟುಂಬದ ಎಲ್ಲ ಸಂಬಂಧಿಕರು ಮತ್ತು ಸ್ನೇಹಿತರು ತಪ್ಪಿಸಲಾಗದ ಆ ಘಟನೆಯನ್ನು ಮುನ್ನೋಡುತ್ತಾ ಆಸ್ಪತ್ರೆಯಲ್ಲಿ ಇದ್ದರು. ಡಾಕ್ಟರ್‌ಗಳು ಮುಂದಿನ ಆ ದುಃಖದ ಕ್ಷಣದ ಬರುವಿಕೆಯನ್ನು ಆಗಲೇ ತಿಳಿಸಿದ್ದರು. ಆಸ್ಪತ್ರೆಯ ಆ್ಯಂಬ್ಯುಲೆನ್ಸ್ ಸಾಕಿರಲಿಲ್ಲ. ದೊಡ್ಡದೊಂದು ವಾಹನ ನಮಗೆ ಅವಶ್ಯವಿತ್ತು. ಕುಟುಂಬದ ಅನೇಕರು ಶವದ ಜೊತೆ ಪ್ರಯಾಣಿಸಲು ಇಚ್ಛಿಸಿದ್ದರು.

ಆಸ್ಪತ್ರೆಯ ಹೊರಗೆ ಟ್ಯಾಕ್ಸಿ ನಿಲ್ದಾಣ ಇರುವುದಾಗಿಯೂ ಅಲ್ಲಿ ಶವ ಸಾಗಿಸಲು ದೊಡ್ಡ ಬಸ್ಸು ದೊರೆಯುವುದಾಗಿಯೂ ಯಾರೋ ಹೇಳಿದರು. ಕುಟುಂಬದ ಅನೇಕರು, ಸಂಬಂಧಿಕರು ಮತ್ತು ಸ್ನೇಹಿತರು ದುಃಖಪೂರಿತರಾಗಿದ್ದು ಅವರನ್ನು ಸಮಾಧಾನಪಡಿಸುವ ಅವಶ್ಯಕತೆ ಇದ್ದಾಗಿಯೂ ನಾವು ಕೆಲವರು ಆ ಗಾಡಿಯ ಶೋಧನೆಗಾಗಿ ಹೊರಟೆವು. 'ಮಿಶ್ರಾ ಟ್ಯಾಕ್ಸಿ ನಿಲ್ದಾಣ'ದಲ್ಲಿ ಅದು ನಮಗೆ ದೊರೆಯಿತು. ಮಧ್ಯೆ ಮತ್ತು ಪೂರ್ವ ಉತ್ತರ ಪ್ರದೇಶದಲ್ಲಿ ಮಿಶ್ರಾ ಎಂಬ ಜಾತಿ ಸೂಚಕವನ್ನು ಬ್ರಾಹ್ಮಣರಷ್ಟೇ ಇಟ್ಟುಕೊಳ್ಳುತ್ತಾರೆ.

ಈ ಮಿಶ್ರಾ ಎಂಬುವರು ಶವ ಸಾಗಣೆಗಾಗಿಯೆ ಒಂದೆರಡು ವಾಹನಗಳನ್ನು ಮೀಸಲಿರಿಸಿದ್ದಾರೆ. ನಾವು ಒಂದು ವಾಹನವನ್ನು ಪಡೆದು ಚಾಲಕನಿಗೆ ಅದನ್ನು ಆಸ್ಪತ್ರೆಯ ಶವಾಗಾರದ ಗೇಟಿನ ಬಳಿ ನಿಲ್ಲಿಸುವಂತೆ ಸೂಚಿಸಿದೆವು.

ಡ್ರೈವರ್ ಬೇರೆಲ್ಲಾದರೂ ಹೋಗಿಬಿಟ್ಟಲ್ಲಿ ಅವನನ್ನು ಹುಡುಕುವುದು ಕಷ್ಟವಾಗುತ್ತದೆ ಎಂದು ನಾನು ಅವನ ಸೆಲ್ ನಂ. ಕೇಳಿದೆ. ಅವನು ನನಗೆ ಅವನ ವಿಸಿಟಿಂಗ್ ಕಾರ್ಡ್ ನೀಡಿದ. ವಿಸಿಟಿಂಗ್ ಕಾರ್ಡ್‌ನಲ್ಲಿ ಅವನ ಬ್ರಾಹ್ಮಣ ಅಂತಸ್ತು ಕಂಡು ಬಂತು. ಅವನೂ ಸಹ ಮಿಶ್ರ ಆಗಿದ್ದ. ಮತ್ತು ಆ ಟ್ಯಾಕ್ಸಿ ನಿಲ್ದಾಣದ ಮಾಲಿಕ ಮಿಶ್ರಾನ ಸಂಬಂಧಿಯಾಗಿದ್ದ.

ಲಕ್ನೊದ ನಮ್ಮ ಮನೆಯಲ್ಲಿ ನೂರಿನ್ನೂರು ಜನ ಹಿತಚಿಂತಕರು ಸೇರಿದ್ದರು. ಭಾಗೇಶ್ವರಿ ಸಂಜೆ 8:23ಕ್ಕೆ ಕೊನೆಯುಸಿರೆಳೆದಿದ್ದಳು. ಶವವನ್ನು ಮಾರನೆಯ ಮಧ್ಯಾಹ್ನದವರೆಗೆ ಸಂರಕ್ಷಿಸಬೇಕಾಗಿತ್ತು. ನಂತರ ಮಾತ್ರ ಶವಸಂಸ್ಕಾರ ನಡೆಯುತ್ತಿತ್ತು. ಇದಕ್ಕಾಗಿ ಮಂಜಿನ ದೊಡ್ಡ ತುಂಡುಗಳನ್ನು ತರಿಸಲಾಗಿತ್ತು.

ಮನೆಗೆ ಬಂದೊಡನೆ ನಮಗೆ ಸಮಸ್ಯೆ ಎದುರಾಯಿತು. ಶವವನ್ನು ಸಂರಕ್ಷಿಸಲಿಕ್ಕೊಸ್ಕರ ಮಂಜುಗಡ್ಡೆಗಳನ್ನು ಉಪಯೋಗಿಸುವುದು ಹೇಗೆ? ವಾಹನ ಚಾಲಕ ನಮ್ಮ ಮಾತುಗಳನ್ನು ಕೇಳಿಸಿಕೊಂಡ ಮತ್ತು ತಾನು ಆ ಕೆಲಸವನ್ನು ಮಾಡುವುದಾಗಿ ಮುಂದೆ ಬಂದ. ಶವ ಸಾಗಿಸುವ ವಾಹನದ ಚಾಲಕನಾಗಿ ಅವನು ಶವದ ಸುತ್ತ ಈ ಮಂಜುಗಡ್ಡೆಗಳನ್ನು ಹೇಗೆ ಇಡಬೇಕು ಎಂಬ ಕಲೆಯನ್ನು ಕಲಿತಿದ್ದ. ಬಹಳ ಚೆನ್ನಾಗಿ ಅವನು ಆ ಕೆಲಸ ಮಾಡಿದ.

ಶವ ಸಾಗಣೆಗೆ ಗೊತ್ತಾಗಿದ್ದ 1800 ರೂಪಾಯಿಗಳನ್ನು ಅವನಿಗೆ ನೀಡಿದ ನಂತರ ನಾನು 200 ರೂಪಾಯಿಗಳ ಭಕ್ಷೀಸು ನೀಡಿದೆ. ಭಾಗೇಶ್ವರಿಯ ಸಹೋದರ ಅದಕ್ಕೆ ತನ್ನ 100 ರೂಪಾಯಿಗಳನ್ನು ಸೇರಿಸಿದ. ಕುಟುಂಬದ ಇತರ ಮೂವರು ಸಹ ಹಾಗೆಯೇ ಮಾಡಿದರು. ಆ ಚಾಲಕ ಶವದ ಸಂರಕ್ಷಣೆಗೆ ಮುಂದೆ ಬಂದದ್ದು ಅವರೆಲ್ಲರನ್ನೂ ತಟ್ಟಿತ್ತು. ಇದಕ್ಕೆ ಮೊದಲು

ಅವನು ಭಾಗೇಶ್ವರಿಯ ಶವವನ್ನು ಬಸ್‌ನಲ್ಲಿಡುವಾಗ ನಮ್ಮೆಲ್ಲರನ್ನೂ ಸೇರಿಕೊಂಡಿದ್ದ.

ಈ ಬ್ರಾಹ್ಮಣ ಚಾಲಕ ಇಂತಹ ವ್ಯವಹಾರಗಳಲ್ಲಿ ನಾವು ಅಂತಹ ಚಾಲಾಕಿತನದವರಲ್ಲ ಎಂಬುದನ್ನು ಆಗಲೇ ಲೆಕ್ಕ ಹಾಕಿದ್ದ. ನಾಳೆಯ ಬೆಳಗಿನ ಶವ ಸಂಸ್ಕಾರಕ್ಕೆ ಬೇಕಾದ ಸಾಮಗ್ರಿಗಳನ್ನು ವ್ಯವಸ್ಥೆ ಮಾಡುವುದಕ್ಕೆ ತನ್ನ ಸೇವೆಯನ್ನು ನೀಡಲು ಮುಂದೆ ಬಂದ. ಬಹುಶಃ ಮಾರನೆಯ ದಿನ ಸ್ಮಶಾನಕ್ಕೆ ಶವವನ್ನು ಕೊಂಡೊಯ್ಯಲಿಕ್ಕಾಗಿ ತನ್ನ ಗಾಡಿಯನ್ನು ಮತ್ತೆ ನಾವು ಉಪಯೋಗಿಸಬಹುದು ಎಂದು ಅವನಿಗನಿಸಿರಬಹುದು. ನಾವು ಒಪ್ಪಿದೆವು. ಈ ಮಿಶ್ರಾಗಳು, ಟ್ಯಾಕ್ಸಿ ನಿಲ್ದಾಣದ ಮಾಲೀಕ ಮತ್ತು ಅವನ ಸಂಬಂಧಿ ಚಾಲಕ ಈಗ ಏನು ಮಾಡುತ್ತಿದ್ದಾರೊ ಅದನ್ನು ನನ್ನ ಜೀವವಿರುವವರೆಗೆ ನಾನು ಕಾಣಲಾರೆ ಎಂದುಕೊಂಡಿದ್ದೆ. ಜಾತಿ ಕಾರಣಗಳಿಂದಾಗಿ ಬ್ರಾಹ್ಮಣರು ಯಾವ ಕೆಲಸಗಳನ್ನು ಮಾಡಬಾರದು ಎಂದು ವಿಧಿಸಿದೆಯೊ ಅಂತಹ ಕೆಲಸಗಳನ್ನು ಅವರು ಮಾಡುವುದನ್ನು ನೋಡಲು ಬಯಸುವ ಹಿಂಸೆಯಿಂದ ಆತಂಕಪಡುವವನು ನಾನಲ್ಲ!

ನಮ್ಮದೊಂದು ದೊಡ್ಡ ಕುಟುಂಬ. ನಿಜವಾಗಿ ಬಹುದೊಡ್ಡ ಕುಟುಂಬ. ನಾವು ಸಂತೋಷ ಮತ್ತು ದುಃಖಗಳಲ್ಲಿ ಯಾವಾಗಲೂ ಒಟ್ಟಾಗಿದ್ದೇವೆ. ನಮ್ಮ ತಂದೆಗೆ 3 ಜನ ಸಹೋದರರು. ಅಂದರೆ ಅವರು ಒಟ್ಟು 4 ಜನ. ಅವರ ಮಕ್ಕಳು, ಮೊಮ್ಮಕ್ಕಳು ಹೀಗೆ ಸುಮಾರು 100ಕ್ಕೂ ಹೆಚ್ಚು ಸಂಬಂಧಿಕರು, ಹಳ್ಳಿಯವರು ಮತ್ತು ಸ್ನೇಹಿತರು ಅವರೆಲ್ಲರನ್ನೂ ಲಕ್ನೋದಲ್ಲಿ ಎಲ್ಲಾ ಸಾಂಪ್ರದಾಯಿಕ ಕ್ರಿಯೆಗಳಿಗಾಗಿ ಉಳಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಶವ ಸಂಸ್ಕಾರದ ನಂತರ ಪೂರ್ವ ಉತ್ತರ ಪ್ರದೇಶದ ಅಜಂಘಡ್ ಜಿಲ್ಲೆಯ ನನ್ನ ಸ್ವಂತ ಊರಿಗೆ ನಾವು ಹೊರಟೆವು. ಸುಮಾರು 10–12ಗಾಡಿಗಳಲ್ಲಿ ನಾವು ಅಜಂಘಡ್ ತಲುಪಿದಾಗ ರಾತ್ರಿ ಬಹಳ ಹೊತ್ತಾಗಿತ್ತು.

ಕುಟುಂಬದಲಿ ಇಂತಹ ದೊಡ್ಡ ಆಘಾತಕರ ಘಟನೆ ನಡೆದಿದ್ದರೂ ನನ್ನ ಸಾಮಾಜಿಕ ಅಧ್ಯಯನದ ಕುತೂಹಲ ಮುಂದುವರೆದಿತ್ತು. ನನ್ನ ಹಳ್ಳಿಯ ಪಕ್ಕದ ಹಳ್ಳಿಗೆ ರಾಮ್‌ಘರ್ ಎಂದು ಹೆಸರು. ಒಂದು ಕಾಲದಲ್ಲಿ ತುಂಬಾ ಪ್ರಖ್ಯಾತವಾಗಿದ್ದ ಸಮಾಜವಾದಿ ರಾಜಕಾರಣಿ ರಾಜ್ ನಾರಾಯಣ್ ರಾಮ್‌ಘರ್‌ನವರೇ. ರಾಜ್ ನಾರಾಯಣ್ ಒಂದು ಸಾರಿ ತಮ್ಮನ್ನು ಚೌಧುರಿ ಚರಣ್ ಸಿಂಗ್‌ರ ಹನುಮಾನ್ (ರಾವಣನಿಂದ ಸೀತೆಯನ್ನು ರಕ್ಷಿಸಿದ ಮಂಗಮಾನವ) ಎಂದು ವರ್ಣಿಸಿಕೊಂಡಿದ್ದರು. ರಾಜ್ ನಾರಾಯಣ್ ಭೂಮಿಹಾರ್ ಜಾತಿಗೆ ಸೇರಿದವರು. ಆದರೆ ತಮ್ಮ ರಾಜಕೀಯ ಜೀವನದಲ್ಲಿ ಅವರೆಂದೂ ಭೂಮಿಹಾರ್ ಹಣೆಪಟ್ಟಿಯನ್ನು ಉಪಯೋಗಿಸಲಿಲ್ಲ. ಅವರು ಒಬ್ಬ ಸೈದ್ಧಾಂತಿಕ ನಿಲುವುಳ್ಳ ಆದರ್ಶವಾದಿಯಾಗಿದ್ದರು. ಭೂಮಿಹಾರರು ಅರ್ಧ ಠಾಕೂರ್ ಮತ್ತು ಅರ್ಧ ಬ್ರಾಹ್ಮಣ ಜಮೀನ್ದಾರರುಗಳು.

ಸುಮಾರು ನನ್ನ ಹಳ್ಳಿಯಿಂದ ಅರ್ಧ ಮೈಲು ದೂರದಲ್ಲಿನ ರಾಮ್‌ಘರ್‌ನಲ್ಲಿ ಒಬ್ಬ ಭೂಮಿಹಾರನು ದಲಿತನೊಬ್ಬನೊಡನೆ ಹಂದಿ ಮಾಂಸದ ಮಾರಾಟದ ಪಾಲುದಾರಿಕೆ ಮಾಡುತ್ತಿದ್ದ. ಈ ಭೂಮಿಹಾರ ಯುವಕ ವಾರದ ಸಂತೆಯಲ್ಲಿ ಹಂದಿಗಳನ್ನು ಕೊಂದು ಅವುಗಳ ಮಾಂಸ ಮಾರಾಟ ಮಾಡುವುದರಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ. ಹಂದಿ ಮಾಂಸವನ್ನು ಆಹಾರವಾಗಿ ಉಪಯೋಗಿಸಬಾರದೆಂಬ ಒಂದು ನಂಬಿಕೆಯಿದೆ. ಅದು ದಲಿತರ ಆಹಾರ ಮಾತ್ರವಾಗಿತ್ತು. ನನ್ನ ಬಾಲ್ಯದಲ್ಲಿ ಹಂದಿ ಮಾಂಸವನ್ನು ನಾವು ಕದ್ದು ತಿನ್ನುತ್ತಿದ್ದೆವು. ಹಂದಿ ಮಾಂಸದ ಮಾರಾಟಗಾರ ಕತ್ತಲೆಯಾದ ನಂತರ ನಮಗೆ ಅದನ್ನು ತಲುಪಿಸುತ್ತಿದ್ದ. ಇದು ನನ್ನ ಬಾಲ್ಯದ ಸತ್ಯ. ನನ್ನ ಜೀವನ ಸಮಯದಲ್ಲಿ ಒಬ್ಬ ಮೇಲ್ಜಾತಿಯ ಮನುಷ್ಯ ಹಂದಿಗಳನ್ನು ಕತ್ತರಿಸುವುದನ್ನು ನಾನು ನೋಡುತ್ತೇನೆ ಎಂಬುದನ್ನು ನಾನೆಂದೂ ಯೋಚಿಸಿರಲಿಲ್ಲ.

ಬೇರೆಲ್ಲಾ ಕಡೆ ನಾವು ಮಿಶ್ರಾ ಪಾನ್ ಭಂಡಾರ್, ಮಿಶ್ರಾ ಬ್ಯೂಟಿಪಾರ್ಲರ್, ಮಿಶ್ರಾ ರೆಸ್ಟೋರೆಂಟ್ ಇವುಗಳನ್ನು ನೋಡುತ್ತೇವೆ. ಜಾತಿ ಪದ್ಧತಿಯ ಮೂಲೆಗಲ್ಲು ಕಸುಬಿನ ಕ್ರಮಾಗತ ವ್ಯವಸ್ಥೆ ಕಳಚಿ ಬೀಳುತ್ತಿದೆ. ಈ ಬೆಳವಣಿಗೆ ಜಾತಿ ಪದ್ಧತಿಗೆ ಹೆಚ್ಚು ನಷ್ಟವನ್ನುಂಟು ಮಾಡುತ್ತಿದೆ.

ಆದರೆ ಏಕೆ ಮನುವಿನ ಜನ ಮನುಧರ್ಮವನ್ನು ತೊರೆಯುತ್ತಿದ್ದಾರೆ?

* * * * * *

ಭಾರತದ ಬುದ್ಧಿಜೀವಿಗಳ ಆತ್ಮಸಾಕ್ಷಿ ಪ್ರಜೆಗಳು ಯಾವ ರೀತಿ ಆಡಳಿತಕ್ಕೊಳಗಾಗಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದರಲ್ಲಿ ಸೋತಿದೆ. ನಮ್ಮ ಪ್ರಜೆಗಳ ಮೇಲೆ ಎರಡು ರೀತಿಯ ಕಾನೂನು ಪುಸ್ತಕಗಳು ಆಡಳಿತ ನಡೆಸುತ್ತಿವೆ. ಒಂದು ದೇಶದ ಸಂವಿಧಾನ. ಮತ್ತೊಂದು ಮನುಧರ್ಮ. ಎಲ್ಲಾ ರಾಜ್ಯಗಳಲ್ಲಿ ದಲಿತರನ್ನು ಮದುವೆಯಾದ ಇತರ ಜಾತಿಯವರಿಗೆ ನಗದು ಬಹುಮಾನವಿದೆ. ಮನುಧರ್ಮ ಮರಣದಂಡನೆ ವಿಧಿಸುತ್ತದೆ. ರಾಜ್ಯ ಸರ್ಕಾರ ದಲಿತರ ಮೇಲೆ ಹಲ್ಲೆ ಮತ್ತು ಅತ್ಯಾಚಾರ ಉಂಟಾದಾಗ ಹಣದ ಪರಿಹಾರ ನೀಡುತ್ತದೆ. ಸಮಾಜ ಶಿಕ್ಷಿಸುವುದನ್ನು ಒಪ್ಪುತ್ತದೆ. ಆದುದರಿಂದ ಖೈರ್ಲಾಂಜಿಯಲ್ಲಿ ಸಾಮೂಹಿಕ ಕೊಲೆ ನಡೆದಾಗ ಹೊಸ ಗಾಂಧಿ ಕಾಣಬರಲಿಲ್ಲ.

ನಾಗರೀಕ ಸಮಾಜ ಎಲ್ಲಿದೆ?

ದುರಂತದ ಸಮಯಗಳಲ್ಲಿ ಸಾರ್ವಜನಿಕ ಬುದ್ಧಿಜೀವಿಗಳು ಓಡಿ ಹೋಗುವವರಲ್ಲಿ ಮೊದಲಿಗರು. ವಿದ್ವಾಂಸರು ಅವಿತುಕೊಳ್ಳುತ್ತಾರೆ. ಆಗ ಅರಾಜಕರಿಗೆ ಸಾರ್ವಜನಿಕ ಮನಃಸಾಕ್ಷಿಯನ್ನು ಲೂಟಿ ಹೊಡೆಯಲು ರಂಗ ಮುಕ್ತವಾಗುತ್ತದೆ. ವಿದ್ವಾಂಸ ಬುದ್ಧಿಜೀವಿಗಳು ಸಂಪಾದಕೀಯ ಪುಟದಿಂದ ಮರೆಯಾಗುತ್ತಾರೆ.

ಏಳನೇ ತರಗತಿ ಕಲಿತ ಮಾಜಿ ಟ್ರಕ್ ಚಾಲಕನೊಬ್ಬ ಪ್ರಜಾಪ್ರಭುತ್ವವನ್ನು ಹಗಲಿನಲ್ಲೇ ಸವಾರಿ ಮಾಡುತ್ತಿದ್ದಾರೆ. ಈ ಹೊಸ ಗಾಂಧಿ ತಾನು ಈ ನಾಗರೀಕ ಸಮಾಜವನ್ನು ಮಂಚೂಣಿಯಲ್ಲಿ ನಿಂತು ನಡೆಸುತ್ತಿದ್ದೇನೆ ಎನ್ನುತ್ತಿದ್ದಾರೆ! ಆದರೆ ಎಲ್ಲಿದೆ ನಾಗರೀಕ ಸಮಾಜ? ಸಮಾಜವನ್ನು ನಾಗರೀಕ ಮಾಡುವುದು ಯಾವುದು? ಸದ್ಯ ದೇಶದ ನಮ್ಮ ಪಟ್ಟಣದ ರಸ್ತೆಗಳನ್ನು ಆಳುತ್ತಿರುವ ಈ ಗಲಭೆಕೋರರು ಅದನ್ನು ಚರ್ಚಿಸುವ ಗೋಜಿಗೂ ಹೋಗಿಲ್ಲ.

ಮೊದಲು ನಾನೊಂದು ಪ್ರಶ್ನೆ ಕೇಳಲು ಇಚ್ಛಿಸುತ್ತೇನೆ. ಇಂಗ್ಲೆಂಡ್ ಆಗಲಿ, ಯೂರೋಪ್ ಆಗಲಿ ಗುಲಾಮಗಿರಿಯ ಸಂದರ್ಭದಲ್ಲಿ ನಾಗರೀಕ ಸಮಾಜವಾಗಿತ್ತೆ? ಜನಾಂಗಭೇದವಿದ್ದಾಗ ಆಫ್ರಿಕಾವನ್ನು ಯಾವುದೇ ರಾಷ್ಟ್ರ ನಾಗರೀಕ ಸಮಾಜ ಎಂದು ಪರಿಗಣಿಸಿದೆಯೆ? ಅಮೆರಿಕಾದಲ್ಲಿ ಗುಲಾಮಗಿರಿ ಇದ್ದಾಗ ಅದು ನಾಗರೀಕ ಸಮಾಜವಾಗಿತ್ತೆ? ಜಾತಿ ಎಲ್ಲಾ ಸಾರ್ವಜನಿಕ ರಂಗಗಳ ಮೇಲೆ ಪರಿಣಾಮ ಬೀರುವುದನ್ನು ಮುಂದುವರೆಸಿರುವಾಗ ಭಾರತವನ್ನು ನಾಗರೀಕ ಸಮಾಜ ಎಂದು ಕರೆಯಬಹುದೇ?

ನಗರೀಕರಣ ಮತ್ತು ಕೈಗಾರಿಕೀಕರಣಗಳ ಸಂದರ್ಭದಲ್ಲಿ ನಾಗರೀಕ ಸಮಾಜಗಳು ಅಸ್ತಿತ್ವಕ್ಕೆ ಬರುತ್ತವೆ. ನಾಗರೀಕ ಸಮಾಜಗಳಲ್ಲಿ ಪ್ರಜೆಗಳು ಸ್ಥಾಪಿಸುವ ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳಿಗಿಂತ ಪರಿಶುದ್ಧವೂ, ದಕ್ಷವೂ ಆಗಿರುತ್ತವೆ. ಅಂತಹ ನಾಗರೀಕ ಸಮಾಜಗಳು ರಾಷ್ಟ್ರದ ಕಾನೂನನ್ನು ಸಂಪೂರ್ಣವಾಗಿ ಒಪ್ಪುತ್ತಾ ಸರ್ಕಾರದ ಅಂಗಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಕಾನೂನಿಗೆ ಬದ್ಧರಾಗಿರುತ್ತವೆ. ಅಂತಹ ಸಂದರ್ಭಗಳಲ್ಲಿ ಮಾನವ ಹಕ್ಕುಗಳ ಪ್ರಶ್ನೆ ಒಳನುಗ್ಗುತ್ತದೆ. ಆದರ್ಶ ನಾಗರೀಕ ಸಮಾಜಗಳಲ್ಲಿ ಸರ್ಕಾರದ ತಪ್ಪುಗಳನ್ನು ತಿದ್ದಲು ಪ್ರಜೆಗಳು ನ್ಯಾಯಾಲಯಗಳ ಮೊರೆ ಹೋಗುತ್ತಾರೆ. ಸರ್ಕಾರ ತಾನೆ ಸ್ಥಾಪಿಸಿದ ಗುಣಾತ್ಮಕ ನೀತಿಯನ್ನು ತಾನೆ ಹೇಗೆ ಕಡೆಗಣಿಸುತ್ತದೆ? ಎಂಬ ಪ್ರಶ್ನೆ ಏಳುತ್ತದೆ.

ಹೀಗೆ ನಾಗರೀಕ ಸಮಾಜಗಳಲ್ಲಿ ಪ್ರಜೆಗಳು ಮತ್ತು ಪ್ರಜೆಗಳು ಕಟ್ಟಿದ ಸಂಸ್ಥೆಗಳು ಸರ್ಕಾರಿ ಅಂಗಗಳಿಗಿಂತ ಹೆಚ್ಚು ಸೌಜನ್ಯವನ್ನು ತೋರಿಸುತ್ತಾರೆ. ಕೊನೆಗೆ ನಾಗರೀಕ ಸಮಾಜಗಳು ಸರ್ಕಾರಕ್ಕಿಂತ ಹೆಚ್ಚು ನೀತಿಯುತರಾಗಿ ಹೊರ ಹೊಮ್ಮುತ್ತಾರೆ. ಇಂತಹ ನೀತಿಯುತ ಅಧಿಕಾರದ ಮೂಲಕ ನಾಗರೀಕ ಸಮಾಜಗಳು ಮತ್ತು ಪ್ರಜೆಗಳು ಸರ್ಕಾರವನ್ನು ಪ್ರಶ್ನಿಸುತ್ತಾ ಹೋಗುತ್ತಾರೆ.

ಈಗ ಭಾರತ ಎಲ್ಲಿದೆ? ನಗರೀಕರಣ ಮತ್ತು ಕೈಗಾರಿಕೀಕರಣದ ದೃಷ್ಟಿಯಿಂದ ಭಾರತ ಇನ್ನೂ ಅರ್ಧ ದಾರಿಯನ್ನೂ ಕ್ರಮಿಸಿಲ್ಲ. ಆದ್ದರಿಂದ ಭಾರತ ನಾಗರೀಕ ಸಮಾಜವಾಗಿ ಮಾರ್ಪಾಡಾಗಿದೆ ಎಂಬ ಮಾತು ಸರಿ ಎನಿಸುವುದಿಲ್ಲ. ನಾಗರೀಕ ಸಂಸ್ಥೆಗಳನ್ನೂ ಸರ್ಕಾರಿ ಸಂಸ್ಥೆಗಳನ್ನೂ ಒಮ್ಮೆ ಹೋಲಿಸಿ ನೋಡಿ. ಸರ್ಕಾರ ಪ್ರಜೆಗೆ ವಿರುದ್ಧ ನಡೆದುಕೊಂಡರೆ ಪ್ರಜೆ ನ್ಯಾಯಕ್ಕಾಗಿ ನಾಗರೀಕ

ಮೇಲ್ಜಾತಿಯ ಜನ ಪ್ರಜಾಪ್ರಭುತ್ವದ ಬಗ್ಗೆ ಮರು ಚಿಂತನೆ ಮಾಡುತ್ತಿದ್ದಾರೆಯೆ?

ಸಮಾಜದ ಸಂಸ್ಥೆಗಳತ್ತ ನೋಡುತ್ತಾನೆ. ಹೀಗೆಯೆ ಚಳ ವಳಿಗಳು ನಾಗರೀಕ ಸಮಾಜಗಳಾಗಿ ಮಾರ್ಪಡುವುದು.

ಅಸ್ಪೃಶ್ಯತೆಯನ್ನು ಆಚರಿಸುತ್ತಿರುವವರು ಯಾರು? ಸರ್ಕಾರವೆ ಅಥವಾ ಸಮಾಜವೆ? ದಲಿತರು ಇದರಿಂದ ವಿಮೋಚನೆ ಪಡೆಯಲು ಎಲ್ಲಿಗೆ ಹೋಗುತ್ತಾರೆ? ಸರ್ಕಾರದ ಕಡೆ ಹೋಗುತ್ತಾರೆಯೆ ಅಥವಾ ನಾಗರೀಕ ಸಮಾಜದ ಕಡೆ ಹೋಗುತ್ತಾರೆಯೆ? ದಲಿತರ ಪ್ರತ್ಯೇಕತೆಯನ್ನು ಕೊನೆಗೊಳಿಸುವತ್ತ ತಾನೆ ಮಾಡಿದ ನಿಯಮಗಳನ್ನು ಭಾರತ ಸರ್ಕಾರ ಅನುಸರಿಸದೇ ಇರಬಹುದು. ಸರ್ಕಾರ ಮಾಡಿದ ತಪ್ಪನ್ನು ಸರಿಪಡಿಸುವುದಕ್ಕಾಗಿ ನ್ಯಾಯ ಬೇಡಿ ದಲಿತರು ನಾಗರೀಕ ಸಮಾಜಕ್ಕೆ ಮೊರೆ ಹೋದುದಕ್ಕೆ ಯಾವುದಾದರೂ ನಿದರ್ಶನಗಳಿವೆಯೆ? ದಲಿತರ ಮೇಲೆ ಅತ್ಯಾಚಾರ ಮಾಡುವವರು ಯಾರು? ಸಮಾಜವೆ ಅಥವಾ ಸರ್ಕಾರವೆ?

ದಲಿತರನ್ನು ಮರೆತುಬಿಡಿ. ಎಲ್ಲ ಪ್ರಜೆಗಳ ಬಗ್ಗೆ ಮತಾಡೋಣ. ಇಬ್ಬರು ಯುವಜನರು ಪ್ರೀತಿಸಿ ಮದುವೆ ಮಾಡಿಕೊಳ್ಳುತ್ತಾರೆ. ಅವರನ್ನು ಹೊಡೆದೋಡಿಸುವವರು ಯಾರು? ಸರ್ಕಾರವೆ ಅಥವಾ ಸಮಾಜವೆ? ಯಾರು ಅವರನ್ನು ಕೊಲ್ಲುತ್ತಾರೆ? ಸರ್ಕಾರವೆ ಅಥವಾ ಸಮಾಜವೆ? ವರದಕ್ಷಿಣೆಯನ್ನು ಸರ್ಕಾರ ಪ್ರೋತ್ಸಾಹಿಸುತ್ತದೆಯೆ? ವರದಕ್ಷಿಣೆ ಪಿಡುಗಿಗೆ ಒಳಗಾಗಿ ನೊಂದವರು ನ್ಯಾಯಕ್ಕಾಗಿ ಎಲ್ಲಿ ಹೋಗಬೇಕು? ಸರ್ಕಾರಕ್ಕೊ? ಸಮಾಜಕ್ಕೊ?

ಭಾರತದ ಬುದ್ಧಿಜೀವಿಗಳ ಆತ್ಮಸಾಕ್ಷಿ ಪ್ರಜೆಗಳು ಯಾವ ರೀತಿ ಆಡಳಿತಕ್ಕೊಳಗಾಗಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದರಲ್ಲಿ ಸೋತಿದೆ. ನಮ್ಮ ಪ್ರಜೆಗಳ ಮೇಲೆ ಎರಡು ರೀತಿಯ ಕಾನೂನು ಪುಸ್ತಕಗಳು ಆಡಳಿತ ನಡೆಸುತ್ತಿವೆ. ಒಂದು ದೇಶದ ಸಂವಿಧಾನ. ಮತ್ತೊಂದು ಮನುಧರ್ಮ. ಎಲ್ಲಾ ರಾಜ್ಯಗಳಲ್ಲಿ ದಲಿತರನ್ನು ಮದುವೆಯಾದ ಇತರ ಜಾತಿಯವರಿಗೆ ನಗದು ಬಹುಮಾನವಿದೆ. ಮನುಧರ್ಮ ಮರಣದಂಡನೆ ವಿಧಿಸುತ್ತದೆ. ರಾಜ್ಯ ಸರ್ಕಾರ ದಲಿತರ ಮೇಲೆ ಹಲ್ಲೆ ಮತ್ತು ಅತ್ಯಾಚಾರ ಉಂಟಾದಾಗ ಹಣದ ಪರಿಹಾರ ನೀಡುತ್ತದೆ. ಸಮಾಜ ಶಿಕ್ಷಿಸುವುದನ್ನು ಒಪ್ಪುತ್ತದೆ.

ಆದುದರಿಂದ ಖೈರ್ಲಾಂಜಿಯಲ್ಲಿ ಸಾಮೂಹಿಕ ಕೊಲೆ ನಡೆದಾಗ ಹೊಸ ಗಾಂಧಿ ಕಾಣಬರಲಿಲ್ಲ. ಕೆಲವು ತಿಂಗಳುಗಳ ಹಿಂದೆ ಒರಿಸ್ಸಾದ ಒಂದು ಹಳ್ಳಿಯಲ್ಲಿ ದಲಿತರನ್ನು ಹಳ್ಳಿಯ ದೇವಸ್ಥಾನದೊಳಕ್ಕೆ ಹೋಗಲು ಬಿಡದಿದ್ದಾಗ ಹೊಸ ಗಾಂಧಿ ಕಾಣಲಿಲ್ಲ. ಕಾಪ್ ಪಂಚಾಯಿತಿಗಳು ದಲಿತರನ್ನು ಅಟ್ಟಿ ಅಡ್ಡಾಡಿಸುತ್ತಿದ್ದಾಗ ಹೊಸ ಗಾಂಧಿ ಹತ್ತಿರದಲ್ಲೆಲ್ಲೂ ಇರಲಿಲ್ಲ. ದಲಿತರು ತಮ್ಮ ಹಕ್ಕುಗಳಿಗಾಗಿ ಒತ್ತಾಯಿಸುವಾಗ ಹೊಸ ಗಾಂಧಿ ಹತ್ತಿರದಲ್ಲೆಲ್ಲೂ ಇರಲಿಲ್ಲ. ಈ ಗಾಂಧಿಯ ಹಳ್ಳಿಯ ಸುಮಾರು ನೂರು ಮೈಲಿ ದೂರದಲ್ಲಿ ಒಬ್ಬ ದಲಿತ ಕೈಗಾರಿಕೋದ್ಯಮಿ ಒಂದು ಸಕ್ಕರೆ ಕಾರ್ಖಾನೆಯನ್ನು ಕಟ್ಟುತ್ತಿದ್ದಾರೆ ಅವರನ್ನು ನಮ್ಮ ನಾಗರೀಕ ಸಮಾಜ ತಡೆಯುತ್ತಿದೆ. ಮಹಾರಾಷ್ಟ್ರದಲ್ಲಿ ಒಂದೇ ಒಂದು ಜಾತಿ ಸಕ್ಕರೆ ಉದ್ಯಮವನ್ನು ಗುತ್ತಿಗೆ ಹಿಡಿದಿದೆ. ಲಕ್ನೊ ಮತ್ತು ಕಲ್ಕತ್ತಾದಂತಹ

ಭಾರತದ ಸಂಪತ್ತಿನ ಮತ್ತು ಸಾಮಾಜಿಕ ಸಂಸ್ಥೆಗಳ ಮೇಲೆ ಅಸಮಾನ ಹಿಡಿತವನ್ನು ಹೊಂದಿದ್ದ ಮೇಲ್ಜಾತಿಯವರು ಕಾಲಾನುಕ್ರಮಕ್ಕೆ ರಾಜಕೀಯ ಮತ್ತು ಸಂಸತ್ತಿನಿಂದ ದೂರವಾದರು. ಅವರಲ್ಲಿ ಬಹಳಷ್ಟು ಜನ ಚುನಾವಣಾ ಮತಗಟ್ಟೆಗಳಿಗೆ ಹೋಗುವುದನ್ನೇ ನಿಲ್ಲಿಸಿದರು. ಇದೇ ಸಮಯದಲ್ಲಿ ಸಂಸತ್ತಿನಲ್ಲಿನ ರಾಜಕಾರಿಣಿಗಳ ನಡತೆ ಅವರ ಹತಾಶೆಗೆ ತುಪ್ಪ ಸುರಿಯಿತು. ಆದರೆ ಈ ಕೋಪವನ್ನು ಹೊರಗೆ ಹಾಕಲು ಯಾವುದೇ ಸಂದರ್ಭ ಅಥವಾ ಮಾರ್ಗ ಒದಗಿರಲಿಲ್ಲ. ಅಷ್ಟಕ್ಕೆ ಅಣ್ಣಾ ಹಜಾರೆ ಬಂದರು. ಈ ಅವಕಾಶವನ್ನು ಮೇಲ್ಜಾತಿಗಳು ಬಿಗಿಯಾಗಿ ಅಪ್ಪಿಕೊಂಡುವು. ಅಣ್ಣಾ ಚಳವಳಿ ಒಂದು ದಂಗೆಯೋಪಾದಿಯಲ್ಲಿ ಮಾರ್ಪಾಡಾಯಿತು.

ದೂರದ ನಗರಗಳಲ್ಲಿನ ದಲಿತರು ಈ ಬಗ್ಗೆ ತಿಳಿದಿದ್ದಾರೆ. ಆದರೆ ಈ ಹೊಸ ಗಾಂಧಿ ಅವರಿಗೆ ಇದೇನು ಕೇಳಿಸಿಲ್ಲ.

ಸರ್ಕಾರ ತನ್ನ ಆಧುನಿಕ ಸಂವಿಧಾನದ ಮೂಲಕ ದಲಿತರಿಗೆ ರಕ್ಷಣೆ ನೀಡುತ್ತಿರುವುದು ನಿಜ. ಮನುಧರ್ಮಾಧಾರಿತ ಸಮಾಜ ದಲಿತರನ್ನು ಹೊಡೆದೋಡಿಸುತ್ತಿದೆ. ನಮ್ಮ ದೊಡ್ಡ ದೊಡ್ಡ ನಗರದ ಬೀದಿಗಳಲ್ಲಿ ಸರಿ ತಪ್ಪುಗಳನ್ನು ನಿರ್ಣಯಿಸುತ್ತಿರುವ ಸಮೂಹಗಳು ಮನುಧರ್ಮದಿಂದ ನೊಂದವರಲ್ಲ. ಅವು ಮನುಧರ್ಮವನ್ನು ತಿರಸ್ಕರಿಸುವ ನಮ್ಮ ಸಂವಿಧಾನದಿಂದ ನೊಂದವರು. ನಮ್ಮ ಹೊಸ ಗಾಂಧಿ ಜಾತಿ ಬಹಿಷ್ಕೃತರನ್ನು ಹಿಂಸಿಸುವ ಕಾನೂನು ಮಾಡಿದ ಸಮಾಜವನ್ನು ಎಂದೂ ಪ್ರಶ್ನಿಸುವುದಿಲ್ಲ.

ಕೆಲವು ದಿನಗಳ ಹಿಂದೆ ಚಿತ್ರ ನಿರ್ಮಾಪಕ ಮಹೇಶ್ ಭಟ್ ತನ್ನ ಟ್ವಿಟರ್‌ನಲ್ಲಿ ಈ ಹೊಸ ಗಾಂಧಿ ಭಾರತವನ್ನು ವಿಭಜಿಸುತ್ತಿದ್ದಾರೆ ಎಂದು ಬರೆದರು. ಅವರಿಗೆ ಇಂದು ಕೂಡ ದ್ವೇಷದ ಸಂದೇಶಗಳು ಬರುತ್ತಿವೆ.

ನಾಗರೀಕ ಎಂದು ಭಾರತ ಸಮಾಜ ಎನಿಸಿಕೊಳ್ಳಬೇಕಾದರೆ ಅದು ರಾಷ್ಟ್ರದ ಕಾನೂನುಗಳನ್ನು ತನ್ನೊಳಗೆ ಇಳಿಸಿಕೊಳ್ಳಬೇಕು. ಅಂದರೆ ಅದು ಇಂದು ಜಾತಿ ಸಮಾಜ ಹೊತ್ತು ಮೆರೆಸುತ್ತಿರುವ ಕಾನೂನು ಪುಸ್ತಕಗಳನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು.

ಈ ನಮ್ಮ ಹೊಸ ಗಾಂಧಿ ಮತ್ತು ಅವರ ಹಿಂದಿರುವ ಸಮೂಹ ಯಾವ ಕಡೆ ನಿಲ್ಲುತ್ತದೆ? ರಾಷ್ಟ್ರ ಮತ್ತು ಅದರ ಸಂವಿಧಾನದ ಕಡೆಗೇ? ಅಥವಾ ಮನುಧರ್ಮವನ್ನು ಹೊತ್ತ ಸಮಾಜದ ಕಡೆಗೇ?

ದಲಿತರಿಗೆ ಅದು ತಿಳಿದಿದೆ. ಇತರರು ಮಾತ್ರ ಮೌಢ್ಯವನ್ನು ಪ್ರದರ್ಶಿಸಬಹುದು.

* * * * * *

ಅಣ್ಣ ಹಜಾರೆಯವರ 'ಜನ ಸಂಸತ್ತು' ವಿರುದ್ಧ 'ದೇಶದ ಸಂಸತ್ತು' ಕೂಗು ಒಂದು ಅಸಾಧಾರಣ ಘಟನೆ. ಇದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಬ್ರಿಟನ್ ತನ್ನ ಸಂಸತ್ತನ್ನು ಸ್ಥಾಪಿಸುವುದಕ್ಕೋಸ್ಕರ ಯಾವ ದಾರಿಯನ್ನು ತುಳಿಯಿತೊ ಆ ದಾರಿಯಲ್ಲೊಮ್ಮೆ ನಡೆಯುವುದು ಅವಶ್ಯಕ. ರಾಜಕಾರಣ, ರಾಜಕಾರಿಣಿಗಳು ಮತ್ತು ಸಂಸತ್ತು ಇವುಗಳ ವಿರುದ್ಧ ಈ ರೀತಿಯ ಉದ್ರೇಕ ಏಕೆ?

ಕ್ರಿ.ಶ.1200ರಲ್ಲಿ ಬ್ರಿಟಿಷ್ ಜಾಗೀರುದಾರರುಗಳು ಉತ್ತರ ಫ್ರಾನ್ಸ್‌ನಲ್ಲಿನ (ಇದು ವಿಚಿತ್ರವಾಗಿ ಕಂಡರೂ) ಕೃಷಿ ಭೂಮಿಯ ಒಡೆಯರಾಗಿದ್ದರು. ಈ ಜಾಗೀರುದಾರರು ಫ್ರಾನ್ಸ್‌ನಲ್ಲಿ ತಮ್ಮ ಜಮೀನುಗಳುಳ್ಳ ಪ್ರದೇಶಗಳನ್ನು ರಕ್ಷಣೆ ಮಾಡುವುದಕ್ಕಾಗಿ ಬ್ರಿಟನ್ ರಾಜನಿಗೆ ಹಣ ಮತ್ತು ಸೇವಕರನ್ನು ನೀಡುತ್ತಿದ್ದರು.

ಬ್ರಿಟನ್ನಿನ ರಾಜ ಜಾನ್ ಫ್ರಾನ್ಸ್‌ನಲ್ಲಿ ಬ್ರಿಟನ್ನಿನ ಜಾಗೀರುದಾರರುಗಳು ಮಾಲೀಕರಾಗಿದ್ದ ಪ್ರದೇಶಗಳನ್ನು ರಕ್ಷಿಸಲಾರದಾದ. ಈ ಜಾಗೀರುದಾರರುಗಳು ರಾಜ ಜಾನ್ ಮೇಲೆ ಬಹಳ ಕುಪಿತರಾದರು. ಈ ನಿಷ್ಪ್ರಯೋಜಕ ಜಾನ್ ಪೋಪರ ಒಳ್ಳೆಯ ಅಭಿಪ್ರಾಯವನ್ನೂ ಕಳೆದುಕೊಂಡ. ಪೋಪ್ ರಾಜನನ್ನು ಚರ್ಚ್‌ನಿಂದ ಹೊರ ಹಾಕಿದ ಮತ್ತು ಬ್ರಿಟನ್‌ನಲ್ಲಿ ಚರ್ಚ್‌ಗಳ ಸೇವೆಯನ್ನು ಸ್ಥಗಿತಗೊಳಿಸಿದ. ದೇವರಿಗೆ ಭಯ ಬೀಳುವ ಬ್ರಿಟನ್ನರು ಇದರಿಂದ ರಾಜನ ಮೇಲೆ ಕಿಡಿಕಾರಿದರು. ಎಲ್ಲ ಕಡೆಯಿಂದಲೂ ಸೋತ ಜಾನ್ ಹೆಚ್ಚು ಹಣ ಮತ್ತು ಸೈನ್ಯಕ್ಕೆ ಹೆಚ್ಚು ಜನರನ್ನು ಕಳುಹಿಸುವಂತೆ ಜಾಗೀರುದಾರರುಗಳನ್ನು ಕೇಳಿದ. ಜಾಗೀರುದಾರರು ರಾಜನಿಗೆ ಹಣವನ್ನು ಒದಗಿಸುವ ಮೂಲಗಳಾಗಿದ್ದರಲ್ಲದೆ ಜನರಿಂದ ತೆರಿಗೆ ಸಂಗ್ರಹಿಸುವವರೂ ಆಗಿದ್ದರು. ತೆರಿಗೆ ವಿಧಿಸುವ ಮೊದಲು ನಮ್ಮ ಅಭಿಪ್ರಾಯ ಪಡೆಯಿರಿ ಎಂಬ ಒತ್ತಾಯ ಅವರು ಹೇರಿದರು. 13ನೇ ಶತಮಾನದ ಬ್ರಿಟನ್ ಅನೇಕ ವರ್ಗಗಳ ಜನರನ್ನು ಹೊಂದಿತ್ತು. ರಾಜನಲ್ಲದೆ ಅಲ್ಲಿ ಜಾಗೀರುದಾರರುಗಳು, ಬಿಷಪ್‌ಗಳು, ಜಮೀನ್ದಾರರುಗಳು, ಉದ್ಯಮಿಗಳು, ಮುಕ್ತರಲ್ಲದ ಸೇವಕರು ಇದ್ದರು. ಜಾಗೀರುದಾರರು ಸ್ವತಂತ್ರ ಜನರನ್ನು ಹೇಗೆ ನಡೆಸಿಕೊಳ್ಳಬೇಕು ಎಂಬುದರ ಬಗ್ಗೆ ಒಂದು ಕಾನೂನನ್ನು ತರುವಂತೆ ಒತ್ತಾಯಿಸಿದರು.

ಬಹಳ ಸಂದಿಗ್ಧದಲ್ಲಿದ್ದ ರಾಜ ಜಾಗೀರುದಾರರು ಮತ್ತು ಬಿಷಪ್‌ಗಳ ಜೊತೆ ಒಂದು ಒಪ್ಪಂದ ಮಾಡಿಕೊಳ್ಳಬೇಕಾಯಿತು. ಜಾಗೀರುದಾರರುಗಳು ಮತ್ತು ಬಿಷಪ್‌ಗಳಿಗೆ ಅವನು 'ಮ್ಯಾಗ್ನಕಾರ್ಟ'ವನ್ನು ನೀಡಿದ. ರಾಜ್ಯಾಡಳಿತದ ಪರಮಾಧಿಕಾರದ ಬಗ್ಗೆ ಹೊಂದಾಣಿಕೆಯಾಯಿತು. 1215ರಲ್ಲಿ ನೀಡಲಾದ ಮ್ಯಾಗ್ನಕಾರ್ಟದ ಗರ್ಭದಿಂದ ಸಂಸತ್ತು ಹುಟ್ಟಿತು.

ಈಗ ಪ್ರತಿಸಾರಿ ರಾಜ ಹೊಸ ಕಾನೂನು ತರಬೇಕೆಂದಾಗಲೂ ಅವನು ಜಾಗೀರುದಾರರುಗಳು ಮತ್ತು

ಬಿಷಪ್‌ರ ಅಭಿಪ್ರಾಯವನ್ನು ಪಡೆಯಬೇಕಾಯಿತು. ಜಾಗೀರುದಾರರುಗಳು ಮತ್ತು ಬಿಷಪ್‌ರ ಸಭೆ, ಹೌಸ್ ಆಫ್ ಲಾರ್ಡ್ಸ್ (ಮೇಲ್ಮನೆ) ಆಗಿ ವಿಕಾಸ ಹೊಂದಿತು. ಆಗ ಇಂಗ್ಲೆಂಡ್‌ನಲ್ಲಿ ಎರಡು ಶಕ್ತಿ ಕೇಂದ್ರಗಳಾದವು. ಹೌಸ್ ಆಫ್ ಲಾರ್ಡ್ಸ್ ಜೊತೆ ಸಂಸತ್ತಿನ ಮೂಲ ಮಾದರಿ ಉದಯವಾಯಿತು. 1327ರಲ್ಲಿ ಹೌಸ್ ಆಫ್ ಲಾರ್ಡ್ಸ್ ಮೊದಲನೆ ಕಿಂಗ್ ಎಡ್‌ವರ್ಡ್‌ನ ಮಗನನ್ನು ಸಿಂಹಾಸನದಿಂದ ಹೊರಹಾಕಿತು. 3ನೇ ಎಡ್‌ವರ್ಡ್ ರಾಜ ಸಿಂಹಾಸನವನ್ನೇರಿದ. ಇದು ಪ್ರಜಾಪ್ರಭುತ್ವದ ಮೊದಲ ಗೆಲುವು. ಇದರಿಂದ ರಾಜಪ್ರಭುತ್ವ ನಿರಂಕುಶ ಅಧಿಕಾರವನ್ನು ಕಳೆದುಕೊಂಡಿತು. ಬೆಳೆಯುತ್ತಿರುವ ಹೌಸ್ ಆಫ್ ಲಾರ್ಡ್ಸ್‌ನ ಪ್ರಭಾವವನ್ನು ಅರಿತುಕೊಂಡ ರಾಜ 3ನೇ ಎಡ್‌ವರ್ಡ್ ತನ್ನ ಸಾಮಾಜಿಕ ತಳಹದಿಯನ್ನು ವಿಸ್ತರಿಸಿಕೊಳ್ಳುವದಕ್ಕಾಗಿ ಹೊಸ ಯೋಜನೆಯನ್ನು ತಯಾರಿಸಿದ. ಜಾಗೀರುದಾರರುಗಳು ಮತ್ತು ಬಿಷಪರು ಸಾಮಾನ್ಯ ಜನತೆಗೆ ಸೇರಿದವರಲ್ಲ ಮತ್ತು ಆ ಜನತೆಯ ಪ್ರತಿನಿಧಿಗಳೂ ಅಲ್ಲ ಎಂಬುದು ರಾಜನಿಗೆ ತಿಳಿದಿತ್ತು. ಜಾಗೀರುದಾರರುಗಳು ಭಾರತದ ಜಮೀನ್ದಾರರುಗಳು ಮತ್ತು ತಾಲ್ಲೂಕುದಾರರಂತೆ ಎರಡನೇ ಹಂತದ ಆಡಳಿತಗಾರರು.

ಸಾಮಾನ್ಯ ಜನರನ್ನು ಪ್ರತಿನಿಧಿಸಲು ರಾಜ ಪಟ್ಟಣಗಳು ಮತ್ತು ಪ್ರಾಂತ್ಯಗಳಿಂದ ಪ್ರತಿನಿಧಿಗಳನ್ನು ಕರೆದ. ಜನರಿಂದ ಚುನಾಯಿತರಾದ ಪ್ರತಿನಿಧಿಗಳ ಹೊಸ ಗುಂಪು ಒಂದು ಕಡೆ ಸೇರಿದಾಗ ಅವರಿಗೆ ಒಂದು ಹೊಸ ಹೆಸರು ನೀಡುವ ಅವಶ್ಯಕತೆಯುಂಟಾಯಿತು. ಸಾಮಾನ್ಯರೆಂದು ಕರೆಯಲ್ಪಡುತ್ತಿದ್ದ ಅವರು ಮುಂದೆ ಸಾಮಾನ್ಯ ಸಭೆ (ಹೌಸ್ ಆಫ್ ಕಾಮನ್ಸ್) ಹುಟ್ಟಿನ ಬೀಜವಾದರು.

1332ರಲ್ಲಿ ಈ ಸಾಮಾನ್ಯರು ಮತ್ತು ಜಮೀನ್ದಾರರು ಒಂದೇ ಸಭೆಯಲ್ಲಿ ಭಾಗವಹಿಸುತ್ತಿದ್ದರು. 1341ರಷ್ಟರಲ್ಲಿ ಸಾಮಾನ್ಯರು ಪ್ರತ್ಯೇಕವಾಗಿ ಸಭೆ ಸೇರಿ ಸಾಮಾನ್ಯ ಸಭೆಯ (ಹೌಸ್ ಆಫ್ ಕಾಮನ್ಸ್)ನ ಸ್ಥಾಪನೆಗೆ ಕಾರಣರಾದರು. ಈಗ ಇಂಗ್ಲೆಂಡಿನಲ್ಲಿ ಮೂರು ಅಧಿಕಾರ ಕೇಂದ್ರಗಳಿವೆ. ರಾಜ, ಹೌಸ್ ಆಫ್ ಲಾರ್ಡ್ಸ್ ಮತ್ತು ಹೌಸ್ ಆಫ್ ಕಾಮನ್ಸ್. ರಾಜ ಮೂರನೇ ಎಡ್‌ವರ್ಡ್‌ನ ಯೋಜನೆ ಫಲಿಸಿತು. ಬಹಳಷ್ಟು ಕಾಲ ಇವುಗಳು ಒಂದಕ್ಕೊಂದು ತದ್ವಿರುದ್ಧವಾಗಿಯೆ ನಡೆದುಕೊಳ್ಳುತ್ತಿದ್ದುವು.

ಮೊದಮೊದಲು ಈ ಸಾಮಾನ್ಯರು ಪ್ರಜೆಗಳ ಪರವಾಗಿ ಅರ್ಜಿಗಳನ್ನು ಸಲ್ಲಿಸುವಂತೆ ಕೇಳಲಾಯಿತು. ಆದರೆ ಸಾಮಾನ್ಯ ಸಭೆಯ ಪ್ರತಿನಿಧಿಗಳು ತಮ್ಮನ್ನು ಕಾನೂನು ಮಾಡುವುದರ ಭಾಗವಾಗಿ ಮಾಡುವಂತೆ ಕೋರಿದರು. ಜಮೀನುದಾರರುಗಳು ಇದನ್ನು ವಿರೋಧಿಸಿದರು. ವಿಪರ್ಯಾಸವೆಂದರೆ ರಾಜಾಧಿಕಾರದ ವಿರುದ್ಧ ಹೋರಾಡಿದ ಈ ಜಾಗೀರುದಾರರುಗಳು ಈಗ ಪ್ರಜಾಪ್ರಭುತ್ವವನ್ನು ವಿಸ್ತರಿಸಿ ಸಾಮಾನ್ಯ ಜನರಿಗೆ ಹಕ್ಕುಗಳನ್ನು ನೀಡುವುದನ್ನು ವಿರೋಧಿಸಿದರು!

ಹೋರಾಟ ಮುಂದುವರೆಯಿತು. ಕೊನೆಗೆ 1407ರಲ್ಲಿ ಸಾಮಾನ್ಯ ಸಭೆ ಮತ ಚಲಾಯಿಸುವ ಹಕ್ಕು ಪಡೆಯಿತು.

1414ರಲ್ಲಿ ಸಂಪೂರ್ಣ ಜನಬೆಂಬಲ ಹೊಂದಿದ್ದ ಸಾಮಾನ್ಯ ಸಭೆ ರಾಜ ಮತ್ತು ಹೌಸ್ ಆಫ್ ಲಾರ್ಡ್ಸ್ ತಾನು ತಯಾರಿಸಿದ ಕರಡು ಮಸೂದೆಗಳಲ್ಲಿನ ಪದಗಳನ್ನು ಬದಲಾಯಿಸಬಾರದು ಎಂಬ ಕೋರಿಕೆ ನೀಡಿ ರಾಜ ಐದನೇ ಹೆನ್ರಿಯಿಂದ ಬಲತ್ಕಾರವಾಗಿ ಒಪ್ಪಿಗೆ ಪಡೆಯಿತು. ಇದು ಪ್ರಜಾಪ್ರಭುತ್ವದ ಎರಡನೇ ಗೆಲುವು.

ಆದರೆ ಬಹಳ ವಿಚಿತ್ರವಾದ ಘಟನೆಯೊಂದು ನಡೆಯಿತು. ರಾಜ ಮತ್ತು ಜಾಗೀರುದಾರರುಗಳು ಕನಿಷ್ಠ ದರ್ಜೆಯ ಸದಸ್ಯರು ಸಾಮಾನ್ಯ ಸಭೆಯಲ್ಲಿ ಸೇರಿಕೊಂಡಿರುವುದನ್ನು ಕಂಡು ಆತಂಕಕ್ಕೊಳಗಾದರು. ಈ ವೈಪರಿತ್ಯವನ್ನು ಸರಿಪಡಿಸಲು 1429ರಲ್ಲಿ ಸಂಸತ್ತಿನಲ್ಲಿ ಮತ ಹಾಕುವ ಅರ್ಹತೆಯ ಸಂಬಂಧದದಲ್ಲಿ ಒಂದು ನಿಯಮವನ್ನು ಸೇರಿಸಲಾಯಿತು. ಅದರಂತೆ ಮತ ಹಾಕಲು ಅರ್ಹರಾಗುವವರು ಕನಿಷ್ಠ 40 ಶಿಲಿಂಗ್‌ಗಳ ಆಸ್ತಿಯನ್ನು ಹೊಂದಿರಲೇಬೇಕು. ಇದರ ಪರಿಣಾಮವಾಗಿ ಬಿಟನ್ನಿನ ಶೇ. 5 ರಿಂದ 10ರಷ್ಟು ಜನರು ಮಾತ್ರ ಮತ ಹಾಕುವ ಅರ್ಹತೆಯನ್ನು ಪಡೆದರು. ಈ ಸಂಸತ್ತಿನ ನಿಯಮವನ್ನು 1918ರಲ್ಲಿ ಸಂಪೂರ್ಣವಾಗಿ ತೆಗೆದುಹಾಕಲಾಯಿತು. ಮಹಿಳೆಯರು ಮತದಾರರಾಗಲು ಇನ್ನೂ 14 ವರ್ಷ ಕಾಯಬೇಕಾಯಿತು. ಇವು 1215ರಿಂದ 1932ರ ಮಧ್ಯೆ ವಿಕಾಸವಾದ ಬ್ರಿಟಿಷ್ ಸಂಸತ್ತು ಮತ್ತು ಪ್ರಜಾಪ್ರಭುತ್ವದ ಪೂರ್ಣ ವಿವರಗಳು. ಸಂಪತ್ತಿನ ನಿಯಮ 1429ರಲ್ಲಿ ಸೇರಿದ ಮೇಲೆ ಬ್ರಿಟನ್ನಿನ ಕೆಳವರ್ಗದವರಿಗೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಭಾಗವಾಗಬೇಕಾದರೆ 489 ವರ್ಷಗಳು ಬೇಕಾಯಿತು.

ರಾಜಪ್ರಭುತ್ವದ ವಿರುದ್ಧ ಪ್ರಜಾಪ್ರಭುತ್ವಕ್ಕಾಗಿ ಹೋರಾಡಿದ ಜಾಗೀರ್‌ದಾರರುಗಳು ಪ್ರಜಾಪ್ರಭುತ್ವವನ್ನು ಸಾಮಾನ್ಯರಿಗೆ ವಿಸ್ತರಿಸಲು ತಡೆ ಹಾಕಿದರು. ಜಾಗೀರುದಾರರುಗಳ ಜೊತೆ ಹೋರಾಡಿದ ಸಾಮಾನ್ಯರು ಎಲ್ಲ ಜನರಿಗೆ ಪ್ರಜಾಪ್ರಭುತ್ವದ ವಿಸ್ತರಿಕೆಯನ್ನು ತಡೆಯಲು ಮತದಾರರ ಅರ್ಹತೆಗೆ ಸಂಪತ್ತಿನ ನಿಯಮ ಸೇರಿಸುವುದರಲ್ಲಿ ತಾವೂ ಭಾಗಿಯಾದರು.

ಭಾರತದ ಸಂಪತ್ತಿನ ಮತ್ತು ಸಾಮಾಜಿಕ ಸಂಸ್ಥೆಗಳ ಮೇಲೆ ಅಸಮಾನ ಹಿಡಿತವನ್ನು ಹೊಂದಿದ್ದ ಮೇಲ್ಜಾತಿಯವರು ಕಾಲಾನುಕ್ರಮಕ್ಕೆ ರಾಜಕೀಯ ಮತ್ತು ಸಂಸತ್ತಿನಿಂದ ದೂರವಾದರು. ಅವರಲ್ಲಿ ಬಹಳಷ್ಟು ಜನ ಚುನಾವಣಾ ಮತಗಟ್ಟೆಗಳಿಗೆ ಹೋಗುವುದನ್ನೇ ನಿಲ್ಲಿಸಿದರು. ಇದೇ ಸಮಯದಲ್ಲಿ ಸಂಸತ್ತಿನಲ್ಲಿನ ರಾಜಕಾರಿಣಿಗಳ ನಡತೆ ಅವರ ಹತಾಶೆಗೆ ತುಪ್ಪ ಸುರಿಯಿತು. ಆದರೆ ಈ ಕೋಪವನ್ನು ಹೊರಗೆ ಹಾಕಲು ಯಾವುದೇ ಸಂದರ್ಭ ಅಥವಾ ಮಾರ್ಗ ಒದಗಿರಲಿಲ್ಲ. ಅಷ್ಟಕ್ಕೆ ಅಣ್ಣಾ ಹಜಾರೆ ಬಂದರು. ಈ ಅವಕಾಶವನ್ನು ಮೇಲ್ಜಾತಿಗಳು ಬಿಗಿಯಾಗಿ ಅಪ್ಪಿಕೊಂಡುವು. ಅಣ್ಣಾ ಚಳವಳಿ ಒಂದು ದಂಗೆಯೋಪಾದಿಯಲ್ಲಿ ಮಾರ್ಪಾಡಾಯಿತು. ತಮ್ಮ ಶಿಕ್ಷಣವನ್ನು ಹೈಸ್ಕೂಲಿಗೆ ಕೊನೆಗೊಳಿಸಿದವರಿಂದ ಹಿಡಿದು ಪ್ರೊಫೆಸರ್‌ಗಳು, ಗೃಹಿಣಿಯರು, ವಾರ್ತಾ ಪತ್ರಿಕೆಗಳ ಸಂಪಾದಕರು, ತರಕಾರಿ ಮಾರುವವರು, ಮಾಧ್ಯಮದ ಪ್ರತಿನಿಧಿಗಳು ಮತ್ತು ಟಿ.ವಿ ಚಾನಲ್‌ಗಳ ನಿರೂಪಕರೂ ಒಳಗೊಂಡಂತೆ ಎಲ್ಲಾ ಮೇಲ್ಜಾತಿಯವರು ಒಂದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದರು, ಒಂದೇ ರೀತಿ ಉಸಿರಾಡಿದರು ಮತ್ತು ಒಂದೇ ರೀತಿ ಕೆಮ್ಮಿದರು. ಈ ದಂಗೆ 12 ದಿನ ಮುಂದುವರೆಯಿತು!

ಆದುದರಿಂದ ಭಾರತದ ಮೇಲ್ಜಾತಿಗಳು ಪ್ರಜಾಪ್ರಭುತ್ವದ ಬಗ್ಗೆ ಮರು ಚಿಂತನೆ ನಡೆಸುತ್ತಿದ್ದಾರೆಯೆ? ಮತ್ತು ಬ್ರಿಟನ್ನಿನ ಮೇಲ್ವರ್ಗದವರು ಒಮ್ಮೆ ಮಾಡಿದಂತೆ ತಮ್ಮದೇ ಆದ ದಾಳಿಯನ್ನು ಗುರುತಿಸಿಕೊಳ್ಳುತ್ತಿದ್ದಾರೆಯೆ? □

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಸಂವೇದನೆಯ ನೆಲೆಗಳು...

(45ನೇ ಪುಟದಿಂದ)

ಸ್ಥೈರ್ಯವೆಲ್ಲಾ ಆಕೆಯ ವಯಸ್ಸಿನ ಹುಮ್ಮಸ್ಸಿನೊಂದಿಗೆ ತಾಳೆಯಾಗಿದ್ದು ಕ್ರಮೇಣ ಆಕೆ ತನ್ನ ಜೂರತ್ತು ಬಿಟ್ಟುಕೊಟ್ಟ ಬಗೆಯನ್ನು ಅವ್ವಯ್ಯ ನೆನೆದುಕೊಳ್ಳುತ್ತಾಳೆ–

"ದಿಟ, ಇವಳು ನೋಡು ನೋಡುತ್ತಲೇ ಏಟು ಮೆತ್ತಗಾಗಿಬಿಟ್ಟಳು. ಇವಳ ಆ ಜೂರತ್ತೆಲ್ಲ ಎಲ್ಲಿ ಹೋಯ್ತು? ಮುಸ್ಸಂಜೆ ಹೊತ್ತಲ್ಲಿ ಅಡಗೋ ಕೋಳಿಯ ಇಳಿ ದನಿಯಾಗೋಯ್ತು. ಅವಳು ಅಪ್ಪನ ಯಜಮಾನಿಕೇನ ಕಾಯೋ ಕವೆ ಗೂಟವಾಗಿಬಿಟ್ಟಳು!!"(ಪುಟ 39)

ಈ ಬಗ್ಗೆ ಅವ್ವಯ್ಯನಲ್ಲಿ ನಿಟ್ಟುಸಿರಿದೆ. ತನ್ನ ಏಕೈಕ ಬೆಂಬಲಶಕ್ತಿಯಾಗಿದ್ದ ಅವ್ವ ಕಡೆಕಡೆಗೆ ಅಪ್ಪನ ಧೋರಣೆಯನುಸಾರವಾಗಿ ಮಾತನಾಡತೊಡಗಿದ ಹೆಣ್ಣು ದನಿಯಂತೆ ಅವ್ವಯ್ಯನಿಗೆ ಭಾಸವಾಗುತ್ತದೆ. ಅವ್ವ ದೊಡ್ಡೆ ತನ್ನ ಮಗಳು ಅವ್ವಯ್ಯನಿಗೆ ಮದುವೆ ನಿಶ್ಚಯವಾದ ಸಂದರ್ಭದಲ್ಲಿ ಹೇಳುವ ರೂಪಕಾರ್ಥದ ಮಾತುಗಳೇ ಕಾದಂಬರಿಗೆ ಶೀರ್ಷಿಕೆಯನ್ನು ಒದಗಿಸಿವೆ.

"ಹೊಳೆ ದಂಡೆ ಗೊತ್ತಲ್ಲ ಮಗಳೇ, ಅದು ನೆರೆ ಬಂದಾಗ ಮೈಯೊಡ್‌ಕೊಂಡು ನಿಲ್ತದೆ, ಬೇಸ್‌ಗೆ ಕಾಲದಲ್ಲಿ ತನ್ನ ನೆಚ್‌ಕೊಂಡಿರೋ ಗಿಡ ಗಂಟಿಗಳ್‌ಗೆ ಪಸಿ ಕಟ್ಕೊಂಡು ಕಾಯ್ತದೆ. ಹಿಂಗೆ ಎಲ್ಲನೂ ತಡಕೊಂಡಿರೋ ದಂಡೆ ಇರೋದ್ರಿಂದ್ಲೇ ನೀರು ಸಸಾರವಾಗಿ ಸಾಗರ ಸೇರ್‌ತದೆ. ಗಿಡಗಂಟಿಗೊಳು ಬಾಳಿ ಬದುಕ್ತವೆ. ಈ ಹೆಣ್ಣಿನ ಜೀವ್‌ಮಾನನೂ ಹಿಂಗೆಯಾ ನೋಡು ಕಂದಾ ಆ ದಂಡೆ ಸಾಲಿದ್ದಂಗೆ". (ಪುಟ 39)

ಹೆಣ್ಣಿನ ಬದುಕಿನ ರೀತಿಯನ್ನು, ಅದರ ಅರ್ಥವಂತಿಕೆಯನ್ನು, ಅದಕ್ಕಿರುವ ನೆಲೆಗಟ್ಟನ್ನು ಮಗಳಿಗೆ ಬೋಧಿಸುತ್ತಿರುವಂತಹ ಈ ಸಾಲುಗಳೇ ಮುಂದೆ ಅವ್ವಯ್ಯನ ಬದುಕಿನ ನೀತಿ ತತ್ವಗಳಾಗಿಬಿಡುತ್ತವೆ. ಅವಳು ಒಂದು ದಂಡೆಯಾಗಿ ರಾಯಣ್ಣನ ಮನೆತನದ ಹರಿವನ್ನು ಆಗುಮಾಡುತ್ತಾಳೆ.

ಈ ಕಾದಂಬರಿಯಲ್ಲಿ ಹೆಣ್ಣಿನ ಬದುಕಿನ ರೀತಿ ಮತ್ತು ಅರ್ಥದ ಬಗ್ಗೆ ಈ ಬಗೆಯ ತತ್ವ ಬೋಧೆ ಒಟ್ಟು ಮೂರು ಸಲ ಬರುತ್ತದೆ. ಎರಡು ಸಂದರ್ಭಗಳು ಅವ್ವಯ್ಯನನ್ನು ಉದ್ದೇಶಿಸಿದವುಗಳು. ಮೊದಲನೆಯದು ಈಗ ಮೇಲೆ ಉಲ್ಲೇಖಿಸಿದ ದೊಡ್ಡೆಯ ಮಾತುಗಳು. ಎರಡನೆಯದು ಅವ್ವಯ್ಯನ ಅತ್ತೆ ತನ್ನ ಅವಸಾನದ ಸಮಯದಲ್ಲಿ ಹೇಳುವ ಮಾತುಗಳು.

"ನೀನು ಈ ಮನೆತನ್‌ದ ಮಾನ ತಾಯಿ. ಸತಿ ಸಾವಿತ್ರಿಯಂಗಿದ್ದಿ, ಆ ವ್ರತ ನಿಯ್‌ಮ ನಿನ್‌ಗೆ ಕಾಯ್ತದೆ ಮಗ್‌ಳೆ! ಎಲ್ಲನೂ ತೂಗಿಸಿಕೊಂಡು ಹೋಗು. ಈ ಗೋಕುರ್ತಿಗೆ ನೀನೇ ಗತಿ ಮತಿ ನನ್ನವ್ವಾ!"(ಪುಟ 74)

ತನ್ನ ತಲೆ ಮೇಲೆ ದೊಡ್ಡ ಮನೆತನದ ವಹಿವಾಟನ್ನು ಬಿಟ್ಟು ಸ್ವಾತಂತ್ರ್ಯ ಹೋರಾಟದ ಗುಂಗಿನಲ್ಲಿ ಮನೆಗೆ ಬಾರದೆ ಅಲೆಯುವ ಮಗ, ಈ ಸನ್ನಿವೇಶದಲ್ಲಿ ಗೋಕುರ್ತಿಯ ಭಾರ ಹೊರಬೇಕಾಗಿರುವ ತುಂಬು ಯೌವ್ವನದ ಸೊಸೆ ಅವ್ವಯ್ಯ. ಅತ್ತೆ ಹೇಳುವ ಮಾತುಗಳಲ್ಲಿ 'ಮನೆತನದ ಮಾನ', 'ಸತೀತ್ವದ ವ್ರತ ನಿಯಮ' ಇವುಗಳ ಬಗ್ಗೆಯೇ ಕಕ್ಕುಲಾತಿ ಇದ್ದಂತಿದೆ. ಬಾರದ ಗಂಡನನ್ನು ಬರುವಂತೆ ಮಾಡುವ ಶಕ್ತಿಯಿರುವುದು ಈ ಪತಿವ್ರತಾ ನೀತಿಯೊಳಗೆ ಎಂಬುದು ಬಹುಶಃ ಅತ್ತೆಯ ಆಲೋಚನೆಯ ಕ್ರಮ.

ಮನೆತನದ ಮಾನ ಕಾಯುವಲ್ಲಿ ತನ್ನ ಯೌವ್ವನ ಎಷ್ಟೇ ಆಮಿಷಗಳನ್ನು ಹುಟ್ಟಿಸಿದಾಗಲೂ ಅದನ್ನು ಮೆಟ್ಟಿ ಸತೀತ್ವ ಕಾದುಕೊಳ್ಳುತ್ತಾಳೆ. ಆದರೆ ವಿಚಾರದ ದೃಷ್ಟಿಯಲ್ಲಿ ಅವ್ವಯ್ಯ ತನ್ನ ತಾಯಿ ಅತ್ತೆಯರಿಗಿಂತ ಮುಂದೆ ಬಂದಿದ್ದಾಳೆ ಜಾತಿ ಕಟ್ಟುಪಾಡುಗಳ ವಿಚಾರದಲ್ಲಿ, ಕುಟುಂಬದಾಚೆಯೂ ನ್ಯಾಯ ನೀತಿ ಕಾಪಾಡಬೇಕೆಂಬ ಸಾಮಾಜಿಕ ಕಳಕಳಿಯಲ್ಲಿ ಅವ್ವಯ್ಯ ಕೇವಲ ತನ್ನ ತಾಯಿ ಅತ್ತೆಯರ ಆಲೋಚನೆಗೆ ಭಿನ್ನವಾಗಿ ಹೆಜ್ಜೆ ಹಾಕಿದ್ದಾಳೆ. ತನ್ನ ಗಂಡ ಹೇಳಿಕೊಟ್ಟ ರಾಜಕೀಯ ಪಾಠ, ಹೋರಾಟದ ಅಂಶಗಳು, ತಾನು ಅವುಗಳನ್ನು ಕೇಳಿಸಿ ಕೊಳ್ಳುವಾಗ ಮನಸ್ಸಿಗಿಳಿದಂತೆ ಅನಿಸಿರದಿದ್ದರೂ, ಎಲ್ಲೋ ಅವು ಬೀಜದಂತೆ ಉಳಿದಿದ್ದವು.

ಹೊಳೆ ದಂಡೆ ಸಾಲಿನಂಗಿರಬೇಕಾದ ಬದುಕು, ಸತೀ ಸಾವಿತ್ರಿಯಂಗಿರಬೇಕಾದ ಮನಸ್ಸು ಇವುಗಳ ಸರಹದ್ದಿನೊಳಗೇ ಅವ್ವಯ್ಯ ತನ್ನ ಬದುಕು ಸವೆಯುತ್ತಾಳೆ. ಮನೆತನದ ಮಾನ ಕಾಯುವಲ್ಲಿ ತನ್ನ ಯೌವ್ವನ ಎಷ್ಟೇ ಆಮಿಷಗಳನ್ನು ಹುಟ್ಟಿಸಿದಾಗಲೂ ಅದನ್ನು ಮೆಟ್ಟಿ ಸತೀತ್ವ ಕಾದುಕೊಳ್ಳುತ್ತಾಳೆ. ಆದರೆ ವಿಚಾರದ ದೃಷ್ಟಿಯಲ್ಲಿ ಅವ್ವಯ್ಯ ತನ್ನ ತಾಯಿ ಅತ್ತೆಯರಿಗಿಂತ ಮುಂದೆ ಬಂದಿದ್ದಾಳೆ ಜಾತಿ ಕಟ್ಟುಪಾಡುಗಳ ವಿಚಾರದಲ್ಲಿ, ಕುಟುಂಬದಾಚೆಯೂ ನ್ಯಾಯ ನೀತಿ ಕಾಪಾಡಬೇಕೆಂಬ ಸಾಮಾಜಿಕ ಕಳಕಳಿಯಲ್ಲಿ ಅವ್ವಯ್ಯ ಕೇವಲ ತನ್ನ ತಾಯಿ ಅತ್ತೆಯರ ಆಲೋಚನೆಗೆ ಭಿನ್ನವಾಗಿ ಹೆಜ್ಜೆ ಹಾಕಿದ್ದಾಳೆ.

ತನ್ನ ಗಂಡ ಹೇಳಿಕೊಟ್ಟ ರಾಜಕೀಯ ಪಾಠ, ಹೋರಾಟದ ಅಂಶಗಳು, ತಾನು ಅವುಗಳನ್ನು ಕೇಳಿಸಿಕೊಳ್ಳುವಾಗ ಮನಸ್ಸಿಗಿಳಿದಂತೆ ಅನಿಸಿರದಿದ್ದರೂ, ಎಲ್ಲೋ ಅವು ಬೀಜದಂತೆ ಉಳಿದಿದ್ದವು ಎಂದು ಕಾಣುತ್ತದೆ. ಹಾಗಾಗಿಯೇ ಮಗ ಗುರುರಾಜ ಊರಿನೊಳಗಿನ ಅನ್ಯಾಯಗಳ ವಿರುದ್ಧ ದನಿ ಎತ್ತಿದಾಗ, ಅದನ್ನು ಪೂರ್ಣ ಬೆಂಬಲಿಸದಿದ್ದರೂ ಪೂರ್ಣ ವಿರೋಧಿಸುವುದೂ ಇಲ್ಲ. ಗಿರಿಜೆ ಪ್ರಭುಸ್ವಾಮಿ ಮದುವೆಗೆ ಅವಳ ಬೆಂಬಲಸೂಚಕವಾದ ಮಾತು, ಜಾತಿ ಯಾವುದೆಂದು ಸ್ಪಷ್ಟವಾಗಿ ಗೊತ್ತಿಲ್ಲದಿದ್ದರೂ, ತನ್ನ ಮಗ ಗುರುರಾಜ ಮೆಚ್ಚಿರುವ ಸೀತೆ ಎಂಬ ಹುಡುಗಿಯ ಬಗ್ಗೆ ತಳೆಯುವ ಅಂಗೀಕಾರದ ಮನಸ್ಸು ಇವೆಲ್ಲ ಅವ್ವಯ್ಯ ಮಹಿಳಾ ಸಂವೇದನೆಗಳ ವಿಚಾರದಲ್ಲಿ ಪಡೆದುಕೊಳ್ಳತೊಡಗಿದ್ದ ಸ್ಪಷ್ಟತೆಗೆ ನಿದರ್ಶನವಾಗುತ್ತವೆ.

ಮಗ ಗುರುರಾಜ ತೀರಿ ಹೋದ ಸುದ್ದಿಯನ್ನು ಹೊತ್ತು ತಂದ ಗಿರಿಜೆಗೆ ಅವ್ವಯ್ಯನೂ ನೀತಿಬೋಧೆ ಹೇಳುತ್ತಾಳೆ. ಆ ಬೋಧೆ ತನ್ನ ಅಂತರಾರ್ಥದಲ್ಲಿ ಬಂಡಾಯದ ದನಿ ಹೊಂದಿದೆ. ಹೆಣ್ಣಿನ ಬದುಕಿನ ಅರ್ಥವಂತಿಕೆಯ ಬಗ್ಗೆ ಮಾತನಾಡುವಾಗ ಪಾರಂಪರಿಕ ನೆಲೆಯನ್ನೇ ಬೆಂಬಲಿಸಿದಂತೆ ಕಂಡರೂ ಒಬ್ಬ ವ್ಯಕ್ತಿಯಾಗಿ ಸೀತೆ ಕೇವಲ ತನ್ನಂತೆ ಕಾಯುವಿಕೆಯಲ್ಲಿ ಬದುಕು ಕಳೆದವಳಾಗಬಾರದು ಎಂಬ ಸೂಚನೆ ಇದೆ.

"ನೀನೂ ಇನ್ನೊಬ್ಬ ಊರುಮಿಳೆ ಆಗೋದು ಬ್ಯಾಡ ತಾಯಿ. ನೀನೊಂದು ಬರೀ ಹೆಣ್ಣಲ್ಲ; ಜೀವ್‌ಧಾತೆ, ಆ ಹೊತ್ತೇರಿದಂಗೆ ಈ ಜೀವ ಏರಿ ಬೆಳಿಬೇಕು. ಹಂಗೆ ಬೆಳಿಯೋ ಬಾಗ್ಲು ತೆಗಿ ನನ್ನವ್ವ, ಆ ತ್ರಾಣ ಪ್ರಾಣ ಎಲ್ಲ ನಿನ್ನಲ್ಲೆ ಅದೆ!

....

....

ಹೂ ಕನವ್ವ ಎಲ್ಲಿ ಕತ್ತೆತ್ತಿ ನೋಡುss" (ಪುಟ 208)

ಕಾದಂಬರಿಯ ಕೊನೆಯ ಪುಟದಲ್ಲಿ ಬರುವ "ಹೂ ಕನವ್ವ ಎಲ್ಲಿ ಕತ್ತೆತ್ತಿ ನೋಡುss" ಎಂಬ ಮಾತುಗಳಿಗೆ ಅಪೂರ್ವ ಧ್ವನಿಶಕ್ತಿ ಕೂಡಿಕೊಂಡಿದೆ. ಸೀತೆ ಕೇವಲ ತನ್ನ ಸೊಸೆಯಾಗಿ ಬಾಳಲು ಬಂದ ಹುಡುಗಿಯಲ್ಲ. ಅವಳು ತನ್ನ ಮಗನ ಹೋರಾಟದ ಒಡನಾಡಿ. ಮಗನ ಸಾವಿನ ಸುದ್ದಿ ತಂದಿದ್ದಾಳೆ. ಈ ಸನ್ನಿವೇಶದಲ್ಲಿ ತನ್ನ ದುಃಖ ನುಂಗಿಕೊಂಡ ಅವ್ವಯ್ಯ ಇನ್ನೂ ಬಾಳಿ ಬದುಕಬೇಕಾದ ವಯಸ್ಸಿನ, ತನ್ನ ಸೊಸೆಯಾಗಿ ತನ್ನ ಮನೆ ತುಂಬಬೇಕಾಗಿದ್ದ, ಆದರೆ ಗುರುರಾಜನ ಸಾವಿನಿಂದ ಆ ಸಂದರ್ಭ ಕಳೆದುಕೊಂಡಿರುವ ಸೀತೆಗೆ ಹೇಳುವ ಮಾತು ಅತ್ಯಂತ ಅನುಭವಪೂರ್ಣವೂ, ಸ್ತ್ರೀ ಸಂವೇದನೆಗೆ ರೂಪಕವೂ, ಬದುಕಿನ ಮುನ್ನಡೆಯ ಬಗ್ಗೆ ಇರುವ ಜೀವಪರ ಕಾಳಜಿಯ ಸೂಚಕವೂ ಆಗಿ ನಿಂತಿದೆ.

ನೀನೂ ಇನ್ನೊಬ್ಬ ಊರ್ಮಿಳೆ ಆಗಬಾರದು ಎಂಬುದರಲ್ಲಿ, ತಾನು ತನ್ನ ಗಂಡನಿಗಾಗಿಯೇ ಕಾಯುತ್ತಾ ಉಳಿದಂತೆ, ಅವನು ಸತ್ತ ಮೇಲೆ ಅವನು ಬಿಟ್ಟು ಹೋಗಿರುವ ಮನೆತನ ನೀಸಲು ಮೀಸಲಾದಂತೆ ಆಗಬಾರದು ಎಂಬ ನಿಲುವು ಖಚಿತವಾಗಿದೆ. 'ನೀನು ಬರೀ ಹೆಣ್ಣಲ್ಲ, ಜೀವಧಾತೆ' ಎಂದು ಹೇಳುವ ಮಾತು ಒಟ್ಟಾರೆ ಜೀವ ಪೋಷಕಳಾಗಬೇಕು ಎಂಬ ಅರ್ಥವನ್ನು ಸೂಚಿಸುತ್ತಿದೆ. "ಆ ಹೊತ್ತೇರಿದಂಗೆ ಈ ಜೀವ ಏರಿ ಬೆಳಿಬೇಕು" ಎನ್ನುವುದು ಕೂಡ ಸಮಯ ಬದಲಾದಂತೆ ಜೀವನವೂ ಬದಲಾಗಬೇಕು ಎಂಬುದನ್ನು ಆಶಿಸುತ್ತಿದೆ.

"ಎಲ್ಲಿ ಕತ್ತೆತ್ತಿ ನೋಡುss" ಎಂಬುದೇ ಅವ್ವಯ್ಯ ತನ್ನ ಬದುಕಿನ ಸುದೀರ್ಘ ಸಂಘರ್ಷದ ನಂತರದಲ್ಲಿ ಆಗ ಗಂಡನನ್ನು, ಈಗ ತರುಣ ವಯಸ್ಸಿನ ಮಗನನ್ನು ಕಳೆದುಕೊಂಡ ಗಂಭೀರ ಶೋಕದ ಸನ್ನಿವೇಶದಲ್ಲಿ ಸೀತೆಗೆ ಹೇಳುತ್ತಿರುವ ಮಾತು. ಬದುಕಿನ ಬಗ್ಗೆ ಹೇಳುವುದಕ್ಕಾಗಿ ಹೆಣ್ಣಿನ ಕಥಾ ವಸ್ತುವನ್ನು ಆರಿಸಿಕೊಂಡು, ಕಾವ್ಯದ ಬನಿ ತುಂಬಿ ಕಥಾನಕವನ್ನು ಕಟ್ಟಿಕೊಡುತ್ತಾ, ನಿರ್ದಿಷ್ಟ ಸನ್ನಿವೇಶದ ವಾಸ್ತ ವಿಕತೆಗಳಿಗೆ ಲೋಪಬರದ ಹಾಗೆ ಕಾ.ತ. ಚಿಕ್ಕಣ್ಣ 'ದಂಡೆ' ಕಾದಂಬರಿಯನ್ನು ಬರೆದಿರುವ ವಿಧಾನ ಮನಸೂರೆಗೈಯ್ಯುತ್ತದೆ. ಆಡು ಭಾಷೆಯ ಬಳಕೆ, ಜನಪದರ ನುಡಿಗಟ್ಟುಗಳನ್ನು ಆಧರಿಸಿ ರೂಪಿಸಿರುವ ಧ್ವನಿಶಕ್ತಿಯ ಸಂಭಾಷಣೆ ಹಾಗೂ ವರ್ಣನೆಗಳಲ್ಲಿ ಸೊಗಸು, ಸತ್ವಗಳನ್ನು ಒಳಗೊಂಡು 'ದಂಡೆ' ನಿರ್ಮಾಣವಾಗಿದೆ. ಸಾದಾಸೀದ ಗ್ರಾಮೀಣ ಮಹಿಳೆಯ ವಿಶಿಷ್ಟ ಪ್ರತೀಕದಂತಿರುವ 'ಅವ್ವಯ್ಯ'ನೊಳಗೆ ಜೀವನಾನುಭವದ ಆಧಾರದಲ್ಲಿ ಹಂತ ಹಂತವಾಗಿ ವಿಕಸಿಸುತ್ತಾ ಬಂದ ಮಹಿಳಾ ವಿಮೋಚನೆಯ ಆಶಯದ ಬೀಜಗಳು ಹುದುಗಿಕೊಂಡಿರುವಂತಿವೆ. □

'SAMVADA' Kannada Monthly, October 2011 RNI-KAR KAN/2002/9246 CPMG/KA/BGW-708/2009-11
Office of Posting: Mail Business Center, Bangalore GPO, Date of Posting: 1st & 7th of Every Month

ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಮುಂಜಾಗ್ರತೆ ಕ್ರಮಗಳು

ಡೆಂಗಿ ಜ್ವರ ಎಂದರೇನು?

ಡೆಂಗಿ ಜ್ವರವು ಡೆಂಗಿ ವೈರಸ್‌ನಿಂದ ಉಂಟಾಗುವ ಕಾಯಿಲೆ. ಈ ಕಾಯಿಲೆಯು ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಈ ರೋಗದ ಮುಖ್ಯ ಲಕ್ಷಣಗಳು

ಇದ್ದಕ್ಕಿದ್ದಂತೆ ತೀವ್ರಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತೆಗೆ ದಾಖಲಿಸಿ, ರಕ್ತಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.

ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು

1) ಡೆಂಗಿ ಹರಡುವ ಈಜಿಪ್ಟೈ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್‌ಗಳು, ಡ್ರಮ್‌ಗಳು, ಏರ್‌ಕೂಲರ್, ಹೂಕುಂಡದ ನೀರಿನ ಸಂಗ್ರಹಗಳು, ಇತ್ಯಾದಿಗಳಲ್ಲಿ ಉತ್ಪತ್ತಿಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರವಹಿಸಿ.

2) ಬಯಲಲ್ಲಿ ಪೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.

3) ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶ್ರಾಂತಿ ಪಡೆಯುವ ವಯೋವೃದ್ಧರು, ಕಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆಪರದೆಯನ್ನು ಉಪಯೋಗಿಸುವುದು ಹಾಗೂ ಇತರೆ ಸೊಳ್ಳೆ ನಿರೋಧಕಗಳನ್ನು ಬಳಸುವುದು. ಹೀಗೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟುವುದು ಸುಲಭ.

ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ

ಕರ್ನಾಟಕ ವಾರ್ತೆ
Karnataka Information